ಶನಿವಾರ, ಅಕ್ಟೋಬರ್ 8, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವನ್ಯಜೀವಿ ಸಪ್ತಾಹ
ವನ್ಯಜೀವಿ ಸಪ್ತಾಹದ ಅಂಗವಾಗಿ ಭೋಪಾಲ್‌ನ ವನ ವಿಹಾರ್ ರಾಷ್ಟ್ರೀಯ ಉದ್ಯಾನದಲ್ಲಿ ಶುಕ್ರವಾರ ಮುಖಕ್ಕೆ ಹುಲಿವೇಷದ ಬಣ್ಣಹಚ್ಚಿಕೊಂಡಿದ್ದ ಯುವತಿ



ಶನಿವಾರ, ಅಕ್ಟೋಬರ್ 8, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 278 | ಪುಟ 34
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಚರ್ಚೆ
ನಮ್ಮದೇ ಸರ್ಕಾರದ ತಪ್ಪು ನಿರ್ಣಯ

ಇಂದು ಭೂಮಿಕಾ

'ಪಿಎಫ್‌ಐ ವಿರುದ್ಧದ ಪ್ರಕರಣ ವಾಪಸ್ ಪಡೆದಿರಲಿಲ್ಲ' 6
'ಸರ್ವಸಮಾನತೆಯ ಭಾರತ ನಮ್ಮದಾಗಲಿ' 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,191	17,315	₹53,400 (ಬೆಂಗಳೂರು)	₹61,800 (ಬೆಂಗಳೂರು)	82.30



ಎಸ್‌ಸಿಗೆ ಶೇ 17, ಎಸ್‌ಟಿಗೆ ಶೇ 7 • ವರದಿ ಅಂಗೀಕಾರಕ್ಕೆ ಇಂದು ಸಂಪುಟ ಸಭೆ

ಮೀಸಲಾತಿ ಹೆಚ್ಚಳಕ್ಕೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್.ಟಿ) ಮೀಸಲಾತಿ ಪ್ರಮಾಣವನ್ನು ಈ ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಳ ಮಾಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ವಿಧಾನಮಂಡಲದ ಉಭಯ ಸದನಗಳ ವಿವಿಧ ಪಕ್ಷಗಳ ನಾಯಕರ ಸಭೆ ನಿರ್ಧರಿಸಿದೆ.

ತಮ್ಮ ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬೊಮ್ಮಾಯಿ, 'ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇಕಡ 15ರಿಂದ ಶೇ 17ಕ್ಕೆ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಶೇ 3ರಿಂದ ಶೇ 7ಕ್ಕೆ ಹೆಚ್ಚಿಸಲು ತೀರ್ಮಾನಿಸಲಾಗಿದೆ. ಈ ಸಂಬಂಧ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ನೇತೃತ್ವದ ಆಯೋಗ ಸಲ್ಲಿಸಿರುವ ವರದಿಯನ್ನು ಶನಿವಾರ ನಡೆಯುವ ವಿಶೇಷ ಸಂಪುಟ ಸಭೆಯಲ್ಲಿ ಅಂಗೀಕರಿಸಲಾಗುವುದು' ಎಂದರು.

10ನೇ ಪುಟ ನೋಡಿ

'ಒಳಮೀಸಲಿನ ಬಗ್ಗೆಯೂ ನಿರ್ಧಾರ'

'ಎಸ್.ಸಿ ಮತ್ತು ಎಸ್.ಟಿ ಸಮುದಾಯಗಳಿಗೆ ನೀಡಿರುವ ಮೀಸಲಾತಿ ಪ್ರಮಾಣ ಆ ಸಮುದಾಯಗಳಲ್ಲಿನ ಕೆಲವರಿಗೆ ನ್ಯಾಯ ದೊರಕುತ್ತಿಲ್ಲ ಎಂಬ ದೂರುಗಳಿವೆ. ಈ ಬಗ್ಗೆಯೂ ಆಯೋಗದಿಂದ ವರದಿ ಬಂದಿದೆ. ಸಮಗ್ರವಾಗಿ ಅಧ್ಯಯನ ಮಾಡಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬೊಮ್ಮಾಯಿ ತಿಳಿಸಿದರು.

ಹಿಂದುಳಿದ ವರ್ಗಗಳ ಪಟ್ಟಿಯಲ್ಲಿನ ಮೀಸಲಾತಿ ಬಗ್ಗೆಯೂ ಹಲವು ಬೇಡಿಕೆಗಳಿವೆ. ಆ ಕುರಿತಂತೆಯೂ ಸಮಗ್ರವಾಗಿ ಚರ್ಚಿಸಿ ನ್ಯಾಯ ದೊರಕಿಸುವ ಪ್ರಯತ್ನವನ್ನು ಸರ್ಕಾರ ಮಾಡಲಿದೆ ಎಂದರು.

ಮತಾಂತರಗೊಂಡ ಪರಿಶಿಷ್ಟರಿಗೆ ಎಸ್‌.ಸಿ ಸ್ಥಾನ: ಪರಿಶೀಲನೆಗೆ ಆಯೋಗ

ನವದೆಹಲಿ: ಪರಿಶಿಷ್ಟ ಜಾತಿಯ ವ್ಯಕ್ತಿಗಳು ಬೇರೆ ಧರ್ಮಗಳಿಗೆ ಮತಾಂತರ ಗೊಂಡರೆ ಅವರಿಗೆ ಪರಿಶಿಷ್ಟ ಜಾತಿ ಸ್ಥಾನ ಮುಂದುವರಿಸಬೇಕೇ ಎಂಬುದನ್ನು ಪರಿಶೀಲಿಸಲು ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಕೆ.ಜಿ. ಬಾಲಕೃಷ್ಣನ್ ನೇತೃತ್ವದ ವಿಚಾರಣಾ ಆಯೋಗವನ್ನು ಕೇಂದ್ರವು ನೇಮಿಸಿದೆ.

ನಿವೃತ್ತ ಐಎಎಸ್ ಅಧಿಕಾರಿ ಡಾ.ರವೀಂದರ್ ಕುಮಾರ್ ಜೈನ್ ಮತ್ತು ಪ್ರಾಧ್ಯಾಪಕಿ ಸುಷ್ಮಾ ಯಾದವ್ ಅವರು ಆಯೋಗದ ಸದಸ್ಯರಾಗಿದ್ದಾರೆ.

ಕಾಲ ಕಾಲಕ್ಕೆ ಹೊರಡಿಸಲಾದ ರಾಷ್ಟ್ರಪತಿಯವರ ಆದೇಶದಲ್ಲಿ ಉಲ್ಲೇಖವಾಗದ ಧರ್ಮಕ್ಕೆ ಮತಾಂತರಗೊಂಡ, ಚಾರಿತ್ರಿಕವಾಗಿ ಪರಿಶಿಷ್ಟ ಜಾತಿಯವರಾಗಿರುವವರಿಗೆ ಪರಿಶಿಷ್ಟ ಜಾತಿ ಸ್ಥಾನ ಕೊಡಬೇಕೇ ಎಂಬುದನ್ನು ಈ ಆಯೋಗವು ಪರಿಶೀಲನೆಗೆ ಒಳಪಡಿಸಲಿದೆ. ರಾಷ್ಟ್ರಪತಿಯವರ ಆದೇಶದ ಪ್ರಕಾರ, ಮತಾಂತರದ ನಂತರ ಹಿಂದೂ ಧರ್ಮ, ಬೌದ್ಧ ಧರ್ಮ ಮತ್ತು ಸಿಖ್ ಧರ್ಮವನ್ನು ಅನುಸರಿಸುವವರಿಗೆ ಮಾತ್ರ ಪರಿಶಿಷ್ಟ ಜಾತಿ ಸ್ಥಾನ ದೊರೆಯುತ್ತದೆ.

ಬೇರೆ ಧರ್ಮಗಳಿಗೆ ಮತಾಂತರಗೊಂಡ ಪರಿಶಿಷ್ಟ ಜಾತಿಯ ವ್ಯಕ್ತಿಗಳ ಪದ್ಧತಿ, ಸಂಪ್ರದಾಯ, ಸಾಮಾಜಿಕ ಸ್ಥಾನಮಾನ, ಅವರು ಅನುಭವಿಸುತ್ತಿದ್ದ ಶೋಷಣೆ ಮತ್ತು ತಾರತಮ್ಯದಲ್ಲಿ ಆಗಿರುವ ಬದಲಾವಣೆ ಕುರಿತು ಕೂಡ ಆಯೋಗವು ಪರಿಶೀಲನೆ ನಡೆಸಲಿದೆ. ಈ ಜನರಿಗೆ ಪರಿಶಿಷ್ಟ ಜಾತಿ ಸ್ಥಾನ ನೀಡುವುದರಿಂದ ಆಗುವ ಪರಿಣಾಮಗಳನ್ನೂ ಅಧ್ಯಯನ ಮಾಡಲಿದೆ ಎಂದು ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಅಧಿಸೂಚನೆಯಲ್ಲಿ ಹೇಳಲಾಗಿದೆ. ವರದಿ ನೀಡಲು ಆಯೋಗಕ್ಕೆ ಎರಡು ವರ್ಷಗಳ ಕಾಲಾವಕಾಶ ನೀಡಲಾಗಿದೆ.

ರಾಜ್ಯ ಸರ್ಕಾರಿ ನೌಕರರ ತುಟ್ಟಿಭತ್ಯೆ ಶೇ 3.75ರಷ್ಟು ಹೆಚ್ಚಳ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರು ಹಾಗೂ ನಿವೃತ್ತರ ತುಟ್ಟಿಭತ್ಯೆಯನ್ನು ಜುಲೈ 1ರಿಂದಲೇ ಪೂರ್ವಾನ್ವಯವಾಗುವಂತೆ ಶೇ 3.75ರಷ್ಟು ಹೆಚ್ಚಳ ಮಾಡಲಾಗಿದೆ.

ನೌಕರರು ತಮ್ಮ ಮೂಲ ವೇತನದ ಶೇ 27.25ರಷ್ಟು ತುಟ್ಟಿಭತ್ಯೆ ಪಡೆಯುತ್ತಿದ್ದು, ಹೊಸ ಆದೇಶದಿಂದಾಗಿ ಒಟ್ಟು ತುಟ್ಟಿಭತ್ಯೆ ಪ್ರಮಾಣ ಶೇ 31ಕ್ಕೆ ಏರಿಕೆಯಾಗಿದೆ.

3Aನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬೆಂಗಳೂರಿನ ಕೆ.ಆರ್‌. ಪುರ ಪೊಲೀಸರಿಂದ ಮೂವರ ಬಂಧನ

ಮಕ್ಕಳ ಕಳ್ಳನೆಂದು ಶಂಕಿಸಿ ಕಾರ್ಮಿಕನ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳ ಕಳ್ಳನೆಂದು ಅನುಮಾನಪಟ್ಟು ಹಲ್ಲೆ ಮಾಡಿ ಸಂಜಯ್ ಟುಡೋ (27) ಎಂಬುವರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಮೂವರು ಆರೋಪಿಗಳನ್ನು ಕೆ.ಆರ್.ಪುರ ಪೊಲೀಸರು ಬಂಧಿಸಿದ್ದಾರೆ.

'ರಾಮಮೂರ್ತಿನಗರದ ನಿವಾಸಿಗಳಾದ ಪಾರ್ಥಿಬನ್, ಸೈಯದ್ ಖಾಜಾ ಹಾಗೂ ಫಯಾಜ್ ಅಹ್ಮದ್ ಬಂಧಿತರು. ಇನ್ನೂ ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಕೆಲವು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಗಿರೀಶ್ ತಿಳಿಸಿದರು.

'ಐಟಿಐ ಗೇಟ್ ಬಳಿ ಸೆ. 24ರಂದು ಸಂಜಯ್ ಮೃತದೇಹ ಪತ್ತೆಯಾಗಿತ್ತು. ಆರಂಭದಲ್ಲಿ ಅಸಹಜ ಸಾವು ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಮರಣೋತ್ತರ ಪರೀಕ್ಷೆಯಿಂದಾಗಿ, ಇದೊಂದು ಕೊಲೆ ಎಂಬುದು ಗೊತ್ತಾಯಿತು' ಎಂದು ಹೇಳಿದರು.

'ಜಾರ್ಖಂಡ್‌ನ ಸಂಜಯ್, ಕಟ್ಟಡ ನಿರ್ಮಾಣ ಕಾರ್ಮಿಕರಾಗಿದ್ದರು. ದೇವಸಂದ್ರದ ಮೇಸ್ತ್ರಿಯೊಬ್ಬರ ಬಳಿ ಕೆಲಸ ಮಾಡುತ್ತಿದ್ದರು. ಒಂಟಿಯಾಗಿ ನೆಲೆಸಿದ್ದರು' ಎಂದು ತಿಳಿಸಿದರು.

ವಿಜಿನಾಪುರದಲ್ಲಿ ಹಲ್ಲೆ: 'ಮದ್ಯವ್ಯಸನಿ ಆಗಿದ್ದ ಸಂಜಯ್, ಕುಡಿದ ಅಮಲಿನಲ್ಲಿ ಸೆ. 23ರಂದು ರಾತ್ರಿ ರಾಮಮೂರ್ತಿನಗರ ಠಾಣೆ ವ್ಯಾಪ್ತಿಯ ವಿಜಿನಾಪುರದ ದರ್ಗಾ ಮೊಹಲ್ಲಾ ಬಳಿ ತೆರಳಿದ್ದರು. ಅವರನ್ನು ಅನುಮಾನದಿಂದ ನೋಡಿದ್ದ ಸ್ಥಳೀಯರು, ಮಕ್ಕಳ ಕಳ್ಳ ಇರಬಹುದೆಂದು ಭಾವಿಸಿ ಅಡ್ಡಗಟ್ಟಿ ಥಳಿಸಿದರು. ಮುಖ, ಎದೆ, ಬೆನ್ನು ಹಾಗೂ ದೇಹದ ಇತರೆ ಭಾಗಗಳಿಗೆ ಪೆಟ್ಟಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

10ನೇ ಪುಟ ನೋಡಿ

ಎರಡೂ ಕಂಪನಿಗಳಿಗೆ ನೋಟಿಸ್ ನೀಡಿದ ಸಾರಿಗೆ ಇಲಾಖೆ ● ವಿವರಣೆ ನೀಡಲು ಮೂರು ದಿನಗಳ ಗಡುವು

ಓಲಾ, ಉಬರ್ ಆಟೋರಿಕ್ಷಾ ಸೇವೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಓಲಾ ಮತ್ತು ಉಬರ್ ಇನ್ಮುಂದೆ ಆಟೋರಿಕ್ಷಾ ಸೇವೆ ನೀಡುವಂತಿಲ್ಲ. ಕೂಡಲೇ ಈ ಸೇವೆ ಸ್ಥಗಿತಗೊಳಿಸಬೇಕು' ಎಂದು ಈ ಎರಡು ಕಂಪನಿಗಳಿಗೆ ಸಾರಿಗೆ ಇಲಾಖೆ ನೋಟಿಸ್ ನೀಡಿದೆ.

ಆ್ಯಪ್ ಆಧಾರಿತ ಟ್ಯಾಕ್ಸಿ ಸೇವೆ ನೀಡುತ್ತಿರುವ ಕಂಪನಿಗಳು ಆಟೋರಿಕ್ಷಾಗಳ ಸೇವೆ ಒದಗಿಸುವುದು ಕಾನೂನುಬಾಹಿರ. ಆದರೂ, ಆಟೋರಿಕ್ಷಾ ಸೇವೆಗಳನ್ನೂ ಈ ಕಂಪನಿಗಳು ಒದಗಿಸುತ್ತಿರುವುದು ಮತ್ತು ನಿಗದಿಪಡಿಸಿದ ದರಕ್ಕಿಂತ ಹೆಚ್ಚಿನ ದರ ಪಡೆಯುತ್ತಿರುವುದು ಗಮನಕ್ಕೆ ಬಂದಿದೆ. ಕೂಡಲೇ ಈ ಸೇವೆ ಸ್ಥಗಿತಗೊಳಿಸಬೇಕು. ಈ ಬಗ್ಗೆ ವಿವರಣೆ ಇದ್ದರೆ ಮೂರು ದಿನಗಳಲ್ಲಿ ಸಲ್ಲಿಸಬೇಕು. ಇಲ್ಲದಿದ್ದರೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಸಾರಿಗೆ ಆಯುಕ್ತರು ನೋಟಿಸ್‌ನಲ್ಲಿ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಬೇಡಿಕೆ ಆಧರಿತ ಸಾರಿಗೆ ತಂತ್ರಜ್ಞಾನ ನಿಯಮ –2016ರ ಅಡಿಯಲ್ಲಿ ಆ್ಯಪ್ ಆಧಾರಿತ ಟ್ಯಾಕ್ಸಿ ಸೇವೆ ಒದಗಿಸಲು ಕಂಪನಿಗಳಿಗೆ ಪರವಾನಗಿ ನೀಡಲಾಗಿದೆ. ಟ್ಯಾಕ್ಸಿ ಚಾಲಕ ಸೇರಿ ಏಳು ಮಂದಿಗಿಂತ ಹೆಚ್ಚಿನ ಪ್ರಯಾಣಿಕರನ್ನು ಕರೆದೊಯ್ಯುವ ವಾಹನ ಆಗಿರಬಾರದು ಎಂದು ಷರತ್ತು ವಿಧಿಸಲಾಗಿದೆ. ಈ ನಿಯಮ ಪಾಲಿಸಬೇಕು, ನಿಗದಿಂತ ಹೆಚ್ಚಿನ ದರ ಪಡೆಯಬಾರದು ಎಂದು ತಾಕೀತು ಮಾಡಿದ್ದಾರೆ.

ಮೊದಲಿಗೆ ಟ್ಯಾಕ್ಸಿ ಸೇವೆಯನ್ನಷ್ಟೇ ನೀಡುತ್ತಿದ್ದ ಈ ಕಂಪನಿಗಳು ಎರಡು ವರ್ಷಗಳಿಂದ ಆಟೋರಿಕ್ಷಾಗಳನ್ನೂ ಈ ಸೇವೆಗೆ ಒಳಪಡಿಸಿಕೊಂಡಿದ್ದವು. ಆರಂಭದಲ್ಲಿ ಕಡಿಮೆ ದರ ಪಡೆಯುತ್ತಿದ್ದ ಕಂಪನಿಗಳು, ಇತ್ತೀಚೆಗೆ ದರ ಹೆಚ್ಚಳ ಮಾಡಿದ್ದವು. 2 ಕಿಲೋ ಮೀಟರ್‌ಗಿಂತ ಕಡಿಮೆ ದೂರವಿದ್ದರೂ ಕನಿಷ್ಠ ₹100 ದರ ನಿಗದಿ ಮಾಡಿದ್ದವು. ಈ ಬಗ್ಗೆ ಪ್ರಯಾಣಿಕರು ಸಾರಿಗೆ ಇಲಾಖೆಗೆ ದೂರನ್ನೂ ನೀಡಿದ್ದರು. ಸಾಮಾಜಿಕ ಜಾಲತಾಣಗಳಲ್ಲಿ ಸಾರಿಗೆ ಇಲಾಖೆಯನ್ನು ಗ್ರಾಹಕರು ತರಾಟೆಗೂ ತೆಗೆದುಕೊಂಡಿದ್ದರು. ಸಾರಿಗೆ ಇಲಾಖೆ ನೋಟಿಸ್ ನೀಡಿದರೂ ಶುಕ್ರವಾರ ರಾತ್ರಿಯೂ ಓಲಾ ಮತ್ತು ಉಬರ್ ಆ್ಯಪ್‌ಗಳಲ್ಲಿ ಆಟೋರಿಕ್ಷಾ ಸೇವೆ ಮುಂದುವರಿದಿತ್ತು.

ರ‍್ಯಾಪಿಡೋ ಆ್ಯಪ್‌ಗೂ ನೋಟಿಸ್

ರ‍್ಯಾಪಿಡೋ ಆ್ಯಪ್ ಮೂಲಕ ಟ್ಯಾಕ್ಸಿ, ಆಟೋರಿಕ್ಷಾ ಮತ್ತು ದ್ವಿಚಕ್ರ ವಾಹನಗಳ ಸೇವೆ ಒದಗಿಸುತ್ತಿರುವ ರೋಪೆನ್ ಟ್ರಾನ್ಸ್‌ಪೋರ್ಟೇಷನ್ ಪ್ರೈವೆಟ್ ಲಿಮಿಟೆಡ್‌ಗೆ ಸಾರಿಗೆ ಇಲಾಖೆ ನೋಟಿಸ್ ನೀಡಿದೆ.

ಕಾನೂನುಬಾಹಿರವಾಗಿ ಆ್ಯಪ್ ಆಧಾರಿತ ಸೇವೆ ಒದಗಿಸಬಾರದು. ಕರ್ನಾಟಕ ರಾಜ್ಯ ಬೇಡಿಕೆ ಆಧರಿತ ಸಾರಿಗೆ ತಂತ್ರಜ್ಞಾನ ನಿಯಮ ಮತ್ತು ಕರ್ನಾಟಕ ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿ ಯೋಜನೆ–2021ರ ಅಡಿಯಲ್ಲಿ ಪರವಾನಗಿ ಪಡೆದು ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದೆ.



ಕ್ಯಾಬ್ ಸೇವೆಗಳ ದರಪಟ್ಟಿ(₹ಗಳಲ್ಲಿ)

ವಾಹನಗಳ ಪ್ರಕಾರ	ನಿಗದಿತ ದರ (ಕನಿಷ್ಠ 4 ಕಿ.ಮೀ.ವರೆಗೆ)	ಹೆಚ್ಚುವರಿ ಪ್ರತಿ ಕಿ.ಮೀಗೆ ಕನಿಷ್ಠ/ಗರಿಷ್ಠ
₹5 ಲಕ್ಷ ಮೌಲ್ಯದ ವಾಹನ	75	18/36
₹5-₹10 ಲಕ್ಷ ಮೌಲ್ಯ	100	21/42
₹10-₹16 ಲಕ್ಷ ಮೌಲ್ಯ	120	24/48
₹16 ಲಕ್ಷ ಮೇಲ್ಪಟ್ಟ ಮೌಲ್ಯ	150	27/54

ಚಾಲ್ತಿಯಲ್ಲಿರುವ ಆಟೋರಿಕ್ಷಾ ಪ್ರಯಾಣ ದರ

2 ಕಿ.ಮೀ.ಗೆ ₹**30** (ಮೂರು ಜನ ಪ್ರಯಾಣಿಕರು)

2 ಕಿ.ಮೀ. ನಂತರ ಪ್ರತಿ ಕಿ.ಮೀ.ಗೆ ₹**15**

ಕಾಯುವಿಕೆ ದರ
ಮೊದಲ ಐದು ನಿಮಿಷ – ಉಚಿತ
ನಂತರ ಪ್ರತಿ ಹದಿನೈದು ನಿಮಿಷಕ್ಕೆ ₹**5**

ಪ್ರಯಾಣಿಕರ ಲಗೇಜು ದರ
ಮೊದಲ 20 ಕೆ.ಜಿ.ಗೆ – ಉಚಿತ
ನಂತರದ ಪ್ರತಿ 20 ಕೆ.ಜಿ.ಗೆ ₹**5**

ರಾತ್ರಿ ವೇಳೆ ದರ (ರಾತ್ರಿ 10 ಗಂಟೆಯಿಂದ ನಸುಕಿನ 5 ಗಂಟೆವರೆಗೆ)
ಸಾಮಾನ್ಯ ದರ + ಸಾಮಾನ್ಯ ದರದ ಅರ್ಧಪಟ್ಟು

'ಸರ್ಕಾರವೇ ಆ್ಯಪ್ ನಿರ್ವಹಿಸಲಿ'

ಆ್ಯಪ್ ಆಧರಿತ ಟ್ಯಾಕ್ಸಿ ಸೇವೆ ಒದಗಿಸುತ್ತಿರುವ ಕಂಪನಿಗಳಿಂದ ಗ್ರಾಹಕರು ಮತ್ತು ಕ್ಯಾಬ್ ಚಾಲಕರಿಗೆ ಮೋಸವಾಗುತ್ತಿದೆ. ಈಗಲಾದರೂ ಸರ್ಕಾರವೇ ಆ್ಯಪ್ ನಿರ್ವಹಿಸಬೇಕು ಎಂದು ಓಲಾ-ಉಬರ್ ಚಾಲಕರ ಸಂಘದ ಅಧ್ಯಕ್ಷ ತನ್ವೀರ್ ಪಾಷ ಒತ್ತಾಯಿಸಿದರು.

'ಓಲಾ ಮತ್ತು ಉಬರ್ ಸೇರಿ ಆ್ಯಪ್ ಆಧರಿತ ಕಂಪನಿಗಳು ಆಟೋರಿಕ್ಷಾಗಳ ಸೇವೆ ನೀಡುವುದು ಕಾನೂನುಬಾಹಿರ. ಆಟೋರಿಕ್ಷಾಗಳ ಪ್ರಯಾಣ ದರ ನಿಗದಿ ಮಾಡುವ ಅಧಿಕಾರ ಆಯಾ ಜಿಲ್ಲಾಧಿಕಾರಿಗಳಿಗೆ ಇರುತ್ತದೆ. ಮೀಟರ್ ಅಳವಡಿಸಿಕೊಂಡು ಚಾಲನೆ ಮಾಡುವುದು ಸರಿಯಾದ ಕ್ರಮ' ಎಂದು ಹೇಳಿದರು.

'ಈ ಬಗ್ಗೆ ಹಲವು ಬಾರಿ ಸಾರಿಗೆ ಇಲಾಖೆ ಗಮನಕ್ಕೆ ತಂದಿದ್ದೆವು. ತಡವಾಗಿ ಇಲಾಖೆ ಎಚ್ಚೆತ್ತುಕೊಂಡಿದೆ. ಚಾಲಕರು ಕೂಡ ಈ ರೀತಿಯ ಕಂಪನಿಗಳ ಬಳಿ ಒಡನಾಟ ಇಟ್ಟುಕೊಳ್ಳಬಾರದು' ಎಂದು ಮನವಿ ಮಾಡಿದರು.

ಗೊತ್ತಿದ್ದೂ ಸುಮ್ಮನಿದ್ದ ಸಾರಿಗೆ ಇಲಾಖೆ

ಆ್ಯಪ್ ಆಧಾರಿತ ಆಟೋರಿಕ್ಷಾ ಸೇವೆ ಸ್ಥಗಿತಗೊಳಿಸುವಂತೆ ಸಾರಿಗೆ ಇಲಾಖೆ ನೋಟಿಸ್ ನೀಡಿರುವುದನ್ನು ಆಟೋರಿಕ್ಷಾ ಮತ್ತು ಕ್ಯಾಬ್ ಚಾಲಕರು ಸ್ವಾಗತಿಸಿದ್ದಾರೆ.

'ಆ್ಯಪ್ ಆಧಾರಿತ ಸೇವೆಯಲ್ಲಿ ಗ್ರಾಹಕರು ಮತ್ತು ಆಟೊ ಚಾಲಕರಿಬ್ಬರಿಗೂ ಮೋಸ ಆಗುತ್ತಿತ್ತು. ಗ್ರಾಹಕರಿಂದ ಪಡೆಯುತ್ತಿದ್ದ ದರಕ್ಕೂ, ಆಟೋ ಚಾಲಕರಿಗೆ ನೀಡುತ್ತಿದ್ದ ದರಕ್ಕೂ ಸಾಕಷ್ಟು ವ್ಯತ್ಯಾಸ ಇತ್ತು. ಏನೂ ಮಾಡಲಾಗದ ಸ್ಥಿತಿಯಲ್ಲಿ ಇದ್ದೆವು. ಕಾನೂನುಬಾಹಿರವಾದ ಈ ಸೇವೆ ಸ್ಥಗಿತಗೊಳಿಸುವಂತೆ ಹಲವು ಬಾರಿ ಮನವಿ ಮಾಡಿದ್ದೆವು. ಆದರೂ ಸಾರಿಗೆ ಇಲಾಖೆ ಜಾಣಗುರುಡು ವಹಿಸಿತ್ತು' ಎಂದು ಆಟೋ ಚಾಲಕ ಅಂಬರೀಷ್ ಹೇಳುತ್ತಾರೆ.

'ಆ್ಯಪ್‌ಗಳಲ್ಲಿ ಪ್ರಯಾಣ ದರ ಹೆಚ್ಚಿಗೆ ನಿಗದಿ ಮಾಡಿದ ನಂತದ ಗ್ರಾಹಕರ ಸಂಖ್ಯೆ ಇಳಿಮುಖವಾಗಿತ್ತು. ಸಾರಿಗೆ ಇಲಾಖೆ ತಡವಾಗಿಯಾದರೂ ಕ್ರಮಕ್ಕೆ ಮುಂದಾಗಿರುವುದು ಸ್ವಾಗತಾರ್ಹ' ಎಂದರು.

ಸುದ್ದಿ 2 ನಿಮಿಷ

ಯುವ ಉದ್ಯಮಿ ಭರತ್ ಬೊಮ್ಮಾಯಿಗೆ ಟೈಟಾನ್ ಅವಾರ್ಡ್

ಬೆಂಗಳೂರು: ಯುವ ಉದ್ಯಮಿ ಭರತ್ ಬಿ.ಬೊಮ್ಮಾಯಿ ಅವರಿಗೆ 2022ನೇ ಸಾಲಿನ ಅಂತರರಾಷ್ಟ್ರೀಯ 'ಟೈಟಾನ್ ಬಿಸಿನೆಸ್ ಅವಾರ್ಡ್' ಲಭಿಸಿದೆ.



ಭರತ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪುತ್ರ. ಅಶ್ವ ಎನರ್ಜಿ ಮತ್ತು ವಾಲ್ಟೆಕ್ ಸಂಸ್ಥೆಗಳನ್ನು ನಡೆಸುತ್ತಿರುವ ಅವರು, ಉತ್ಪಾದನೆ ವಿಭಾಗದಲ್ಲಿ ವರ್ಷದ ಜಾಗತಿಕ ವಾಣಿಜ್ಯೋದ್ಯಮಿಯಾಗಿ ಗುರುತಿಸಿಕೊಂಡಿದ್ದು, ಟೈಟಾನ್ ಬಿಸಿನೆಸ್ ಅವಾರ್ಡ್ ಸೀಸನ್ -2ರಲ್ಲಿ ವಿಜಯ ಸಾಧಿಸಿದ್ದಾರೆ.

ಸ್ಪರ್ಧೆಗೆ 55 ದೇಶಗಳಿಂದ ಒಂದು ಸಾವಿರಕ್ಕೂ ಹೆಚ್ಚು ಉದ್ಯಮ ಸಂಸ್ಥೆಗಳು ಸ್ಪರ್ಧಿಸಿದ್ದವು.15 ದೇಶಗಳಿಂದ ಸುಮಾರು 27 ತೀರ್ಪುಗಾರರನ್ನು ನೇಮಿಸಲಾಗಿತ್ತು.

11ಕ್ಕೆ ಸಾರಿಗೆ ನೌಕರರ ಸಮಾವೇಶ

ಬೆಂಗಳೂರು: ಸಾರಿಗೆ ನೌಕರರ ವೇತನ ಹೆಚ್ಚಳ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಸರ್ಕಾರಕ್ಕೆ ಒತ್ತಾಯಿಸಿರುವ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ, ಇದೇ 11ರಂದು ಬೆಳಿಗ್ಗೆ 11 ಗಂಟೆಗೆ ಶೇಷಾದ್ರಿಪುರದ ಗುಂಡೂರಾವ್ ಸಭಾಂಗಣದಲ್ಲಿ ಸಾರಿಗೆ ನೌಕರರ ಸಮಾವೇಶ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾ ಮಂಡಳಿಯ ಸಂಚಾಲಕ ಬಿ.ಜಯದೇವ ರಾಜೇ ಅರಸು, 'ವೇತನ ಹೆಚ್ಚಳ, ವೈದ್ಯಕೀಯ ಸೌಲಭ್ಯ, ವಜಾಗೊಂಡ ನೌಕರರಿಗೆ ಉದ್ಯೋಗ ಸೇರಿ ವಿವಿಧ ಬೇಡಿಕೆಗಳ ಈಡೇರಿಸುವಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ (ಕೆಎಸ್‌ಆರ್‌ಟಿಸಿ) ಆಡಳಿತ ವರ್ಗವನ್ನು ಆಗ್ರಹಿಸಲಾಗಿತ್ತು. ಬೇಡಿಕೆಗಳ ಈಡೇರಿಕೆ ಬಗ್ಗೆ ಆ ವೇಳೆ ಸರ್ಕಾರದಿಂದಲೂ ಭರವಸೆ ಸಿಕ್ಕಿತ್ತು. ಬೇಡಿಕೆಗಳು ಈವರೆಗೂ ಈಡೇರದಿದ್ದರಿಂದ ಮುಂದಿನ ಹೋರಾಟದ ರೂಪುರೇಷೆ ತಯಾರಿಸಲು ಸಮಾವೇಶ ನಡೆಸಲಾಗುತ್ತಿದೆ' ಎಂದು ಹೇಳಿದರು.

'ಸಾರಿಗೆ ನಿಗಮಗಳಲ್ಲಿ ಕೆಲಸ ಮಾಡುವ 6 ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ರಚಿಸಲಾಗಿದೆ. ಮೊದಲ ಹಂತದಲ್ಲಿ ರಾಜ್ಯದಾದ್ಯಂತ ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರ ಸಮಾವೇಶಗಳನ್ನು ನಡೆಸಲಾಗುತ್ತದೆ. ಬೆಂಗಳೂರು, ಕಲಬುರಗಿ ಹಾಗೂ ಹುಬ್ಬಳ್ಳಿಯಲ್ಲಿ ಈ ಸಮಾವೇಶಗಳು ನಡೆಯಲಿವೆ' ಎಂದು ತಿಳಿಸಿದರು.

ನಗರದಲ್ಲಿ ಇಂದು

ಸಂಸ್ಥಾಪಕರ ದಿನ: ಪಿಟೀಲು ವಿದ್ವಾನ್ ಎಚ್. ಪ್ರಭಾಕರ್ ಪಾಠಕ್ ಹಾಗೂ ಜೆ.ಎಲ್. ಕೃಷ್ಣಮೂರ್ತಿ ಸ್ಮರಣಾರ್ಥ, ಮುಖ್ಯ ಅತಿಥಿ: ಬಿ. ಭುಜಂಗರಾವ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 5

ಸರ್ವಧರ್ಮ ಸಂಸತ್: ಸಮ್ಮೇಳನಾಧ್ಯಕ್ಷತೆ: ನ್ಯಾ.ವಿ. ಗೋಪಾಲಗೌಡ, ಸಾನ್ನಿಧ್ಯ: ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ವಿನಯ್ ಗುರೂಜಿ, ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಬಸವರಾಜ ಬೊಮ್ಮಾಯಿ, ನಾಗಮೋಹನ್ ದಾಸ್, ಅಧ್ಯಕ್ಷತೆ: ಎ.ಎಸ್. ಕಿರಣ್ ಕುಮಾರ್, ಆಯೋಜನೆ: ರಾಷ್ಟ್ರೀಯ ಬಸವ ಪ್ರತಿಷ್ಠಾನ, ಸ್ಥಳ: ವೈಟ್ ಪೆಟಲ್ಸ್, ಗೇಟ್ ನಂ.3, ಅರಮನೆ ಮೈದಾನ, ಬೆಳಿಗ್ಗೆ 10.30

ನೃತ್ಯಾವಿಷ್ಕಾರ: 9ನೇ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು: ವಸಂತ ವೈಕುಂಠ, ಸುಜಾತಾ ಮೋಹನದಾಸ್, ಬ್ರಾನ್ಲಿ ಸರ್ಕಾರ್, ಗೌರವ ಅತಿಥಿಗಳು: ವೈ.ಕೆ. ಸಂಧ್ಯಾ ಶರ್ಮಾ, ವಿ. ಅಜಿತ್ ಕುಮಾರ್, ಆಯೋಜನೆ: ನಟರಂಗ್ ಸ್ಕೂಲ್ ಆಫ್ ಡಾನ್ಸ್, ಸ್ಥಳ: ಎ.ಡಿ.ಎ. ರಂಗಮಂದಿರ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಕುಂಚಿಟಿಗ–ಒಕ್ಕಲಿಗರ ಸಂಸ್ಕೃತಿ ಭವನದ ಉದ್ಘಾಟನೆ ಹಾಗೂ ಸಂಘದ ದಶಮಾನೋತ್ಸವ ಸಮಾರಂಭ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ಭವನ ಉದ್ಘಾಟನೆ: ಎಚ್.ಡಿ. ಕುಮಾರಸ್ವಾಮಿ, ದಶಮಾನೋತ್ಸವ ಸ್ಮರಣ ಸಂಚಿಕೆ ಬಿಡುಗಡೆ: ಡಿ.ವಿ. ಸದಾನಂದಗೌಡ, ಅಧ್ಯಕ್ಷತೆ: ಸಿ. ಚಿಕ್ಕಣ್ಣ, ಸಿ. ಚಿಕ್ಕಣ್ಣ ಸಭಾಂಗಣದ ಉದ್ಘಾಟನೆ: ಎಸ್.ಟಿ. ಸೋಮಶೇಖರ್, ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ ಉದ್ಘಾಟನೆ: ಕೆ. ಗೋಪಾಲಯ್ಯ, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ರಾಜ್ಯ ಕುಂಚಿಟಿಗ–ಒಕ್ಕಲಿಗರ ಸಂಘ, ಬೃಂದಾವನನಗರ, ಕರಿಓಬನಹಳ್ಳಿ, ಬೆಳಿಗ್ಗೆ 10.30

ಅಖಿಲ ಕರ್ನಾಟಕ ಜೈನ ಶಿಕ್ಷಕರ ವೇದಿಕೆಯ 13ನೇ ರಾಜ್ಯ ಸಮಾವೇಶ: ಸಾನ್ನಿಧ್ಯ: 108 ಅಮೋಘಕೀರ್ತಿ ಮಹರಾಜರು, ಉದ್ಘಾಟನೆ: ಮಹೇಶ ಜೋಶಿ, ಅಧ್ಯಕ್ಷತೆ: ಧರ್ಮಸ್ಥಳ ಸುರೇಂದ್ರಕುಮಾರ್, ಸ್ಮರಣ ಸಂಚಿಕೆ ಬಿಡುಗಡೆ: ಬಿ. ಪ್ರಸನ್ನಯ್ಯ, ಸ್ಥಳ: ಕರ್ನಾಟಕ ಜೈನ ಭವನ, ಕೆ.ಆರ್. ರಸ್ತೆ, ಶಂಕರಪುರ, ಬೆಳಿಗ್ಗೆ 11

ಪುಸ್ತಕಗಳ ಬಿಡುಗಡೆ: ರೀಟಾ ರೀನಿ ಅನುವಾದಿಸಿರುವ 'ಸಿಖ್ ಕ್ರಾಂತಿ', ಸಿ.ಜಿ. ಲಕ್ಷ್ಮೀಪತಿ ಅವರ 'ಕ್ಯಾಸ್ಟ್ ಕೆಮಿಸ್ಟ್ರಿ' (ಜಾತಿ ಸಂಕಥನಗಳ ನಿರೂಪಣೆ), ಅತಿಥಿಗಳು: ಬಂಜಗೆರೆ ಜಯಪ್ರಕಾಶ್, ಡಿ. ಉಮಾಪತಿ, ಸಿಂಥಿಯಾ ಸ್ಟೀಫನ್. ಆಯೋಜನೆ: ಸಂಚಲನ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಹಾಲ್, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 4

ದತ್ತಿ ಉಪನ್ಯಾಸ: ವಿಷಯ: ಶಂ.ಬಾ. ಜೋಶಿ–ಜೀವನ ಮತ್ತು ಸಾಧನೆ, ಉಪನ್ಯಾಸಕರು: ಪ್ರೊ.ಆರ್. ವಸಂತಕುಮಾರ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಕೃಷಿ ವಿಶ್ವವಿದ್ಯಾಲಯ: ನ.3ರಿಂದ ನಾಲ್ಕು ದಿನ 'ಕೃಷಿ ಮೇಳ'

9 ಹೊಸ ತಳಿ, 38 ತಂತ್ರಜ್ಞಾನ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನ.3ರಿಂದ 6ರ ತನಕ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ 'ಕೃಷಿಯಲ್ಲಿ ನವೋದ್ಯಮ' ಘೋಷವಾಕ್ಯದಡಿ ಕೃಷಿ ಮೇಳ ಆಯೋಜಿಸಲಾಗಿದೆ' ಎಂದು ವಿವಿಯ ಕುಲಪತಿ ಡಾ.ಕೆ.ಸಿ. ನಾರಾಯಣಸ್ವಾಮಿ ತಿಳಿಸಿದರು.

'ಈ ಬಾರಿಯ ಮೇಳದಲ್ಲಿ ವಿವಿಯ ಸಂಶೋಧಕರು ಅಭಿವೃದ್ಧಿಪಡಿಸಿರುವ, 9 ಹೊಸ ತಳಿ ಹಾಗೂ 38 ತಂತ್ರಜ್ಞಾನ ಬಿಡುಗಡೆ ಮಾಡಲಾಗುವುದು. ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೊಸ ತಳಿ ಬಿಡುಗಡೆ ಮಾಡಲಿದ್ದಾರೆ. ಎರಡು ವರ್ಷಗಳಿಂದ ಕೋವಿಡ್ ಕಾರಣಕ್ಕೆ ಕೃಷಿ ಮೇಳದಲ್ಲಿ ಹೆಚ್ಚಿನ ಜನರು ಸೇರಲು ಸಾಧ್ಯವಾಗಿರಲಿಲ್ಲ. ಈ ವರ್ಷ ನಾಲ್ಕು ದಿನ ನಡೆಯುವ ಮೇಳವನ್ನು ಅಂದಾಜು 15 ಲಕ್ಷ ಜನರು ವೀಕ್ಷಿಸುವ ಅಂದಾಜಿದೆ. ಅದಕ್ಕೆ ಎಲ್ಲ ವ್ಯವಸ್ಥೆ ಮಾಡಿಕೊಳ್ಳಲಾಗುತ್ತಿದೆ' ಎಂದು ಅವರು ಶುಕ್ರವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಭತ್ತದಲ್ಲಿ ಕೆಎಂಪಿ 225 ಹಾಗೂ ಆರ್‌ಎನ್‌ಆರ್ 15048 ಹೊಸ ತಳಿ ಅಭಿವೃದ್ಧಿಪಡಿಸಲಾಗಿದೆ. ಕೆಎಂಪಿ 225 ತಳಿಯು 120ರಿಂದ 125 ದಿನಗಳಲ್ಲಿ ಕಟಾವಿಗೆ ಬರಲಿದೆ. ಎಲೆ ಹಾಗೂ ಕುತ್ತಿಗೆ ಬೆಂಕಿರೋಗದ ಸಾಧಾರಣ ನಿರೋಧಕತೆ



'ಕೃಷಿ ಮೇಳ'ದ ಮಾಹಿತಿ ಪತ್ರವನ್ನು ಕೃಷಿ ವಿವಿ ಕುಲಪತಿ ಡಾ.ಕೆ.ಸಿ.ನಾರಾಯಣ ಸ್ವಾಮಿ (ಎಡದಿಂದ ಮೂರನೆಯವರು) ಬಿಡುಗಡೆ ಮಾಡಿದರು. (ಎಡದಿಂದ) ಡಾ.ಕೆ.ಶಿವರಾಮ್, ಡಾ.ಕೆ.ನಾರಾಯಣಗೌಡ, ಕೆ.ಬಿ.ಉಮೇಶ್ ಹಾಜರಿದ್ದರು

ಹೊಂದಿದೆ. ಆರ್‌ಎನ್‌ಆರ್ ತಳಿಯು ಉತ್ಕೃಷ್ಟ ದರ್ಜೆಯದ್ದಾಗಿದೆ. ಮುಸುಕಿನ ಜೋಳ ಎಂಎಎಚ್ 14–138, ಕೊರ್ಲೆ ಜಿಪಿಯುಬಿಟಿ 2, ಅವರೆ ಎಚ್‌ಎ 5, ಎಳ್ಳು ಜಿಕೆವಿಕೆಎಸ್ 1, ಹುಚ್ಚೆಳ್ಳು ಕೆಬಿಎನ್ 2, ಹರಳು ಸಂಕರ ತಳಿ ಐಸಿಎಚ್ 66, ಮೇವಿನ ಜೋಳ ಸಿಎನ್‌ಎಫ್‌ಎಸ್ 1 ಅಭಿವೃದ್ಧಿಪಡಿಸಲಾಗಿದೆ ಎಂದು ಮಾಹಿತಿ ನೀಡಿದರು.

'ಖುಷ್ಕಿ ಬೇಸಾಯಕ್ಕೆ ಸೂಕ್ತವಾದ ಬೆಳೆ ಪದ್ಧತಿಗಳು, ಸಮಗ್ರ ಬೇಸಾಯ ಪದ್ಧತಿ, ಸಿರಿಧಾನ್ಯಗಳು ಹಾಗೂ ಮಹತ್ವ, ಜಲಾನಯನ ನಿರ್ವಹಣೆ, ಸಾವಯವ ಕೃಷಿ ಪದ್ಧತಿ, ಸಮಗ್ರ ಪೋಷಕಾಂಶಗಳು, ರೋಗ ಹಾಗೂ ಕೀಟ ನಿರ್ವಹಣೆ, ಹನಿ ಮತ್ತು ತುಂತುರು ನೀರಾವರಿ ಪದ್ಧತಿಗಳು, ಮಳೆ ಹಾಗೂ ಚಾವಣಿ ನೀರು ಸಂಗ್ರಹ, ಸುಧಾರಿತ ಕೃಷಿ ಯಂತ್ರೋಪಕರಣ ಪ್ರದರ್ಶನ, ಕೊಯ್ಲೋತ್ತರ ತಾಂತ್ರಿಕತೆ, ಕೃಷಿ ಉತ್ಪನ್ನ ಸಂಸ್ಕರಣೆ ಹಾಗೂ ಮೌಲ್ಯವರ್ಧನೆ, ಹವಾಮಾನ ಚತುರ ಕೃಷಿ ಹಾಗೂ ಮಣ್ಣುರಹಿತ ಕೃಷಿ ಪ್ರಾತ್ಯಕ್ಷಿಕೆಗಳು ಮೇಳದಲ್ಲಿ ಇರಲಿವೆ' ಎಂದು ಹೇಳಿದರು.

> **ರೈತರ ಸಮಸ್ಯೆಗಳಿಗೆ ಮೇಳದಲ್ಲಿ ತಜ್ಞರಿಂದ ಸಲಹೆ ಸಿಗಲಿದೆ. ಚರ್ಚಾಗೋಷ್ಠಿಗಳು ನಡೆಯಲಿವೆ. ಕೃಷಿ ಪರಿಕರ ಮಾರಾಟ ನಡೆಯಲಿದೆ.**
> **ಡಾ.ಕೆ.ಸಿ.ನಾರಾಯಣಸ್ವಾಮಿ**
> ಕುಲಪತಿ, ಕೃಷಿ ವಿ.ವಿ

'ಒಟ್ಟು 800 ಮಳಿಗೆಗೆ ವ್ಯವಸ್ಥೆ ಮಾಡಲಾಗಿದೆ. ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ' ಎಂದರು. ಪತ್ರಿಕಾಗೋಷ್ಠಿಯಲ್ಲಿ ವಿಸ್ತರಣಾ ನಿರ್ದೇಶಕ ಡಾ.ಕೆ. ನಾರಾಯಣಗೌಡ, ಸಂಶೋಧನಾ ನಿರ್ದೇಶಕ ಕೆ.ಬಿ.ಉಮೇಶ್, ಹಿರಿಯ ವಾರ್ತಾ ತಜ್ಞ ಡಾ.ಕೆ.ಶಿವರಾಮ್ ಹಾಜರಿದ್ದರು.

ಕೃಷಿ ಸಾಧಕರಿಗೆ ಪುರಸ್ಕಾರ

ಎಚ್.ಡಿ.ದೇವೇಗೌಡ ಅತ್ಯುತ್ತಮ ರೈತ ಹಾಗೂ ರೈತ ಮಹಿಳಾ ಪ್ರಶಸ್ತಿ, ಡಾ.ಎಚ್. ಎಚ್.ಮರೀಗೌಡ ಅತ್ಯುತ್ತಮ ತೋಟಗಾರಿಕೆ ರೈತ/ ರೈತ ಮಹಿಳೆ ಪ್ರಶಸ್ತಿ, ಕ್ಯಾನ್ ಬ್ಯಾಂಕ್ ಅತ್ಯುತ್ತಮ ರೈತ–ರೈತ ಮಹಿಳೆ ಪ್ರಶಸ್ತಿ, ಡಾ.ಆರ್. ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಹಾಗೂ ರೈತ/ ರೈತ ಮಹಿಳಾ ಪ್ರಶಸ್ತಿಯನ್ನು ನ.3ರಂದು ಪ್ರದಾನ ಮಾಡಲಾಗುವುದು. ಜಿಲ್ಲಾಮಟ್ಟದ 10 ಹಾಗೂ 61 ತಾಲ್ಲೂಕುಮಟ್ಟದ ಪ್ರಶಸ್ತಿಗಳನ್ನೂ ಪ್ರದಾನ ಮಾಡಲಾಗುವುದು. ತಾಲ್ಲೂಕು ಮಟ್ಟದ ಪ್ರಶಸ್ತಿ ಯುವ ಕೃಷಿಕರಿಗೆ ನೀಡಲಾಗುತ್ತಿದೆ. ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ ಎಂದು ನಾರಾಯಣಸ್ವಾಮಿ ತಿಳಿಸಿದರು.



ಸಚಿವ ಸಿ.ಎನ್‌.ಅಶ್ವತ್ಥನಾರಾಯಣ ಮತ್ತು ಬೆಂಗಳೂರು ಉತ್ತರ ವಿವಿ ಕುಲಪತಿ ಪ್ರೊ.ನಿರಂಜನ ವಾನಳ್ಳಿ ಅವರು ಅನಂತನಾಗ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು. ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ, ಭಾರತೀಯ ವಿದ್ಯಾ ಭವನ ನಿರ್ದೇಶಕ ಎಚ್‌.ಎನ್‌. ಸುರೇಶ್, ಕುಲಸಚಿವ ಪ್ರೊ. ಡಿ.ಡೊಮಿನಿಕ್ ಇದ್ದರು –ಪ್ರಜಾವಾಣಿ ಚಿತ್ರ

ಅನಂತನಾಗ್‌ಗೆ ಗೌರವ ಡಾಕ್ಟರೇಟ್ ಪ್ರದಾನ

ಬೆಂಗಳೂರು: ನಟ ಅನಂತನಾಗ್ ಅವರಿಗೆ ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು ಶುಕ್ರವಾರ ಗೌರವ ಡಾಕ್ಟರೇಟ್ ಪ್ರದಾನ ಮಾಡಿತು.

ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಡಾಕ್ಟರೇಟ್ ಪ್ರದಾನ ಮಾಡಿದರು. ಬಳಿಕ ಮಾತನಾಡಿದ ಅವರು, 'ಅನಂತನಾಗ್ ಅವರು ಚಿತ್ರರಂಗ ಪ್ರವೇಶಿಸಿ 50 ವರ್ಷ ಸಮೀಪಿಸುತ್ತಿರುವ ಸಂದರ್ಭದಲ್ಲಿ ಗೌರವ ಡಾಕ್ಟರೇಟ್ ನೀಡುವ ಮೂಲಕ ಬೆಂಗಳೂರು ವಿಶ್ವವಿದ್ಯಾಲಯ ತನ್ನ ಗೌರವ ಹೆಚ್ಚಿಸಿಕೊಂಡಿದೆ' ಎಂದು ಹೇಳಿದರು.

'ನೇರ ನಡೆಯ ಮೂಲಕ ತಮ್ಮ ಘನತೆಯನ್ನು ಹೆಚ್ಚಿಸಿಕೊಂಡಿರುವ ಅನಂತನಾಗ್ ಅವರು, ಈ ದೇಶ ಕಂಡ ಅತ್ಯುತ್ತಮ ನಟ. ಅನಂತನಾಗ್ ಮತ್ತು ಶಂಕರನಾಗ್ ಅವರು ರಾಮಕೃಷ್ಣ ಹೆಗಡೆ ಅವರ ಮೂಲಕ ರಾಜಕೀಯದಲ್ಲಿ ಬದಲಾವಣೆ ತರಲು ಪ್ರಯತ್ನಿಸಿದ್ದರು' ಎಂದು ನೆನಪಿಸಿಕೊಂಡರು.

ಡಾಕ್ಟರೇಟ್ ಸ್ವೀಕರಿಸಿ ಮಾತನಾಡಿದ ಅನಂತನಾಗ್, 'ಬಾಲ್ಯದ 12 ವರ್ಷವನ್ನು ಆನಂದ ಆಶ್ರಮದಲ್ಲಿ ಕಳೆದೆ. ನಾನು ಏನನ್ನಾದರೂ ಸಾಧಿಸಿದ್ದರೆ ಆಶ್ರಮದಲ್ಲಿ ಕಲಿತ ಶಿಕ್ಷಣವೇ ಕಾರಣ' ಎಂದರು.

'ಪ್ರಶಸ್ತಿ ಮತ್ತು ಗೌರವಗಳಿಗೆ ಲಾಬಿ ನಡೆಯುವುದನ್ನು ನೋಡಿ ಯಾವುದೇ ಗೌರವ ಸ್ವೀಕರಿಸಬಾರದು ಎಂದುಕೊಂಡಿದ್ದೆ. ವಿಶ್ವವಿದ್ಯಾಲಯ ಡಾಕ್ಟರೇಟ್ ನೀಡುವ ಪ್ರಸ್ತಾಪ ಬಂದಾಗ ಹಲವು ಬಾರಿ ಕುಟುಂಬ ಸದಸ್ಯರೊಂದಿಗೆ ಚರ್ಚಿಸಿದ ಬಳಿಕ ಸ್ವೀಕರಿಸಲು ಒಪ್ಪಿಕೊಂಡೆ' ಎಂದರು. ಪತ್ನಿ ಗಾಯತ್ರಿ, ಮಗಳು ಅತಿಥಿ ಮತ್ತು ಅಳಿಯ ವಿವೇಕ್ ಜತೆ ಕಾರ್ಯಕ್ರಮಕ್ಕೆ ಸಾಕ್ಷಿಯಾಗಿದ್ದರು.

ಇಂದು ಜೆಡಿಎಸ್ 'ಜನತಾ ಮಿತ್ರ' ಸಮಾರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ 'ಜನತಾ ಮಿತ್ರ' ಕಾರ್ಯಕ್ರಮದ ಸಮಾರೋಪವನ್ನು ಅ.8ರಂದು ಮಧ್ಯಾಹ್ನ 3ಕ್ಕೆ ಬಸವನಗುಡಿಯ ನ್ಯಾಷನಲ್ ಕಾಲೇಜ್ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಮಾರೋಪಕ್ಕೆ ಬೃಹತ್ ವೇದಿಕೆ ನಿರ್ಮಾಣ ಮಾಡಲಾಗಿದೆ. ವೇದಿಕೆ ಹಿಂಭಾಗದಲ್ಲಿ ಎಲ್‌ಇಡಿ ಪರದೆ ಅಳವಡಿಸಲಾಗಿದೆ.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ, ವಿಧಾನ ಪರಿಷತ್ ಸದಸ್ಯರಾದ ಟಿ.ಎ.ಶರವಣ, ಭೋಜೇಗೌಡ, ಕೆ.ಎನ್.ತಿಪ್ಪೇಸ್ವಾಮಿ, ಪಕ್ಷದ ನಗರ ಘಟಕದ ಅಧ್ಯಕ್ಷ ಪ್ರಕಾಶ್ ಶುಕ್ರವಾರ ಮೈದಾನಕ್ಕೆ ಭೇಟಿ ನೀಡಿ, ಸಿದ್ಧತೆಗಳನ್ನು ಪರಿಶೀಲಿಸಿದರು.

ಜನತಾಮಿತ್ರದ ಸಮಾರೋಪ ಮಳೆಯಿಂದ ಮೂರು ಬಾರಿ ಮುಂದೂಡಲಾಗಿತ್ತು.

ಬೆಂಗಳೂರಿನ ಸಮಸ್ಯೆಗಳ ಬಗ್ಗೆ ಸಾರ್ವಜನಿಕರು ಸಾಕಷ್ಟು ಮಾಹಿತಿ ನೀಡಿದ್ದಾರೆ. ಬೆಂಗಳೂರು ಅಭಿವೃದ್ಧಿಯ ನೀಲಿ ನಕ್ಷೆ ಸಭೆಯಲ್ಲಿ ಅನಾವರಣವಾಗಲಿದೆ. ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಭಾಗವಹಿಸುವರು. ಒಂದು ಲಕ್ಷ ಕಾರ್ಯಕರ್ತರು ಸಮಾವೇಶಕ್ಕೆ ಸಾಕ್ಷಿಯಾಗುವರು ಎಂದು ವಿಧಾನ ಪರಿಷತ್ ಸದಸ್ಯ ಶರವಣ ಮಾಹಿತಿ ನೀಡಿದರು.

ಬೆಂಗಳೂರು ಜನರ ಸಮಸ್ಯೆ ಆಲಿಸುವ ಕೆಲಸ ಸರ್ಕಾರ ಮಾಡಿಲ್ಲ. ಕೇವಲ ಪ್ರಚಾರಕ್ಕೆ ಸೀಮಿತವಾಗಿ ಕೆಲಸ ಮಾಡಿದೆ. ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಕೆಲಸ ಜೆಡಿಎಸ್ ಮಾಡುತ್ತಿದೆ. ಜನರ ಸಮಸ್ಯೆಗಳನ್ನು 15 ದಿನಗಳಿಂದ ಆಲಿಸಲಾಗಿದೆ. ಬಿಬಿಎಂಪಿ ಚುನಾವಣೆಗೆ ಸಮಾವೇಶ ದಿಕ್ಸೂಚಿಯಾಗಲಿದೆ ಎಂದು ಶರವಣ ಅವರು ಹೇಳಿದರು.

ಹಕ್ಕುಚ್ಯುತಿ: ಮುಖ್ಯಮಂತ್ರಿಗೆ ಎಚ್‌ಡಿಕೆ ಪತ್ರ

ರಾಮನಗರ: ಚನ್ನಪಟ್ಟಣ ತಾಲ್ಲೂಕಿನಲ್ಲಿ ನಡೆದ ಘಟನೆಯಿಂದ ನನ್ನ ಹಕ್ಕಿಗೆ ಚ್ಯುತಿಯಾಗಿದ್ದು, ಈ ಪ್ರಕರಣವನ್ನು ಹಕ್ಕು ಬಾಧ್ಯತಾ ಸಮಿತಿ ಪರಿಶೀಲನೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿ ಚನ್ನಪಟ್ಟಣ ಶಾಸಕ ಎಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ.

ಅನುದಾನಿತ ಶಾಲಾ, ಕಾಲೇಜುಗಳ ಸಿಬ್ಬಂದಿ ಪ್ರತಿಭಟನೆ

ಪಿಂಚಣಿಗಾಗಿ ಬೆಂಗಳೂರಿಗೆ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ತುಮಕೂರು: ಪಿಂಚಣಿ ಸೌಲಭ್ಯವು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಅನುದಾನಿತ ಶಾಲಾ, ಕಾಲೇಜುಗಳ ಬೋಧಕ, ಬೋಧಕೇತರ ಸಿಬ್ಬಂದಿ ಶುಕ್ರವಾರ ನಗರದ ಸಿದ್ಧಗಂಗಾ ಮಠದಿಂದ ಬೆಂಗಳೂರಿಗೆ ಪಾದಯಾತ್ರೆಯಲ್ಲಿ ಆರಂಭಿಸಿದರು.

ರಾಜ್ಯ ಅನುದಾನಿತ ಶಾಲೆ, ಕಾಲೇಜುಗಳ ನೌಕರರ ಸಂಘದ ನೇತೃತ್ವದಲ್ಲಿ ಈ ಹೋರಾಟ ಹಮ್ಮಿಕೊಂಡಿದ್ದು, ಮಠದ ಆವರಣದಲ್ಲಿ ನೂರಾರು ಸಂಖ್ಯೆಯಲ್ಲಿ ಸೇರಿದ್ದ ನೌಕರರು ಘೋಷಣೆ ಕೂಗುತ್ತಾ ಪಾದಯಾತ್ರೆಗೆ ಚಾಲನೆ ನೀಡಿದರು.

2006ರ ಏಪ್ರಿಲ್ ನಂತರ ನೇಮಕಗೊಂಡ ನೌಕರರ ಎನ್‌ಪಿಎಸ್ ಯೋಜನೆಗೆ ಆಡಳಿತ ಮಂಡಳಿಯ ವಂತಿಗೆಯನ್ನು ಸರ್ಕಾರವೇ ಭರಿಸಬೇಕು ಮತ್ತು ಕಾಲ್ಪನಿಕ ವೇತನ ಜಾರಿಗೊಳಿಸಬೇಕು. 2006ರ ಏಪ್ರಿಲ್‌ಗೂ ಮುನ್ನ ನೇಮಕವಾಗಿ ನಂತರ ಅನುದಾನಕ್ಕೆ ಒಳಪಟ್ಟ ನೌಕರರ ಹಿಂದಿನ ಸೇವೆಯನ್ನೂ ಪರಿಗಣಿಸಿ ಹಳೆ ಪಿಂಚಣಿ ಸೌಲಭ್ಯ ಜಾರಿಗೊಳಿಸಬೇಕು ಎಂಬುದು ಪ್ರಮುಖ ಬೇಡಿಕೆಗಳು.



ಅನುದಾನಿತ ಶಾಲಾ, ಕಾಲೇಜುಗಳ ನೌಕರರು, ಸಿಬ್ಬಂದಿ ಶುಕ್ರವಾರ ತುಮಕೂರಿನಿಂದ ಬೆಂಗಳೂರಿನತ್ತ ಪಾದಯಾತ್ರೆಯಲ್ಲಿ ತೆರಳಿದರು

'ಜ್ಯೋತಿ ಸಂಜೀವಿನಿ ಹಾಗೂ ಇತರ ವೈದ್ಯಕೀಯ ಸೌಲಭ್ಯಗಳನ್ನು ತಾರತಮ್ಯ ಇಲ್ಲದೆ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೂ ನೀಡಬೇಕು ಎಂಬ ಬೇಡಿಕೆಯೂ ಸೇರಿದೆ' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಜಿ.ಹನುಮಂತಪ್ಪ ತಿಳಿಸಿದರು.

'ಸರ್ಕಾರ ನಮ್ಮ ಬೇಡಿಕೆಗೆ ಸ್ಪಂದಿಸದ ಕಾರಣ ಅ.10ರಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆಸಲು ನಿರ್ಧರಿಸಿದ್ದೇವೆ. ಬೇಡಿಕೆ ಈಡೇರಿಸುವವರೆಗೂ ಹೋರಾಟ ಮುಂದುವರಿಯಲಿದೆ' ಎಂದು ಹೇಳಿದರು. ಸಂಘದ ಜಿಲ್ಲಾ ಘಟಕ ಅಧ್ಯಕ್ಷ ಆರ್.ಹನುಮೇಶ್, ಉಪಾಧ್ಯಕ್ಷ ಪಿ.ಡಿ.ರವಿ, ಪ್ರಚಾರ ಸಮಿತಿ ಅಧ್ಯಕ್ಷ ವೆಂಕಟಾಚಲ, ಕಾರ್ಯಾಧ್ಯಕ್ಷ ಸಿ.ಎಂ.ಶಶಿಧರ, ಮಧುಗಿರಿ ಶೈಕ್ಷಣಿಕ ಜಿಲ್ಲೆಯ ಅಧ್ಯಕ್ಷ ಜೆ.ಧರ್ಮೇಂದ್ರ ಪ್ರಸಾದ್, ಪದಾಧಿಕಾರಿಗಳಾದ ನರೇಶ್, ಗಜೇಂದ್ರ ಇದ್ದರು.

'ಪಿಂಚಣಿ ಸೌಲಭ್ಯವಿಲ್ಲದೇ ಸೇವೆಯಿಂದ ನಿವೃತ್ತಿ'

ನೌಕರರು ವೇತನ ಅನುದಾನಕ್ಕೆ ಒಳಪಡುವುದಕ್ಕೂ ಪೂರ್ವದ ಸೇವೆಯನ್ನು ಪರಿಗಣಿಸಿ ಸೌಲಭ್ಯ ನೀಡಬೇಕು ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದ್ದರೂ ಸರ್ಕಾರ ಜಾರಿಗೆ ತಂದಿಲ್ಲ. ಈಗಾಗಲೇ 3 ಸಾವಿರಕ್ಕೂ ಹೆಚ್ಚು ಸಿಬ್ಬಂದಿ ಪಿಂಚಣಿ ಸೌಲಭ್ಯವಿಲ್ಲದೇ ನಿವೃತ್ತಿಯಾಗಿದ್ದಾರೆ. ನಮ್ಮಲ್ಲಿ ಮಾತ್ರ ತಾರತಮ್ಯ ಮಾಡಲಾಗುತ್ತಿದೆ. ಹೊರ ರಾಜ್ಯಗಳಲ್ಲಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗೆ ಪಿಂಚಣಿ ಸೌಲಭ್ಯವಿದೆ.

ಜಿ.ಹನುಮಂತಪ್ಪ,
ಅಧ್ಯಕ್ಷ, ರಾಜ್ಯ ಅನುದಾನಿತ ಶಾಲೆ, ಕಾಲೇಜುಗಳ ನೌಕರರ ಸಂಘ

ರಾಜ್ಯ ಸರ್ಕಾರಿ ನೌಕರರ ತುಟ್ಟಿಭತ್ಯೆ ಶೇ 3.75ರಷ್ಟು ಹೆಚ್ಚಳ

ಒಂದನೇ ಪುಟದಿಂದ...

ತುಟ್ಟಿಭತ್ಯೆಹೆಚ್ಚಳಕ್ಕಾಗಿ ₹1,282.72 ಕೋಟಿಯನ್ನು ಸರ್ಕಾರ ಹೆಚ್ಚುವರಿಯಾಗಿ ಭರಿಸಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

'ರಾಜ್ಯದ ಸುಮಾರು 5.20 ಲಕ್ಷ ಸರ್ಕಾರಿ ನೌಕರರು, ನಿಗಮ, ಮಂಡಳಿ, ಅನುದಾನಿತ ಸಂಸ್ಥೆಗಳ 3 ಲಕ್ಷ ಸಿಬ್ಬಂದಿ, 4.50 ಲಕ್ಷ ನಿವೃತ್ತ ನೌಕರರಿಗೆ ಇದು ಅನ್ವಯವಾಗಲಿದೆ' ಎಂದು ರಾಜ್ಯ ಸರ್ಕಾರ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಹೇಳಿದ್ದಾರೆ.

ಆಸ್ಟರ್ ಸಿಎಂಐ: ಉಪಶಾಮಕ ಘಟಕಕ್ಕೆ ಮಾನ್ಯತೆ

ಬೆಂಗಳೂರು: ನಗರದ ಆಸ್ಟರ್ ಸಿಎಂಐ ಆಸ್ಪತ್ರೆಯ ಉಪಶಾಮಕ ಮತ್ತು ಪೂರಕ ಆರೈಕೆ ಚಿಕಿತ್ಸೆ ಘಟಕಕ್ಕೆ ಯುರೋಪಿಯನ್ ಸೊಸೈಟಿ ಆಫ್ ಮೆಡಿಕಲ್ ಆಂಕೊಲಾಜಿ ಸಂಸ್ಥೆಯಿಂದ ಮಾನ್ಯತೆ ದೊರೆತಿದೆ.

'ಈ ವಿಭಾಗದಲ್ಲಿ ರೋಗಿಗಳಿಗೆ ಮನೆ ಆರೈಕೆ ಸೇವೆಯನ್ನೂ ನೀಡಲಾಗುತ್ತದೆ. ಗಂಭೀರ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳ ಜೀವನ ಗುಣಮಟ್ಟ ಸುಧಾರಿಸಲು ಉಪಶಾಮಕ ಆರೈಕೆ ಸಹಕಾರಿ' ಎಂದು ಘಟಕದ ಡಾ. ರಾಘವೇಂದ್ರ ಆರ್. ತಿಳಿಸಿದ್ದಾರೆ.

ಎಚ್ಚೆತ್ತುಕೊಂಡ ಬಿಬಿಎಂಪಿ; ಅತಿಕ್ರಮವಾದರೆ ಸಿಬ್ಬಂದಿ ಮೇಲೆ ಕಾನೂನು ಕ್ರಮ

ಕಂದಾಯ ದಾಖಲೆಯಂತೆ ಕಟ್ಟಡ ನಕ್ಷೆ

● ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಕೆರೆ-ಕಟ್ಟೆ, ರಾಜಕಾಲುವೆ, ಹಳ್ಳ, ಕಾಲುದಾರಿ, ಬಫರ್ ಝೋನ್ ಹಾಗೂ ಖರಾಬು ಜಾಗಗಳ ಮೇಲೆ ಕಟ್ಟಡ ಕಟ್ಟಲು ನಕ್ಷೆ ಅನುಮೋದನೆ ನೀಡುತ್ತಿದ್ದ ಬಿಬಿಎಂಪಿ ಕೊನೆಗೂ ಎಚ್ಚೆತ್ತುಕೊಂಡಿದೆ. ಇನ್ನು ಮುಂದೆ ಸರ್ವೆ ನಕ್ಷೆ, ಗ್ರಾಮ ನಕ್ಷೆ ಹಾಗೂ ಸಂಬಂಧಪಟ್ಟ ಕಂದಾಯ ದಾಖಲೆಯನ್ನು ಪರಿಶೀಲಿಸಿಯೇ ಕಟ್ಟಡ ನಕ್ಷೆಗೆ ಅನುಮೋದನೆ ನೀಡಲಿದೆ.


ಸ್ಥಳ ಪರಿಶೀಲನೆ ಸಂದರ್ಭದಲ್ಲಿ ಸ್ವತ್ತಿನ ಸುತ್ತಮುತ್ತ ಯಾವುದೇ ರೀತಿಯ ಕೆರೆ-ಕಟ್ಟೆಗಳು, ಖರಾಬು, ಕಾಲುವೆಗಳು ಕಂಡುಬಂದರೆ ಬೃಹತ್ ನೀರುಗಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಅಭಿಪ್ರಾಯ ಪಡೆದುಕೊಳ್ಳಬೇಕು. ಬಫರ್ ಕಾಯ್ದಿರಿಸಿ ವಲಯ ನಿಯಮಾವಳಿಯಂತೆ ನಕ್ಷೆಗಳನ್ನು ಪರಿಶೀಲಿಸಿದ ನಂತರವಷ್ಟೇ ಅನುಮೋದನೆಗೆ ಮಂಡಿಸಬೇಕು. ಇದೆಲ್ಲವನ್ನು ಪರಿಗಣಿಸದೆ ನಕ್ಷೆ ಮಂಜೂರು ನೀಡಿದರೆ ಅದಕ್ಕೆ ಕಾರಣವಾದ ಎಲ್ಲ ಅಧಿಕಾರಿ-ಸಿಬ್ಬಂದಿ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆದೇಶಿಸಿದ್ದಾರೆ.



ರಾಜಕಾಲುವೆ ಮೇಲಿನ ಒತ್ತುವರಿ ತೆರವು (ಸಾಂದರ್ಭಿಕ ಚಿತ್ರ)

ಕಂದಾಯ ದಾಖಲೆಗಳಲ್ಲಿ ಕಂಡು ಬರುವ ಹಳ್ಳ/ ಕಾಲುವೆ, ಕೆರೆ /ಕಟ್ಟೆಗಳು, ಕಾಲುದಾರಿಗಳು, ಖರಾಬುಗಳ ಮೇಲೆ ಯಾವುದೇ ರೀತಿಯ ನಿರ್ಮಾಣಗಳಿಗೆ ಅನುಮತಿ ನೀಡುವಂತಿಲ್ಲ. ವಲಯಗಳ ಜಂಟಿ ಆಯುಕ್ತರಿಗೆ ಕಟ್ಟಡ ನಿರ್ಮಾಣಕ್ಕೆ ಸಂಬಂಧಪಟ್ಟ ಪ್ರಸ್ತಾವಗಳನ್ನು ಪರಿಶೀಲಿಸಲು ಜವಾಬ್ದಾರಿ ನೀಡಲಾಗಿದೆ. ಜಂಟಿ ಆಯುಕ್ತರು ಕಂದಾಯ ಇಲಾಖೆಯ ಅಧಿಕಾರಿಗಳಾಗಿರುತ್ತಾರೆ. ಹೀಗಾಗಿ, ಸಹಾಯಕ ನಿರ್ದೇಶಕರು ನಕ್ಷೆ ಮಂಜೂರು ಕೋರಿ ಅನುಮೋದನೆಗೆ ಮಂಡಿಸಿದಾಗ, ಕಂದಾಯ ಇಲಾಖೆಯ ಎಲ್ಲ ರೀತಿಯ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಬೇಕು. ಸರ್ಕಾರದ ಯಾವ ಜಾಗವೂ ಅತಿಕ್ರಮವಾಗದಂತೆ ದೃಢೀಕರಿಸಿಕೊಂಡು ಅನುಮೋದನೆ ಅಥವಾ ಶಿಫಾರಸು ನೀಡಬೇಕು.

ಖರಾಬು ಹಾಗೂ ಬಫರ್ ಝೋನ್‌ಗಳನ್ನು ಕಾಯ್ದಿರಿಸದೆ ಕಟ್ಟಡ ನಕ್ಷೆಗೆ ಅನುಮೋದನೆ ನೀಡಿರುವುದು ಕಂಡುಬಂದರೆ ಇದಕ್ಕೆ ಕಾರಣವಾದ ಎಲ್ಲ ಸಿಬ್ಬಂದಿ ಮೇಲೂ ಕಾನೂನು ರೀತಿ ಶಿಸ್ತುಕ್ರಮ ಜರುಗಿಸಲಾಗುತ್ತದೆ ಎಂದು ಎಚ್ಚರಿಸಿದ್ದಾರೆ.



ನಾಲಾ, ಖರಾಬು ತೋರುವ ನಕ್ಷೆ (ಸಾಂದರ್ಭಿಕ)

ದೂರಿನ ಮೇಲೆ ಕ್ರಮ

ಬಿಬಿಎಂಪಿ ವ್ಯಾಪ್ತಿಯ ಸ್ವತ್ತುಗಳಲ್ಲಿ ಗ್ರಾಮ ನಕ್ಷೆ, ಸರ್ವೆ ನಕ್ಷೆ ಹಾಗೂ ಕಂದಾಯ ದಾಖಲಾತಿಗಳ ಅನುಸಾರ ಇರುವ ಹಳ್ಳ/ ಕಾಲುವೆ, ಕೆರೆ/ ಕಟ್ಟೆ ಹಾಗೂ ಖರಾಬು ಜಾಗಗಳನ್ನು ಮುಚ್ಚಿ, ಅವುಗಳ ಮೇಲೆ ಕಟ್ಟಡ ನಿರ್ಮಾಣ ಮಾಡಿರುವ ಬಗ್ಗೆ ಇತ್ತೀಚೆಗೆ ಹಲವು ದೂರುಗಳು ಬಂದಿವೆ. ಇದರಿಂದಾಗಿ ಮಳೆ ನೀರುಗಾಲುವೆಗಳು ಮುಚ್ಚಿಹೋಗಿರುವುದರಿಂದ ಮಳೆ ನೀರು ಸರಾಗವಾಗಿ ಹರಿಯದೆ ಕಟ್ಟಡಗಳಿಗೆ ನುಗ್ಗಿ ಅಪಾರ ಹಾನಿ ಉಂಟಾಗಿದೆ. ಸಾರ್ವಜನಿಕರು ಹಾಗೂ ವಾಹನಗಳ ಸಂಚಾರಕ್ಕೆ ಇದರಿಂದ ಅಡಚಣೆ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಹೊಸ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ ಎಂದು ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

ಸಿಸಿ, ಒಸಿಗೂ ಇದೇ ನಿಯಮ

ಬಿಬಿಎಂಪಿ ವ್ಯಾಪ್ತಿಯಲ್ಲಿ ನಕ್ಷೆ ಮಂಜೂರಾತಿಗೆ ಸಂಬಂಧಿಸಿದಂತೆ ಹೊರಡಿಸಲಾಗಿರುವ ಹೊಸ ನಿಯಮಗಳನ್ನು ಕಟ್ಟಡ ಪ್ರಾರಂಭಿಕ ಪ್ರಮಾಣಪತ್ರ (ಸಿಸಿ) ಮತ್ತು ಸ್ವಾಧೀನಾನುಭವ ಪ್ರಮಾಣಪತ್ರ (ಒಸಿ) ನೀಡುವಾಗಲೂ ಅನುಸರಿಸಬೇಕು. ಕೆರೆ-ಕಟ್ಟೆ, ರಾಜಕಾಲುವೆ, ಖರಾಬು ಇತ್ಯಾದಿ ಸರ್ಕಾರಿ ಭೂಮಿ ಒತ್ತುವರಿಯಾಗಿದ್ದರೆ ಈ ಪ್ರಮಾಣಪತ್ರಗಳನ್ನು ನೀಡಬಾರದು. ಇದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತರು ಆದೇಶಿಸಿದ್ದಾರೆ.

ಸುದ್ದಿ 2 ನಿಮಿಷ

ಚಿತ್ರದುರ್ಗದ ಮುರುಘಾ ಮಠದಲ್ಲಿ 47 ಫೋಟೊ ಕಳವು

ಚಿತ್ರದುರ್ಗ: ಇಲ್ಲಿನ ಮುರುಘಾ ಮಠದ ರಾಜಾಂಗಣದಲ್ಲಿದ್ದ ಶಿವಮೂರ್ತಿ ಮುರುಘಾ ಶರಣರ 47 ಫೋಟೊಗಳು ಕಳುವಾಗಿದ್ದು, ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಸವಶ್ರೀ ಪ್ರಶಸ್ತಿ ಪ್ರದಾನ, ಮುರುಘಾಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಮಠಕ್ಕೆ ಭೇಟಿ ನೀಡಿದ ಗಣ್ಯರೊಂದಿಗೆ ಶಿವಮೂರ್ತಿ ಮುರುಘಾ ಶರಣರು ಇದ್ದ ಹಲವು ಫೋಟೊಗಳನ್ನು ರಾಜಾಂಗಣದಲ್ಲಿ ಹಾಕಲಾಗಿತ್ತು. ಕೇಂದ್ರ ಗೃಹ ಸಚಿವ ಅಮಿತ್ ಶಾ, ಶಾಸಕ ಬಿ.ಎಸ್. ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಸೇರಿದಂತೆ ಹಲವರೊಂದಿಗೆ ಮುರುಘಾಶ್ರೀ ಇದ್ದ ಚಿತ್ರಗಳು ಇಲ್ಲಿದ್ದವು. ಈ ಎಲ್ಲ ಫೋಟೊಗಳು ಅ.5ರಂದು ರಾತ್ರಿ ಕಳುವಾಗಿವೆ ಎಂದು ಎಸ್‌ಜೆಎಂ ವಿದ್ಯಾಪೀಠದ ಕಾರ್ಯದರ್ಶಿ ಎಸ್.ಬಿ.ವಸ್ತ್ರಮಠ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

'ಮಠದ ರಾಜಾಂಗಣದಲ್ಲಿದ್ದ ಫೋಟೊಗಳು ಕಳುವಾಗಿರುವ ಕುರಿತು ದೂರು ಬಂದಿತ್ತು. ದೂರು ಪರಿಶೀಲಿಸಿ ಶುಕ್ರವಾರ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಪರಶುರಾಮ್ ತಿಳಿಸಿದ್ದಾರೆ.

ತ್ರಿವೇಣಿ ಸಂಗಮ ಮಹಾಕುಂಭ ಮೇಳದ ಲೋಗೊ ಬಿಡುಗಡೆ



ಬೆಂಗಳೂರು: ಕೆ.ಆರ್.ಪೇಟೆಯ ತ್ರಿವೇಣಿ ಸಂಗಮದಲ್ಲಿ ನಡೆಯಲಿರುವ ಮಹಾಕುಂಭಮೇಳದ ಲೋಗೊವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಕ್ರವಾರ ಬಿಡುಗಡೆ ಮಾಡಿದರು.

ಕೆ.ಆರ್.ಪೇಟೆಯ ಅಂಬಿಗರಹಳ್ಳಿ, ಸಂಗಾಪುರ ಹಾಗೂ ಪುರದ ಕಾವೇರಿ-ಹೇಮಾವತಿ-ಲಕ್ಷ್ಮಣ ತೀರ್ಥಗಳ ಸಮಾಗಮ ಸ್ಥಳ ತ್ರಿವೇಣಿ ಸಂಗಮದಲ್ಲಿ ಮಹಾ ಕುಂಬಾಮೇಳ ಅ.13ರಿಂದ 16ರವರೆಗೆ ನಡೆಯಲಿದೆ.

ಕುಂಭಮೇಳಕ್ಕೆ ಲಕ್ಷಾಂತರ ಭಕ್ತರು ಬರುತ್ತಾರೆ. ಅಗತ್ಯವಿರುವ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಬೇಕು. ಸಮಸ್ಯೆಯಾಗದಂತೆ ವ್ಯವಸ್ಥೆ ಮಾಡಬೇಕು ಎಂದು ಮುಖ್ಯಮಂತ್ರಿ ಸೂಚಿಸಿದರು.

ಸಚಿವ ಡಾ.ನಾರಾಯಣಗೌಡ, ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ, ಶಾಸಕ ನಾಗೇಂದ್ರ, ಮಂಡ್ಯ ಜಿಲ್ಲಾಧಿಕಾರಿ ಎಸ್.ಅಶ್ವತಿ ಉಪಸ್ಥಿತರಿದ್ದರು.

ಬಜರಂಗ ದಳದಿಂದ ಮಾರಕಾಸ್ತ್ರಗಳಿಗೆ ಪೂಜೆ

ತುಮಕೂರು: ಆಯುಧ ಪೂಜೆಯ ಪ್ರಯುಕ್ತ ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗ ದಳದಿಂದ ನಗರದ ನಾಗರಕಟ್ಟೆ ಗಣಪತಿ ದೇವಸ್ಥಾನದಲ್ಲಿ ಮಾರಕಾಸ್ತ್ರಗಳಿಗೆ ಪೂಜೆ ಮಾಡಿದ್ದು, ಸದ್ಯ ಇದರ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ.

ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಆಶಯ

'ವೈದ್ಯಕೀಯ ಕ್ಷೇತ್ರದಲ್ಲಿ ಸಂಶೋಧನೆ ಹೆಚ್ಚಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೈದ್ಯಕೀಯ ಚಿಕಿತ್ಸೆಗಳನ್ನು ಸುಲಭವಾಗಿಸಲು ಹಾಗೂ ಚಿಕಿತ್ಸಾ ವೆಚ್ಚವನ್ನು ತಗ್ಗಿಸಲು ಅತ್ಯಾಧುನಿಕ ತಂತ್ರಜ್ಞಾನಗಳ ನೆರವನ್ನು ಪಡೆದುಕೊಳ್ಳಬೇಕು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಬೆಂಗಳೂರು ಯುರೊಲಾಜಿಕಲ್ ಸೊಸೈಟಿಯು ರಾಜಾಜಿನಗರದ ಎನ್.ಯು. ಆಸ್ಪತ್ರೆಯಲ್ಲಿ ಶುಕ್ರವಾರ ಆಯೋಜಿಸಿದ ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿದರು. 'ವೈದ್ಯಕೀಯ ಸೇರಿ ವಿವಿಧ ಕ್ಷೇತ್ರಗಳಲ್ಲಿ ಅತ್ಯಾಧುನಿಕ ತಂತ್ರಜ್ಞಾನಗಳ ಅಳವಡಿಕೆಯಲ್ಲಿ ಬೆಂಗಳೂರು ಮುಂಚೂಣಿಯಲ್ಲಿದೆ. ಇಲ್ಲಿ ನಿತ್ಯವೂ ಹೊಸ ಹೊಸ ಆವಿಷ್ಕಾರಗಳು ನಡೆಯುತ್ತಿವೆ. ವೈದ್ಯಕೀಯ ಕ್ಷೇತ್ರದಲ್ಲಿನ ಪ್ರಯೋಗಗಳಿಗೆ ಸರ್ಕಾರವೂ ಅಗತ್ಯ ಪ್ರೋತ್ಸಾಹ ನೀಡಲಿದೆ. ಈ ಕ್ಷೇತ್ರವು ಕೇವಲ ಲಾಭದ ಉದ್ಯಮವಾಗಬಾರದು. ಸೇವಾ ಮನೋಭಾವ ಪ್ರಧಾನವಾಗಬೇಕು' ಎಂದು ಹೇಳಿದರು.

ಬೆಂಗಳೂರು ಯುರೊಲಾಜಿಕಲ್ ಸೊಸೈಟಿಯ ಅಧ್ಯಕ್ಷ ಡಾ.ಕುಮಾರ್ ಪ್ರಭು ಎಂ., 'ಲ್ಯಾಪರೊಸ್ಕೋಪಿ ಶಸ್ತ್ರಚಿಕಿತ್ಸೆಗೆ ಹೋಲಿಸಿದರೆ ರೋಬೋಟಿಕ್ ಶಸ್ತ್ರಚಿಕಿತ್ಸೆಗಳಿಂದ ಸಾಕಷ್ಟು ಅನುಕೂಲಗಳಿವೆ. ಲ್ಯಾಪರೊಸ್ಕೋಪಿ ಶಸ್ತ್ರಚಿಕಿತ್ಸೆ ಕೆಲವು ಮಿತಿಗಳನ್ನು ಹೊಂದಿದೆ. ರೋಬೋಟಿಕ್ ಶಸ್ತ್ರಚಿಕಿತ್ಸೆಯಲ್ಲಿ ರೋಗಿ ಬೇಗ ಚೇತರಿಕೊಳ್ಳುತ್ತಾನೆ. ಆಸ್ಪತ್ರೆಯ ದಾಖಲಾತಿ ಅವಧಿಯೂ ಕಡಿಮೆ ಇರಲಿದೆ. ಸಣ್ಣದಾಗಿ ರಂಧ್ರ ಮಾಡುವುದರಿಂದ ಅಷ್ಟಾಗಿ ರಕ್ತಸ್ರಾವ ಆಗುವುದಿಲ್ಲ. ಸಾಂಪ್ರದಾಯಿಕ ಶಸ್ತ್ರಚಿಕಿತ್ಸಾ ವಿಧಾನಗಳಲ್ಲಿ ಶಸ್ತ್ರಚಿಕಿತ್ಸಕರು ಮಾಡುವ ದೋಷಗಳು ರೋಗಿಯ ಜೀವಕ್ಕೆ ಅಪಾಯ ತಂದೊಡ್ಡುವ ಸಾಧ್ಯತೆ ಇರುತ್ತದೆ. ರೋಬೋಟಿಕ್ ಶಸ್ತ್ರಚಿಕಿತ್ಸೆಯು ಹೆಚ್ಚು ನಿಖರವಾಗಿರುತ್ತದೆ' ಎಂದು ಹೇಳಿದರು.

ಕಾರ್ಯಾಗಾರದಲ್ಲಿ 100ಕ್ಕೂ ಅಧಿಕ ಮೂತ್ರಶಾಸ್ತ್ರ ತಜ್ಞರು ಭಾಗವಹಿಸಿ, ರೋಬೋಟಿಕ್ ಶಸ್ತ್ರಚಿಕಿತ್ಸೆಗಳ ಬಗ್ಗೆ ಚರ್ಚಿಸಿದರು.

ಕೆಂಪೇಗೌಡ ಪ್ರತಿಮೆ ಲೋಕಾರ್ಪಣೆ: ಸ್ಥಳ ಪರಿಶೀಲನೆ

ಬೆಂಗಳೂರು: ದೇವನಹಳ್ಳಿ ಬಳಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿ ನಿರ್ಮಿಸಿರುವ 108 ಅಡಿ ಎತ್ತರದ ಕೆಂಪೇಗೌಡ ಪ್ರತಿಮೆಯನ್ನು ನ.10ರಂದು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದು, ಸಚಿವ ಸಿ.ಎನ್.ಅಶ್ವತ್ಥನಾರಾಯಣ ಅವರು ಶುಕ್ರವಾರ ಸ್ಥಳ ಪರಿಶೀಲನೆ ನಡೆಸಿದರು.

ಪ್ರತಿಮೆ ಸಮೀಪವೇ ಇರುವ ಖಾಲಿ ಜಾಗದಲ್ಲಿ ಸಾರ್ವಜನಿಕ ಕಾರ್ಯಕ್ರಮ ನಡೆಯಲಿದೆ. ಈ ಕಾರ್ಯಕ್ರಮಕ್ಕೆ ಅಪಾರ ಸಂಖ್ಯೆಯ ಜನರು ಬರುವ ಸಾಧ್ಯತೆಯಿದ್ದು, ಸೂಕ್ತ ಬಂದೋಬಸ್ತ್ ಮತ್ತು ವಾಹನ ನಿಲುಗಡೆ ಸೇರಿ ಸಕಲ ವ್ಯವಸ್ಥೆ ಮಾಡಲಾಗುತ್ತದೆ ಎಂದು ಸಚಿವರು ತಿಳಿಸಿದರು.

ಬಿಬಿಎಂಪಿ ಅರಣ್ಯ ವಿಭಾಗದಿಂದ ಅಸ್ತಿತ್ವದಲ್ಲಿಲ್ಲದ ಇ–ಮೇಲ್ ಐಡಿ ಪ್ರಕಟ

ಮರಕ್ಕೆ ಕೊಡಲಿ: ಆಕ್ಷೇಪಣೆಗೂ ಕತ್ತರಿ

ಪ್ರಜಾವಾಣಿ ವಾರ್ತೆ


ಬೆಂಗಳೂರು: 'ರಸ್ತೆ ವಿಸ್ತರಣೆಗೆ ಮರಗಳನ್ನು ಕಡಿಯಲಾಗುತ್ತದೆ. ಆಕ್ಷೇಪಣೆಗಳಿದ್ದರೆ ಸಲ್ಲಿಸಿ' ಎಂದು ಸಾರ್ವಜನಿಕ ನೋಟಿಸ್ ಪ್ರಕಟಿಸಿರುವ ಬಿಬಿಎಂಪಿ ಅರಣ್ಯ ಇಲಾಖೆ, ಚಾಲನೆಯಲ್ಲಿ ಇಲ್ಲದ ಇ-ಮೇಲ್ ಐಡಿಯನ್ನು ನೀಡಿದೆ. ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ನೀಡದಂತೆ ಮಾಡಿದೆ ಎಂದು ನಾಗರಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೇಖ್ರಿ ವೃತ್ತದಿಂದ ಕಾವೇರಿ ಚಿತ್ರಮಂದಿರದ ಜಂಕ್ಷನ್‌ವರೆಗೆ ರಸ್ತೆ ವಿಸ್ತರಣೆ ಮಾಡಲು ಬಿಬಿಎಂಪಿ 58 ಮರಗಳನ್ನು ಕಡಿದುಹಾಕಲು ಯೋಜಿಸುತ್ತಿದ್ದು, ಇದಕ್ಕೆ ಪರಿಸರ ಕಾರ್ಯಕರ್ತರಿಂದ ವಿರೋಧ ವ್ಯಕ್ತವಾಗಿದೆ. ಮರಗಳನ್ನು ಕಡಿಯುವ ಸಂಬಂಧ ಪರಿಷ್ಕೃತ ಸಾರ್ವಜನಿಕ ನೋಟಿಸ್ ಅನ್ನು ಬಿಬಿಎಂಪಿ ಅರಣ್ಯ ವಿಭಾಗದ ಡಿಸಿಎಫ್ ಅವರು ಶುಕ್ರವಾರ ಪ್ರಕಟಿಸಿದ್ದಾರೆ. defbbmp12@gmail.com ಗೆ ಆಕ್ಷೇಪಣೆಗಳನ್ನು ಸಲ್ಲಿಸಬಹುದು ಎಂದು ಹೇಳಿದೆ. ಆದರೆ ಈ ಐಡಿ ಚಾಲನೆಯಲ್ಲಿ ಇಲ್ಲ.


'ಈ ರಸ್ತೆಯಲ್ಲಿ ಅತ್ಯಂತ ಹಳೆಯದಾದ ಮರಗಳಿವೆ. ಮಳೆಮರ, ಹೊಂಗೆ, ಮಹಾಗನಿ, ಆಕಾಶ ಮಲ್ಲಿಗೆಯಂತಹ ಪರಿಸರಸ್ನೇಹಿ ಮರಗಳಿವೆ. ಇವುಗಳಿಗೆ ಕೊಡಲಿ ಹಾಕಲು ಬಿಬಿಎಂಪಿ ಮುಂದಾಗಿದೆ. ಈ ಭಾಗದ ರಸ್ತೆಯಲ್ಲಿ ಸಾಲಾಗಿ ಈ ಮರಗಳು ಹರಡಿಕೊಂಡು ಪರಿಸರಕ್ಕೆ ಕೊಡುಗೆ ನೀಡುತ್ತಿವೆ. ಇಂತಹ ಮರಗಳನ್ನು ಕಡಿಯುವುದೆಂದರೆ ಇದೊಂದು ರೀತಿಯ ಅಪರಾಧ' ಎಂದು ಪರಿಸರ ಕಾರ್ಯಕರ್ತ ವಿಜಯ್ ನಿಶಾಂತ್ ದೂರಿದರು.

'ಬೆಂಗಳೂರು ಇತ್ತೀಚಿನ ದಿನಗಳಲ್ಲಿ ಪ್ರವಾಹದಿಂದ ತತ್ತರಿಸಿದೆ. ಇದಕ್ಕೆಲ್ಲ ಕಾಲುವೆ ಇಲ್ಲವಾಗಿಸಿರುವುದು, ಹಸಿರು ಹೊದಿಕೆಯನ್ನು ತೆರವುಮಾಡಿರುವುದೇ ಪ್ರಮುಖ ಕಾರಣ. ಮೇಲ್ಸೇತುವೆ, ರಸ್ತೆ ವಿಸ್ತರಣೆ ಹಾಗೂ ಮೆಟ್ರೊಗಾಗಿ ನಗರ 20 ವರ್ಷದಲ್ಲಿ ಸಾವಿರಾರು ಗಿಡಗಳನ್ನು ಕಳೆದುಕೊಂಡಿದೆ. ಸಂಚಾರ ದಟ್ಟಣೆ ಸಮಸ್ಯೆ ಇದೆ ನಿಜ. ಆದರೆ, ಬಳ್ಳಾರಿ ರಸ್ತೆಯಲ್ಲಿ ಈ 58 ಮರಗಳನ್ನು ಕಡಿದು ರಸ್ತೆ ವಿಸ್ತರಣೆ ಮಾಡಿದರೆ ಇಲ್ಲಿನ ದಟ್ಟಣೆ ಕಡಿಮೆಯಾಗುವುದಿಲ್ಲ. ಅಲ್ಲಿರುವ ಅಂಡರ್‌ಪಾಸ್, ಮೇಲ್ಸೇತುವೆಯಲ್ಲಿ ಸಮಸ್ಯೆ ಇದೆ. ಅದನ್ನು ಒಪ್ಪಿಕೊಳ್ಳದ ಎಂಜಿನಿಯರ್‌ಗಳು ರಸ್ತೆ ವಿಸ್ತರಣೆ ಮಾಡಲು ಮುಂದಾಗಿದ್ದಾರೆ. ಈ ವಿಸ್ತರಣೆಯಿಂದ ಯಾವುದೇ ಪ್ರಯೋಜನ ಇಲ್ಲ. ಇನ್ನು ಮರ ಕಡಿಯುವುದರಿಂದ ಈ ಭಾಗದಲ್ಲಿ ಉಷ್ಣಾಂಶ ಹೆಚ್ಚಾಗಲಿದೆ. ಮಳೆ ನೀರು ಇಂಗುವ ಪ್ರಮಾಣವೂ ಕಡಿಮೆಯಾಗಲಿದೆ' ಎಂದರು.

'ಈ ಹಿಂದೆ ರಸ್ತೆ ವಿಸ್ತರಣೆಗೆ ಬಿಜೆಪಿ ಸಂಸದರಾದ ಶೋಭಾ ಕರಂದ್ಲಾಜೆ, ಪಿ.ಸಿ. ಮೋಹನ್, ರಾಜೀವ್ ಚಂದ್ರಶೇಖರ್ ವಿರೋಧ ವ್ಯಕ್ತಪಡಿಸಿ, ಪ್ರತಿಭಟಿಸಿದ್ದರು. ಇದೀಗ ಅವರದ್ದೇ ಸರ್ಕಾರ ಇದ್ದು ಮತ್ತೆ ಅದೇ ರಸ್ತೆ ವಿಸ್ತರಣೆಗೆ ಮುಂದಾಗಿದೆ' ಎಂದು ವಿಜಯ್ ದೂರಿದರು.



ಬಳ್ಳಾರಿ ರಸ್ತೆಯಲ್ಲಿರುವ ಕಾವೇರಿ ಜಂಕ್ಷನ್



ಬಿಬಿಎಂಪಿ ಅರಣ್ಯ ವಿಭಾಗ ನೀಡಿರುವ ಇಮೇಲ್ ಐಡಿ ಇಲ್ಲ ಎಂದು ಬಂದಿರುವ ಸಂದೇಶ

ತಪ್ಪಾಗಿದೆ, ಸರಿಪಡಿಸುತ್ತೇವೆ...

ಆಕ್ಷೇಪಣೆಗಳನ್ನು ಸಲ್ಲಿಸಲು ಪ್ರಕಟಿಸಲಾಗಿರುವ ಇ-ಮೇಲ್ ಐಡಿ ತಪ್ಪಾಗಿದೆ. ಅದನ್ನು ಸರಿಪಡಿಸಲಾಗುತ್ತದೆ. dcfbbmp12@gmail.com ಇ-ಮೇಲ್ ಐಡಿ ಸರಿಯಾದದ್ದು ಎಂದು ಬಿಬಿಎಂಪಿ ಅರಣ್ಯ ವಿಭಾಗದ ದಕ್ಷಿಣ ವಲಯದ ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ (ಡಿವೈಆರ್‌ಎಫ್‌ಒ) ಚಿದಾನಂದ ತಿಳಿಸಿದರು.



ಎಲೆಕ್ಟ್ರಿಕ್ ಬಸ್ ಸಂಚಾರಕ್ಕೆ ಶಾಸಕ ವಿಶ್ವನಾಥ್, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಸಿ.ಶಿಖಾ, ವಿಧಾನ ಪರಿಷತ್ ಸದಸ್ಯ ನಾಗರಾಜ್ ಯಾದವ್, ಬಿಎಂಟಿಸಿ ಆಡಳಿತ ಮಂಡಳಿ ನಿರ್ದೇಶಕ ಕೆ.ಪಿ. ಭೃಂಗೇಶ್ ಹಸಿರು ನಿಶಾನೆ ತೋರಿದರು

100 ಎಲೆಕ್ಟ್ರಿಕ್ ಬಸ್ ಸಂಚಾರ ಆರಂಭ

ಯಲಹಂಕ: ಕೇಂದ್ರ ಸರ್ಕಾರದ ಭಾರಿ ಕೈಗಾರಿಕಾ ಇಲಾಖೆ ಫೇಮ್-2 ಯೋಜನೆ ಅಡಿ ಪುಟ್ಟೇನಹಳ್ಳಿ ಬಿಎಂಟಿಸಿ ಘಟಕ 30ರಿಂದ 100 ಎಲೆಕ್ಟ್ರಿಕ್ ಬಸ್ ಸಂಚಾರಕ್ಕೆ ಕೇಂದ್ರ ಭಾರಿ ಕೈಗಾರಿಕೆ ಸಚಿವ ಡಾ.ಮಹೇಂದ್ರನಾಥ್ ಪಾಂಡೆ ಅವರು ವರ್ಚ್ಯುವಲ್ ಮೂಲಕ ಚಾಲನೆ ನೀಡಿದರು.

ಮೆ.ಸ್ವಿಚ್ ಮೊಬಿಲಿಟಿ ಆಟೋಮೋಟಿವ್ ಕಂಪನಿ ಬಸ್‌ಗಳ ನಿರ್ವಹಣೆ ನಡೆಸಲಿದೆ. ಘಟಕ-30, ಬಿಡದಿ ಘಟಕ-49 ಮತ್ತು ಚಂದಾಪುರ (ಸೂರ್ಯಸಿಟಿ), ಘಟಕ-32ರಿಂದ ಈ ಬಸ್‌ಗಳು ಸಂಚಾರ ನಡೆಸಲಿವೆ. ಪುಟ್ಟೇನಹಳ್ಳಿಯ ಘಟಕ-30ರಲ್ಲಿ 120 ಎಲೆಕ್ಟ್ರಿಕ್ ಬಸ್ಸುಗಳ ನಿರ್ವಹಣೆ, ಚಾರ್ಜಿಂಗ್ 3300 ಕಿಲೋವಾಟ್ ವಿದ್ಯುಚ್ಛಕ್ತಿ ಹಾಗೂ 14 ಚಾರ್ಜಿಂಗ್ ಘಟಕಗಳ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ನಿಯಂತ್ರಣ ಕೊಠಡಿ ಸ್ಥಾಪಿಸಲಾಗಿದೆ.

ಶಾಸಕ ಎಸ್.ಆರ್.ವಿಶ್ವನಾಥ್ ಮಾತನಾಡಿ, 'ಪ್ರಥಮ ಹಂತದಲ್ಲಿ ಪುಟ್ಟೇನಹಳ್ಳಿ ಘಟಕದಿಂದ ಬಸ್ ಸೇವೆ ಪ್ರಾರಂಭಿಸಿರುವುದು ಹೆಮ್ಮೆಯ ಸಂಗತಿ' ಎಂದರು.

ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಸಿ.ಶಿಖಾ ಮಾತನಾಡಿ, 'ಸಂಚಾರ ದಟ್ಟಣೆ ಮತ್ತು ವಾಯುಮಾಲಿನ್ಯ ನಿಯಂತ್ರಣಕ್ಕೆ ಈ ಬಸ್‌ಗಳು ಹೆಚ್ಚು ಸಹಕಾರಿಯಾಗಲಿವೆ' ಎಂದರು.

ಟಿ.ಪಿ. ಪ್ರಕಾಶ್, ಶ್ರೀಧರ್ ಕಲ್ಲೂರ್, ಮೆ.ಸ್ವಿಚ್ ಕಂಪನಿಯ ಮುಖ್ಯ ವಾಣಿಜ್ಯ ಅಧಿಕಾರಿ ಸಚಿನ್ ನಿಜವಾನ್ ಉಪಸ್ಥಿತರಿದ್ದರು.



ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ನೇತೃತ್ವದಲ್ಲಿ ದಲಿತ ಸಂಘಟನೆಗಳ ಮುಖಂಡರು ಮುಖ್ಯಮಂತ್ರಿ ಕಚೇರಿ ಕಡೆಗೆ ಸಾಗುತ್ತಿರುವುದು

ಪಿಟಿಸಿಎಲ್: ಅಹೋರಾತ್ರಿ ಧರಣಿ ತಾತ್ಕಾಲಿಕ ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂ ಪರಭಾರೆ ನಿಷೇಧ ಕಾಯ್ದೆಯ (ಪಿಟಿಸಿಎಲ್) ಸಮಗ್ರ ತಿದ್ದುಪಡಿಗೆ ಆಗ್ರಹಿಸಿ ಸಂರಕ್ಷಣಾ ಮಹಾ ಒಕ್ಕೂಟ ನಡೆಸುತ್ತಿದ್ದ ಅಹೋರಾತ್ರಿ ಧರಣಿಯನ್ನು ಶುಕ್ರವಾರ ತಾತ್ಕಾಲಿಕವಾಗಿ ಹಿಂದಕ್ಕೆ ಪಡೆದಿದೆ.

ಸ್ವಾತಂತ್ರ್ಯ ಉದ್ಯಾನದಲ್ಲಿ 25 ದಿನಗಳಿಂದ ಧರಣಿ ನಡೆಸಿದ ಒಕ್ಕೂಟದ ಸದಸ್ಯರು ಶುಕ್ರವಾರ ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣಾ ಬಳಿಗೆ ತೆರಳಿ ಧರಣಿ ನಡೆಸಿದರು.

ಈ ಸಂದರ್ಭದಲ್ಲಿ ಹೋರಾಟಗಾರರನ್ನು ಕರೆದು ಸಭೆ ನಡೆಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಪಿಟಿಸಿಎಲ್ ಕಾಯ್ದೆ ತಿದ್ದುಪಡಿಗೆ ಕಾನೂನಿನ ತೊಡಕುಗಳಿದ್ದು, ಸರಿಪಡಿಸಿ ತಿದ್ದುಪಡಿ ತರಲಾಗುವುದು. ಧರಣಿ ವಾಪಸ್ ಪಡೆಯಿರಿ' ಎಂದು ಮನವಿ ಮಾಡಿದರು.

ಅಹೋರಾತ್ರಿ ಧರಣಿಯನ್ನು ತಾತ್ಕಾಲಿಕವಾಗಿ ಹಿಂಪಡೆಯಾಗಿದೆ. ಒಂದು ತಿಂಗಳಲ್ಲಿ ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ತಂದು ದಲಿತರ ಭೂಮಿ ಹಕ್ಕನ್ನು ರಕ್ಷಣೆ ಮಾಡದಿದ್ದರೆ ಮತ್ತೆ ಹೋರಾಟ ಆರಂಭಿಸಲಾಗುವುದು ಎಂದು ಹೋರಾಟಗಾರರು ಎಚ್ಚರಿಸಿದರು.

ಸಂಪುಟದಿಂದ ಸಚಿವರ ಕೈಬಿಡಲು ಕೇಜ್ರಿವಾಲ್‌ಗೆ ಆಗ್ರಹ

ನವದೆಹಲಿ (ಪಿಟಿಐ): ಹಿಂದೂ ದೇವರಿಗೆ ಅಗೌರವ ತೋರಿರುವ ಸಚಿವ ರಾಜೇಂದ್ರ ಪಾಲ್ ಗೌತಮ್ ಅವರನ್ನು ಸಂಪುಟದಿಂದ ಕೈಬಿಡಬೇಕು ಎಂದು ಬಿಜೆಪಿಯು ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರನ್ನು ಆಗ್ರಹಪಡಿಸಿದೆ.

ಈ ಕುರಿತಂತೆ ಸಮಾಜ ಕಲ್ಯಾಣ ಸಚಿವರೂ ಆಗಿರುವ ಗೌತಮ್ ಅವರ ತಕ್ಷಣದ ಪ್ರತಿಕ್ರಿಯೆ ಗೊತ್ತಾಗಿಲ್ಲ. ಕರೋಲ್‌ಬಾಗ್‌ನಲ್ಲಿ ನಡೆದ ದಸರಾ ಕಾರ್ಯಕ್ರಮದಲ್ಲಿ ಅವರು ಹಿಂದೂ ದೇವರುಗಳಿಗೆ ಅಗೌರವ ತೋರಿದ್ದಾರೆ ಎಂದು ಆರೋಪಿಸಲಾಗಿದೆ.

'ಪಾಕ್‌ನಲ್ಲಿ 6 ಮಂದಿ ಭಾರತೀಯ ಕೈದಿಗಳ ಸಾವು'

ನವದೆಹಲಿ(ಪಿಟಿಐ): 'ಕಳೆದ ಒಂಬತ್ತು ತಿಂಗಳಲ್ಲಿ ಪಾಕಿಸ್ತಾನದಲ್ಲಿ ಆರು ಮಂದಿ ಭಾರತೀಯ ಕೈದಿಗಳು ಸಾವಿಗೀಡಾಗಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಶುಕ್ರವಾರ ತಿಳಿಸಿದರು. 'ಮೃತರಲ್ಲಿ ಐವರು ಮೀನುಗಾರರಿದ್ದಾರೆ. ಸಾವಿಗೀಡಾದವರೆಲ್ಲರೂ ಶಿಕ್ಷೆಯನ್ನು ಪೂರ್ಣಗೊಳಿಸಿದ್ದವರಾಗಿದ್ದಾರೆ. ಈ ರೀತಿಯ ಘಟನೆಗಳು ಎಚ್ಚರಿಕೆಯ ಗಂಟೆಯಾಗಿದೆ' ಎಂದರು.

ನಾಳೆ ವಿಶ್ವ ವಿಪ್ರ ಪರಿಷತ್ ಕಾರ್ಯಕ್ರಮ

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ ವಿಶ್ವ ವಿಪ್ರ ಪರಿಷತ್ ಭಾನುವಾರ ಬೆಳಿಗ್ಗೆ 10.30ಕ್ಕೆ ತೆಲುಗು ವಿಜ್ಞಾನ ಸಮಿತಿಯ ಕೃಷ್ಣ ದೇವರಾಯ ಸಭಾಂಗಣದಲ್ಲಿ ಕಾರ್ಯಕ್ರಮ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಷತ್ ಅಧ್ಯಕ್ಷ ಎಸ್. ರಘುನಾಥ್, 'ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್. ಕುಮಾರ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಚ್.ಎಸ್. ಸಚ್ಚಿದಾನಂದ ಮೂರ್ತಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಸಾಹಿತಿ ಬಾಬು ಕೃಷ್ಣಮೂರ್ತಿ ಉಪನ್ಯಾಸ ನೀಡಲಿದ್ದಾರೆ' ಎಂದು ಹೇಳಿದರು.

ಲೇಖಿಕಾ ಪುಸ್ತಕ ಪ್ರಶಸ್ತಿ ಪ್ರಕಟ

ಬೆಂಗಳೂರು: ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ನೀಡುವ 2022ನೇ ಸಾಲಿನ 'ಲೇಖಿಕಾ ಪುಸ್ತಕ ಪ್ರಶಸ್ತಿ'ಯನ್ನು ಲೇಖಿಕಾ ಸಾಹಿತ್ಯ ವೇದಿಕೆ ಘೋಷಿಸಿದೆ.

ಕಥಾಸಂಕಲನ ವಿಭಾಗದಲ್ಲಿ ಮೈಸೂರಿನ ಬಿ.ಕೆ. ಮೀನಾಕ್ಷಿ ಅವರ 'ಭಿನ್ನ ಭಾವಗಳು', ಕಾದಂಬರಿ ವಿಭಾಗದಲ್ಲಿ ಬೆಂಗಳೂರಿನ ನಿಡಸಾಲೆ ಪುಟ್ಟಸ್ವಾಮಯ್ಯ ಅವರ 'ಅಗ್ನಿ ದಿವ್ಯ', ಪ್ರವಾಸ ಸಾಹಿತ್ಯ ವಿಭಾಗದಲ್ಲಿ ಕೆ.ವಿ. ರಾಜೇಶ್ವರಿ ಅವರ 'ಡ್ರ್ಯಾಗನ್ ನಾಡಿನಲ್ಲಿ', ಮಕ್ಕಳ ಸಾಹಿತ್ಯ ವಿಭಾಗದಲ್ಲಿ ಎಚ್.ವಿ. ಮೀನಾ ಅವರ 'ಮಕ್ಕಳಿಗಾಗಿ ಕಥಾಗುಚ್ಛ', ಹಾಸ್ಯ ವಿಭಾಗದಲ್ಲಿ ಹಾಸನದ ಸುಮಾ ಸುರೇಶ್ ಅವರ 'ಟೀ ಬ್ರೇಕ್' ಹಾಗೂ ಕವನಸಂಕಲನ ವಿಭಾಗದಲ್ಲಿ ಬಳ್ಳಾರಿಯ ಶಿವರಾಜ್ ವತ್ತುಮುರವಣಿ ಅವರ 'ನಾನು ಮುಟ್ಟಾಗಿದ್ದೇನೆ' ಕೃತಿಗಳು ಪ್ರಶಸ್ತಿಗೆ ಆಯ್ಕೆಯಾಗಿವೆ.

ಪುಸ್ತಕ ಪ್ರಶಸ್ತಿಗಾಗಿ 200ಕ್ಕೂ ಹೆಚ್ಚು ಪುಸ್ತಕಗಳು ಬಂದಿದ್ದವು. ನವೆಂಬರ್ ತಿಂಗಳಲ್ಲಿ ನಡೆಯುವ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ವೇದಿಕೆ ಸಂಚಾಲಕಿ ಶೈಲಜಾ ಸುರೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ರಮ್ಯಾಗೆ ಯುವ ಇಂಚರ ಪ್ರಶಸ್ತಿ



ಬೆಂಗಳೂರು: ಇಂಚರ ಸುಗಮ ಸಂಗೀತ ಸಂಸ್ಥೆಯ 'ಯುವ ಇಂಚರ ಪ್ರಶಸ್ತಿ'ಗೆ ಗಾಯಕಿ ರಮ್ಯಾ ವಿನಯಂತ್ ಆಯ್ಕೆ ಆಗಿದ್ದಾರೆ.

ಅ.23ರಂದು ನಗರದ ಅಕ್ಕ ಮಹಾದೇವಿ ಸಭಾಂಗಣ ದಲ್ಲಿ ನಡೆಯುವ ಇಂಚರ ನಿರಂತರ ಗೀತೋತ್ಸವದಲ್ಲಿ ಪ್ರಶಸ್ತಿ ಈ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಕನ್ನಡ ಕಾರ್ಯಕರ್ತರ ಕಮ್ಮಟಕ್ಕೆ ನೋಂದಣಿ


ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಬೆಂಗಳೂರು ನಗರ ಜಿಲ್ಲಾ ಘಟಕ ಇದೇ 16ರಂದು ಬೆಳಿಗ್ಗೆ 10 ಗಂಟೆಗೆ ತನ್ನ ಕಚೇರಿಯಲ್ಲಿ ಕನ್ನಡ ಕಾರ್ಯಕರ್ತರ ಕಮ್ಮಟ ಹಮ್ಮಿಕೊಂಡಿದ್ದು, ಆಸಕ್ತರು ಹೆಸರು ನೋಂದಾಯಿಸಿಕೊಳ್ಳುವಂತೆ ಮನವಿ ಮಡಿಕೊಂಡಿದೆ.

18 ವರ್ಷಗಳು ಮೇಲ್ಪಟ್ಟ ವಿದ್ಯಾರ್ಥಿಗಳು, ಐಟಿ ಬಿಟಿ ಉದ್ಯೋಗಿಗಳು, ಕಾರ್ಮಿಕರು, ಶಿಕ್ಷಕರು ಹಾಗೂ ಸಾರ್ವಜನಿಕರು ಕಮ್ಮಟದಲ್ಲಿ ಭಾಗವಹಿಸಬಹುದು. ಕನ್ನಡ–ಕನ್ನಡಿಗ–ಕರ್ನಾಟಕ ಕುರಿತಾದ ಅಭಿಮಾನ, ಸಾಧನೆ, ಸಮಸ್ಯೆ ಮತ್ತು ಅವುಗಳಿಗೆ ಪರಿಹಾರಗಳನ್ನು ಸೂಚಿಸುವ ಉದ್ದೇಶವನ್ನು ಈ ಕಮ್ಮಟ ಹೊಂದಿದೆ. 30 ಮಂದಿಗೆ ಮಾತ್ರ ಪಾಲ್ಗೊಳ್ಳಬಹುದು. ಮೊದಲು ಹೆಸರು ನೋಂದಾಯಿಸಿಕೊಂಡವರಿಗೆ ಆದ್ಯತೆ ಎಂದು ಕಸಾಪ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಎಂ. ಪ್ರಕಾಶಮೂರ್ತಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 8904483376

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು–01
ಇ–ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ನಾವು ಮುಕ್ತ ಮನಸ್ಸು ಹೊಂದಿಲ್ಲದಿದ್ದರೆ ಯಾರೊಬ್ಬರೂ ನಮ್ಮನ್ನು ಗೌರವಿಸುವುದಿಲ್ಲ.

–ಡಾ. ಎ.ಪಿ.ಜೆ. ಅಬ್ದುಲ್ ಕಲಾಂ

ಚುನಾವಣಾ ಬಾಂಡ್ ಕುರಿತ ಅರ್ಜಿ ನ್ಯಾಯನಿರ್ಣಯ ಶೀಘ್ರ ಆಗಲಿ

ವಿಚಾರಣೆ ನಡೆಸಲು ಹಾಗೂ ನ್ಯಾಯತೀರ್ಮಾನ ಮಾಡಲು ಸುಪ್ರೀಂ ಕೋರ್ಟ್‌ಗೆ ಆಗದಿರುವ, ಅತ್ಯಂತ ತೀವ್ರವಾದ ಪರಿಣಾಮಗಳನ್ನು ಬೀರಬಹುದಾದ ಅರ್ಜಿಗಳಲ್ಲಿ ಚುನಾವಣಾ ಬಾಂಡ್‌ಗಳನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿ ಕೂಡ ಒಂದು. ಚುನಾವಣಾ ಬಾಂಡ್ ಹೊರಡಿಸುವುದನ್ನು ಪ್ರಶ್ನಿಸಿ ಮೊದಲ ಅರ್ಜಿಯನ್ನು 2017ರಲ್ಲಿ ಸಲ್ಲಿಸಲಾಯಿತು. ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಚುನಾವಣಾ ಬಾಂಡ್‌ಗಳನ್ನು ಹೊರಡಿಸುವುದನ್ನು ಘೋಷಿಸಿದ ತಕ್ಷಣ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಸಂಸ್ಥೆ ಇದನ್ನು ಸಲ್ಲಿಸಿತು. ನಂತರದಲ್ಲಿ ಬೇರೆ ಬೇರೆ ಅರ್ಜಿಗಳು ಸಲ್ಲಿಕೆಯಾದವು. ಸಾರ್ವಜನಿಕ ಹಿತದ ದೃಷ್ಟಿಯಿಂದ ಬಹಳ ಮಹತ್ವದ್ದೂ, ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುವಂಥದ್ದೂ ಆಗಿರುವ ಈ ಅರ್ಜಿಯ ವಿಚಾರಣೆಯನ್ನು ಕೋರ್ಟ್ ತ್ವರಿತಗತಿಯಲ್ಲಿ ನಡೆಸುತ್ತಿಲ್ಲದಿರುವುದು ಆಶ್ಚರ್ಯಕರ. ಅದರಲ್ಲೂ, ಈ ಅರ್ಜಿಯ ವಿಚಾರವಾಗಿ ಆದಷ್ಟು ಬೇಗ ನ್ಯಾಯನಿರ್ಣಯ ಕೊಡಬೇಕು ಎಂದು ಅರ್ಜಿದಾರ ಸಂಸ್ಥೆ ಹಾಗೂ ಇತರರು ಕಾಲಕಾಲಕ್ಕೆ ಮನವಿ ಮಾಡಿದ್ದರೂ ಇದು ಇನ್ನೂ ಇತ್ಯರ್ಥ ಆಗಿಲ್ಲ. ಎನ್.ವಿ. ರಮಣ ಅವರು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಆಗಿದ್ದಾಗ, ಈ ವರ್ಷದ ಏಪ್ರಿಲ್ ತಿಂಗಳಲ್ಲಿ, ವಿಚಾರಣೆಗೆ ಕೈಗೆತ್ತಿಕೊಳ್ಳುವ ಪ್ರಕರಣಗಳ ಪಟ್ಟಿಯಲ್ಲಿ ಇದನ್ನು ಶೀಘ್ರದಲ್ಲಿಯೇ ಸೇರಿಸಲಾಗುವುದು ಎಂದು ಹೇಳಿದ್ದರು. ಕೋರ್ಟ್‌ನಲ್ಲಿ ವಿಚಾರಣೆಗೆ ಬರುವ ಪ್ರಕರಣಗಳ ಪಟ್ಟಿಯಲ್ಲಿ ಇದು ಸೆಪ್ಟೆಂಬರ್ 19ರಂದು ನಮೂದಾಗಿತ್ತು. ಆದರೆ ಪ್ರಕರಣದ ವಿಚಾರಣೆಯನ್ನು ಯಾವುದೇ ಪೀಠಕ್ಕೆ ವಹಿಸಿರಲಿಲ್ಲ. ಬಾಂಡ್ ಯೋಜನೆಗೆ ಮಧ್ಯಂತರ ತಡೆ ನೀಡಬೇಕು ಎಂಬ ಮನವಿಗಳನ್ನು ಕೋರ್ಟ್ ಈ ಹಿಂದೆ ಎರಡು ಬಾರಿ ತಿರಸ್ಕರಿಸಿದೆ.



ಚುನಾವಣಾ ಬಾಂಡ್ ಕುರಿತು ತೀರ್ಮಾನ ಕೈಗೊಳ್ಳಲು ನ್ಯಾಯಾಲಯ ಇನ್ನೂ ವಿಳಂಬ ಮಾಡಿದರೆ, ನ್ಯಾಯ ಕೇಳುವ ಹಕ್ಕನ್ನು ಸಾರ್ವಜನಿಕರಿಗೆ ನಿರಾಕರಿಸಿದಂತೆ ಆಗುತ್ತದೆ

ರಾಜಕೀಯ ಪಕ್ಷಗಳಿಗೆ ಹಣಕಾಸಿನ ದೇಣಿಗೆ ನೀಡಲು ಚುನಾವಣಾ ಬಾಂಡ್ ಬಳಸಿಕೊಳ್ಳಬಹುದು. ಇಲ್ಲಿ ದೇಣಿಗೆ ನೀಡುವ ವ್ಯಕ್ತಿ ಯಾರು ಎಂಬುದು ಬಹಿರಂಗ ಆಗುವುದೇ ಇಲ್ಲ. ಆದರೆ, ಚುನಾವಣಾ ಬಾಂಡ್ ಮೂಲಕ ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುವುದರಿಂದ ಕಪ್ಪುಹಣದ ಚಲಾವಣೆಗೆ ಕಡಿವಾಣ ಬೀಳುತ್ತದೆ ಎಂಬುದು ಸರ್ಕಾರ ನೀಡಿರುವ ವಿವರಣೆ. ಪಾರದರ್ಶಕತೆಯ ಕೊರತೆ, ಆಡಳಿತ ಪಕ್ಷಕ್ಕೆ ಅನುಕೂಲ ಆಗುವಂತೆ ಇರುವುದು, ದೇಣಿಗೆ ನೀಡುವವರು ಯಾರು ಎಂಬುದು ಗೋಪ್ಯವಾಗಿಯೇ ಉಳಿಯುವುದು ಮುಂತಾದ ಕಾರಣಗಳಿಂದಾಗಿ ಈ ಯೋಜನೆಯು ಟೀಕೆಗೆ ಗುರಿಯಾಗಿದೆ. ಈ ಯೋಜನೆಯ ಅಡಿಯಲ್ಲಿ ಸಂಗ್ರಹ ಆಗಿರುವ ₹ 9,000 ಕೋಟಿಗೂ ಹೆಚ್ಚಿನ ಮೊತ್ತದಲ್ಲಿ ದೊಡ್ಡ ಪಾಲು ಆಡಳಿತಾರೂಢ ಬಿಜೆಪಿ ಕಡೆ ಹರಿದಿದೆ. ಇಡೀ ಯೋಜನೆಯು ಆಡಳಿತಾರೂಢ ಪಕ್ಷಕ್ಕೆ ಅನುಕೂಲ ಆಗುವಂತೆ ಇದೆ ಎಂದು ವಿರೋಧ ಪಕ್ಷಗಳು ಅಸಮಾಧಾನ ವ್ಯಕ್ತಪಡಿಸಿವೆ. ಪ್ರತೀ ತ್ರೈಮಾಸಿಕದ ಆರಂಭದ ಹತ್ತು ದಿನಗಳ ಅವಧಿಯಲ್ಲಿ ಚುನಾವಣಾ ಬಾಂಡ್‌ಗಳನ್ನು ಮಾರಾಟ ಮಾಡಲಾಗುತ್ತದೆ. ಅಕ್ಟೋಬರ್ 1ರಿಂದಲೂ ಬಾಂಡ್ ಖರೀದಿಗೆ ಸಮಯಾವಕಾಶ ನೀಡಲಾಗಿದೆ. ಕಾಂಗ್ರೆಸ್ ಮುಖಂಡ ಪಿ. ಚಿದಂಬರಂ ಅವರು ಇದನ್ನು, ಸರ್ಕಾರದಿಂದ ಪ್ರಯೋಜನ ಪಡೆದುಕೊಂಡವರಿಗೆ ಅದಕ್ಕೆ ಪ್ರತಿಯಾಗಿ 'ಋಣ ಸಂದಾಯ' ಮಾಡಲು ಒಂದು ಅವಕಾಶ ಎಂದು ಬಣ್ಣಿಸಿದ್ದಾರೆ.

ಇದು ರಾಜಕೀಯ ಪಕ್ಷಗಳು ಮಾಡುತ್ತಿರುವ ಆರೋಪಕ್ಕೆ ಸಂಬಂಧಿಸಿದ ವಿಚಾರ ಮಾತ್ರವೇ ಅಲ್ಲ. ಚುನಾವಣಾ ಬಾಂಡ್ ಯೋಜನೆಯ ವೈಶಿಷ್ಟ್ಯಗಳು ಚುನಾವಣಾ ಪ್ರಜಾತಂತ್ರದ ಮೂಲಭೂತ ನಿಯಮಗಳನ್ನು ಕೂಡ ಉಲ್ಲಂಘಿಸುತ್ತವೆ. ಚುನಾವಣೆಗಾಗಿ ಯಾರು, ಯಾವ ಪಕ್ಷಕ್ಕೆ, ಎಷ್ಟು ಮೊತ್ತವನ್ನು ದೇಣಿಗೆಯಾಗಿ ನೀಡಿದ್ದಾರೆ ಎಂಬುದನ್ನು ತಿಳಿದುಕೊಳ್ಳುವ ಹಕ್ಕು ಮತದಾರರಿಗೆ ಇರುತ್ತದೆ. ದೇಣಿಗೆಗಳು ಪಕ್ಷದ ಅಥವಾ ಸರ್ಕಾರದ ತೀರ್ಮಾನದ ಮೇಲೆ ಪ್ರಭಾವ ಬೀರುತ್ತವೆಯೇ ಎಂಬುದು ಕೂಡ ಅವರಿಗೆ ಗೊತ್ತಾಗಬೇಕು. ಆದರೆ, ಈ ಯೋಜನೆಯನ್ನು ಭ್ರಷ್ಟಾಚಾರವನ್ನು ಸಕ್ರಮಗೊಳಿಸುವ ರೀತಿಯಲ್ಲಿ ರೂಪಿಸಲಾಗಿದೆ. ಇದು ಪ್ರಜಾತಂತ್ರ ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಉಂಟುಮಾಡಬಲ್ಲದು. ಈ ವಿಚಾರವಾಗಿ ಆರ್‌ಬಿಐ ಕಳವಳ ವ್ಯಕ್ತಪಡಿಸಿದೆ. ಚುನಾವಣಾ ಆಯೋಗವು ಇದರ ಬಗ್ಗೆ ತನ್ನ ಅಸಮ್ಮತಿಯನ್ನು ತಿಳಿಸಿದೆ. 'ದೇಶದಲ್ಲಿ ಚುನಾವಣಾ ಪ್ರಕ್ರಿಯೆಯ ಪಾವಿತ್ರ್ಯದ ಮೇಲೆ ಭಾರಿ ಪರಿಣಾಮ ಬೀರುವ ಘನವಾದ ಸಂಗತಿಗಳನ್ನು ಇದು ಒಳಗೊಂಡಿದೆ' ಎಂದು ಸ್ವತಃ ಸುಪ್ರೀಂ ಕೋರ್ಟ್ ಒಂದು ಬಾರಿ ಹೇಳಿದೆ. ಚುನಾವಣಾ ಬಾಂಡ್ ವಿಚಾರವಾಗಿ ತೀರ್ಮಾನ ಕೈಗೊಳ್ಳಲು ನ್ಯಾಯಾಲಯ ಇನ್ನೂ ವಿಳಂಬ ಮಾಡಿದರೆ ಸಾರ್ವಜನಿಕರು ಹೊಂದಿರುವ ನ್ಯಾಯ ಕೇಳುವ ಹಕ್ಕು ಹಾಗೂ ನ್ಯಾಯಸಮ್ಮತ ಚುನಾವಣೆಯ ಹಕ್ಕನ್ನು ನಿರಾಕರಿಸಿದಂತೆ ಆಗುತ್ತದೆ. ಈ ಎರಡು ಹಕ್ಕುಗಳು ಪ್ರಜಾತಂತ್ರದ ಅಡಿಪಾಯ ಇದ್ದಂತೆ.

ಬಿಕ್ಕಟ್ಟು ಪರಿಹಾರವಾಗುವುದು ಜಾಗತಿಕ ಹಿತದೃಷ್ಟಿಯಿಂದ ಒಳ್ಳೆಯದು

ಯುರೋಪ್ ಬಿಕ್ಕಟ್ಟು: ಮುಗಿಯದ ಕಥೆ?



ವಿಶ್ಲೇಷಣೆ

ಟಿ.ಎಸ್. ವೇಣುಗೋಪಾಲ್

ಬ್ರಿಟನ್ ಇಂದು ಸಂಕಷ್ಟದಲ್ಲಿದೆ. ಈ ಪ್ರಯುಕ್ತ ಬ್ರಿಟನ್ನಿನ ಲಿಜ್ ಟ್ರಸ್ ನೇತೃತ್ವದ ಸರ್ಕಾರವು ಮಿನಿ ಬಜೆಟ್ ಪ್ರಕಟಿಸಿದೆ. ಅದರಲ್ಲಿ ಅತಿ ಶ್ರೀಮಂತರ ಮೇಲಿನ ತೆರಿಗೆಯಲ್ಲಿ ಕಡಿತ ಮಾಡಲಾಗಿತ್ತು. ಇದರಿಂದ ಶ್ರೀಮಂತರು ಹೂಡಿಕೆ ಹೆಚ್ಚಿಸುತ್ತಾರೆ, ಆರ್ಥಿಕ ಪ್ರಗತಿ ಸಾಧ್ಯವಾಗುತ್ತದೆ ಎನ್ನುವುದು ಅದರ ಹಿಂದಿನ ತರ್ಕ. ಆದರೆ ಇಂತಹದ್ದೊಂದು ಕಲ್ಪನೆಯೇ ಒಂದು ಮಿಥ್ಯೆ ಎಂಬುದನ್ನು ಪಾಲ್ ಕ್ರುಗ್ಮನ್ ಅಂತಹ ಅರ್ಥಶಾಸ್ತ್ರಜ್ಞರು ತೋರಿಸಿದ್ದಾರೆ. ತೆರಿಗೆ ಕಡಿತಗೊಳಿಸುವ ಪ್ರಸ್ತಾವಕ್ಕೆ ತೀವ್ರ ವಿರೋಧ ವ್ಯಕ್ತವಾದ ಕಾರಣ ಸರ್ಕಾರ ಅದನ್ನು ಹಿಂತೆಗೆದುಕೊಂಡಿದ್ದರೂ ಬಿಕ್ಕಟ್ಟು ಮುಂದುವರಿದೇ ಇದೆ.

ತೆರಿಗೆ ಕಡಿತಗೊಳಿಸುವ ಬ್ರಿಟನ್ನಿನ ಪ್ರಸ್ತಾವವನ್ನು ಐಎಂಎಫ್ ಕೂಡ ವಿರೋಧಿಸಿತ್ತು. ಮಾರುಕಟ್ಟೆ ತೀವ್ರವಾಗಿ ಕುಸಿದಿದ್ದರಿಂದ ಆರ್ಥಿಕತೆಯಲ್ಲಿ ವಿಶ್ವಾಸ ಮೂಡಿಸುವ ಉದ್ದೇಶದಿಂದ ದೀರ್ಘಕಾಲೀನ ಬಾಂಡುಗಳನ್ನು ಕೊಳ್ಳಲು ಕೇಂದ್ರ ಬ್ಯಾಂಕ್ ತಕ್ಷಣ ಮುಂದಾಯಿತು. ನಿಜ, ಬ್ರಿಟನ್ ಅರ್ಜೆಂಟೀನಾ ಅಲ್ಲ. ಅದಕ್ಕೆ ಸರಿಪಡಿಸಿಕೊಳ್ಳುವ ಸಾಮರ್ಥ್ಯವಿದೆ. ಆದರೆ ಮಾರುಕಟ್ಟೆಯ ಪ್ರತಿಕ್ರಿಯೆ ಹಾಗೂ ಮಧ್ಯಪ್ರವೇಶಿಸಲು ಕೇಂದ್ರ ಬ್ಯಾಂಕ್ ತೋರಿದ ಆತುರ ನೋಡಿದರೆ ಸರ್ಕಾರದ ಬಗ್ಗೆ ಇರುವ ವಿಶ್ವಾಸದ ಕೊರತೆ ಕಾಣುತ್ತಿದೆ.

ರಷ್ಯಾದಿಂದ ನೈಸರ್ಗಿಕ ಇಂಧನ ಬರುವುದು ನಿಂತ ಮೇಲೆ ಅದರ ಬೆಲೆ ವಿಪರೀತವಾಯಿತು. ಸಾಮಾನ್ಯರ ಕೈಗೆಟುಕದ ಸರಕಾಯಿತು. ಹಣದುಬ್ಬರವೂ ಸೇರಿಕೊಂಡಿತು. ಇಷ್ಟು ಸಾಲದೆಂಬಂತೆ ಪೌಂಡ್ ಮೌಲ್ಯವು ಡಾಲರ್‌ಗಿಂತ ಕಡಿಮೆಯಾಯಿತು. ಸಾಮಾನ್ಯರಿಗೆ ಬದುಕುವುದಕ್ಕೆ ಸರ್ಕಾರದ ನೆರವು ಅನಿವಾರ್ಯವಾಯಿತು. ಕೆಲವು ಕಾರ್ಪೊರೇಟ್ ಉದ್ದಿಮೆಗಳು ಪೆಟ್ರೋಲ್ ಮಾರಿ ವಿಪರೀತ ಲಾಭ ಮಾಡಿಕೊಂಡದ್ದೂ ವಾಸ್ತವ. ಅವರ ಲಾಭದ ಮೇಲೆ ತೆರಿಗೆ ಹಾಕಿ ಸಂಕಷ್ಟದಲ್ಲಿರುವವರಿಗೆ ನೆರವಾಗುವುದಕ್ಕೆ ಸರ್ಕಾರ ತಯಾರಿಲ್ಲ ಅನ್ನುವುದು ದುರಂತ. ಬ್ರಿಟನ್ ಮಾತ್ರವಲ್ಲ, ಇಡೀ ಯುರೋಪ್ ಇಂಥದ್ದೇ ಬಿಕ್ಕಟ್ಟಿನಲ್ಲಿದೆ. ಏರುತ್ತಿರುವ ಇಂಧನದ ಬೆಲೆಯನ್ನು ನಿಭಾಯಿಸಲಾರದೆ ಸಾವಿರಾರು ಪ್ರಮುಖ ಕೈಗಾರಿಕೆಗಳು ಮುಚ್ಚಿಹೋಗುತ್ತಿವೆ. ಇದಕ್ಕೆ ಕೊರೊನಾ ಅಥವಾ ಉಕ್ರೇನ್ ಯುದ್ಧವನ್ನು ಹೊಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಇದಕ್ಕೂ ಮೊದಲೇ ಯುರೋಪಿಯನ್ ಒಕ್ಕೂಟ ಸಮಸ್ಯೆಯಲ್ಲಿತ್ತು. ಯುದ್ಧದಿಂದ ಸಮಸ್ಯೆ ಬಿಗಡಾಯಿಸಿದೆ.

ಜಾಗತಿಕ ಯುದ್ಧಗಳು ಯುರೋಪನ್ನು ಬಹಳಷ್ಟು ನಾಶ ಮಾಡಿದ್ದವು. ಎರಡನೆಯ ಮಹಾಯುದ್ಧದ ನಂತರ ಅದರ ಪುನರ್‌ನಿರ್ಮಾಣಕ್ಕೆ ಐಎಂಎಫ್ ಉದಾರವಾಗಿ, ಬೃಹತ್ ಪ್ರಮಾಣದಲ್ಲಿ ನೆರವು ನೀಡಿತು. ನೀವು ಅದನ್ನು ಇಂದು ಊಹಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ಪರಿಸ್ಥಿತಿ ಹಾಗಿತ್ತು. ಬೆಳೆಯುತ್ತಿದ್ದ ಸಮಾಜವಾದಿ ಅಲೆಯಿಂದ ಅಮೆರಿಕ ಆತಂಕಗೊಂಡಿತ್ತು. ಯುರೋಪಿನ ಆರ್ಥಿಕ ಪ್ರಗತಿಗೆ ರಫ್ತು ಅನಿವಾರ್ಯವಾಗಿತ್ತು. ಅದಕ್ಕಾಗಿ ಐರೋಪ್ಯ ರಾಷ್ಟ್ರಗಳ ನಡುವೆ ವ್ಯಾಪಾರವನ್ನು ಪ್ರೋತ್ಸಾಹಿಸಲಾಯಿತು. ಅದು ಅವುಗಳ ನಡುವೆ ಏಕತೆಗೆ ಕಾರಣವಾಯಿತು. ಜನಕಲ್ಯಾಣ ಕಾರ್ಯಕ್ರಮಗಳು ಜಾರಿಗೆ ಬಂದವು. ಆರ್ಥಿಕ ವ್ಯವಸ್ಥೆಯಲ್ಲಿ ಸ್ಥಿರತೆ, ಪ್ರಗತಿ, ಉದ್ಯೋಗ, ಕಾರ್ಮಿಕರ ಸ್ಥಿತಿಯಲ್ಲಿ ಸುಧಾರಣೆ ಸಾಧ್ಯವಾಗಿತ್ತು. ಅದು ಬಂಡವಾಳಶಾಹಿ ವ್ಯವಸ್ಥೆಯ ಸುವರ್ಣಯುಗವೆಂದು ಅನಿಸಿಕೊಂಡಿತ್ತು.

ಪರಿಸ್ಥಿತಿ ಹಾಗೇ ಉಳಿಯಲಿಲ್ಲ. ಹಣದುಬ್ಬರ ಕಾಣಿಸಿಕೊಂಡಿತು. ಅಗತ್ಯ ವಸ್ತುಗಳು, ಅದರಲ್ಲೂ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಹೆಚ್ಚಿತು. ಜೊತೆಗೆ ಆರ್ಥಿಕ ಸ್ಥಗಿತತೆಯೂ ಸೇರಿಕೊಂಡು ಸ್ಟಾಗ್‌ಫ್ಲೇಷನ್-ಸ್ಥಗಿತದುಬ್ಬರದ ಸ್ಥಿತಿ ನಿರ್ಮಾಣವಾಯಿತು. ನವಉದಾರವಾದಿ ಆರ್ಥಿಕತೆ ಪ್ರಾರಂಭವಾಗಿದ್ದೂ ಆಗಲೇ. ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಬಂಡವಾಳ ಹರಿದುಹೋಗಲು ಅವಕಾಶ ಮಾಡಿಕೊಡಲಾಯಿತು. ಹೆಚ್ಚು ಲಾಭ ಸಿಗುವ ಕಡೆಗೆ ಬಂಡವಾಳ ಹರಿದು ಹೋಗುವುದಕ್ಕೆ ಪ್ರಾರಂಭಿಸಿತು. ಇದರಿಂದ ಆರ್ಥಿಕತೆಯಲ್ಲಿ ಅಸ್ಥಿರತೆ ಪ್ರಾರಂಭವಾಯಿತು. ಹಾಗೆಯೇ ವಿನಿಮಯ ದರದಲ್ಲಿ ಏರಿಳಿತ ಶುರುವಾಯಿತು.

ಕಾರ್ಪೊರೇಟ್ ಉದ್ದಿಮೆಗಳನ್ನು ಓಲೈಸಿಕೊಳ್ಳುವುದಕ್ಕೆ ಬೇಕಾದಂತೆ ಆರ್ಥಿಕ ನೀತಿಗಳನ್ನು ಅವು ರೂಪಿಸಲಾರಂಭಿಸಿದವು. ಅನಿಲ ಹಾಗೂ ವಿದ್ಯುತ್ ವಿತರಣೆ ಖಾಸಗೀಕರಣಗೊಂಡವು. ಇಂದಿನ ಇಂಧನ ಬಿಕ್ಕಟ್ಟನ್ನು ಬಳಸಿಕೊಂಡು ತೈಲ ಕಂಪನಿಗಳು ಹೇರಳ ಲಾಭ ಮಾಡಿಕೊಳ್ಳುತ್ತಿವೆ. ಹಾಗೆಯೇ ಯುದ್ಧದಲ್ಲಿ ಉಕ್ರೇನಿಗೆ ನೆರವಾಗುತ್ತೇವೆಂಬ ನೆವದಲ್ಲಿ ಶಸ್ತ್ರೋದ್ಯಮ ಲಾಭ ಮಾಡಿಕೊಂಡಿತು. ಇಂಧನವನ್ನೇ ನೆಚ್ಚಿಕೊಂಡ ಉದ್ದಿಮೆಗಳು ಒಂದೊಂದಾಗಿ ಮುಚ್ಚತೊಡಗಿವೆ. ಸಣ್ಣ ಉದ್ದಿಮೆಗಳು ಹಾಗೂ ಸಾಮಾನ್ಯರ ಸ್ಥಿತಿಯಂತೂ ಕೇಳುವುದೇ ಬೇಡ. ಇದೇ ಸಮಯಕ್ಕೆ ಪ್ರಗತಿ ಹಾಗೂ ಸ್ಥಿರತೆಯನ್ನು ಸಾಧಿಸುವ ದೃಷ್ಟಿಯಿಂದ ಕೆಲವು 'ಶಿಸ್ತು' ಪಾಲಿಸಲು ಈ ರಾಷ್ಟ್ರಗಳು ಒಪ್ಪಂದವೊಂದನ್ನು ಮಾಡಿಕೊಂಡವು. ಉದಾಹರಣೆಗೆ, ವಿತ್ತೀಯ ಕೊರತೆಯು ಜಿಡಿಪಿಯ ಶೇ 3ರಷ್ಟನ್ನು ಮೀರಬಾರದು, ಸಾರ್ವಜನಿಕ ಸಾಲವು ಜಿಡಿಪಿಯ ಶೇ 60ರಷ್ಟನ್ನು ಮೀರಬಾರದು. ಈ ಸಂಖ್ಯೆಗಳ ಆಯ್ಕೆಗೆ ಒಂದು ನಿರ್ದಿಷ್ಟ ಕಾರಣವಿಲ್ಲ. ಸಾಲದ ಪ್ರಮಾಣವು ಹೂಡಿಕೆಯಿಂದ ಬರುವ ವರಮಾನವನ್ನು ಆಧರಿಸಿರುತ್ತದೆ. ಜಪಾನಿನ ಸಾಲದ ಪ್ರಮಾಣವು ಜಿಡಿಪಿಯ ಶೇ 240ರಷ್ಟಿದೆ. ಅಲ್ಲಿ ಅಂತಹ ಸಮಸ್ಯೆಯಿಲ್ಲ. ಅದೇ ಸ್ಪೇನಿನಲ್ಲಿ ಶೇ 53ರಷ್ಟು ಮಾತ್ರ ಇದೆ. ಆದರದು ತೀವ್ರ ಸಮಸ್ಯೆಯಲ್ಲಿದೆ.



ವಿತ್ತೀಯ ಕೊರತೆಯು ಶೇ 3ರಷ್ಟನ್ನು ಮೀರಬಾರದು ಎಂದಾಗ ಸರ್ಕಾರದ ವೆಚ್ಚದಲ್ಲಿ ಕಡಿತ ಅನಿವಾರ್ಯವಾಯಿತು. ಆರೋಗ್ಯ, ಶಿಕ್ಷಣ, ಸಾರ್ವಜನಿಕ ನೈರ್ಮಲ್ಯವು ನಿರ್ಲಕ್ಷ್ಯಕ್ಕೆ ಒಳಗಾದವು. ಎಷ್ಟೋ ಸಬ್ಸಿಡಿಗಳು ನಿಂತವು. ಇದರಿಂದಾಗಿ ಬೇಡಿಕೆಗೂ ಹೊಡೆತ ಬಿತ್ತು. ಉದ್ಯೋಗಾವಕಾಶಗಳು ಕಮ್ಮಿಯಾದವು. ಅಸಮಾನತೆ ಏರತೊಡಗಿತು. ಜನರಲ್ಲಿ ಅಸಮಾಧಾನ, ಅತೃಪ್ತಿಯೂ ಹೆಚ್ಚಿತು. ಇದಕ್ಕೊಂದು ಬಲಿಪಶು ಬೇಕು. ಈಗ ಸದ್ಯಕ್ಕೆ ವಲಸಿಗರ ಕಡೆ ಕೈತೋರಿಸಲಾಗುತ್ತಿದೆ. 'ಅವರು ನಮ್ಮ ಕೆಲಸ ಕಸಿದಿದ್ದಾರೆ' ಎಂದು ಪ್ರಚಾರ ಮಾಡಲಾಗುತ್ತಿದೆ. ನಮಗಿಂತ ಪ್ರಬಲರಲ್ಲದವರನ್ನು ವಿರೋಧಿಸುವುದು ಸುಲಭ. ಕೈಗೆ ಸಲೀಸಾಗಿ ಸಿಗುತ್ತಾರೆ. ತಮಾಷೆಯೆಂದರೆ, ವಲಸಿಗರು ಕಡಿಮೆ ಇರುವೆಡೆ ವಿರೋಧ ಹೆಚ್ಚಿಗೆ ಇದೆ. ಜನರ ಹತಾಶೆಗೆ ನಿಜವಾದ ಕಾರಣ ಆರ್ಥಿಕ ಸಮಸ್ಯೆ. ಅದಕ್ಕೆ ಕಾರಣ ಸರ್ಕಾರದ ಆರ್ಥಿಕ ನೀತಿ.

ಹವಾಮಾನ ವೈಪರೀತ್ಯ, ಇಂಗಾಲದ ಹೊರಸೂಸುವಿಕೆ ಈಗ ಮುಖ್ಯ ಸಮಸ್ಯೆಗಳಾಗಿಲ್ಲ. ಪಳೆಯುಳಿಕೆ ಇಂಧನದ ಉತ್ಪಾದನೆ ಹೆಚ್ಚಿಸುವುದರಲ್ಲಿ ಎಲ್ಲರೂ ಟ್ರಂಪ್ ಅವರನ್ನು ಮೀರಿಸಹೊರಟಿದ್ದಾರೆ. ಬೈಡೆನ್ ಅವರು ಟ್ರಂಪ್ ಅವರನ್ನು ಮೀರಿಸಿ ಕಲ್ಲಿದ್ದಲು ಉತ್ಪಾದಿಸ ಹೊರಟಿದ್ದಾರೆ. ಪಳೆಯುಳಿಕೆ ಇಂಧನದ ಉತ್ಪಾದನೆಯನ್ನು ನಿಯಂತ್ರಿಸಿ, ಪುನರ್‌ಬಳಕೆ ಇಂಧನದ ಉತ್ಪಾದನೆಗೆ ಗಮನ ಕೊಡಬೇಕು ಅನ್ನುವುದನ್ನು ಸರ್ಕಾರಗಳು ಮರೆತಿವೆ. ರಾಜಕೀಯ ಪರಿಣಾಮ ಅಂದರೆ, ಇಂದು ಯುರೋಪಿನಲ್ಲಿ ಬಲಪಂಥೀಯ ಪಕ್ಷಗಳು ಅಧಿಕಾರದ ಚುಕ್ಕಾಣಿ ಹಿಡಿಯುತ್ತಿವೆ. ಇಟಲಿಯಲ್ಲಿ ಅಧಿಕಾರಕ್ಕೆ ಬಂದಿರುವ ಪಕ್ಷವು ವಲಸಿಗರ ವಿರುದ್ಧ ಗಟ್ಟಿಯಾಗಿ ಸದ್ದು ಮಾಡುತ್ತಿದೆ. ಈ ಸರ್ಕಾರಗಳು ಆರ್ಥಿಕ ಪ್ರಗತಿಗೆ ಕಾರ್ಪೊರೇಟ್ ಸಂಸ್ಥೆಗಳನ್ನು ನೆಚ್ಚಿಕೊಂಡಿವೆ. ಬ್ರಿಟನ್ನಿನ ಮಿನಿ ಬಜೆಟ್ ಇದನ್ನು ಸ್ಪಷ್ಟವಾಗಿ ಹೇಳಿದೆ.

ಆರ್ಥಿಕತೆಯ ದಿಕ್ಕು ಬದಲಾಗಬೇಕೆಂಬುದು ಸ್ಪಷ್ಟ. ಬಿಕ್ಕಟ್ಟನ್ನು ಸೃಷ್ಟಿಸಿದ ಆರ್ಥಿಕ ನೀತಿಗಳೇ ಬಿಕ್ಕಟ್ಟನ್ನು ಪರಿಹರಿಸುತ್ತವೆ ಎಂದು ಭಾವಿಸುವುದು ಸೂಕ್ತವಲ್ಲ. ಕಾರ್ಪೊರೇಟ್ ಸಂಸ್ಥೆಗಳ ಲಾಭಕ್ಕೆ ಕಡಿವಾಣ ಬೇಕು. ಬಿಕ್ಕಟ್ಟನ್ನು ತೀವ್ರಗೊಳಿಸುವ ಯುದ್ಧ ನಿಲ್ಲಬೇಕು. ಯುರೋಪ್ ಒಕ್ಕೂಟವಾಗಿ ಉಳಿಯುವ ದೃಷ್ಟಿಯಿಂದಲೂ ಇದು ಅವಶ್ಯಕ. ಜೊತೆಗೆ ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಯಾವುದೇ ದೇಶದ ಬಿಕ್ಕಟ್ಟು ಆ ದೇಶದ ಬಿಕ್ಕಟ್ಟಾಗಿಯಷ್ಟೇ ಉಳಿಯುವುದಿಲ್ಲ. ಅದಕ್ಕೆ ಸಂಬಂಧಪಡದ ರಾಷ್ಟ್ರದ ದುರ್ಬಲರನ್ನೂ ಬಾಧಿಸುತ್ತದೆ.

ರಷ್ಯಾದಲ್ಲಿ ನಾಯಕತ್ವ ಬದಲಿಸುವುದು ನಮ್ಮ ಗುರಿಯಾಗಬೇಕಾಗಿಲ್ಲ. ಮಿನ್ಸ್ಕ್ ಒಪ್ಪಂದವನ್ನು ಫ್ರಾನ್ಸ್ ಹಾಗೂ ಜರ್ಮನಿ ಬೆಂಬಲಿಸಿದ್ದವು. ವಿವಾದಕ್ಕೆ ಅದು ಪರಿಹಾರವೆಂದು ಭಾವಿಸಲಾಗಿತ್ತು. ಅಂತಹ ಒಂದು ಒಪ್ಪಂದ ಸಾಧ್ಯವಾದರೆ ಹೆಚ್ಚಿನ ಅನಾಹುತ ತಪ್ಪುತ್ತದೆ. ಅಮೆರಿಕಕ್ಕೆ ಯುರೋಪ್ ಸಾಮಂತನಾಗಿ ಕೆಲಸ ಮಾಡದೆ, ಸ್ವತಂತ್ರ ನಿಲುವು ತೆಗೆದುಕೊಂಡು, ಮಾತುಕತೆಯ ಮೂಲಕ ಪರಿಹಾರ ಕಂಡುಕೊಳ್ಳಲು ನೆರವಾದರೆ ಎಲ್ಲರಿಗೂ ಒಳ್ಳೆಯದು.

ಚುರುಮುರಿ



ಜಾಲ ಜಾಗ್ರತೆ

● ಸಿ.ಎನ್.ರಾಜು

'ಈಗ ರಾಜಕಾರಣಿಗಳಿಗೆ ಗ್ರಹಚಾರ ಕೆಟ್ಟಿದೆಯಂತೆ. ಮಾನಹಾನಿ, ಶತ್ರು ಕಾಟ ಹೆಚ್ಚಾಗಿ ತೇಜೋವಧೆಯಿಂದ ಬೀದಿ ಒದೆವರೆಗೂ ಅಪಾಯವಿದೆ ಅಂತ ಬೆಳಿಗ್ಗೆ ಟಿ.ವಿ ಗುರೂಜಿ ಹೇಳಿದರು, ನೀವು ಹುಷಾರಾಗಿರಿ...' ನಾಯಕರಿಗೆ ಷುಗರ್‌ಲೆಸ್ ಕಾಫಿ ತಂದುಕೊಟ್ಟ ಪತ್ನಿ ತಾವು ಷುಗರ್ ಬೆರೆಸಿಕೊಂಡರು.

'ಎಲೆಕ್ಷನ್ ಟೈಮಿನಲ್ಲಿ ರಾಜಕಾರಣಿಗಳ ಗ್ರಹಗತಿ ಏರುಪೇರಾಗುವುದು ಸಹಜ' ಅಂದ್ರು ನಾಯಕರು.

'ಹಾಗಂತ ಎಚ್ಚರ ತಪ್ಪಬೇಡಿ, ಮಾತಿನ ಮೇಲೆ ಹಿಡಿತ, ಮೈಮೇಲೆ ಪ್ರಜ್ಞೆ ಇರಲಿ. ಅದರಲ್ಲೂ ಜಾಲತಾಣದ ಬಗ್ಗೆ ಜಾಗೃತರಾಗಿರಿ. ಸಾಂಕ್ರಾಮಿಕ ರೋಗಕ್ಕಿಂತ ಸಾಮಾಜಿಕ ಜಾಲ ಅಪಾಯಕಾರಿ. ಜಾಲ ಜಾಡ್ಯಕ್ಕೆ ಮದ್ದಿಲ್ಲ. ಮೊನ್ನೆ ನೀವು ಗಣಪತಿ ಮೆರವಣಿಗೆಯಲ್ಲಿ ಡ್ಯಾನ್ಸ್ ಮಾಡಿ ಸೊಂಟ ಉಳುಕಿಸಿಕೊಂಡಿದ್ದು ವೈರಲ್ ಆಗಿ ಜನ ಟೀಕೆ ಮಾಡಿಕೊಂಡು ಕೇಕೆ ಹಾಕುತ್ತಿದ್ದಾರೆ. ಈ ವಯಸ್ಸಿನಲ್ಲಿ ಅಂಥಾ ಕುಣಿತ ಬೇಕಿತ್ತಾ?'

ನಾಯಕರು ಕಾಫಿ ಹೀರಿದರು.

'ರಾಷ್ಟ್ರ ನಾಯಕರೆದುರು ನೀವು ಮಾತನಾಡಿದ ಕೆಟ್ಟ ಇಂಗ್ಲಿಷ್ ಜಾಲತಾಣದಲ್ಲಿ ನಗೆಪಾಟಲಾಗಿದೆ. ಇಂಗ್ಲಿಷ್ ಕ್ರೇಜ್ ಬಿಟ್ಟುಬಿಡಿ... ಕ್ಷೇತ್ರದಲ್ಲಿ ಮೂರುಕಾಸಿನ ಕೆಲಸ ಮಾಡಿಲ್ಲ ಅಂತ ದಬಾಯಿಸಿದ್ದ ಸಾಮಾನ್ಯ ಮತದಾರನ ಮೇಲೆ ನೀವು ಕೈ ಮಾಡಿದ್ದು ದೊಡ್ಡ ಅಪರಾಧವಾಗಿ ವೈರಲ್‌ಜನ ನಿಮ್ಮ ಜನ್ಮ ಜಾಲಾಡಿಸುತ್ತಿದ್ದಾರೆ'.

'ಬೈದವರಿಗೂ ಬೈಯ್ಯಬಾರದಾ?' ಕೇಳಿದರು.

'ಬೇಡ. ಎಲೆಕ್ಷನ್ ಮುಗಿಯೋವರೆಗೂ ಬೈಯ್ಯೋರು ಬೈಯ್ಯಲಿ, ನೀವು ತಿರುಗಿಸಿ ಬೈಯ್ಯದೆ ಮಾನ, ಮೌನ ಕಾಪಾಡಿಕೊಳ್ಳಿ, ಎಲೆಕ್ಷನ್ ಗೆದ್ದಮೇಲೆ ವರಸೆ ತೋರಿಸಿದರಾಯ್ತು...' ಪತ್ನಿ ಸಲಹೆ ನೀಡಿದರು.

ದಿನದ ಟ್ವೀಟ್

ಮಾಫಿಯಾ ಮಸಲತ್ತು



ರಿಯಲ್ ಎಸ್ಟೇಟ್ ಮಾಫಿಯಾವು ಬೆಂಗಳೂರನ್ನು ಮತ್ತೊಂದು ಮುಂಬೈ ಆಗಿ ಹೇಗೆ ಯಶಸ್ವಿಯಾಗಿ ಪರಿವರ್ತಿಸಿತು ಎಂಬುದನ್ನು ಗಮನಿಸಿದ್ದೀರಾ? ಮೊದಲಿಗೆ ಹೆಚ್ಚು ಹೆಚ್ಚು ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸಿದರು, ಆನಂತರ ಅವುಗಳಿಗೆ ಏನಿಲ್ಲವೆಂದರೂ ಸರಾಸರಿ ಕೋಟಿ ರೂಪಾಯಿ ಬೆಲೆ ನಿಗದಿ ಮಾಡಿದರು. ಇಷ್ಟೊಂದು ವಸತಿ ಯೋಜನೆಗಳಿಗೆ ಕುಡಿಯುವ ನೀರು, ನೈರ್ಮಲ್ಯ ಸೌಕರ್ಯಗಳನ್ನು ಒದಗಿಸುವುದು ಹೇಗೆ ಎಂಬುದರ ಬಗ್ಗೆ ಸರ್ಕಾರ ಆಲೋಚನೆಯನ್ನಾದರೂ ಮಾಡಿದೆಯೇ?

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ

ಕಾಂಗ್ರೆಸ್‌ನವರು ಬೂಟಾಟಿಕೆ ಯಾತ್ರೆ ನಡೆಸುತ್ತಿದ್ದಾರೆ. ಅವರು ಜನರನ್ನು ತಲುಪಲು ಸಾಧ್ಯವಿಲ್ಲ. ಅವರಿಗೆ ಅಡ್ರೆಸ್ಸೇ ಇಲ್ಲ. ಒಂದೆರಡು ರಾಜ್ಯ ಬಿಟ್ಟರೆ ಬೇರೆ ಎಲ್ಲ ಕಡೆಗಳಲ್ಲೂ ಅವರನ್ನು ಜನ ತಿರಸ್ಕರಿಸಿದ್ದಾರೆ. ಕರ್ನಾಟಕದಲ್ಲಿ ಏನೋ ಕಡಿದು ಕಟ್ಟೆ ಹಾಕ್ತೀವಿ ಎಂದು ಬಂದಿದ್ದಾರೆ. ಇದು ಹಾಸ್ಯಾಸ್ಪದ ಯಾತ್ರೆ.



ಬಿ.ಎಸ್.ಯಡಿಯೂರಪ್ಪ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

25 ವರ್ಷಗಳ ಹಿಂದೆ

ಬುಧವಾರ, 8-10-1997

● **ಕೊನೆಗೂ ನಿಗದಿತ ಕಕ್ಷೆ ಸೇರಿದ ಐಆರ್‌ಎಸ್–1ಡಿ ಉಪಗ್ರಹ**

ಬೆಂಗಳೂರು, ಅ. 7– ಕಳೆದ ವಾರ ಬಾಹ್ಯಾಕಾಶಕ್ಕೆ ಹಾರಿಬಿಡಲಾದ ಐಆರ್‌ಎಸ್–1ಡಿ ಉಪಗ್ರಹವನ್ನು ಕಾರ್ಯನಿರ್ವಹಣಾ ಕಕ್ಷೆಗೆ ಸೇರಿಸುವಲ್ಲಿ ಬಾಹ್ಯಾಕಾಶ ವಿಜ್ಞಾನಿಗಳು ಇಂದು ಯಶಸ್ವಿಯಾದರು.

ಸ್ವದೇಶಿ ನಿರ್ಮಿತ ಉಪಗ್ರಹ ವಾಹಕ ಪಿಎಸ್‌ಎಲ್‌ವಿ ಮೂಲಕ ಗಗನಕ್ಕೆ ಚಿಮ್ಮಲಾಗಿದ್ದ ಐಆರ್‌ಎಸ್–1ಡಿ ಅನ್ನು ಕಾರ್ಯನಿರ್ವಹಣಾ ಕಕ್ಷೆಗೆ ಸೇರಿಸಲು ನಿನ್ನೆಯವರೆಗೆ ಇಸ್ರೊ ವಿಜ್ಞಾನಿಗಳು ವಿಫಲರಾಗಿದ್ದರು.

● **ರಕ್ಷಣಾ ಒಪ್ಪಂದ ವಿಸ್ತರಣೆಗೆ ರಷ್ಯಾ ಒಪ್ಪಿಗೆ**

ಮಾಸ್ಕೊ, ಅ. 7 (ಎಪಿ): ಭಾರತ ಮತ್ತು ರಷ್ಯಾ ನಡುವಿನ ಬಹುಕಾಲದ ರಕ್ಷಣಾ ಒಪ್ಪಂದವನ್ನು ವಿಸ್ತರಿಸಲು ಎರಡೂ ರಾಷ್ಟ್ರಗಳು ಒಪ್ಪಿಕೊಂಡಿವೆ.

ರಕ್ಷಣಾ ಸಚಿವ ಮುಲಾಯಂ ಸಿಂಗ್ ಯಾದವ್ ಅವರು ರಷ್ಯಾ ಭೇಟಿಯ ಸಂದರ್ಭದಲ್ಲಿ ರಷ್ಯಾದ ರಕ್ಷಣಾ ಇಲಾಖೆಯ ಜನರಲ್ ಐಗೊರ್ ಸರ್ಜ್‌ಯೊಬ್ ಅವರೊಂದಿಗೆ ಮಾತುಕತೆ ನಡೆಸಿದ ನಂತರ ಈ ನಿರ್ಧಾರವನ್ನು ಜಂಟಿಯಾಗಿ ಪ್ರಕಟಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 8-10-1972

● **ರಾಜ್ಯ ಸಂಪುಟದ ನಿರ್ಧಾರ: ಸರ್ಕಾರ–ನೌಕರರಲ್ಲಿ ಸಮಾಲೋಚನೆಗಾಗಿ ಜಂಟಿ ಸಮಿತಿ ರಚನೆ**

ಬೆಂಗಳೂರು, ಅ. 7– ಪರಸ್ಪರ ವಿಚಾರ ವಿನಿಮಯ ನಡೆಯಬೇಕೆಂಬ ಉದ್ದೇಶದಿಂದ ಸರ್ಕಾರದ ಹಾಗೂ ನೌಕರರ ಪ್ರತಿನಿಧಿಗಳನ್ನೊಳಗೊಂಡ ಜಂಟಿ ಸಮಾಲೋಚನಾ ಸಮಿತಿಯೊಂದನ್ನು ರಚಿಸಲು ಇಂದು ನಡೆದ ಮಂತ್ರಿಮಂಡಲದ ಸಭೆ ತೀರ್ಮಾನಿಸಿತು.

ಈ ಸಮಾಲೋಚನಾ ಸಮಿತಿಯು ಸಲಹಾ ಮಂಡಳಿಯಾಗಿರುವುದೆಂದು, ಮಂತ್ರಿಮಂಡಲದ ನಿರ್ಧಾರವನ್ನು ವರದಿಗಾರರಿಗೆ ತಿಳಿಸಿದ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರು ವಿವರಿಸಿದರು.

ನೌಕರರ ಕುಂದುಕೊರತೆಗಳು ಹಾಗೂ ಸರ್ಕಾರಿ ಸೇವೆಗೆ ಸಂಬಂಧಿಸಿದ ವಿಷಯಗಳನ್ನು ಈ ಸಮಿತಿ ಚರ್ಚಿಸುವುದು.

● **ಮೈಸೂರು, ಧಾರವಾಡ ಜಿಲ್ಲೆಗೂ ಕೈಗಾರಿಕೆ ಸ್ಥಾಪನೆಗೆ ಕೇಂದ್ರದ ಸಹಾಯಧನ ಕ್ರಮ ವಿಸ್ತರಣೆ**

ಬೆಂಗಳೂರು, ಅ. 7– ರಾಯಚೂರು ಜಿಲ್ಲೆಯೇ ಅಲ್ಲದೆ ಮೈಸೂರು ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಕೈಗಾರಿಕೆ ಸ್ಥಾಪಿಸುವ ಉದ್ಯಮಗಳಿಗೆ ಅವರ ಬಂಡವಾಳದ ಶೇ 10ರಷ್ಟು ಕೇಂದ್ರದಿಂದ ಸಹಾಯಧನವಾಗಿ ದೊರೆಯಲಿದೆ.

ಕೇಂದ್ರದ ಸಹಾಯಧನವನ್ನು ಇನ್ನೂ ಎರಡು ಜಿಲ್ಲೆಗಳಿಗೆ ಅನ್ವಯಿಸಲು ಯೋಜನಾ ಆಯೋಗ ಒಪ್ಪಿರುವುದನ್ನು ಕೈಗಾರಿಕೆ ಸಚಿವ ಶ್ರೀ ಎಸ್.ಎಂ. ಕೃಷ್ಣ ಅವರು ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದರು.

ಸಂಗತ

ಹಾರುವ ಅತಿಥಿ... ಎತ್ತ ಸಾಗುತಿ?

ಕೃತಕ ಬೆಳಕು ಉಂಟುಮಾಡುವ ಬೆಳಕಿನ ಮಾಲಿನ್ಯವು ನಿಶಾಚರಿ ಪ್ರಾಣಿ, ಪಕ್ಷಿಗಳ ವಲಸೆ ಮತ್ತು ಜೀವನಕ್ರಮದ ಮೇಲೆ ಭಾರಿ ಪರಿಣಾಮ ಬೀರುತ್ತಿದೆ...

● ಶಿಶಿರ ವಸಿಷ್ಠ

'ನಿಮ್ಮ ಹಳ್ಳಿಗೆ ಹೈಮಾಸ್ಟ್ ದೀಪದ ವ್ಯವಸ್ಥೆ ಮಾಡುತ್ತೇನೆ' ಎಂದ ಸ್ಥಳೀಯ ಶಾಸಕರ ವಿರುದ್ಧ ಆಂಧ್ರಪ್ರದೇಶದ ಹಳ್ಳಿಯೊಂದರಲ್ಲಿ ಪ್ರತಿಭಟನೆ ನಡೆಯುತ್ತಿತ್ತು. 'ಊರಿಗೆ ದೊಡ್ಡ ದೀಪ ಬಂದರೆ ಒಳ್ಳೆಯದಲ್ಲವೇ' ಎಂದು ಪ್ರತಿಭಟನೆಯಲ್ಲಿ ನಿರತರಾದವರನ್ನು ಸುದ್ದಿವಾಹಿನಿಯವರು ಪ್ರಶ್ನಿಸಿದಾಗ 'ನೋಡಿ, ನಮ್ಮದು 500 ಮನೆಗಳಷ್ಟೇ ಇರುವ ಚಿಕ್ಕಹಳ್ಳಿ. ಊರಿನ ತುಂಬಾ ಗೋಣಿ, ಆಲದಮರಗಳು ಇವೆ. ಅವುಗಳಲ್ಲಿ ಸಾವಿರಾರು ಪಕ್ಷಿಗಳು ಗೂಡು ಕಟ್ಟುತ್ತವೆ, ನೂರಾರು ಬಾವಲಿಗಳು ಆಶ್ರಯ ಪಡೆದಿರುತ್ತವೆ. ಅವುಗಳಿಗೆ ಕಿರಿಕಿರಿಯಾಗುತ್ತದೆ. ಆದ್ದರಿಂದ ಎತ್ತರದ ಹಾಗೂ ಭಾರಿ ಬೆಳಕಿನ ದೀಪ ನಮಗೆ ಬೇಡ' ಅಂದರು.

ಹಳ್ಳಿಗರ ಮಾತಿನಲ್ಲಿ ಸತ್ಯವಿತ್ತು. ಬಹುಮಹಡಿ ಕಟ್ಟಡ, ವಾಹನ, ಅಮ್ಯೂಸ್‌ಮೆಂಟ್ ಪಾರ್ಕ್, ಪಟಾಕಿ ಸಿಡಿತದಿಂದ ಹೊಮ್ಮುವ ತೀಕ್ಷ್ಣ ಕೃತಕ ಬೆಳಕು ಬೆಳಕಿನ ಮಾಲಿನ್ಯ ಉಂಟು ಮಾಡಿ ನಿಶಾಚರಿ ಪ್ರಾಣಿ– ಪಕ್ಷಿಗಳ ವಲಸೆ ಮತ್ತು ಜೀವನಕ್ರಮದ ಮೇಲೆ ಭಾರಿ ಪರಿಣಾಮ ಬೀರುತ್ತದೆ ಎಂಬ ಅಂಶ ವೈಜ್ಞಾನಿಕ ಅಧ್ಯಯನದಿಂದ ತಿಳಿದುಬಂದಿದೆ. ವಿಶೇಷವಾಗಿ ವಲಸೆ ಹಕ್ಕಿಗಳಂತೂ ಕೃತಕ ಬೆಳಕಿನಿಂದ ತಮ್ಮ ತಾಣವನ್ನು ತಲುಪಲು ಭಾರಿ ಕಷ್ಟಪಡುತ್ತವೆ ಎಂಬುದು ತಜ್ಞರ ಅಭಿಮತ.

ರಾತ್ರಿ ಹೊತ್ತಿನಲ್ಲಿ ಮಾತ್ರ ವಲಸೆ ಕೈಗೊಳ್ಳುವ ಬಾತುಕೋಳಿ, ಹೆಬ್ಬಾತು, ಗೊರವ ಮತ್ತು ಹಾಡುಗಾರ ಹಕ್ಕಿಗಳು ಕೃತಕ ಬೆಳಕಿಗೆ ಸಿಲುಕಿ ದಾರಿತಪ್ಪಿ ಅಲ್ಲಲ್ಲೇ ಸುತ್ತುತ್ತಾ ಬೃಹತ್ ಕಟ್ಟಡ, ಎಲೆಕ್ಟ್ರಿಕ್ ತಂತಿಗಳಿಗೆ ಬಡಿದು ಅಪಘಾತಕ್ಕೀಡಾಗಿ ಪ್ರಾಣ ಕಳೆದುಕೊಳ್ಳುತ್ತವೆ. ಪೆಟ್ರೆಲ್ಸ್ ಕೃತಕ ಬೆಳಕಿಗೆ ಆಕರ್ಷಣೆಗೊಂಡು ಭೂಮಿಗಿಳಿದು ಇಲಿ, ಬೆಕ್ಕುಗಳಿಗೆ ಆಹಾರವಾದ ಎಷ್ಟೋ ನಿದರ್ಶನಗಳಿವೆ. ಹಾರುವ ಹಕ್ಕಿಗಳ ಸಂವಹನ, ಆಹಾರದ ಹುಡುಕಾಟ ಮತ್ತು ವಲಸೆ ಮಾದರಿಗಳನ್ನು ಕೃತಕ ಬೆಳಕು ಬದಲಾಯಿಸುವುದರಿಂದ, ವರ್ಷವೊಂದಕ್ಕೆ ಲಕ್ಷಾಂತರ ಪಕ್ಷಿಗಳು ಪ್ರಾಣ ಕಳೆದುಕೊಳ್ಳುತ್ತಿವೆ.

ವಿಶ್ವದ ಕೃತಕ ಬೆಳಕಿನ ಪ್ರಮಾಣ ಪ್ರತಿವರ್ಷ ಶೇಕಡ 2.5ರಷ್ಟು ಹೆಚ್ಚುತ್ತಿದೆ. ನಗರಗಳ ಕೃತಕ ಬೆಳಕಿನಿಂದ ವಲಸೆ ಪಕ್ಷಿಗಳ ದೇಹದ ಜೈವಿಕ ಗಡಿಯಾರದಲ್ಲಿ ಏರುಪೇರು ಕಂಡುಬರುತ್ತಿದೆ. ಬೆಳಕಿನ ಮಾಲಿನ್ಯದಿಂದ ಹಕ್ಕಿಗಳ ಸ್ವಭಾವ, ಸಂತಾನೋತ್ಪತ್ತಿ ಕ್ಷಮತೆ, ವಲಸೆ ಮಾದರಿಯಲ್ಲಿ ವ್ಯತ್ಯಾಸ ಕಂಡುಬರುತ್ತಿದೆ. ಕ್ರಿಮಿಕೀಟಗಳು ಕೃತಕ ಬೆಳಕಿನಿಂದ ಆಕರ್ಷಿತಗೊಂಡು ದೀಪಗಳ ಬಳಿಸಾರಿ ಪ್ರಾಣ ಕಳೆದುಕೊಳ್ಳುವುದರಿಂದ ಹಕ್ಕಿಗಳಿಗೆ ಆಹಾರ ಕಡಿಮೆಯಾಗಿದೆ. ಪಕ್ಷಿಗಳಷ್ಟೇ ಅಲ್ಲ, ಸಮುದ್ರತೀರದ ಉದ್ದಕ್ಕೂ ಹಬ್ಬಿರುವ ಕೃತಕ ಬೆಳಕಿನಿಂದ ಕಂಗಾಲಾಗಿ ಕಡಲಾಮೆಗಳು ಮರಳಿನಲ್ಲಿ ಗೂಡು ಕಟ್ಟುವುದನ್ನು ಕಡಿಮೆ ಮಾಡಿವೆ.

2016ರಲ್ಲಿ ಕಂಪ್ಯೂಟರ್ ಎಂಜಿನಿಯರ್‌ಗಳು ವಿಶ್ವದ ರಾತ್ರಿ ಆಕಾಶದ ಅಟ್ಲಸ್ ಅನ್ನು ಬಿಡುಗಡೆ ಮಾಡಿದಾಗ, ಭೂಮಿಯು ನಕ್ಷತ್ರಪುಂಜದಂತೆ ಹೊಳೆಯುವುದನ್ನು ಕಂಡು ಜನ ನಿಬ್ಬೆರಗಾಗಿದ್ದರು. ಸಿಂಗಪುರ, ಕತಾರ್, ದುಬೈ ನಗರವು ಕೃತಕ ಬೆಳಕಿನ ಓಕುಳಿ ಆಡುತ್ತಿದ್ದವು. ಉತ್ತರ ಅಮೆರಿಕದ ಬಹುಭಾಗ, ಯುರೋಪ್, ಚೀನಾ ಮತ್ತು ಭಾರತದ ಅನೇಕ ನಗರ ಭಾಗಗಳು ಕೃತಕ ಬೆಳಕಿನಿಂದ ಸ್ಫಟಿಕದಂತೆ ಮಿಂಚುತ್ತಿದ್ದವು. ಸೈಬೀರಿಯ, ಸಹಾರ ಮರುಭೂಮಿ ಮತ್ತು ಅಮೆಜಾನ್ ಕಾಡುಗಳಲ್ಲಿ ಮಾತ್ರ ಕತ್ತಲು ಕವಿದಿತ್ತು.

ಜನರ ವಾಹನಗಳ ರಾತ್ರಿ ಓಡಾಟಕ್ಕೆ, ಭದ್ರತೆಗೆ ಬೆಳಕಿನ ಅವಶ್ಯಕತೆ ಇದೆ. ಆದರೆ ಅದು ಪ್ರಾಣಿ-ಪಕ್ಷಿ, ವನ್ಯಜೀವಿ ಸಂತತಿಗಳ ಸಹಜ ಜೀವನಕ್ಕೆ ತೊಂದರೆಯುಂಟು ಮಾಡಬಾರದು ಎಂಬ ನಿಯಮ 2020ರಲ್ಲಿ ಗುಜರಾತಿನ ಗಾಂಧಿನಗರದಲ್ಲಿ, ವಲಸೆ ಹಕ್ಕಿಗಳ ಸಂತತಿ ರಕ್ಷಣೆ ವಿಷಯದ ಕುರಿತು ನಡೆದ 13ನೆಯ 'ಕಾನ್ಫರೆನ್ಸ್ ಆಫ್ ಪಾರ್ಟಿಸ್'ನಲ್ಲಿ ಅನುಮೋದನೆಗೊಂಡು ನಿಯಮವಾಗಿ ಹೊರಹೊಮ್ಮಿದೆ.



ನಿಶಾಚರಿ ಬಾವಲಿಗಳ ಕುರಿತಾದ 'ಯುರೊಬ್ಯಾಟ್ಸ್' ನಿರ್ಣಯದ ಪ್ರಕಾರ, ನಗರಗಳ ರಾತ್ರಿ ಬೆಳಕನ್ನು ಡಿಮ್ ಮಾಡಬೇಕೆಂಬ ನಿಯಮ ರಾಷ್ಟ್ರಗಳಲ್ಲಿ ಇದೆ. ಜೀವಿಗಳ ಸಮರ್ಥ ಬೆಳವಣಿಗೆಗೆ ಶುದ್ಧ ನೀರು, ಗಾಳಿ ಹೇಗೆ ಅವಶ್ಯವೋ ಹಾಗೆಯೇ ಸ್ವಾಭಾವಿಕ ಕತ್ತಲೆಯೂ ಅತ್ಯವಶ್ಯಕ. ಅಮೆರಿಕದ 'ಸೈನ್ಸ್ ಡೈಲಿ' ಪತ್ರಿಕೆ ಅಲ್ಲಿನ 298 ಪಕ್ಷಿಪ್ರಭೇದಗಳು ಬೆಳಕಿನ ಮಾಲಿನ್ಯದಿಂದ ಬೃಹತ್ ಕಟ್ಟಡಗಳಿಗೆ ಡಿಕ್ಕಿ ಹೊಡೆದು ಅಸುನೀಗುತ್ತವೆ ಎಂದು ವರದಿ ಮಾಡಿದೆ. ಸಾಗರದಾಳದ ಜೀವಿ ವ್ಯವಸ್ಥೆಯನ್ನು ಅರಿಯಲು ಅಧ್ಯಯನದ ಹೆಸರಿನಲ್ಲಿ ಅಲ್ಲೂ ಕೃತಕ ಬೆಳಕಿನ ವ್ಯವಸ್ಥೆ ಮಾಡಿಕೊಂಡಿರುವ ನಾವು ಜಲಚರಗಳಿಗೆ ತೊಂದರೆ ಕೊಡುತ್ತಿದ್ದೇವೆ.

ಕೃತಕ ಬೆಳಕು ಬಳಸುವ ಗಾಜಿನ ಬೃಹತ್ ಕಟ್ಟಡಗಳು ರಾತ್ರಿ ಪ್ರಯಾಣದ ಪಕ್ಷಿಗಳಿಗೆ ಕಂಟಕ ಎಂದು ಸಾಬೀತಾಗಿರುವುದರಿಂದ ರಾತ್ರಿ ವೇಳೆ ಅವುಗಳ ಬೆಳಕನ್ನು ಕಡಿಮೆ ಮಾಡುವುದೇ ಪರಿಹಾರವಾಗಿದೆ. ಅಮೆರಿಕ, ಯುರೋಪ್‌ನಲ್ಲಿ ರಾತ್ರಿಯ ಕೃತಕ ಬೆಳಕನ್ನು ನಿಯಂತ್ರಿಸಲು ಪ್ರತ್ಯೇಕ ಸಂಘಟನೆಗಳಿವೆ. ಅಮೆರಿಕದಲ್ಲಿ ರಾತ್ರಿ ಕತ್ತಲಿನ ರಕ್ಷಣೆಗಾಗಿ ಇರುವ ಇಂಟರ್‌ನ್ಯಾಷನಲ್ ಡಾರ್ಕ್ ಸ್ಕೈ ಅಸೋಸಿಯೇಷನ್ ಜನರಿಗೆ ಕೃತಕ ಬೆಳಕಿನ ಮಾಲಿನ್ಯದ ಕುರಿತು ಜಾಗೃತಿ ಮೂಡಿಸುತ್ತಿದೆ. ಅಂದಹಾಗೆ ಅಕ್ಟೋಬರ್ ತಿಂಗಳ ಎರಡನೇ ಶನಿವಾರವು ವಿಶ್ವ ವಲಸೆ ಹಕ್ಕಿಗಳ ದಿನ.

ವಾಚಕರ ವಾಣಿ

ವರವೊಂದು ಶಾಪವಾಯಿತು ಹೀಗೆ...

ಗ್ರಾಮೀಣ ಭಾಗದ ಅವಶ್ಯಕತೆಗಳನ್ನು ಮನಗಂಡ ಉನ್ನತ ಚಿಂತನೆಯಿಂದ ಗ್ರಾಮ ಪಂಚಾಯಿತಿಗೆ ವಿಕೇಂದ್ರೀಕರಣಗೊಂಡ ಅಧಿಕಾರವು ನಂತರದ ದಿನಗಳಲ್ಲಿ ಹಾದಿ ತಪ್ಪಿದ್ದು ನಿಚ್ಚಳ. ಜಾತಿ, ಲಿಂಗ, ಪಕ್ಷ, ವಿದ್ಯೆ ಎಂಬ ಯಾವ ಭೇದವೂ ಇಲ್ಲದಂತೆ ಇಲ್ಲಿ ಲಂಚ ಆವರಿಸಿದೆ. ಸಿಕ್ಕಿಬಿದ್ದರೂ ಅವರ ಜಾತಿ, ಅವರ ಪಕ್ಷ ರಾಜಕಾರಣ ಅವರಿಗೆ ಸುರಕ್ಷಾ ಕವಚ ಎಂಬಂತೆ ನಿರ್ಲಜ್ಜವಾಗಿ ಕೆಲಸ ಮಾಡುತ್ತಿದೆ. ಮೀಸಲಾತಿಯಲ್ಲಿ ಅಧಿಕಾರ ಹಿಡಿದರೂ ಕಡೇಪಕ್ಷ ತಮ್ಮವೇ ಸಮುದಾಯಗಳ ಕೆಲಸಗಳಿಗೂ ಲಂಚದಿಂದ ರಿಯಾಯಿತಿ ಇರದಷ್ಟು ಹೊಲಸೆದ್ದಿದೆ. ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಇದ್ದ ಹಣಕಾಸು ನಿರ್ವಹಣೆಯ ಅಧಿಕಾರವನ್ನು ಸರ್ಕಾರ ಈಗ ಮೊಟಕುಗೊಳಿಸಲು ಮುಂದಾಗಿರುವುದರಿಂದ ಅಧಿಕಾರವು ಪುನಃ ಕೇಂದ್ರೀಕೃತವಾಗಲಿದೆ ಮತ್ತು ಲಂಚ ಇನ್ನೊಂದು ರೂಪ ಪಡೆಯಲಿದೆ ಎಂದು ಶಿವಕುಮಾರ್ ಯರಗಟ್ಟಿ ಅಭಿಪ್ರಾಯಪಟ್ಟಿದ್ದಾರೆ (ವಾ.ವಾ., ಅ. 7). ಇದು ಸಮಂಜಸ, ಆದರೆ ಸಂಪೂರ್ಣ ಸರಿ ಎನಿಸುವುದಿಲ್ಲ.

ಯಾವುದು, ಏನು, ಏಕೆ ಎಂಬ ವಿವೇಕ, ವಿವೇಚನೆ ಲವಲೇಶವೂ ಇಲ್ಲದೆ ತಮ್ಮ ಪದವಿಯ ಸಹಿಯ ಘನತೆ ಕಳೆದು, ಒಂದು ಉನ್ನತ ಆಶಯವನ್ನೇ ಅಪಹಾಸ್ಯ ಮಾಡಿದ ಘನತೆ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಮತ್ತು ಗ್ರಾಮ ಪಂಚಾಯಿತಿ ಸಮಿತಿಗಳಿಗೆ ಸಲ್ಲಬೇಕು. ಅಪವಾದಕ್ಕೆಂಬಂತೆ ಕೆಲವೇ ಸ್ವಚ್ಛ ಪಂಚಾಯಿತಿಗಳು ವಿಕಸನಗೊಂಡಿರುವುದು ನಿಜ. ಅದು ಆ ಜನರ ಔನ್ನತ್ಯ ಅಷ್ಟೆ. ಹಳ್ಳಿಗಳನ್ನು ಜಾತಿ ಅಸಮಾನತೆಯ ಕೂಪಗಳೆಂದು ಕರೆದ ಅಂಬೇಡ್ಕರ್ ಅವರ ಮಾತು ಮತ್ತೊಂದು ರೂಪದಲ್ಲಿ ಈಗ ಸಾಬೀತಾಗಿದೆ. ತಾರತಮ್ಯ ನಿರ್ಮೂಲನೆಗೆ ಸಂವಿಧಾನ ಬಳಸಿದ ವರವೊಂದು, ಜಾತಿ ಮತ್ತು ಲಂಚ ಹುಲುಸಾಗಿ ಬೆಳೆಯಲು ಸಹಕರಿಸಿ ಶಾಪವಾದ ಬಗೆ ಅಸದೃಶ, ಅಸಹ್ಯ.

ಈಗ ಪಿಡಿಒಗಳು ಅಧಿಕಾರ ಪಡೆದು ಲಂಚದ ಸ್ವರೂಪ ಬದಲಾದರೂ ಅವರು ಅವಾಂತರ ಮಾಡಿಕೊಂಡರೆ ಜಾತಿ, ರಾಜಕಾರಣ ಯಾವುದೂ ನೆರವಿಗೆ ಬರದಿರಬಹುದು. ಅಮಾನತು ಆಗಬಹುದು, ನೌಕರಿ ಹೋಗಬಹುದು ಎಂಬ ಆಡಳಿತಾತ್ಮಕ ಭಯವಾದರೂ ಅವರಿಗೆ ಕಿಂಚಿತ್ ಇದ್ದೀತು. ಕುರುಡು ಕಣ್ಣಿಗಿಂತ ಮೆಳ್ಳಗಣ್ಣು ಒಳಿತು.

ಕೆ.ಪುರುಷೋತ್ತಮ ರೆಡ್ಡಿ, ಪಾವಗಡ

ಡಿಜಿಟಲ್ ಲಾಕ್‌ಡೌನ್: ಮಾದರಿ ನಡೆ

ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಕಾಡೇಗಾಂವ್ ತಾಲ್ಲೂಕಿನ ಮೋಹಿತೆ ವಡಗಾಂವದ ಗ್ರಾಮಸ್ಥರು ತಮ್ಮ ಮಕ್ಕಳನ್ನು ಮೊಬೈಲ್ ಗೀಳಿನಿಂದ ಹೊರತಂದು ಓದುವಂತೆ ಮಾಡಲು ನಿತ್ಯ ಸಂಜೆ 7ರಿಂದ ರಾತ್ರಿ 8.30ರವರೆಗೆ ಇಡೀ ಹಳ್ಳಿಯಲ್ಲಿ 'ಡಿಜಿಟಲ್ ಲಾಕ್‌ಡೌನ್' ಮಾಡಿರುವುದು (ಪ್ರ.ವಾ., ಅ. 7) ವರದಿಯಾಗಿದೆ. ಕೋವಿಡ್ ಲಾಕ್‌ಡೌನಿನ ತರುವಾಯ ಅಂದು ಮಕ್ಕಳಿಗೆ ಶಿಕ್ಷಣ ನೀಡಲು ಆನ್‌ಲೈನ್ ತರಗತಿಗಳನ್ನು ನಡೆಸಲಾಯಿತು. ಇದರ ಪರಿಣಾಮವಾಗಿ ಮಕ್ಕಳು ಹೆಚ್ಚಿನ ರೀತಿಯಲ್ಲಿ ಮೊಬೈಲ್ ಬಳಕೆ ಮಾಡಿದ್ದರಿಂದ ಹಲವು ದುಷ್ಪರಿಣಾಮಗಳನ್ನು ಇಂದು ಎದುರಿಸಬೇಕಾಗಿದೆ.

ಭೌತಿಕ ತರಗತಿಗಳು ಪ್ರಾರಂಭವಾದರೂ ಮಕ್ಕಳು ಮೊಬೈಲ್ ಗೀಳಿನಿಂದ ಹೊರಬಂದಿಲ್ಲ. ಅವರನ್ನು ಡಿಜಿಟಲ್ ಮಾಧ್ಯಮಗಳಿಂದ ವಿಮುಖರನ್ನಾಗಿ ಮಾಡಲು ಹಳ್ಳಿಯವರ ತೀರ್ಮಾನವು ಮಾದರಿ ಮತ್ತು ಅನುಕರಣೀಯವಾಗಿದೆ. ಇದು ವಿದ್ಯಾರ್ಥಿಗಳಿಗಷ್ಟೇ ಸೀಮಿತವಾಗದೆ, ಗುರುವರ್ಗದವರು ಮತ್ತು ಪೋಷಕರಿಗೂ ವಿಸ್ತರಣೆಯಾಗಲಿ. ಏಕೆಂದರೆ ಇಂದು ಚಿಕ್ಕವರು ದೊಡ್ಡವರಾದಿಯಾಗಿ ಎಲ್ಲರೂ ಮೊಬೈಲ್ ಎಂಬ ಮಾಯೆಯ ವಶವರ್ತಿಯಾಗಿದ್ದಾರೆ. ಇದರಿಂದ ಹೊರಬರಲು ವಡಗಾಂವದ ಅನುಕರಣೀಯ ನಡೆಯು ಹಳ್ಳಿ ಮತ್ತು ಪಟ್ಟಣಗಳಲ್ಲಿ ಅನುಷ್ಠಾನಗೊಳ್ಳಲಿ.

ಡಾ. ರುದ್ರೇಶ್ ಅದರಂಗಿ, ಬೆಂಗಳೂರು

ಪಾಳೆಗಾರಿಕೆ ಮನೋಭಾವ, ಸ್ವಾಭಿಮಾನದ ಅಪೇಕ್ಷೆ

ಕೋಲಾರ ಜಿಲ್ಲೆಯ ದಾನವಹಳ್ಳಿಯಲ್ಲಿ ಪರಿಶಿಷ್ಟರು ಮತ್ತು ಪ್ರಬಲ ಜಾತಿಯವರ ನಡುವೆ ದೇವರ ಮೆರವಣಿಗೆ ಹಾಗೂ ಪೂಜೆಗೆ ಸಂಬಂಧಿಸಿದಂತೆ ಹೊಡೆದಾಟ, ಹೊಯ್ದಾಟಗಳು ನಡೆದಿವೆ. ಈ ಪ್ರಕರಣದ ಒಳಹೊಕ್ಕು ನೋಡಿದರೆ, ಪ್ರಬಲರ ಮನಃಸ್ಥಿತಿಯಲ್ಲಿ ಅಡಗಿರುವ ಪಾಳೆಗಾರಿಕೆಯ ಮನೋಭಾವ, ಅಸಹನೆ ಮತ್ತು ಅಸೂಯೆಯನ್ನು ಹಾಗೂ ಪರಿಶಿಷ್ಟರ ಅಂತರಂಗದಲ್ಲಿ ಅಡಗಿರುವ ಮಾನವ ಸ್ವಾಭಿಮಾನದ ಅಪೇಕ್ಷೆಯನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದು. ಈ ಬಗೆಯ ದೇವರು, ಧರ್ಮ ಮತ್ತು ಜಾತಿಯ ಹೆಸರಿನ ಗದ್ದಲವು ನಮ್ಮ ದೇಶದ ನೈಜ ಅಭಿವೃದ್ಧಿಗೆ ಬಾಧಕವಾಗಿದೆ.

ಇಂಥ ಮಾನಸಿಕ- ಸಾಂಸ್ಕೃತಿಕ ಮನಃಸ್ಥಿತಿಯನ್ನು ಹೋಗಲಾಡಿಸುವಲ್ಲಿ ಧರ್ಮಾಧಾರಿತ ರಾಜಕೀಯ ಪಕ್ಷಗಳು, ಸಂಘ-ಸಂಸ್ಥೆಗಳು ಮಾತ್ರವಲ್ಲ, ಮಾನವ ಕಳಕಳಿಯುಳ್ಳವರೆಲ್ಲರೂ ಸಕ್ರಿಯವಾಗಿ ತೊಡಗಿಕೊಳ್ಳಬೇಕಾದ ಅನಿವಾರ್ಯ ಈಗ ಒದಗಿಬಂದಿದೆ. ಧರ್ಮದ ಹೆಸರಿನಲ್ಲಿ ಮಾತನಾಡುವ ಸಂಘಗಳು ಮತ್ತು ರಾಜಕೀಯ ಕಾರಣಕ್ಕಾಗಿ ದೇಶ ಸುತ್ತುವ ನಾಯಕರು ಇಂಥ ಕಡೆ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾದ ಜರೂರಿದೆ ಹಾಗೂ ಅದು ಅನಿವಾರ್ಯವೂ ಆಗಿದೆ.

ಹೊರೆಯಾಲ ದೊರೆಸ್ವಾಮಿ, ಮೈಸೂರು

ನಡೆಯಲಿ ಜನಜಾಗೃತಿ ಅಭಿಯಾನ


'ಹಿಂದೂಗಳು ಶಸ್ತ್ರಗಳನ್ನು ಪೂಜಿಸಿದರೆ ಸಾಲದು, ಬಳಸುವುದನ್ನೂ ಕಲಿಯಬೇಕು' ಎಂಬ ವಿಎಚ್‌ಪಿ ಮುಖಂಡರೊಬ್ಬರ ಹೇಳಿಕೆಗೆ 'ಸಾಮಾನ್ಯರಿಗೇಕೆ ಶಸ್ತ್ರ ಬಳಕೆ' ಎಂದು ತಾ.ಸಿ.ತಿಮ್ಮಯ್ಯ ಅವರು ಕೇಳಿರುವುದು (ವಾ.ವಾ., ಅ. 7) ದೇಶದ ಶಾಂತಿ– ಸುವ್ಯವಸ್ಥೆ ಕಾಪಾಡುವಲ್ಲಿ ಹಾಗೂ ಸಾಮಾಜಿಕ ಸಾಮರಸ್ಯವನ್ನು ಬೆಳೆಸುವಲ್ಲಿ ಓದುಗರಿಗೆ ಒಳ್ಳೆಯ ಸಂದೇಶ ನೀಡಿದೆ. ದ್ವೇಷಭಾಷಣ, ಪ್ರಚೋದನಾ ಭಾಷಣ ತಡೆಯುವಲ್ಲಿ ಮತ್ತು ದ್ವೇಷ ಹರಡುವವರ ಮೇಲೆ ಕ್ರಮ ಕೈಗೊಳ್ಳುವಲ್ಲಿ ಸರ್ಕಾರಗಳು ವಿಫಲವಾಗಿವೆ. ದ್ವೇಷ ಹರಡುವವರ ವಿರುದ್ಧ ಜನಜಾಗೃತಿ ಅಭಿಯಾನಗಳು ನಡೆಯಬೇಕು.

ಹುಸೇನಬಾಷಾ ತಳೇವಾಡ, ಹುಬ್ಬಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಕನಿಷ್ಠ ಆಮದು ದರ ಕೈಬಿಟ್ಟು ಭೂತಾನ್‌ನಿಂದ ಅಡಿಕೆ ಆಮದು ಮಾಡಿಕೊಳ್ಳುವ ನಿರ್ಧಾರವು ಅಡಿಕೆ ಬೆಳೆಗಾರರಿಗೆ ಪ್ರತಿಕೂಲವಾಗಿ ಪರಿಣಮಿಸಲಿದೆಯೇ?

ನಮ್ಮದೇ ಸರ್ಕಾರದ ತಪ್ಪು ನಿರ್ಣಯ



ಕೇಂದ್ರದ ಸಂಬಂಧಪಟ್ಟ ಸಚಿವರ ಮೇಲೆ ರಾಜ್ಯದ ರಾಜಕೀಯ ನಾಯಕರು ಒತ್ತಡ ಹೇರಿ, ಈ ನಿರ್ಧಾರವನ್ನು ಹಿಂದಕ್ಕೆ ಪಡೆಯುವಂತೆ ಮಾಡಬೇಕು ಎಂಬ ಆಗ್ರಹ ನಮ್ಮದು. ಭೂತಾನ್ ದೇಶಕ್ಕೆ ನೆರವಾಗಬೇಕು ಎಂಬ ಇಚ್ಛೆ ಇದ್ದರೆ ಅದಕ್ಕೆ ಬೇರೆ ಹಲವು ದಾರಿಗಳನ್ನು ಕಂಡುಕೊಳ್ಳಬಹುದು. ನಮ್ಮ ದೇಶದಲ್ಲಿ ನಮಗೆ ಬೇಕಾಗುವಷ್ಟು ಅಡಿಕೆಯನ್ನು ಈಗಾಗಲೇ ಬೆಳೆಯಲಾಗುತ್ತಿದೆ. ಮುಂದಿನ ಕೆಲವೇ ವರ್ಷಗಳಲ್ಲಿ ರಫ್ತು ಮಾಡುವ ಶಕ್ತಿಯೂ ನಮಗೆ ದೊರೆಯಲಿದೆ

ಪ್ರಜಾವಾಣಿ ಚರ್ಚೆ

• ಕಿಶೋರ್‌ಕುಮಾರ್ ಕೊಡ್ಗಿ

ಕೇಂದ್ರ ಸರ್ಕಾರವು ವಿದೇಶಿ ವ್ಯಾಪಾರ ಮಹಾ ನಿರ್ದೇಶನಾಲಯದ (ಡಿಜಿಎಫ್‌ಟಿ) ಮೂಲಕ ಅಧಿಸೂಚನೆ ಹೊರಡಿಸಿ ನೆರೆಯ ಭೂತಾನ್‌ನಿಂದ ಪ್ರತಿ ವರ್ಷ 17,000 ಟನ್ ಹಸಿರು ಅಡಿಕೆಯನ್ನು ಕನಿಷ್ಠ ಆಮದು ದರದ ನಿರ್ಬಂಧವಿಲ್ಲದೆ ಆಮದು ಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟಿದೆ. ಅನಿರ್ದಿಷ್ಟ ಅವಧಿಗೆ ಇದು ಅನ್ವಯವಾಗಲಿದೆ. ಭೂತಾನ್ ದೇಶದಿಂದ ಹಸಿರು ಅಡಿಕೆ ಆಮದು ಮಾಡುವ ಕೇಂದ್ರ ಸರ್ಕಾರದ ನಿರ್ಧಾರ ಖಂಡನೀಯ. ಇದು ಕರ್ನಾಟಕ ಹಾಗೂ ಕೇರಳ ರಾಜ್ಯಗಳ ಅಡಿಕೆ ಬೆಳೆಗಾರರ ಪಾಲಿಗೆ ಮಾರಣಾಂತಿಕ ನಿರ್ಧಾರ. ನಮ್ಮದೇ ಸರ್ಕಾರದ ತಪ್ಪು ನಿರ್ಣಯ.

ವಿಶೇಷವಾಗಿ, ಡಿಜಿಎಫ್‌ಟಿಯ ಸುತ್ತೋಲೆ ಪ್ರಕಾರ ಕನಿಷ್ಠ ಆಮದು ದರವನ್ನು ಅನ್ವಯಿಸದೆಯೇ ದೇಶಕ್ಕೆ ಅಡಿಕೆ ಆಮದು ಮಾಡುವುದು ನಮ್ಮ ಅಡಿಕೆ ಬೆಳೆಗಾರರಿಗೆ ಮಾಡುವ ಬಹು ದೊಡ್ಡ ಅನ್ಯಾಯವಾಗಿದೆ. ಭೂತಾನ್‌ನಿಂದ ಅಡಿಕೆ ಆಮದು ಮಾಡಿಕೊಳ್ಳಲು ಅವಕಾಶ ಕೊಟ್ಟರೆ, ಬರ್ಮಾ ಮತ್ತು ಇತರ ದೇಶಗಳಿಂದ ಅಕ್ರಮವಾಗಿ ಅಡಿಕೆ ತರುವುದಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದೆ.

ಕೇಂದ್ರ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಮತ್ತು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಕರ್ನಾಟಕದ ಎಲ್ಲ ಅಡಿಕೆ ಮಾರಾಟ ಸಹಕಾರ ಸಂಘಗಳ ಮುಖಾಂತರ ಮನವಿ ನೀಡಿ ಚಾಲಿ ಅಡಿಕೆಗೆ ಕೆ.ಜಿ.ಗೆ ₹360 ಕನಿಷ್ಠ ಆಮದು ಬೆಲೆ ನಿಗದಿ ಮಾಡುವಂತೆ ವಿನಂತಿಸಲಾಗಿದೆ. ಈಗ, ಕನಿಷ್ಠ ಆಮದು ದರದ ನಿರ್ಬಂಧವೇ ಇಲ್ಲದೆ ಅಡಿಕೆ ಆಮದಿಗೆ ಅವಕಾಶ ಕಲ್ಪಿಸಿದ್ದನ್ನು ನೋಡಿದರೆ ಇದರಲ್ಲಿ ಸ್ಥಾಪಿತ ಹಿತಾಸಕ್ತಿ ಇದೆ, ಹುನ್ನಾರ ಇದೆ ಎಂಬ ಅನುಮಾನ ಬರುತ್ತದೆ. ನಮ್ಮ ರೈತರ ಆದಾಯ ದ್ವಿಗುಣಗೊಳಿಸಬೇಕೆಂಬ ಪ್ರಧಾನಿ ನರೇಂದ್ರ ಮೋದಿ ಅವರ ಆಶೋತ್ತರಕ್ಕೆ ತಿಲಾಂಜಲಿ ಕೊಡಲಾಗಿದೆ ಎಂಬ ಭಾವನೆ ಬರುತ್ತದೆ. ನಮ್ಮ ರಾಜ್ಯದ ರಾಜಕೀಯ ನಾಯಕರಿಗೆ ಇಚ್ಛಾಶಕ್ತಿಯ ಕೊರತೆ ಇದೆ ಎಂಬ ರೈತರ ಅನಿಸಿಕೆಗೆ ಈಗಿನ ನಿರ್ಧಾರವು ಇಂಬುಕೊಡುತ್ತದೆ.

ಹಳದಿ ರೋಗ, ಎಲೆ ಚುಕ್ಕೆ ರೋಗ, ಕೊಳೆ ರೋಗ ಮತ್ತು ಉತ್ಪಾದನಾ ವೆಚ್ಚ ಏರಿಕೆಯಿಂದ ಕಂಗೆಟ್ಟಿರುವ ನಮ್ಮ ರೈತರಿಗೆ ಈ ನಿರ್ಣಯದಿಂದಾಗಿ ಗಾಯದ ಮೇಲೆ ಬರೆ ಇಟ್ಟಂತಾಗಿದೆ. ಕ್ಯಾಂಪ್ಕೊ ಸಂಸ್ಥೆ ಪ್ರಾಮಾಣಿಕವಾಗಿ ತೆರಿಗೆ ಕಟ್ಟುತ್ತಿದ್ದು, ಅದರ ಸ್ವಲ್ಪ ಅಂಶದಿಂದಾದರೂ ರೈತರ ಅನುಕೂಲಕ್ಕಾಗಿ ಸಂಶೋಧನೆಗೆ ಅನುವು ಮಾಡಿಕೊಡುವುದು ಸರ್ಕಾರದ ಕರ್ತವ್ಯ. ಆದರೆ ಅದರ ಬದಲಿಗೆ ಈ ರೀತಿಯ ಅನ್ಯಾಯ ಮಾಡುವುದು ಸರಿಯಲ್ಲ. ಅನ್ಯಾಯದ ಆಮದಿಗೆ ಅವಕಾಶ ಕಲ್ಪಿಸುವ ಸರ್ಕಾರದ ನಿರ್ಧಾರ ಸರಿಯಲ್ಲ. ಪ್ರಧಾನಿಯವರು ಈ ನಿರ್ಧಾರವನ್ನು ಕೂಡಲೇ ಹಿಂಪಡೆದು, ಅಡಿಕೆ ಬೆಳೆಗಾರರ ರಕ್ಷಣೆಗೆ ಮುಂದಾಗುವರೆಂಬ ಆಶಾಭಾವನೆ ನಮ್ಮದು.



ಕೇಂದ್ರದ ಸಂಬಂಧಪಟ್ಟ ಸಚಿವರ ಮೇಲೆ ರಾಜ್ಯದ ರಾಜಕೀಯ ನಾಯಕರು ಒತ್ತಡ ಹೇರಿ, ಈ ನಿರ್ಧಾರವನ್ನು ಹಿಂದಕ್ಕೆ ಪಡೆಯುವಂತೆ ಮಾಡಬೇಕು ಎಂಬ ಒತ್ತಾಯ ನಮ್ಮದು. ಭೂತಾನ್ ದೇಶಕ್ಕೆ ನೆರವಾಗಬೇಕು ಎಂಬ ಇಚ್ಛೆ ಇದ್ದರೆ ಅದಕ್ಕೆ ಬೇರೆ ಹಲವು ದಾರಿಗಳನ್ನು ಕಂಡುಕೊಳ್ಳಬಹುದು. ನಮ್ಮ ದೇಶದಲ್ಲಿ ನಮಗೆ ಬೇಕಾಗುವಷ್ಟು ಅಡಿಕೆಯನ್ನು ಈಗಾಗಲೇ ಬೆಳೆಯಲಾಗುತ್ತಿದೆ. ಮುಂದಿನ ಕೆಲವೇ ವರ್ಷಗಳಲ್ಲಿ ರಫ್ತು ಮಾಡುವ ಶಕ್ತಿಯೂ ನಮಗೆ ದೊರೆಯಲಿದೆ. ಹೀಗಾಗಿ, ನಾವು ಎಚ್ಚರಿಕೆಯ ಹೆಜ್ಜೆ ಇಡಬೇಕಾಗಿದೆ.

ಅಡಿಕೆ ಮಾರುಕಟ್ಟೆ ಯಾರ ಹಿಡಿತದಲ್ಲಿಯೂ ಇಲ್ಲ. ಸರ್ಕಾರದ ಯಾವುದೇ ಬಿಗಿ ನೀತಿ, ಅಧಿಕಾರಿಗಳ ನಿರ್ಲಿಪ್ತ ಧೋರಣೆ ಮತ್ತು ಖಾಸಗಿ ವರ್ತಕರಿಂದ ಸರ್ಕಾರದ ಬೊಕ್ಕಸಕ್ಕೆ ತೆರಬೇಕಾದ ತೆರಿಗೆ ಕಳ್ಳತನ– ಇವೆಲ್ಲವೂ ಅಡಿಕೆ ಬೆಲೆ ಏರಿಕೆಗೆ ಮಾರಕ. ಸರಿಯಾಗಿ ತೆರಿಗೆ ಕಟ್ಟುವವರಿಗೆ ಮಾತ್ರ ಬಿಗಿ ನೀತಿ ಎಂಬಂತಾಗಿದೆ. ಇವೆಲ್ಲಕ್ಕಿಂತ ಹೆಚ್ಚಾಗಿ ನಮ್ಮ ಬೆಳೆಗಾರರಲ್ಲಿ ಒಗ್ಗಟ್ಟಿನ ಕೊರತೆಯೂ ಕಾಣುತ್ತದೆ. ಮಾರುಕಟ್ಟೆಯಲ್ಲಿ ಬಿಳಿ ಚೀಟಿ ವ್ಯವಹಾರಕ್ಕೆ ಹಿಂಬದಿಯಿಂದ ನಮ್ಮವರದೇ ಕುಮ್ಮಕ್ಕು ಇರುವುದು ಕೂಡ ಬೇಸರದ ಸಂಗತಿ. ಇದರಿಂದಾಗಿ, ಯಾವುದೇ ಸಹಕಾರ ಸಂಸ್ಥೆಗೆ ನಿಖರವಾಗಿ ದರ ನೀಡುವುದು ಕಷ್ಟವಾಗುತ್ತದೆ.

ಅಡಿಕೆಯ ಹಲವು ವಿಧಗಳು ಮಾರುಕಟ್ಟೆಯಲ್ಲಿ ಲಭ್ಯವಿದ್ದು, ಅದರ ಗುಣಮಟ್ಟದಿಂದಾಗಿ ದರ ವ್ಯತ್ಯಾಸವಾಗುತ್ತದೆ. ಖಾಸಗಿ ವರ್ತಕರು ಇದರ ದುರುಪಯೋಗ ಮಾಡಿಕೊಂಡು ತೆರಿಗೆ ವಂಚನೆ ಮಾಡುತ್ತಾರೆ. ಈ ವಿಚಾರವನ್ನು ಕ್ಯಾಂಪ್ಕೊ ಸಂಸ್ಥೆಯು ಸರ್ಕಾರದ ಗಮನಕ್ಕೆ ತಂದಿದ್ದು, ನಮ್ಮ ಸಂಸ್ಥೆಯನ್ನು ನೋಡಲ್ ಸಂಸ್ಥೆಯಾಗಿ ನೇಮಿಸಿ, ಗುಣಮಟ್ಟ ಹಾಗೂ ದರ ನಿರ್ಣಯಕ್ಕೆ ತೊಡಗಿಸಿಕೊಳ್ಳುವಂತೆ ಮನವಿ ಸಲ್ಲಿಸಿದ್ದೇವೆ.

ಬರ್ಮಾ ಮತ್ತು ಇತರ ದೇಶಗಳಿಂದ ದೇಶದೊಳಕ್ಕೆ ಅಡಿಕೆಯನ್ನು ಅಕ್ರಮವಾಗಿ ಸಾಗಿಸುವುದನ್ನು ಮಟ್ಟ ಹಾಕಬೇಕಾದುದು ಸರ್ಕಾರದ ಕರ್ತವ್ಯ. ಅಕ್ರಮವಾಗಿ ದೇಶದೊಳಕ್ಕೆ ಅಡಿಕೆ ಬರುವುದು ನಿಯಂತ್ರಣವಾದರೆ, ನಮ್ಮ ರೈತರು ಬೆಳೆದ ಅಡಿಕೆಗೆ ನ್ಯಾಯವಾದ ದರ ದೊರಕಿಸಿಕೊಡಲು ಕ್ಯಾಂಪ್ಕೊದಂತಹ ಸಂಸ್ಥೆಗೆ ಸಾಧ್ಯವಾಗುತ್ತದೆ.

ಮಿಜೋರಾಂ, ಮಣಿಪುರ, ನಾಗಾಲ್ಯಾಂಡ್ ಮತ್ತು ಅಸ್ಸಾಂ ರಾಜ್ಯಗಳ ಮೂಲಕ ಅಡಿಕೆಯನ್ನು ಕಳ್ಳ ಸಾಗಾಟ ಮಾಡಿ ದೇಶದೊಳಕ್ಕೆ ತರಲಾಗುತ್ತದೆ. ಈ ವಿದೇಶಿ ಅಡಿಕೆಗೆ ತೆರಿಗೆಯನ್ನೂ ಕಟ್ಟಲಾಗುವುದಿಲ್ಲ. ಇದರಿಂದಾಗಿ ದೇಶೀಯವಾಗಿ ಬೆಳೆಯುವ ಅಡಿಕೆಗೆ ದರ ಕಡಿಮೆಯಾಗುತ್ತದೆ. ಒಣ ಹಣ್ಣುಗಳ ಹೆಸರಿನಲ್ಲಿಯೂ ಅಡಿಕೆಯನ್ನು ಆಮದು ಮಾಡಿಕೊಳ್ಳುತ್ತಿರುವುದು ಖಂಡನೀಯ.

ಈ ರೀತಿಯ ವರ್ತನೆಗಳು ದರ ಕುಸಿತಕ್ಕೆ ಕಾರಣವಾಗುತ್ತದೆ. ಬೆಳೆಗಾರರು ಆತಂಕಗೊಳ್ಳುವಂತಹ ಸ್ಥಿತಿ ನಿರ್ಮಾಣವಾಗುತ್ತದೆ. ಸರ್ಕಾರವು ಕಟ್ಟುನಿಟ್ಟಿನ ಕ್ರಮ ಕೈಗೊಂಡು, ಅಡಿಕೆಯು ಅಕ್ರಮವಾಗಿ ದೇಶ ಪ್ರವೇಶಿಸುವುದನ್ನು ತಪ್ಪಿಸಬೇಕು. ಅಡಿಕೆ ಮಾರುಕಟ್ಟೆಯಲ್ಲಿ ದರದ ಸ್ಥಿರತೆ ಕಾಯ್ದುಕೊಳ್ಳಲು ನೆರವಾಗಬೇಕು.

ಲೇಖಕ: ಅಧ್ಯಕ್ಷ, ಕ್ಯಾಂಪ್ಕೊ

ವಿಸ್ತರಣೆ ಗಣನೀಯ

ದೇಶದಲ್ಲಿ ವಾರ್ಷಿಕವಾಗಿ 8–10 ಲಕ್ಷ ಟನ್ ಅಡಿಕೆ ಉತ್ಪಾದನೆಯಾಗುತ್ತಿದೆ. ಈ ಪ್ರಮಾಣದ ಉತ್ಪಾದನೆಯಿಂದ ಸ್ಥಳೀಯ ಬೇಡಿಕೆ ಪೂರೈಕೆ ಮಾತ್ರವಲ್ಲ, ರಫ್ತು ಕೂಡ ಮಾಡಬಹುದು. ಕರ್ನಾಟಕ, ಕೇರಳದ ಜತೆಗೆ, ತಮಿಳುನಾಡು, ಆಂಧ್ರಪ್ರದೇಶ ರಾಜ್ಯಗಳಲ್ಲಿ ಅಡಿಕೆ ಬೆಳೆ ಪ್ರದೇಶ ಗಣನೀಯವಾಗಿ ವಿಸ್ತರಣೆಯಾಗಿದ್ದು, ಇನ್ನು ನಾಲ್ಕೈದು ವರ್ಷಗಳಲ್ಲಿ ದೇಶದಲ್ಲಿ 15 ಲಕ್ಷ ಟನ್ ಅಡಿಕೆ ಉತ್ಪಾದನೆ ಆಗಬಹುದೆಂದು ನಿರೀಕ್ಷಿಸಲಾಗಿದೆ.



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 244

ದೇವತೆಗಳ ಹೊಟ್ಟೆಕಿಚ್ಚು

ಮೇನಾದೇವಿ–ಹಿಮವಂತ ದಂಪತಿಗೆ ಶಿವನ ಮೇಲಿರುವ ಅನನ್ಯವಾದ ಭಕ್ತಿಯನ್ನು ನೋಡಿ ಇಂದ್ರ ಮೊದಲಾದ ದೇವತೆಗಳು ಆನಂದಪಡುವ ಬದಲು, ಆತಂಕಪಡುತ್ತಾರೆ. ಹಿಮವಂತ ತನ್ನ ಪುತ್ರಿ ಪಾರ್ವತಿಯನ್ನು ಶಂಕರನಿಗೆ ಮದುವೆಮಾಡಿಕೊಟ್ಟರೆ, ಖಂಡಿತವಾಗಿ ಆತ ಮುಕ್ತಿ ಪಡೆಯುತ್ತಾನೆ. ಇದರಿಂದ ಹಿಮವಂತ ಈಗಿರುವ ಪರ್ವತರೂಪವನ್ನು ಬಿಟ್ಟು ದಿವ್ಯರೂಪವನ್ನು ಧರಿಸಿ, ನೇರ ಶಿವಲೋಕಕ್ಕೆ ತೆರಳುತ್ತಾನೆ. ಅವನು ಶಿವಲೋಕದಲ್ಲಿ ಶಿವನಂತೆಯೇ ರೂಪ ಪಡೆದು ಸುಖವಾಗಿರುತ್ತಾನೆ ಎಂದು ದೇವತೆಗಳೆಲ್ಲಾ ಹೊಟ್ಟೆಕಿಚ್ಚುಪಡುತ್ತಾರೆ. ಅಲ್ಲದೆ, ಹಿಮವಂತನಲ್ಲಿ ಈಗಾಗಲೇ ಮಿತಿಯಿಲ್ಲದಷ್ಟು ರತ್ನಗಳಿವೆ. ಇಂತಹವನಿಗೆ ಶಿವ ಅಳಿಯನಾದರೆ, ಆಗರ್ಭ ಶ್ರೀಮಂತನಾಗುತ್ತಾನೆ. ಇದರಿಂದ ಭೂಮಿಯನ್ನು 'ರತ್ನಗರ್ಭ' ಅಂತ ಕರೆಯುವುದನ್ನೇ ಬದಲಾಯಿಸಿ, ಹಿಮವಂತನನ್ನೇ 'ರತ್ನಗರ್ಭ' ಅಂತ ಕರೆಯಬೇಕಾಗುತ್ತದೆ' ಎಂದು ದೇವತೆಗಳೆಲ್ಲಾ ಪೇಚಾಡಿಕೊಳ್ಳುತ್ತಾರೆ.

ಹಿಮವಂತನಿಗೆ ಮುಕ್ತಿ ಸಿಗದಂತೆ ಮಾಡಲು ಇರುವ ಏಕೈಕ ಉಪಾಯ ಎಂದರೆ, ಆತ ಫಲೇಚ್ಛೆ ಇಲ್ಲದೆ ಪಾರ್ವತಿಯನ್ನು ಶಿವನಿಗೆ ಮದುವೆ ಮಾಡಿಕೊಡದಂತೆ ತಡೆಯಬೇಕು. ವಿಧಿನಿಯಮದ ಪ್ರಕಾರ ಯಾರೂ ಏನೇ ಮಾಡಿದರೂ ಶಿವ-ಪಾರ್ವತಿ ಕಲ್ಯಾಣ ತಡೆಯುವುದು ಸಾಧ್ಯವಿಲ್ಲ. ಆದರೆ, ಹಿಮವಂತ ಮಗಳು ಪಾರ್ವತಿಯನ್ನು ಶಿವನಿಗೆ ಕೊಡುವ ಮನಸ್ಸಿಲ್ಲದಂತೆ ಮಾಡಿದರೆ ಆತನಿಗೆ ಮುಕ್ತಿ ಸಿಗುವುದಿಲ್ಲ. ಹಿಮವಂತನಿಗೆ ಮುಕ್ತಿ ಸಿಗದಿದ್ದರೆ, ಅವನು ಭೂಮಿಯಲ್ಲೇ ಉಳಿಯುತ್ತಾನೆ ಅಂತ ದೇವತೆಗಳೆಲ್ಲರೂ ಭಾವಿಸುತ್ತಾರೆ.

ದೇವತೆಗಳೆಲ್ಲರೂ ಬೃಹಸ್ಪತಿಯ ಬಳಿಗೆ ಬಂದು, 'ಓ ಗುರುವೇ, ನೀನು ಹಿಮವಂತನ ಮನೆಗೆ ಹೋಗಿ, ಅವನ ಮನದಲ್ಲಿ ಶಿವದ್ವೇಷ ತುಂಬಬೇಕು. ಇದರಿಂದ ರತ್ನನಿಧಿಯಾದ ಹಿಮವಂತ ಮೋಕ್ಷವಂಚಿತನಾಗಿ, ಇನ್ನೂ ಕೆಲವು ಕಾಲ ಭೂಮಿಯಲ್ಲಿರಬೇಕಾಗುತ್ತದೆ. ದಯವಿಟ್ಟು ನಮ್ಮ ಕೋರಿಕೆ ಈಡೇರಿಸು' ಎಂದು ಮನವಿ ಮಾಡಿದರು.

ದೇವತೆಗಳ ಮಾತು ಕೇಳಿ ಬೃಹಸ್ಪತಿ ಬೆಚ್ಚಿಬಿದ್ದ. 'ಶಿವಶಿವಾ' ಎನ್ನುತ್ತಾ ತನ್ನ ಎರಡು ಕಿವಿಗಳನ್ನು ಮುಚ್ಚಿಕೊಂಡ. 'ದೇವತೆಗಳೇ, ನೀವು ಸ್ವಾರ್ಥಪರರು, ಪರಾರ್ಥವನ್ನು ಹಾಳುಮಾಡಲು ಯೋಚಿಸುವಿರಿ. ನೀವು ಹೇಳಿದಂತೆ ಶಿವನಿಂದನೆ ಮಾಡಿದರೆ ನಾನು ನರಕಕ್ಕೆ ಹೋಗಬೇಕಾಗುತ್ತದೆ. ನಿಮಗೆ ಧೈರ್ಯವಿದ್ದರೆ ನೀವೇ ಹಿಮವಂತನಿಗೆ ಶಿವದ್ವೇಷ ಬೋಧಿಸಿ. ಶಿವನ ಹೊರತು ಪಾರ್ವತಿಯು ಇನ್ನಾರನ್ನೂ ವರಿಸುವುದಿಲ್ಲ. ನಿಮ್ಮ ಕುಯುಕ್ತಿ ಸಾಧ್ಯವಾಗಬೇಕಾದರೆ ನೀವೆಲ್ಲ ಬ್ರಹ್ಮನ ಬಳಿ ಹೋಗಿ, ಸಹಾಯ ಬೇಡಿ' ಎಂದ.


ಬೃಹಸ್ಪತಿ ಸಲಹೆಯಂತೆ ದೇವತೆಗಳು ಬ್ರಹ್ಮನ ಬಳಿಗೆ ಬಂದರು. ಶಿವನಿಂದೆ ಮಾಡುವಂತೆ ಹಿಮವಂತನ ಮನವೊಲಿಸಲು ಬ್ರಹ್ಮನನ್ನು ಕೋರಿದರು. ದೇವತೆಗಳ ಮಾತನ್ನು ಕೇಳಿ ಬ್ರಹ್ಮ ಬೆಚ್ಚಿಬಿದ್ದ, 'ಮಹಾ ಪಾಪಕರವಾದ ಶಿವನಿಂದನೆಗೆ ಪ್ರೇರೇಪಿಸುವ ಕೆಲಸ ನಾನು ಮಾಡುವುದಿಲ್ಲ. ಆದರೆ ನಿಮಗೊಂದು ಉಪಾಯ ಹೇಳುವೆ. ನೀವೆಲ್ಲಾ ನೇರವಾಗಿ ಕೈಲಾಸಕ್ಕೆ ಹೋಗಿ ಶಿವನನ್ನೇ ಹಿಮವಂತನ ಬಳಿಗೆ ಕಳುಹಿಸಿ ತನ್ನ ನಿಂದನೆಯನ್ನು ತಾನೇ ಮಾಡಲಿ. ಇದರಿಂದ ಪರಮೇಶ್ವರನಿಗೆ ಲಾಭವಾಗುವುದು. ಹಿಮವಂತನಿಗೆ ನಷ್ಟ ಉಂಟಾಗುವುದು. ಏಕೆಂದರೆ, ಪರನಿಂದೆಯಿಂದ ನಾಶವುಂಟಾದರೆ, ಸ್ವನಿಂದೆಯಿಂದ ಯಶಸ್ಸಾಗುವುದು' ಎಂದ ಬ್ರಹ್ಮ.

ಅಲ್ಪ ಪ್ರಮಾಣದ ಆಮದು ದೇಶದ ರೈತರ ಬಾಧಿಸದು

• ಆರಗ ಜ್ಞಾನೇಂದ್ರ

ನಮ್ಮ ನೆರೆಯಲ್ಲಿರುವ, ಪುಟ್ಟ ಹಾಗೂ ಎಲ್ಲ ಭಾಗಗಳಿಂದಲೂ ಭೂಮಿಯಿಂದ ಆವೃತವಾಗಿರುವ ಭೂತಾನ್ ದೇಶದಿಂದ ಭಾರತಕ್ಕೆ ಕನಿಷ್ಠ ಆಮದು ದರ ನಿರ್ಬಂಧವಿಲ್ಲದೆಯೇ ವಾರ್ಷಿಕ 17,000 ಟನ್ ಹಸಿರು ಅಡಿಕೆ ಆಮದು ಮಾಡಿಕೊಳ್ಳಲು ಕೇಂದ್ರ ಸರ್ಕಾರವು ಇತ್ತೀಚೆಗೆ ಅನುಮತಿ ನೀಡಿದೆ. ಇದು ದೇಶೀಯ ಅಡಿಕೆ ಬೆಳೆಗಾರರಲ್ಲಿ ಆತಂಕ ಉಂಟಾಗುವಂತೆ ಮಾಡಿದೆ.

ಆದರೆ, ವಾಸ್ತವ ಸಂಗತಿ ಅರಿಯದಿರುವ ಕಾರಣದಿಂದ ಬೆಳೆಗಾರರಲ್ಲಿ ಆತಂಕ ಮೂಡಿದೆ. ಅಡಿಕೆ ವರ್ತಕರು ಇಂತಹ ಅವಕಾಶವನ್ನು ದುರುಪಯೋಗ ಮಾಡಿಕೊಂಡು ಬೆಳೆಗಾರರರ ಭಾವನೆಯನ್ನು ಮುಂದಿಟ್ಟುಕೊಂಡು, ಮಾರುಕಟ್ಟೆಯಲ್ಲಿ ಪ್ರಸ್ತುತ ಇರುವ ಸುಸ್ಥಿರ ದರವನ್ನು ಕಡಿಮೆ ಮಾಡಿ ಲಾಭ ಮಾಡಿಕೊಳ್ಳುವ ಪ್ರಯತ್ನಕ್ಕೆ ಮುಂದಾಗುತ್ತಾರೆ. ದೇಶೀಯ ಅಡಿಕೆ ಮಾರುಕಟ್ಟೆ ಮತ್ತು ಮಾಧ್ಯಮಗಳಲ್ಲಿ ತೇಲಿ ಬಿಡುವ ಊಹಾಪೋಹ ಸುದ್ದಿಗಳು, ಅವೈಜ್ಞಾನಿಕ ಬೆಲೆ ವಿಶ್ಲೇಷಣೆಗಳು ಹಾಗೂ ಅಡಿಕೆಯ ಬಗ್ಗೆ ಬುಡವಿಲ್ಲದ ಆರೋಪಗಳನ್ನು ಮಾಡುತ್ತ ಮಾರುಕಟ್ಟೆಯ ಮೇಲೆ ನಿಯಂತ್ರಣ ಹೊಂದುವ ಹುನ್ನಾರ ಹೊಂದಿರುವ ಕೆಲವು ಮಾರಾಟಗಾರರು ಹಾಗೂ ರೈತ ಶೋಷಕರು ಇದಕ್ಕೆ ಕಾರಣ ಅಂದರೆ ಅತಿಶಯೋಕ್ತಿಯಲ್ಲ.



ಜಗತ್ತಿನಲ್ಲಿ ಉತ್ಪಾದನೆಯಾಗುವ ಅಡಿಕೆಯಲ್ಲಿ ಶೇ 50ಕ್ಕೂ ಹೆಚ್ಚು ಭಾಗ ಭಾರತದಲ್ಲಿಯೇ ಉತ್ಪಾದನೆ ಆಗುತ್ತಿದೆ. ಅದರಲ್ಲಿ ಸಿಂಹಪಾಲು ಕರ್ನಾಟಕದ ಕರಾವಳಿ, ಮಲೆನಾಡು ಹಾಗೂ ಮಲೆನಾಡಿನ ಸರಹದ್ದಿನ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ ಎಂಬ ಹೆಗ್ಗಳಿಕೆ ನಮ್ಮದು.

ಕೇಂದ್ರ ಕೃಷಿ ಹಾಗೂ ರೈತ ಕಲ್ಯಾಣ ಸಚಿವ ನರೇಂದ್ರ ಸಿಂಗ್ ತೋಮರ್ ಅವರು ರಾಜ್ಯಸಭೆಯಲ್ಲಿ ಇತ್ತೀಚೆಗೆ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ 2015–16ರಿಂದ 2019–20ರ ಐದು ವರ್ಷದ ಅವಧಿಯಲ್ಲಿ ದೇಶದ ಅಡಿಕೆ ಬೆಳೆ ಉತ್ಪಾದನೆ ದಾಖಲೆ ಪ್ರಮಾಣದಲ್ಲಿ ಅಂದರೆ ಸುಮಾರು ಶೇ 55ರಷ್ಟು ವೃದ್ಧಿಯಾಗಿದೆ. ಈ ಅವಧಿಯಲ್ಲಿ ಅಡಿಕೆ ಬೆಳೆ ಉತ್ಪಾದನೆ 7.3 ಲಕ್ಷ ಟನ್‌ನಿಂದ 11 ಲಕ್ಷ ಟನ್‌ಗೆ ಏರಿಕೆಯಾಗಿದೆ ಎಂಬ ಮಾಹಿತಿ ನೀಡಿದ್ದಾರೆ. ಕರ್ನಾಟಕವು ಅಡಿಕೆ ಉತ್ಪಾದನೆಯ ಮುಂಚೂಣಿ ರಾಜ್ಯವಾಗಿದ್ದು, ರಾಷ್ಟ್ರದ ಒಟ್ಟು ಅಡಿಕೆ ಉತ್ಪಾದನೆಯ ನಾಲ್ಕನೇ ಮೂರರಷ್ಟು ಅಡಿಕೆ ಬೆಳೆಯಲಾಗುತ್ತಿದೆ. ಕಳೆದ ಐದು ವರ್ಷಗಳಲ್ಲಿ ಅಡಿಕೆ ಉತ್ಪಾದನೆಯ ಪ್ರಮಾಣ ಶೇ 65ರಷ್ಟು ಹೆಚ್ಚಳವಾಗಿದೆ ಎಂದಿದ್ದಾರೆ. ರಾಜ್ಯದಲ್ಲಿ 2015–16ರಲ್ಲಿ ಅಡಿಕೆ ಬೆಳೆಯ ವಾರ್ಷಿಕ ಉತ್ಪನ್ನ 4.36 ಲಕ್ಷ ಟನ್‌ನಷ್ಟಿತ್ತು. 2019–20ರಲ್ಲಿ ಇದು 8.5 ಲಕ್ಷ ಟನ್‌ಗೆ ಏರಿಕೆಯಾಗಿದೆ.

ರಾಷ್ಟ್ರದಲ್ಲಿ ಕರ್ನಾಟಕವನ್ನು ಬಿಟ್ಟರೆ, ಅಸ್ಸಾಂ, ಮೇಘಾಲಯ, ತಮಿಳುನಾಡು, ಕೇರಳದಲ್ಲಿಯೂ ಅಡಿಕೆ ಬೆಳೆ ಬೆಳೆಯಲಾಗುತ್ತಿದೆ. ಮೇಘಾಲಯ ಹಾಗೂ ಕೇರಳ ರಾಜ್ಯದಲ್ಲಿ ಅಡಿಕೆ ಬೆಳೆಯುವ ಪ್ರದೇಶ ಹಾಗೂ ಪ್ರಮಾಣ ಇತ್ತೀಚಿನ ವರ್ಷಗಳಲ್ಲಿ ಗಣನೀಯವಾಗಿ ಕಡಿಮೆಯಾಗಿದೆ ಎಂದೂ ಹೇಳಲಾಗಿದೆ.

ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರದ ಅವಧಿಯಲ್ಲಿ, ನೆರೆಯ ದೇಶಗಳೊಂದಿಗೆ ಸ್ನೇಹ ವೃದ್ಧಿಸಿಕೊಳ್ಳುವ ಪ್ರಯತ್ನದ ಭಾಗವಾಗಿ ದಕ್ಷಿಣ ಏಷ್ಯಾ ದೇಶಗಳ ಜತೆಗೆ ಮುಕ್ತ ವಾಣಿಜ್ಯ ಒಪ್ಪಂದಕ್ಕೆ 2006ರಲ್ಲಿ ಸಹಿ ಹಾಕಲಾಗಿದೆ. ಅದರ ಪರಿಣಾಮವಾಗಿ ಹೊರ ದೇಶಗಳಿಂದ ಅಡಿಕೆ ಆಮದಿಗೆ ಅವಕಾಶ ದೊರೆತಿದೆ. ಆಮದಾಗುವ ಅಡಿಕೆಯ ಕನಿಷ್ಠ ಆಮದು ದರವನ್ನು ಪ್ರತಿ ಕೆ.ಜಿ.ಗೆ ₹150ಕ್ಕೆ ನಿಗದಿ ಮಾಡಲಾಗಿತ್ತು. ಅದನ್ನು 2018ರಲ್ಲಿ ₹261ಕ್ಕೆ ಹೆಚ್ಚಿಸಲಾಗಿದೆ.



ದೇಶದಲ್ಲಿ ಉತ್ಪಾದನೆಯಾಗುವ ಅಡಿಕೆ ಬೆಳೆಯ ಒಟ್ಟು ಪ್ರಮಾಣವು ಸುಮಾರು 12 ಲಕ್ಷ ಟನ್ ಇದ್ದು, ಇದಕ್ಕೆ ಹೋಲಿಸಿದರೆ ಆಮದಾಗುವ ಪ್ರಮಾಣ ಬಹಳ ಸಣ್ಣದಾಗಿದೆ. ಹೀಗಾಗಿ, ದೇಶೀಯ ಅಡಿಕೆ ಮಾರುಕಟ್ಟೆ ಮೇಲೆ ಯಾವುದೇ ಪ್ರತಿಕೂಲ ಪರಿಣಾಮ ಉಂಟಾಗದು ಎಂಬುದು ಮೇಲ್ನೋಟಕ್ಕೇ ಕಂಡು ಬರುತ್ತದೆ

ದೇಶದಲ್ಲಿ ಉತ್ಪಾದನೆಯಾಗುವ ಅಡಿಕೆ ಬೆಳೆಯ ಒಟ್ಟು ಪ್ರಮಾಣವು ಸುಮಾರು 12 ಲಕ್ಷ ಟನ್ ಇದ್ದು, ಇದಕ್ಕೆ ಹೋಲಿಸಿದರೆ ಆಮದಾಗುವ ಪ್ರಮಾಣ ಬಹಳ ಸಣ್ಣದಾಗಿದೆ. ಹೀಗಾಗಿ, ದೇಶೀಯ ಅಡಿಕೆ ಮಾರುಕಟ್ಟೆ ಮೇಲೆ ಯಾವುದೇ ಪ್ರತಿಕೂಲ ಪರಿಣಾಮ ಉಂಟಾಗದು ಎಂಬುದು ಮೇಲ್ನೋಟಕ್ಕೇ ಕಂಡು ಬರುತ್ತದೆ.

ನಮ್ಮ ದೇಶದಲ್ಲಿ ಉತ್ಪಾದನೆಯಾಗುವ ಅಡಿಕೆಯ ಒಟ್ಟು ಮೌಲ್ಯ ಸುಮಾರು ₹5,400 ಕೋಟಿಗಳಷ್ಟಿದ್ದರೆ, ಆಮದಾಗುವ ಅಡಿಕೆಯ ಒಟ್ಟು ಮೌಲ್ಯ ₹400 ಕೋಟಿಯಿಂದ ₹500 ಕೋಟಿ ಮಾತ್ರ. ಹಾಗಾಗಿ, ರಾಜ್ಯದ ಅಡಿಕೆ ಬೆಳೆಗಾರರು ಭೂತಾನ್‌ನಿಂದ ಆಮದಾಗುವ ಅಡಿಕೆಯ ಕುರಿತು ಆತಂಕಪಡುವ ಅಗತ್ಯವೇ ಇಲ್ಲ.

ಭೂತಾನ್‌ನಿಂದ ಅನಿರ್ಬಂಧಿತ ದರದಲ್ಲಿ 17,000 ಟನ್ ಹಸಿರು ಅಡಿಕೆ ಆಮದಿಗೆ ಮಾತ್ರ ಈಗ ಅವಕಾಶ ನೀಡಲಾಗಿದೆ. ಬಂದರು ಮೂಲಕ ಅಡಿಕೆಯನ್ನು ದೇಶದೊಳಕ್ಕೆ ತಂದರೆ ಮಾತ್ರ ಈ ವಿನಾಯಿತಿ ಅನ್ವಯ ಎಂಬ ಷರತ್ತು ಇದೆ. ಹೀಗಾಗಿ, ಸಾಗಾಣಿಕೆ ವೆಚ್ಚದಲ್ಲಿ ಹೆಚ್ಚಳವಾಗಲಿದ್ದು, ದೇಶೀಯ ಅಡಿಕೆಯ ಬೇಡಿಕೆಯಲ್ಲಿ ಯಾವುದೇ ವ್ಯತ್ಯಾಸ ಆಗುವುದಿಲ್ಲ.

ಮರದಿಂದ ಇಳಿಸಿದ ಹಸಿರು ಅಡಿಕೆಯನ್ನು ಮೂರು ಅಥವಾ ನಾಲ್ಕು ದಿನಗಳ ಒಳಗೆ ಸಂಸ್ಕರಿಸದಿದ್ದರೆ, ಅದರ ಗುಣಮಟ್ಟ ಕುಸಿದು ದೇಶೀಯ ಅಡಿಕೆಗಿಂತ ಕಳಪೆ ಎನಿಸಿಕೊಳ್ಳುವ ಸಾಧ್ಯತೆ ಹೆಚ್ಚು. ದೇಶೀಯವಾಗಿ ಉತ್ಪಾದನೆಯಾಗುವ ಅಡಿಕೆ ಬೆಳೆಯ ಉತ್ಪಾದನೆ ವೆಚ್ಚಕ್ಕಿಂತ ಕಡಿಮೆ ಬೆಲೆಗೆ ವಿದೇಶದಿಂದ ಆಮದಾಗುವ ಅಡಿಕೆಗೆ ಇನ್‌ವಾಯ್ಸ್ ಹಾಕಬಾರದು. ಆಮದಾಗುವ ಅಡಿಕೆಗೆ ಆಮದು ಸುಂಕ ಮತ್ತು ತೆರಿಗೆಯೂ ಸೇರುತ್ತದೆ. ಹೀಗಾಗಿ ವಿದೇಶದ ಅಡಿಕೆಯು ಕಡಿಮೆ ದರದಲ್ಲಿ ಲಭ್ಯ ಎಂಬ ಕಾರಣಕ್ಕೆ ದೇಶೀಯ ಅಡಿಕೆಯ ಬೇಡಿಕೆ ಕುಸಿಯುವುದಿಲ್ಲ. ಕೇಂದ್ರ ಸರ್ಕಾರದ ನಿರ್ಧಾರದಿಂದ ಅವಕಾಶಗಳು ಹೆಚ್ಚಾಗಬಹುದು. ಆದರೆ ವಾಸ್ತವದಲ್ಲಿ ಯಾವುದೇ ವ್ಯತ್ಯಾಸ ಆಗುವುದಿಲ್ಲ.

ರಾಜ್ಯದ ಅಡಿಕೆ ಬೆಳೆಗಾರರ ರಕ್ಷಣೆಯ ಹೊಣೆಗಾರಿಕೆ ಹೊತ್ತಿರುವ ರಾಜ್ಯದ ಅಡಿಕೆ ಟಾಸ್ಕ್ ಫೋರ್ಸ್ ಪರಿಸ್ಥಿತಿಯ ಮೇಲೆ ನಿಕಟ ನಿಗಾ ಇರಿಸಿದೆ. ಆರ್ಥಿಕ ತಜ್ಞರು, ಅಡಿಕೆ ಬೆಳೆಗಾರರ ಸಂಘಗಳು, ಸಂಸ್ಕರಣಾ ಉದ್ದಿಮೆಗಳು ಹಾಗೂ ಮಾರುಕಟ್ಟೆ ಪ್ರತಿನಿಧಿಗಳೊಂದಿಗೆ ಸತತ ಸಂಪರ್ಕದಲ್ಲಿ ಟಾಸ್ಕ್ ಫೋರ್ಸ್ ಇದೆ. ಈಗ ಸುಸ್ಥಿರವಾಗಿ ಇರುವ ಅಡಿಕೆ ಮಾರುಕಟ್ಟೆಯನ್ನು ಕಾಯ್ದುಕೊಳ್ಳುವ ಮತ್ತು ಬೆಳೆಗಾರರ ಹಿತ ಕಾಯುವ ದಿಸೆಯಲ್ಲಿ ಎಲ್ಲ ಪ್ರಯತ್ನಗಳನ್ನೂ ನಡೆಸಲಾಗುತ್ತದೆ.

ಅಡಿಕೆ ಆಮದು ಕನಿಷ್ಠ ಬೆಲೆಯನ್ನು ಈಗಿನ ₹261ರಿಂದ ₹406ಕ್ಕೆ ಹೆಚ್ಚಿಸಬೇಕು ಎಂದು ರಾಜ್ಯ ಅಡಿಕೆ ಟಾಸ್ಕ್ ಫೋರ್ಸ್‌ನ ಪ್ರತಿನಿಧಿಗಳ ನಿಯೋಗವು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ದೇಶೀಯ ಅಡಿಕೆ ಉತ್ಪಾದನೆಯ ಕನಿಷ್ಠ ವೆಚ್ಚವನ್ನು ಹೆಚ್ಚಳ ಮಾಡಿ ನಿಗದಿ ಮಾಡಬೇಕು ಎಂಬ ಒತ್ತಾಯದೊಂದಿಗೆ ಇನ್ನೊಂದು ನಿಯೋಗವು ಸದ್ಯದಲ್ಲಿಯೇ ದೆಹಲಿಗೆ ಹೋಗಲಿದೆ. ಇದು, ಅಡಿಕೆ ಬೆಳೆಗಾರರ ಹಿತ ರಕ್ಷಣೆಗಾಗಿ ಟಾಸ್ಕ್ ಫೋರ್ಸ್ ಕೈಗೊಂಡ ಕ್ರಮಗಳಲ್ಲಿ ಕೆಲವು ಮಾತ್ರ.

ಅಡಿಕೆಯು ಸಾವಿರಾರು ವರ್ಷಗಳಿಂದ ಬಳಕೆಯಲ್ಲಿದ್ದರೂ ಅದರ ಗುಣಮಟ್ಟಕ್ಕೆ ಸಂಬಂಧಿಸಿ ಯಾವುದೇ ವ್ಯಾಖ್ಯಾನ ಇಲ್ಲದಿರುವುದನ್ನು ಮನಗಂಡ ರಾಜ್ಯ ಅಡಿಕೆ ಟಾಸ್ಕ್ ಫೋರ್ಸ್, 2019ರಲ್ಲಿ ಸಂಬಂಧಪಟ್ಟ ಇಲಾಖೆಗಳೊಂದಿಗೆ ಈ ವಿಚಾರವನ್ನು ಚರ್ಚಿಸಿದೆ. ಈ ಕುರಿತು ದಾಖಲೆಗಳನ್ನು ಸಿದ್ಧಪಡಿಸಿದೆ. ಅಡಿಕೆ ಗುಣಮಟ್ಟ ಹಾಗೂ ವರ್ಗೀಕರಣ ನಿರ್ಧರಿಸುವ ಪರಿಪಾಟ ಇದರಿಂದಾಗಿ ಅಧಿಕೃತವಾಗಿ ರೂಪುಗೊಂಡಿದೆ.

ಒಣಗಿಸಿದ ಹಣ್ಣುಗಳ ಹೆಸರಿನಲ್ಲಿ ಅಡಿಕೆಯನ್ನು ಆಮದು ಮಾಡಿಕೊಂಡು ತೆರಿಗೆ ತಪ್ಪಿಸುವ ಷಡ್ಯಂತ್ರವನ್ನು ಪತ್ತೆ ಮಾಡಲಾಗುತ್ತಿದೆ. ಸ್ಕ್ಯಾನ್ ಯಂತ್ರ ಅಳವಡಿಕೆ ಮೂಲಕ ಇದನ್ನು ಸಾಧಿಸಲಾಗಿದೆ. ಹೀಗಾಗಿ ದೇಶೀಯ ಬೆಳೆಗಾರರ ಹಿತರಕ್ಷಣೆ ಸಾಧ್ಯವಾಗಿದೆ.

ಅಡಿಕೆ ಕ್ಯಾನ್ಸರ್‌ಕಾರಕ ಎಂಬ ಅಪಪ್ರಚಾರವನ್ನು ರಾಜ್ಯ ಅಡಿಕೆ ಟಾಸ್ಕ್ ಫೋರ್ಸ್ ಹೋಗಲಾಡಿಸಿದೆ. ಅಡಿಕೆಯು ಆರೋಗ್ಯದಾಯಕ ಎಂಬುದನ್ನು ದಾಖಲೆ ಸಮೇತ ಪ್ರತಿಪಾದಿಸಿದೆ. ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ಗೂ ಅರ್ಜಿ ಸಲ್ಲಿಸಲಾಗಿದೆ. ಭೂತಾನ್ ದೇಶದಿಂದ ಅಡಿಕೆ ಆಮದು ಮಾಡುವುದರಿಂದ ರಾಜ್ಯದ ಬೆಳೆಗಾರರಿಗೆ ಯಾವುದೇ ತೊಂದರೆ ಆಗದು.

ಲೇಖಕ: ಗೃಹ ಸಚಿವ ಹಾಗೂ ರಾಜ್ಯ ಅಡಿಕೆ ಟಾಸ್ಕ್ ಫೋರ್ಸ್ ಅಧ್ಯಕ್ಷ

ಪದಬಂಧ 5102


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬೆಳಗಾಗುತ್ತಲೇ ನೆರೆದ ನಂಟರ ಸಮೂಹ (3)
4.ಎಲ್ಲರದ್ದೂ ಒಂದೇ ಮತ (3)
6.ದನಕಾಯುವವನು ನೋಡಿದ್ದು ಅಶ್ವದ ಮುಖ (5)
7.ರವಿಕೆಯನ್ನು ಒಣಗಿಸಿದ ಸೂರ್ಯ (2)
9.ಕನ್ನಡ ಮಾತಾಡುವವನಿಗೆ ದೊರೆತ ಸಾಲ (2)
10.ಕಾದಾಡುವ ಜಾಗದಲ್ಲಿನ ಅರಣ್ಯ! (2)
11.ವಾದಸರಣಿಯಲ್ಲಿ ಕೇಳಿದ್ದು ಉಲ್ಟಾ ಮಾತು (2)
12.ಬಡಿವಾರ ತೋರಿದ್ದು ಏಳು ದಿನ (2)
13.ಆರ್ಭಟದಲ್ಲಿ ಉಲ್ಟಾ ಹೊಡೆದ ಕ್ರೀಡೆ (2)
18.ನಯವಂತಿಗೆ ತೋರುತ್ತಲೇ ಮೋಸಮಾಡುವವ (5)
19.ನಡುವೆಯೇ ಶುರುವಾದ ಕಂಪನ (3)
20.ರೀತಿಯೊಡಗೂಡುವ ಪದ್ಧತಿ (3)

ಮೇಲಿಂದ ಕೆಳಕ್ಕೆ

1.ಬರದಲ್ಲಿಯೂ ತೋರುತ್ತಿರುವ ಡೌಲು! (4)
2.ಗಮನ ನೀಡಿ! ಇದು ಬಲು ಗಂಭೀರ! (3)
3.ವನದ ಬಗ್ಗೆ ಬರೆದ ಪದ್ಯ (3)
4.ನೆನಪು ಮಾಡಿಕೊಂಡು ತೋರಿದ ವಯ್ಯಾರ (3)
5.ತಡವಾಗಿ ಬಂದರೆ ಈ ತಬ್ಬಿಬ್ಬು (4)
8.ಕಾರನೇರುವಾಗಲೇ ಅಂದಗೆಟ್ಟಿದ್ದು (3)
9.ಕಟ ಕಟ ಶಬ್ದ ಮಾಡುವ ಬಾಗಿಲು (3)
12.ತಾಯಿಯ ಮನೆಯ ಕಿಟಕಿ (4)
14.ಆ ಗುಜು ಗುಜು ನಡೆದದ್ದು ಅಕ್ಕಪಕ್ಕದಲ್ಲೇ! (4)
15.ಪಾನಕಕ್ಕೆ ಬಾಯಿ ಹಾಕಿದ ನಾಯಿ (3)
16.ವಂಗ ದೇಶದಲ್ಲಿರುವ ಸಾಂಬಾರದ್ರವ್ಯ (3)
17. ಮಂಕ ಹೊತ್ತಿರುವ ಬುಟ್ಟಿ (3)



5101ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ರಸನ 3.ಉತ್ತರ
5.ಭಾವ 6.ಸರಿ
8.ನಸುಕು 9.ತವಕ
11.ಕಮರಿ 12.ವಿಧಾತ
13.ಗುಲಾಮ 15.ಪಾದುಕೆ
17.ಯಮ 19.ಹಾನಿ
20.ತಿಲಕ 21.ರುಮಾಲು

ಮೇಲಿಂದ ಕೆಳಕ್ಕೆ:
1.ರವ 2.ನಯನ
3.ಉಸುಕು 4.ರಸ
5.ಭಾರತ 7.ರಿಪೇರಿ
10.ಕಡಿತ 11.ಕರಗು
12.ವಿಷಯ 14.ಮಯನಿ
15.ಪಾತಕ 16.ಕೆಸರು
18.ಮತಿ 19.ಹಾಲು

ಸುಡೊಕು 5488

				8			6	7
	7		1		6			3
3		5		2		9		
	8	7					1	
		4	7	6	3	8		
5	9						7	4
		2		7		1		5
1	4		2		5		9	
	5			4		2		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5487 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಅಕ್ಟೋಬರ್ 8, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ಚತುರ್ದಶಿ ಗಂ. 27-42 ನಕ್ಷತ್ರ: ಪೂರ್ವಾಭಾದ್ರಾ ಗಂ. 17-08 ಯೋಗ: ವೃದ್ಧಿ ಗಂ. 20-54, ಕರಣ: ಗರಜೆ ಗಂ. 16-31, ಕನ್ಯಾ ಮಾಸದ 21 ನೇ ದಿನ.
ರಾಹುಕಾಲ: ಬೆಳಿಗ್ಗೆ 09-00 – 10:30
ಸೂರ್ಯೋದಯ: 06-24 **ಸೂರ್ಯಾಸ್ತ:** 06-12
ಮುಸ್ಲಿಂ ದಿನಾಂಕ: 11 ರಬಿಉಲ್ಲಾವಲ್
ಅದೃಷ್ಟ ಸಂಖ್ಯೆ: 3, 5

ಮೇಷ: ಅಧಿಕಾರಿಗಳ ಖಾಸಗಿ ಸಂಪರ್ಕದಿಂದ ನಿಮ್ಮ ಕೆಲಸಗಳಿಗೆ ಹೆಚ್ಚಿನ ಪುಷ್ಟಿ ದೊರೆಯಲಿದೆ. ಯಾವುದೇ ವಿಚಾರಗಳಿಗೂ ಬೇಸರ ಪಡುವ ಅವಶ್ಯಕತೆ ಇಲ್ಲ. ವ್ಯವಹಾರಗಳಲ್ಲಿ ಈ ದಿನ ಸಕಾರಾತ್ಮಕ ಪ್ರತಿಕ್ರಿಯೆಗಳನ್ನು ಕಾಣುವಿರಿ.

ವೃಷಭ: ಈ ದಿನ ನಡೆಯುವ ಎಲ್ಲಾ ವಿಷಯಗಳಲ್ಲಿಯೂ ನಿಮ್ಮ ಸ್ವಾಭಾವಿಕ ಗುಣಕ್ಕಿಂತ ಹೆಚ್ಚಿನ ಸಮಾಧಾನದಿಂದಿರುವುದು ಉತ್ತಮ. ದೊಡ್ಡ ಮೊತ್ತದ ಅಥವಾ ಹೆಚ್ಚಿನ ಜವಾಬ್ದಾರಿಯ ಯಾವುದೇ ಕೆಲಸವನ್ನು ಒಪ್ಪಿಕೊಳ್ಳಬಹುದು.

ಮಿಥುನ: ವ್ಯಾಪಾರ ವ್ಯವಹಾರಗಳಲ್ಲಿ ನಡೆಯುತ್ತಿರುವ ಅವ್ಯವಹಾರಗಳು ನಿಷ್ಠಾವಂತ ಸಿಬ್ಬಂದಿಯಿಂದ ಗಮನಕ್ಕೆ ಬರಲಿದೆ. ಮಗಳ ಮದುವೆಯ ವಿಚಾರದಲ್ಲಿ ನೀವು ಇಡುವ ಹೆಜ್ಜೆ ಬಹಳ ಪ್ರಮುಖವಾದುದು.

ಕರ್ಕಾಟಕ: ಬೇಕರಿ ಮಾರಾಟಗಾರರಿಗೆ ಸಿಹಿ ಪದಾರ್ಥಗಳ ಮಾರಾಟದಿಂದ ಅಧಿಕ ಲಾಭವಿರುವುದು. ಬಹಳ ಸಮಯದಿಂದ ಇತ್ಯರ್ಥವಾಗದ ನಿಮ್ಮ ಕೌಟುಂಬಿಕ ಸಮಸ್ಯೆಗೆ ಈ ದಿನದಲ್ಲಿ ನ್ಯಾಯ ಸಮ್ಮತವಾದ ಉತ್ತರ ಸಿಗಲಿದೆ.

ಸಿಂಹ: ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳ ಜೊತೆಗೆ ಸ್ವಂತ ಉದ್ಯಮ ಸ್ಥಾಪಿಸುವ ಯೋಚನೆಯು ಮೂಡುವುದು. ವಿದೇಶಿ ಸ್ನೇಹಿತರಿಂದ ವ್ಯವಹಾರಿಕ ಸಲಹೆ, ಸುದ್ದಿಯನ್ನು ಪಡೆಯುವಂತಾಗಲಿದೆ.

ಕನ್ಯಾ: ಇಂದು ರಾಜಕೀಯ ಚಟುವಟಿಕೆಗಳಲ್ಲಿ ಬಿರುಸಿನ ಓಡಾಟವಿರುವುದು. ಸ್ನೇಹಪರ ಸ್ವಭಾವದಿಂದಾಗಿ ವೈಯಕ್ತಿಕ ಸ್ಥಾನ ಮಾನ ಲಭಿಸುವುದು. ದೈವಾರಾಧನೆಯಿಂದ ರೈತರಿಗೆ ನೈಸರ್ಗಿಕ ಬಾಧೆ ಕಡಿಮೆಯಾಗುವುದು.

ತುಲಾ: ಕೇವಲ ಆಧ್ಯಾತ್ಮಿಕ ಮತ್ತು ಪಾರಮಾರ್ಥಿಕ ವಿಷಯಗಳತ್ತ ಮನಸ್ಸು ಹರಿಯುವುದರಿಂದ ಅದರಲ್ಲಿಯೇ ಹೆಚ್ಚಿನ ಸಮಯವನ್ನು ಕಳೆಯುವಂತಾಗುವುದು. ವಿಶೇಷ ವಸ್ತು ಕೊಳ್ಳುವಿರಿ. ವಿಷ್ಣುಸಹಸ್ರನಾಮ ಸ್ತೋತ್ರ ಪಠಿಸಿರಿ.

ವೃಶ್ಚಿಕ: ಸಂಶೋಧನಾಗಾರರು ಈ ದಿನ ಹೆಚ್ಚಿನ ವ್ಯಾಸಂಗಕ್ಕಾಗಿ ಸಮಯ ಮೀಸಲಿಡಬೇಕಾಗಲಿದೆ. ಈ ದಿನ ಅಭಿವೃದ್ಧಿ ಕೆಲಸಗಳಿಗೆ ಹೆಚ್ಚಿನ ಮಹತ್ವ ನೀಡಿ ಅವುಗಳನ್ನು ಕಾರ್ಯಗತಗೊಳಿಸಿರಿ. ಕ್ರೀಡಾಪಟುಗಳಿಗೆ ಸಂತಸದ ದಿನವಾಗಿದೆ.

ಧನು: ನಿಮ್ಮ ಪ್ರಾಮಾಣಿಕತೆಗೆ ತಕ್ಕ ಫಲವನ್ನು ಇಂದು ಪಡೆಯುತ್ತೀರಿ. ನೀವು ನಿಮ್ಮ ಗುರಿ ತಲುಪಲು ಬಹಳ ಶ್ರಮ ಪಡಬೇಕಾಗುತ್ತದೆ. ತಂದೆಯವರ ಆರೋಗ್ಯ ಸುಧಾರಣೆಯಾಗಿ ಮನಸ್ಸಿಗೆ ನೆಮ್ಮದಿ ಉಂಟಾಗುತ್ತದೆ.

ಮಕರ: ವ್ಯವಹಾರಗಳ ವಿಷಯಕ್ಕೆ ಸಂಬಂಧಿಸಿದಂತೆ ಪಾಲುದಾರರೊಂದಿಗೆ ಜರೂರಿನಲ್ಲಿ ಚರ್ಚೆ ನಡೆಸಬೇಕಾದ ಪರಿಸ್ಥಿತಿ ಮತ್ತು ತಕ್ಷಣದಲ್ಲಿಯೇ ತೀರ್ಮಾನ ತೆಗೆದುಕೊಳ್ಳಬೇಕಾದ ಸನ್ನಿವೇಶ ಎದುರಾಗಲಿದೆ.

ಕುಂಭ: ಏರುಪೇರಾಗಿದ್ದ ನಿಮ್ಮ ವ್ಯಾಪಾರ ವ್ಯವಹಾರಗಳನ್ನು ಉತ್ತಮ ರೀತಿಯಲ್ಲಿ ಸರಿಪಡಿಸಿಕೊಳ್ಳಬಹುದು. ಮನೆ ನಿರ್ಮಾಣ ಕಾರ್ಯವನ್ನು ಅಡೆತಡೆಯಿಲ್ಲದೆ ಸಂಪೂರ್ಣಗೊಳಿಸುವಿರಿ.

ಮೀನ: ಅತ್ಯುತ್ತಮವಾದ ಜೀವನ ಶೈಲಿಯನ್ನು ಬಯಸುವವರು ಜೀವನೋಪಾಯಕ್ಕೆ ಪರ್ಯಾಯ ಮಾರ್ಗವೊಂದನ್ನು ಕಂಡುಕೊಳ್ಳಬೇಕಾಗುತ್ತದೆ. ಧ್ಯಾನ ಮಾಡುವುದರಿಂದ ಮನಸ್ಸು ನಕಾರಾತ್ಮಕ ಭಾವನೆಯಿಂದ ಹೊರ ಬರಲಿದೆ.

ಭಯೋತ್ಪಾದನೆ, ಭ್ರಷ್ಟಾಚಾರ ಕಾಂಗ್ರೆಸ್‌ನ ಎರಡು ದೊಡ್ಡ ಕೊಡುಗೆ: ರಾಜ್ಯ ಕಾರ್ಯಕಾರಿಣಿಯಲ್ಲಿ ಕಟೀಲ್ ಆರೋಪ

‘ರೀ–ಡೂ ತನಿಖೆಯಾದರೆ ಸಿದ್ದರಾಮಯ್ಯಗೆ ಸಂಕಷ್ಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿದ್ದರಾಮಯ್ಯ ಅವಧಿಯಲ್ಲಿ ನಡೆದ ಅರ್ಕಾವತಿ ಬಡಾವಣೆ ರೀ–ಡೂ ಹಗರಣದ ತನಿಖೆ ನಡೆದರೆ, ಸತ್ಯ ಸಂಗತಿ ಬಯಲಿಗೆ ಬಂದೇ ಬರುತ್ತದೆ. ಮುಂದಿನ ಚುನಾವಣೆಗೂ ಮುನ್ನ ಸಿದ್ದರಾಮಯ್ಯ ಎಲ್ಲಿರುತ್ತಾರೆ ಎಂಬುದನ್ನು ಕಾದು ನೋಡಿ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

ಶುಕ್ರವಾರ ಇಲ್ಲಿ ನಡೆದ ಬಿಜೆಪಿ ರಾಜ್ಯ ಕಾರ್ಯಕಾರಿಣಿಯಲ್ಲಿ ಅಧ್ಯಕ್ಷತೆ ಭಾಷಣ ಮಾಡಿದ ಅವರು ಕಾಂಗ್ರೆಸ್ ಅವಧಿಯಲ್ಲಿ ನಡೆದ ಎಲ್ಲವೂ ಅರ್ಕಾವತಿ ರೀ–ಡೂ, ಸೋಲಾರ್ ಘಟಕಗಳ ಹಂಚಿಕೆ, ಹಾಸ್ಟೆಲ್, ಹಾಸಿಗೆ–ದಿಂಬು, ಶಾಲೆಗಳಿಗೆ ಮೊಟ್ಟೆ ವಿತರಣೆ, ಸಣ್ಣ ನೀರಾವರಿ ಇಲಾಖೆ ಕಾಮಗಾರಿಗಳು, ಪೊಲೀಸ್ ಮತ್ತು ಶಿಕ್ಷಕರ ನೇಮಕಾತಿಯಲ್ಲಿ ನಡೆದ ಭ್ರಷ್ಟಾಚಾರದ ವಿಷಯವನ್ನು ಪ್ರಸ್ತಾಪಿಸಿದರು.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ, ನಾಯಕ ರಾಹುಲ್ ಗಾಂಧಿ, ರಾಬರ್ಟ್ ವಾದ್ರಾ, ಡಿ.ಕೆ.ಶಿವಕುಮಾರ್, ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಜಾಮೀನಿನ ಮೇಲೆ ಹೊರಗಿದ್ದಾರೆ. ಭ್ರಷ್ಟಾಚಾರವೇ ಇವರ ಹೆಗ್ಗುರುತು. ಭಯೋತ್ಪಾದನೆ ಮತ್ತು ಭ್ರಷ್ಟಾಚಾರವೇ ಕಾಂಗ್ರೆಸ್‌ನ ಎರಡು ದೊಡ್ಡ ಕೊಡುಗೆ. ಕಾಂಗ್ರೆಸ್ ಪ್ರಧಾನ ಮಂತ್ರಿಗಳಲ್ಲಿ ಶಾಸ್ತ್ರೀಜೀ ಅವರನ್ನು ಹೊರತುಪಡಿಸಿ ಉಳಿದೆಲ್ಲ ಪ್ರಧಾನಿಗಳ ಅವಧಿಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿತ್ತು ಎಂದು ನಳಿನ್ ಕುಮಾರ್ ಹೇಳಿದರು.

ಸ್ವಾತಂತ್ರ್ಯ ಬಂದಾಗ ದೇಶ ಒಡೆದರು, ಸಿದ್ದರಾಮಯ್ಯ ಸರ್ಕಾರ ವೀರಶೈವ–ಲಿಂಗಾಯತ ಸಮಾಜವನ್ನು ಒಡೆಯಲು ಪ್ರಯತ್ನ ನಡೆಸಿತು. ಕಾಂಗ್ರೆಸ್‌ನವರು ಒಡೆಯುವುದೇ ವಿನಾ ಜೋಡಿಸುವ ಕೆಲಸ ಮಾಡಿಯೇ ಇಲ್ಲ. ಭಾರತದಿಂದ ಓಡಲು ಇಟಲಿಯ ಅಕ್ಕ ದಾರಿ ಹುಡುಕುತ್ತಿದ್ದಾರೆ. ಅದಕ್ಕಾಗಿ ಜೋಡೊ ಯಾತ್ರೆ ನಡೆಸಿದ್ದಾರೆ. ಇದು ಯಶಸ್ಸು ಆಗುವುದಿಲ್ಲ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಭಗವಂತ ಖೂಬಾ, ಶೋಭಾ ಕರಂದ್ಲಾಜೆ, ಸಂಸದ ಡಿ.ವಿ.ಸದಾನಂದಗೌಡ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಇದ್ದರು.



ಬೆಂಗಳೂರಿನ ಅರಮನೆ ಮೈದಾನದಲ್ಲಿ ಬಿಜೆಪಿ ರಾಜ್ಯ ಕಾರ್ಯಕಾರಿಣಿಗೂ ಮುನ್ನ ವಿ.ಡಿ. ಸಾವರ್ಕರ್ ಅವರ ಪ್ರತಿಮೆಗೆ ನಳಿನ್ ಕುಮಾರ್ ಕಟೀಲ್ ಪುಷ್ಪ ನಮನ ಸಲ್ಲಿಸಿದರು. ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಇದ್ದರು.

ಕಾಂಗ್ರೆಸ್ ಪೋಸ್ಟರ್ ಖಂಡಿಸಿ ನಿರ್ಣಯ

ಬೆಂಗಳೂರು: ರಾಜ್ಯ ಸರ್ಕಾರದ ವಿರುದ್ಧ ಆರೋಪಗಳನ್ನು ಮಾಡಿ ಕಾಂಗ್ರೆಸ್ ಪಕ್ಷ ಪೋಸ್ಟರ್‌ಗಳನ್ನು ಅಂಟಿಸಿರುವುದನ್ನು ವಿರೋಧಿಸಿ ಬಿಜೆಪಿ ಕಾರ್ಯಕಾರಿಣಿ ನಿರ್ಣಯ ತೆಗೆದುಕೊಂಡಿದೆ.

‘ರಾಜ್ಯ ಮತ್ತು ಸರ್ಕಾರಕ್ಕೆ ಅವಮಾನವಾಗುವ ರೀತಿಯಲ್ಲಿ ಯಾವುದೇ ದಾಖಲಾತಿ ಇಲ್ಲದೇ ರಸ್ತೆ– ರಸ್ತೆಗಳಲ್ಲಿ ಪೋಸ್ಟರ್ ಅಂಟಿಸಿ ಗೌರವಕ್ಕೆ ಧಕ್ಕೆ ತರಲಾಗಿದೆ’ ಎಂದು ನಿರ್ಣಯ ಪ್ರತಿಪಾದಿಸಿದೆ.

ಪ್ರಮುಖ ನಿರ್ಣಯಗಳು:

- ಮೌಲ್ಯಾಧಾರಿತ ರಾಜಕಾರಣಕ್ಕೆ ತಿಲಾಂಜಲಿ ಇಟ್ಟು ಜಾತಿ, ಮತಗಳ ಹೆಸರಿನಲ್ಲಿ ದೇಶವನ್ನು ಛಿದ್ರಗೊಳಿಸಿ, ಭ್ರಷ್ಟಾಚಾರವನ್ನು ಬಿತ್ತಿ ಬೆಳೆಸಿದ ಕಾಂಗ್ರೆಸ್‌ನ ದೇಶ ವಿರೋಧಿ ಮಾನಸಿಕತೆ ಸೃಷ್ಟಿಸುತ್ತಿದೆ, ಇದು ಖಂಡನೀಯ.
- ರಾಜ್ಯದಲ್ಲಿ ಪಿಎಫ್‌ಐ ಮೇಲೆ 320 ಕ್ಕೂ ಹೆಚ್ಚು ಪ್ರಕರಣಗಳು ಇವೆ. ಹಲವು ಕೋಮುಗಲಭೆಗಳನ್ನೂ ನಡೆಸಿದೆ. ಬೆಂಗಳೂರಿನ ಆರ್. ರುದ್ರೇಶ್, ಉಡುಪಿ ಜಿಲ್ಲೆಯ ಪ್ರವೀಣ್ ಪೂಜಾರಿ, ದಕ್ಷಿಣ ಕನ್ನಡ ಜಿಲ್ಲೆಯ ಶರತ್ ಮಡಿವಾಳ್, ಸುಳ್ಯದ ಪ್ರವೀಣ್ ನೆಟ್ಟಾರು ಕೊಲೆಗಳಲ್ಲಿ ಪಿಎಫ್‌ಐ ಕಾರ್ಯಕರ್ತರೇ ಭಾಗವಹಿಸಿರುವುದನ್ನು ಕೇಂದ್ರ ಗೃಹ ಸಚಿವಾಲಯದ ವರದಿಯಲ್ಲಿ ಉಲ್ಲೇಖಿಸಿದೆ. ಅಂತಹ ಪಿಎಫ್‌ಐ ಮತ್ತು ಅದರ ಸಹ ಸಂಸ್ಥೆಗಳನ್ನು ಕೇಂದ್ರ ಸರ್ಕಾರ ನಿಷೇಧಿಸಿರುವುದು ಅಭಿನಂದನೀಯ.

ಕಾಂಗ್ರೆಸ್ ಕಾಲದಲ್ಲಿ ಶೇ 100 ಭ್ರಷ್ಟಾಚಾರ: ಬೊಮ್ಮಾಯಿ

‘ಕಾಂಗ್ರೆಸ್ ಅವಧಿಯಲ್ಲಿ ಶೇ 100 ರಷ್ಟು ಭ್ರಷ್ಟಾಚಾರ ನಡೆದಿದೆ. ಅಧಿಕಾರದಲ್ಲಿದ್ದಾಗ ಹಗರಣಗಳಲ್ಲೇ ಮುಳುಗಿದ್ದ ಕಾಂಗ್ರೆಸ್‌ಗೆ ಭ್ರಷ್ಟಾಚಾರದ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಿಡಿ ಕಾರಿದರು.

‘ಸಿದ್ದರಾಮಯ್ಯ ಅವಧಿಯಲ್ಲಿ ಸಣ್ಣ ನೀರಾವರಿ ಇಲಾಖೆಯಲ್ಲಿ ಹಗರಣ ನಡೆಯಿತು. ಒಂದೇ ದಿನದಲ್ಲಿ 36 ಸಾವಿರ ಕೊಳವೆಬಾವಿ ಕೊರೆದ ಹಗರಣ, ಪೊಲೀಸ್ ನೇಮಕಾತಿ, ಶಿಕ್ಷಕರ ನೇಮಕಾತಿ, ಪ್ರಾಸಿಕ್ಯೂಟರ್‌ಗಳ ನೇಮಕಾತಿಯಲ್ಲಿ ಲಂಚದ ಹಗರಣ, ವಿವಿಧ ಕಾಮಗಾರಿಗಳಲ್ಲಿ ಭ್ರಷ್ಟಾಚಾರ, ದೇಶ ದ್ರೋಹಿ ಸಂಘಟನೆ ಪಿಎಫ್‌ಐ ವಿರುದ್ಧದ ಪ್ರಕರಣಗಳನ್ನು ತೆಗೆದು ಹಾಕಿದ್ದು ಕಾಂಗ್ರೆಸ್ ಆಡಳಿತಾವಧಿಯ ಸಾಧನೆ. ರಾಜ್ಯದ ಜನತೆ ಕಾಂಗ್ರೆಸ್ ದುರಾಡಳಿತ ಮತ್ತು ಭ್ರಷ್ಟಾಚಾರ ಜನರ ಮನಸ್ಸಿನಲ್ಲಿ ಹಸಿರಾಗಿಯೇ ಇದೆ’ ಎಂದು ಅವರು ಹೇಳಿದರು.

ಭ್ರಷ್ಟಾಚಾರ ತಡೆಯುವ ಸಲುವಾಗಿ, ₹ 50 ಕೋಟಿಗಿಂತ ಹೆಚ್ಚಿನ ಕಾಮಗಾರಿಗೆ ಸಂಬಂಧಿಸಿದಂತೆ ನ್ಯಾಯಾಧೀಶರ ನೇತೃತ್ವದ ವಿಶೇಷ ಸಮಿತಿ ರಚಿಸಲಾಗಿದೆ. ನೇರ ನಗದು ವರ್ಗಾವಣೆ ಯೋಜನೆ ಜಾರಿ ಮಾಡಲಾಗಿದೆ ಎಂದು ಅವರು ಹೇಳಿದರು.

ಬಿಜೆಪಿ ರಥ ತಡೆಯುವುದು ಅಸಾಧ್ಯ: ಕರ್ನಾಟಕದಲ್ಲಿ ಬಿಜೆಪಿ ವಿಜಯ ರಥವನ್ನು ರಾಹುಲ್‌ಗಾಂಧಿ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರಿಂದ ತಡೆಯಲು ಸಾಧ್ಯವೇ ಎಂದು ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಪ್ರಶ್ನಿಸಿದರು.

ಉತ್ತರ ಪ್ರದೇಶ, ಉತ್ತರಖಂಡ್, ಗೋವಾ, ಮಣಿಪುರ ರಾಜ್ಯಗಳ ಮಾದರಿಯಲ್ಲೇ ಕರ್ನಾಟಕದಲ್ಲೂ ಹೆಚ್ಚು ಸ್ಥಾನಗಳೊಂದಿಗೆ ಮತ್ತೆ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ಹೇಳಿದರು.

150 ಸ್ಥಾನಗಳನ್ನು ಗೆಲ್ಲಲು ಕಾರ್ಯಕರ್ತರು ಸಮರ ಸನ್ನದ್ಧರಾಗಬೇಕು. ಅಸ್ತ್ರ, ಶಸ್ತ್ರ ನಮ್ಮಲಿದೆ. ನಾಯಕರೂ ಇದ್ದಾರೆ. ಹಗಲಿರುಳೆನ್ನದೇ ಶ್ರಮಿಸಿ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎಂದು ಮನವಿ ಮಾಡಿದರು.

‘ಬಿಜೆಪಿ ಅಧಿಕಾರಕ್ಕೆ ಬರುವುದನ್ನು ಯಾರಿಂದಲೂ ತಡೆಯಲಾಗದು’

‘ರಾಜ್ಯದಲ್ಲಿ ಬಿಜೆಪಿ ಮತ್ತೊಮ್ಮೆ ಅಧಿಕಾರಕ್ಕೆ ಬರುವುದನ್ನು ತಡೆಯಲು ಯಾವುದೇ ಶಕ್ತಿಗೂ ಸಾಧ್ಯವಿಲ್ಲ. ನಮ್ಮ ನಡೆ ವಿಜಯದ ಕಡೆಗೆ ಇರಲಿ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಕರೆ ನೀಡಿದರು.

‘ಕೇಂದ್ರದಲ್ಲಿ ಮೋದಿ ನೇತೃತ್ವದ ಸರ್ಕಾರದ ಕಾರ್ಯಕ್ರಮಗಳು ರಾಜ್ಯದಲ್ಲಿ ಮೂರು ವರ್ಷಗಳ ಸಾಧನೆಗಳನ್ನು ಮುಂದಿಟ್ಟುಕೊಂಡು ಹೋಗೋಣ. ಜನರ ಒಲವು ನಮ್ಮ ಕಡೆಗೇ ಇದೆ. ಮುಂದಿನ ಐದು ತಿಂಗಳು ಪ್ರವಾಸ ಮಾಡಿ ಶ್ರಮ ಹಾಕೋಣ ಎಂದರು.

ಸೆಲ್ಯುಲರ್ ಜೈಲು ಮತ್ತು ಸಾವರ್ಕರ್

ವಿನಾಯಕ ದಾಮೋದರ ಸಾವರ್ಕರ್ ಬಗ್ಗೆ ವಿರೋಧ ಪಕ್ಷಗಳು ಇತ್ತೀಚೆಗೆ ಮಾಡಿರುವ ಟೀಕೆಗಳಿಗೆ ಉತ್ತರ ನೀಡುವ ಧಾಟಿಯಲ್ಲಿ ಅರಮನೆ ಮೈದಾನದಲ್ಲಿ ಅಂಡಮಾನ್‌ನ ಸೆಲ್ಯುಲರ್ ಜೈಲಿನ ಮಾದರಿಯನ್ನು ನಿರ್ಮಿಸಲಾಗಿತ್ತು.


ಅದರಲ್ಲಿ ಸಾವರ್ಕರ್ ಅವರ ಜೀವನಗಾಥೆಯ ಚಿತ್ರಗಳು, ಇಂದಿರಾಗಾಂಧಿ ಪ್ರಧಾನಿ ಆಗಿದ್ದಾಗ ಹೊರಡಿಸಿದ ಅಂಚೆ ಚೀಟಿ, ಇಂದಿರಾ ಅವರ ಪ್ರಶಂಸಾ ಪತ್ರ, ಸಾವರ್ಕರ್ ಅವರ ಜನ್ಮ ಶತಮಾನೋತ್ಸವ ವೇಳೆ ಅಂದಿನ ಪ್ರಧಾನಿ ಪಿ.ವಿ.ನರಸಿಂಹರಾವ್ ಬರೆದ ಪತ್ರ, ಅಂದಿನ ಉಪರಾಷ್ಟ್ರಪತಿ ಕೆ.ಆರ್.ನಾರಾಯಣನ್ ಬರೆದ ಪ್ರಶಂಸಾ ಪತ್ರ, ಶರದ್ ಯಾದವ್ ಮತ್ತು ಲಾಲು ಪ್ರಸಾದ್ ಬರೆದ ಪತ್ರಗಳನ್ನು ಪ್ರದರ್ಶಿಸಲಾಗಿತ್ತು.

ಸುದ್ದಿ 2 ನಿಮಿಷ

‘ಪಿಎಫ್‌ಐ ವಿರುದ್ಧದ ಪ್ರಕರಣ ವಾಪಸ್ ಪಡೆದಿರಲಿಲ್ಲ’

ಬೆಂಗಳೂರು: ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರವೂ ಸೇರಿದಂತೆ ಕಾಂಗ್ರೆಸ್ ಆಡಳಿತ ಅವಧಿಯಲ್ಲಿ ಪಿಎಫ್‌ಐ ವಿರುದ್ಧ ಯಾವುದೇ ಪ್ರಕರಣವನ್ನೂ ವಾಪಸ್ ಪಡೆದಿರಲಿಲ್ಲ. ಬಿಜೆಪಿ ನಾಯಕರು ರಾಜಕಾರಣಕ್ಕಾಗಿ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಹೇಳಿದರು.

ಪಕ್ಷದ ಕಚೇರಿಯಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನಮ್ಮ ಅವಧಿಯಲ್ಲಿ ಯಾವುದೇ ಸಂಘಟನೆಯ ವಿರುದ್ಧದ ಪ್ರಕರಣ ವಾಪಸ್ ಪಡೆದಿರಲಿಲ್ಲ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದಿರುವ ದಾಖಲೆಗಳಲ್ಲಿ ಅದಕ್ಕೆ ಸ್ಪಷ್ಟವಾದ ಆಧಾರವಿದೆ. ಬಿಜೆಪಿ ಬಳಿ ಆರೋಪಕ್ಕೆ ಪೂರಕವಾದ ದಾಖಲೆ ಇದ್ದರೆ ಬಹಿರಂಗಪಡಿಸಲಿ’ ಎಂದು ಸವಾಲು ಹಾಕಿದರು.



ಕಾಂಗ್ರೆಸ್ ಅವಧಿಯಲ್ಲಿ ಕೋಮು ಗಲಭೆಗಳು, ರೈತ ಚಳವಳಿಗಾರರು, ಸಾಹಿತಿಗಳು, ಕಾರ್ಮಿಕರು, ಪೌರ ಕಾರ್ಮಿಕರ ವಿರುದ್ಧದ ಪ್ರಕರಣಗಳನ್ನು ಮಾತ್ರ ವಿಚಾರಣೆಯಿಂದ ಹಿಂಪಡೆಯುವ ತೀರ್ಮಾನ ಮಾಡಲಾಗಿತ್ತು ಎಂದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ನೇರವಾಗಿ ಆರ್‌ಎಸ್‌ಎಸ್ ಮತ್ತು ಸಂಘ ಪರಿವಾರದ ಇತರ ಸಂಘಟನೆಗಳ ವಿರುದ್ಧದ ಪ್ರಕರಣಗಳನ್ನು ಹಿಂದಕ್ಕೆ ಪಡೆಯಲಾಗಿದೆ ಎಂದರು.

108 ಆಂಬುಲೆನ್ಸ್ ಸಿಬ್ಬಂದಿಗೆ 2 ತಿಂಗಳ ವೇತನ: ಭರವಸೆ

ಬೆಂಗಳೂರು: ಸರ್ಕಾರದ 108-ಆರೋಗ್ಯ ಕವಚ ಯೋಜನೆಯಡಿ ಕಾರ್ಯ-ನಿರ್ವಹಿಸುತ್ತಿರುವ ಸಿಬ್ಬಂದಿಗೆ ವಾರದೊಳಗೆ ಎರಡು ತಿಂಗಳ ವೇತನವನ್ನು ಪಾವತಿಸುವುದಾಗಿ ಜಿವಿಕೆ ಸಂಸ್ಥೆ ಭರವಸೆ ನೀಡಿದೆ.


ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ನೇತೃತ್ವದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಸಂಸ್ಥೆಯ ಪ್ರತಿನಿಧಿಗಳು ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು. ಜಿವಿಕೆ ಸಂಸ್ಥೆಯಡಿ 2,500 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. 2022–23ನೇ ಸಾಲಿನ ಎರಡನೇ ತ್ರೈಮಾಸಿಕಕ್ಕೆ ಸರ್ಕಾರವು ₹ 25 ಕೋಟಿ ಅನುದಾನವನ್ನು ಸಂಸ್ಥೆಗೆ ಬಿಡುಗಡೆ ಮಾಡಿತ್ತು. ಇದರಲ್ಲಿ 2022ರ ಸೆಪ್ಟೆಂಬರ್ ವರೆಗಿನ ವೇತನವೂ ಸೇರಿತ್ತು. ಈ ಬಗ್ಗೆ ಸಂಸ್ಥೆಯ ಪ್ರತಿನಿಧಿಗಳಿಂದ ಮಾಹಿತಿ ಪಡೆದ ರಂದೀಪ್, ವೇತನ ಪಾವತಿಗೆ ಸೂಚಿಸಿದರು. ವೇತನ ಪಾವತಿಯ ಬಗ್ಗೆ ಭರವಸೆ ಸಿಕ್ಕಿದ್ದರಿಂದ ಸೇವೆಗೆ ಗೈರಾಗುವ ನಿರ್ಧಾರದಿಂದ ಸಿಬ್ಬಂದಿ ಹಿಂದೆ ಸರಿದಿದ್ದಾರೆ.

ಬಾಬು ಕೃಷ್ಣಮೂರ್ತಿ, ಪುಟ್ಟು ಕುಲಕರ್ಣಿಗೆ ‘ಆದಿಕವಿ ಪುರಸ್ಕಾರ’

ಬೆಂಗಳೂರು: ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಕರ್ನಾಟಕ ಕೊಡಮಾಡುವ 2021 ಹಾಗೂ 2022ನೇ ಸಾಲಿನ ‘ಆದಿಕವಿ ಪುರಸ್ಕಾರ’ಕ್ಕೆ ಕ್ರಮವಾಗಿ ಸಾಹಿತಿ ಬಾಬು ಕೃಷ್ಣಮೂರ್ತಿ ಹಾಗೂ ಚಿಂತಕ ಪುಟ್ಟು ಪರಶುರಾಮ ಕುಲಕರ್ಣಿ ಆಯ್ಕೆಯಾಗಿದ್ದಾರೆ.



ಪುಟ್ಟು ಕುಲಕರ್ಣಿ



ಬಾಬು ಕೃಷ್ಣಮೂರ್ತಿ

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ರಘುನಂದನ ಭಟ್ಟ ನರೂರು, ‘2021 ಹಾಗೂ 2022ನೇ ಸಾಲಿನ ‘ವಾಗ್ದೇವಿ ಪ್ರಶಸ್ತಿ’ಗೆ ಸಂಸ್ಕೃತ ವಿದ್ವಾಂಸ ವಿಶ್ವನಾಥ ಸುಂಕಸಾಳ ಹಾಗೂ ಬರಹಗಾರ ರೋಹಿತ್ ಚಕ್ರತೀರ್ಥ ಆಯ್ಕೆಯಾಗಿದ್ದಾರೆ. ಈ ಎರಡೂ ಪ್ರಶಸ್ತಿಗಳು ತಲಾ ₹ 1 ಲಕ್ಷ ನಗದು ಒಳಗೊಂಡಿದೆ’ ಎಂದರು

ತುಮಕೂರಿನ ಸಿದ್ಧಗಂಗಾ ಪಿಯು ಕಾಲೇಜಿನಲ್ಲಿ ಇದೇ 16ರಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

ಬಡವರಿಗಾಗಿ ಒಂದು, ಶ್ರೀಮಂತರಿಗಾಗಿ ಇನ್ನೊಂದು ಭಾರತ ಸೃಷ್ಟಿಸಿದ ಬಿಜೆಪಿ –ರಾಹುಲ್ ವಾಗ್ದಾಳಿ

‘ಸರ್ವಸಮಾನತೆಯ ಭಾರತ ನಮ್ಮದಾಗಲಿ’

ಪ್ರಜಾವಾಣಿ ವಾರ್ತೆ

ಮಂಡ್ಯ: ‘ದ್ವೇಷ, ಅಸೂಯೆ, ಜಾತಿ, ಧರ್ಮ, ಅಸಮಾನತೆಯ ತುಂಬಿರುವ ಬಿಜೆಪಿಯ ಭಾರತವನ್ನು ನಾವು ತಿರಸ್ಕರಿಸಬೇಕು, ಸರ್ವ ಸಮಾನತೆಯ ಭಾರತ ನಮ್ಮದಾಗಬೇಕು’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರತಿಪಾದಿಸಿದರು.

ಭಾರತ್ ಜೋಡೊ ಯಾತ್ರೆ ಅಂಗವಾಗಿ ಬೆಳ್ಳೂರಿನ ಬಸ್‌ನಿಲ್ದಾಣದ ವೃತ್ತದಲ್ಲಿ ಶುಕ್ರವಾರ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, ‘ಬಿಜೆಪಿಯು ಬಡವರಿಗಾಗಿ ಒಂದು, ಶ್ರೀಮಂತರಿಗಾಗಿ ಇನ್ನೊಂದು ಭಾರತವನ್ನು ಸೃಷ್ಟಿಸಿದೆ’ ಎಂದು ಟೀಕಿಸಿದರು.

‘ಕರ್ನಾಟಕದಲ್ಲಿ ಮೂರು ಕರಾಳ ಕೃಷಿ ಕಾನೂನುಗಳು ಇನ್ನೂ ಇವೆ. ಅವು ಕೃಷಿಕರು, ಬಡವರು, ಯುವಜನರು, ಕಾರ್ಮಿಕರನ್ನು ನಾಶಮಾಡುವ ಅಸ್ತ್ರಗಳು. ಜಿಎಸ್‌ಟಿ, ನೋಟ್ ಬ್ಯಾನ್ ಮೂಲಕ ಬಿಜೆಪಿ ಬಡವರ ಹಣ ಲೂಟಿ ಮಾಡುತ್ತಿದೆ’ ಎಂದರು.

‘ವಿಶ್ವದ 2ನೇ ಶ್ರೀಮಂತ ಭಾರತೀಯ ಪ್ರಧಾನಿಗೆ ಹತ್ತಿರದವರಾಗಿದ್ದಾರೆ. ಕೆಲ ವರ್ಷಗಳ ಹಿಂದೆ ಪಟ್ಟಿಯಲ್ಲೇ ಇರದಿದ್ದ ಅವರು, ರಾಕೆಟ್ ವೇಗದಲ್ಲಿ ವಿಶ್ವ ಶ್ರೀಮಂತರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಬಡ ಜನರ ಹಣ ಲೂಟಿ ಮಾಡುತ್ತ ಶ್ರೀಮಂತರಾಗಿದ್ದಾರೆ’ ಎಂದರು.

‘ದೇಶದಲ್ಲಿ ಶ್ರೀಮಂತರಿಗೆ ಕನಸುಗಳಿವೆ, ಅವರಿಗೆ ವಿಮಾನ ನಿಲ್ದಾಣ, ಬಂದರು, ರಸ್ತೆ, ದೊಡ್ಡ ಸಂಸ್ಥೆಗಳು ಬೇಕಾಗಿವೆ. ಅವರು ಕೃಷಿ ವ್ಯವಸ್ಥೆ ನಿಯಂತ್ರಿಸುತ್ತಾರೆ, ಸಿಕ್ಕ ಶ್ರೀಮಂತರಾಗುತ್ತಿದ್ದಾರೆ. ಬಡವರ ಮಕ್ಕಳು ನಿರುದ್ಯೋಗಿಗಳಾಗುತ್ತಿದ್ದಾರೆ’ ಎಂದರು.

ರಾಗಿ ಎಂಎಸ್‌ಪಿ ಬೇಕು: ‘ಜನರ ಜೊತೆ ನಡೆಯುವಾಗ ಹಲವು ಸಮಸ್ಯೆಗಳು ಗಮನಕ್ಕೆ ಬಂದಿವೆ. ರಾಗಿ ಬೆಳೆಗೆ ಬೆಂಬಲ ಬೆಲೆ (ಎಂಎಸ್‌ಪಿ) ಬೇಕು. ಕಳೆದ ವರ್ಷ ಕ್ವಿಂಟಲ್ ರಾಗಿ ದರ ₹ 3,377 ಇತ್ತು, ಈ ವರ್ಷ ₹ 2 ಸಾವಿರಕ್ಕೆ ಕುಸಿದಿದೆ. ಎಕರೆಗೆ ಕೇವಲ 5 ಕ್ವಿಂಟಲ್ ರಾಗಿ ಖರೀದಿಸುವ ಮಿತಿ ಏಕೆ’ ಎಂದು ರಾಹುಲ್ ಪ್ರಶ್ನಿಸಿದರು.

‘ಕೃಷಿ ಉತ್ಪನ್ನಗಳಿಗೂ ಜಿಎಸ್‌ಟಿ ಹಾಕುವುದನ್ನು ರೈತರು ಪ್ರಶ್ನಿಸುತ್ತಿದ್ದಾರೆ. ರಸಗೊಬ್ಬರದ ಮೇಲೆ ಶೇ 5, ಟ್ರ್ಯಾಕ್ಟರ್ ಖರೀದಿಗೆ ಶೇ 12, ಕೀಟನಾಶಕಗಳಿಗೆ ಶೇ 18ರಷ್ಟು ಜಿಎಸ್‌ಟಿ ಇದೆ. ಅನ್ನನೀಡುವ ರೈತರು ತೆರಿಗೆ ಏಕೆ ಕಟ್ಟಬೇಕು’ ಎಂದು ಪ್ರಶ್ನಿಸಿದರು.

ಕವಿತಾ ಲಂಕೇಶ್ ಭಾಗಿ: ನಾಗಮಂಗಲ ತಾಲ್ಲೂಕು ಅಂಚೆಭೂವನಹಳ್ಳಿ ಬಳಿ ರಾಹುಲ್ ಅವರ ಜೊತೆಗೆ ಗೌರಿ ಲಂಕೇಶ್ ಅವರ ತಾಯಿ ಇಂದಿರಾ ಮತ್ತು ಸಹೋದರಿ, ಚಿತ್ರ ನಿರ್ದೇಶಕಿ ಕವಿತಾ ಲಂಕೇಶ್ ಕೆಲಹೊತ್ತು ಹೆಜ್ಜೆ ಹಾಕಿದರು.



ನಾಗಮಂಗಲ ತಾಲ್ಲೂಕಿನ ಕೆ.ಮಲ್ಲೇನಹಳ್ಳಿ ಬಳಿ ಭಾರತ್ ಜೋಡೊ ಯಾತ್ರೆಯಲ್ಲಿ ರಾಹುಲ್‌ಗಾಂಧಿ ಜೊತೆ ಹೆಜ್ಜೆ ಹಾಕಿದ ಜನಸಾಗರ

‘ಬಸವಣ್ಣನ ಸಂದೇಶ ಮುಚ್ಚಿಡುವ ಪ್ರಯತ್ನ’

‘ಶಾಂತಿ ಕರ್ನಾಟಕದ ಡಿಎನ್‌ಎ. ಯಾರನ್ನೂ ದ್ವೇಷಿಸಬೇಡ, ಯಾರನ್ನೂ ಹಿಂಸಿಸಬೇಡ ಎಂದು ಬಸವಣ್ಣ ಹೇಳಿದ್ದಾರೆ. ಅವರು ತೋರಿದ ಹಾದಿಯಲ್ಲೇ ನಾನೂ ನಡೆಯುತ್ತಿದ್ದೇನೆ. ಕರ್ನಾಟಕ ಸರ್ಕಾರ ಬಸವಣ್ಣನ ಸಂದೇಶವನ್ನು ಮುಚ್ಚಿಡುವ ಪ್ರಯತ್ನ ಮಾಡುತ್ತಿದೆ’ ಎಂದು ರಾಹುಲ್ ಗಾಂಧಿ ಆರೋಪಿಸಿದರು.

‘ಪಠ್ಯಪರಿಷ್ಕರಣೆ ನೆಪದಲ್ಲಿ ಬಸವಣ್ಣನ ಸಂದೇಶ ಮುಚ್ಚಿಡಲು ಪ್ರಯತ್ನಿಸಲಾಗುತ್ತಿದೆ. ದೇಶದ ಸಂಸ್ಕೃತಿ, ಇತಿಹಾಸ ಮುಚ್ಚಿಡಲು ಸಾಧ್ಯವೇ? ಕರ್ನಾಟಕದ ಜನಸಾಗರವನ್ನು ಕಂಡಿದ್ದೇನೆ. ಹರಿಯುತ್ತಿರುವ ಜನಸಾಗರದಲ್ಲಿ ಜಾತಿ, ಧರ್ಮಗಳೆಂಬ ಭೇದವಿಲ್ಲ’ ಎಂದರು.

‘ಗೌಡರ ಗೌಡ ರಾಹುಲ್ ಗೌಡ’!

ರಾಜ್ಯದಲ್ಲಿ ಪಾದಯಾತ್ರೆ 6ನೇ ದಿನಕ್ಕೆ ತಲುಪಿದ್ದು ಶುಕ್ರವಾರವೂ ಜನಸಾಗರ ಹರಿದುಬಂತು. ನಾಗಮಂಗಲ ತಾಲ್ಲೂಕಿನ ಕೆ.ಮಲ್ಲೇನಹಳ್ಳಿಯಿಂದ ಬೆಳಿಗ್ಗೆ 6.30ಕ್ಕೆ ಪಾದಯಾತ್ರೆ ಆರಂಭಗೊಂಡಿತು. ನಾಗಮಂಗಲ ಪಟ್ಟಣ ತಲುಪಿದಾಗ ಜನರ ಜೈಕಾರ ಮುಗಿಲುಮುಟ್ಟಿತು. ‘ಗೌಡರ ಗೌಡ ರಾಹುಲ್ ಗೌಡ’ ಘೋಷಣೆ ಕೇಳಿಬಂತು.

ಅಂಗವಿಕಲರು, ದಲಿತ ಸಂಘಟನೆಗಳ ಮುಖಂಡರು ಯಾತ್ರೆಯಲ್ಲಿ ಜೊತೆಯಾದರು. ತೊಳಲಿ ಗ್ರಾಮದ ಬಳಿ ತೆಂಗಿನ ತೋಟವೊಂದಕ್ಕೆ ತೆರಳಿದ ರಾಹುಲ್ ಗಾಂಧಿ ಎಳನೀರು ಕುಡಿದು ವಿಶ್ರಾಂತಿ ಪಡೆದರು. ರಾತ್ರಿ ಆದಿಚುಂಚನಗಿರಿಯಲ್ಲಿ ವಾಸ್ತವ್ಯ ಹೂಡಿದರು.

ಫ್ಲೆಕ್ಸ್‌ನಲ್ಲಿ ಸಾವರ್ಕರ್ ಚಿತ್ರ: ದೂರು ದಾಖಲು

ಮಂಡ್ಯ: ‘ಭಾರತ್ ಜೋಡೊ ಯಾತ್ರೆ ವೇಳೆ ಫ್ಲೆಕ್ಸ್‌ನಲ್ಲಿ ಸಾವರ್ಕರ್ ಚಿತ್ರ ಕಂಡುಬಂದಿದ್ದು, ಅದು ಬಿಜೆಪಿಯ ಕಿಡಿಗೇಡಿಗಳ ಕೃತ್ಯ. ಈ ಬಗ್ಗೆ ತನಿಖೆ ನಡೆಸಬೇಕು’ ಎಂದು ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಡಿ.ಗಂಗಾಧರ್ ಶುಕ್ರವಾರ ಪೊಲೀಸರಿಗೆ ದೂರುನೀಡಿದ್ದಾರೆ.

‘ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಶಿಕ್ಷಣಕ್ಕೆ ಪ್ರಮುಖ ಆದ್ಯತೆ’

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಮುಂದೆ ಯಾವುದೇ ಚುನಾವಣೆ ಬಂದರೂ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಶಿಕ್ಷಣಕ್ಕೆ ಪ್ರಮುಖ ಆದ್ಯತೆ ನೀಡಲಾಗುವುದು. ಇದು ಪಕ್ಷದ ಪ್ರಣಾಳಿಕೆಯಾಗುವ ಬದಲು ಜನರ ಅಭಿಪ್ರಾಯವಾಗಲಿದೆ’ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

ಭಾರತ್ ಜೋಡೊ ಯಾತ್ರೆಯ ಅಂಗವಾಗಿ ರಾಹುಲ್ ಗಾಂಧಿ ಅವರು ಶುಕ್ರವಾರ ನಾಗಮಂಗಲ ತಾಲ್ಲೂಕು ಅಂಚೆಭೂವನಹಳ್ಳಿ ಬಳಿ ನಡೆದ ‘ಶಿಕ್ಷಣ ಸಂವಾದ’ದಲ್ಲಿ ಈ ಭರವಸೆ ನೀಡಿದರು ಎಂದು ಕಾಂಗ್ರೆಸ್ ಮುಖಂಡ, ಶಿಕ್ಷಣ ತಜ್ಞ ಪ್ರೊ.ರಾಜೀವ್‌ಗೌಡ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು. ಶಿಕ್ಷಣ ತಜ್ಞರು, ಶಾಲಾ ಕಾಲೇಜು ಅಧ್ಯಾಪಕರು ಸಂವಾದದಲ್ಲಿ ಪಾಲ್ಗೊಂಡಿದ್ದರು.

‘ಪಠ್ಯಪುಸ್ತಕವನ್ನು ಕೇಸರೀಕರಣಗೊಳಿಸಿ ಮಕ್ಕಳ ಮನಸ್ಸಿನಲ್ಲಿ ವಿಷ ಬೀಜ ಬಿತ್ತಲಾಗುತ್ತಿದೆ. ಕರ್ನಾಟಕದಲ್ಲಿ ನಡೆದ ಪಠ್ಯಪುಸ್ತಕ ಪರಿಷ್ಕರಣೆ ವೇಳೆ ಹೊಸ ಪುರಾಣವನ್ನೇ ಸೃಷ್ಟಿಸಲಾಗಿದೆ. ಸಾವರ್ಕರ್ ಅವರು ಬುಲ್‌ಬುಲ್ ಹಕ್ಕಿಯ ಮೇಲೆ ಕುಳಿತು ತಾಯ್ನಾಡಿಗೆ ಬರುತ್ತಿದ್ದರು ಎಂದೆಲ್ಲ ಬರೆಯಲಾಗಿದೆ ಎಂಬ ವಿಚಾರ ಚರ್ಚೆಗೆ ಬಂದಿತು. ಅದನ್ನು ಕೇಳಿ ರಾಹುಲ್ ಗಾಂಧಿ ಅಚ್ಚರಿ ಪಟ್ಟರು’ ಎಂದರು.

‘ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಸರ್ಕಾರಿ ಶಾಲೆಗಳಿಗೆ ಸೌಲಭ್ಯಗಳನ್ನು ಕೊಡುತ್ತಿಲ್ಲ. ಅದೇ ಅನುದಾನವನ್ನು ಆರ್‌ಎಸ್‌ಎಸ್ ನಡೆಸುವ ಶಾಲೆಗಳಿಗೆ ನೀಡಲಾಗುತ್ತಿದೆ. ಅವುಗಳಿಗೆ ಎಲ್ಲಿಂದ ಹಣ ಬರುತ್ತಿದೆ? ಆ ಶಾಲೆಗಳ ಲೆಕ್ಕ ನೀಡುತ್ತಿಲ್ಲ. ಈ ಬಗ್ಗೆ ಸಮಗ್ರ ತನಿಖೆ ನಡೆಯಬೇಕು ಎಂಬ ಒತ್ತಾಯವೂ ಸಂವಾದದಲ್ಲಿ ಕೇಳಿ ಬಂತು’ ಎಂದು ಹೇಳಿದರು.

ಮುಖಂಡ ಜೈರಾಮ್ ರಮೇಶ್ ಮಾತನಾಡಿ ‘ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದರೆ ನೂತನ ಶಿಕ್ಷಣ ನೀತಿಯನ್ನು ರದ್ದು ಮಾಡಲಾಗುವುದು. ಈ ನೀತಿಯ ಪ್ರತಿ ಪದವನ್ನೂ ನಾವು ರದ್ದು ಮಾಡುತ್ತೇವೆ’ ಎಂದು ಭರವಸೆ ನೀಡಿದರು.

ತುಮಕೂರು ಜಿಲ್ಲೆಗೆ ಇಂದು ‘ಭಾರತ್ ಜೋಡೊ’

ತುಮಕೂರು: ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ನೇತೃತ್ವದ ‘ಭಾರತ್ ಜೋಡೊ’ ಪಾದಯಾತ್ರೆಯು ಶನಿವಾರ ತುಮಕೂರು ಜಿಲ್ಲೆಯನ್ನು ಪ್ರವೇಶಿಸಲಿದೆ.

ಮಂಡ್ಯ ನಾಗಮಂಗಲ ತಾಲ್ಲೂಕು ಆದಿಚುಂಚನಗಿರಿಯಿಂದ ಹೊರಡುವ ಪಾದಯಾತ್ರೆ ಶನಿವಾರ ಬೆಳಿಗ್ಗೆ ತುರುವೇಕೆರೆ ತಾಲ್ಲೂಕಿನ ಮಾಯಸಂದ್ರದ ಟಿ.ಬಿ ಕ್ರಾಸ್ ತಲುಪಲಿದೆ. ಕಲಾ ತಂಡಗಳೊಂದಿಗೆ ಮುಖಂಡರು ಸ್ವಾಗತಕ್ಕೆ ಸಜ್ಜಾಗಿದ್ದಾರೆ.

ಟಿ.ಬಿ ಕ್ರಾಸ್‌ನಿಂದ ಬೆಳಿಗ್ಗೆ 7 ಗಂಟೆಗೆ ಆರಂಭವಾಗುವ ಪಾದಯಾತ್ರೆಯು ಮಧ್ಯಾಹ್ನ ಅರಳೀಕೆರೆಪಾಳ್ಯ ತಲುಪಲಿದೆ. ಅಲ್ಲಿ ಊಟ, ವಿಶ್ರಾಂತಿಗೆ ವ್ಯವಸ್ಥೆ ಮಾಡಲಾಗಿದೆ. ಮಧ್ಯಾಹ್ನ ಅರಳೀಕೆರೆಪಾಳ್ಯದಲ್ಲಿ ತೆಂಗು, ಅಡಿಕೆ ಬೆಳೆಗಾರರ ಜತೆ ಸಂವಾದ ನಡೆಯಲಿದೆ. ಬಳಿಕ ಯಾತ್ರೆ ಮುಂದುವರಿಯಲಿದ್ದು ತುರುವೇಕೆರೆಯಲ್ಲಿ ಸಾರ್ವಜನಿಕ ಸಭೆ ನಡೆಯಲಿದೆ. ಆ ನಂತರ ರಾಹುಲ್ ಗಾಂಧಿ ಅವರು ಮಾತನಾಡಲಿದ್ದಾರೆ. ಬಾಣಸಂದ್ರ ಗ್ರಾಮದಲ್ಲಿ ರಾತ್ರಿ ವಾಸ್ತವ್ಯ ಮಾಡಲಿದೆ.

ತುರುವೇಕೆರೆ, ತಿಪಟೂರು, ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಎರಡು ದಿನ ಪಾದಯಾತ್ರೆ ಸಾಗಲಿದ್ದು, ಈ ಮೂರು ಕ್ಷೇತ್ರಗಳಲ್ಲೂ ಬಿಜೆಪಿ ಶಾಸಕರು ಇದ್ದಾರೆ. ಯಾತ್ರೆಯಲ್ಲಿ ಜಿಲ್ಲೆಯಿಂದ 25 ಸಾವಿರ ಮಂದಿ ಭಾಗವಹಿಸುವ ನಿರೀಕ್ಷೆ ಇದೆ.

‘ಜನರ ಆಶಯ ಮರೆತ ಬಿಜೆಪಿ’

ಕೊಪ್ಪಳ: ‘ಬಿಜೆಪಿಯನ್ನು ಬೆಳೆಸಿದ ಆರ್‌ಎಸ್‌ಎಸ್ ಮತ್ತು ಹಿಂದೂಪರ ಸಂಘಟನೆಗಳೇ ಈಗ ಆ ಪಕ್ಷವನ್ನು ವಿರೋಧಿಸುತ್ತಿವೆ’ ಎಂದು ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಮಧು ಬಂಗಾರಪ್ಪ ತಿಳಿಸಿದರು.

‘ಜನರ ಭಾವನೆ, ಆಶೋತ್ತರ ಮರೆತು ವ್ಯವಹಾರ ಮಾಡಲು ಅಧಿಕಾರಕ್ಕೆ ಬಂದ ಬಿಜೆಪಿಯವರು ಇಷ್ಟು ವರ್ಷ ಆಡಳಿತದಲ್ಲಿ ವ್ಯವಹಾರವನ್ನೇ ಮಾಡಿದ್ದಾರೆ’ ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

‘ರಾಹುಲ್ ಅವರನ್ನು ಪಪ್ಪು ಎಂದು ಟೀಕಿಸುವವರಿಗೆ ಭವಿಷ್ಯದ ರಾಜಕಾರಣದ ಅರಿವಿಲ್ಲ. ಭಾರತ್ ಜೋಡೊ ಯಾತ್ರೆ ಮೂಲಕ ಕಾಂಗ್ರೆಸ್ ದೇಶವನ್ನು ಒಂದು ಮಾಡುತ್ತಿದೆ’ ಎಂದು ತಿಳಿಸಿದರು.

‘ಬಿಎಸ್‌ವೈ ಜೊತೆ ಓಡಾಡಿದರೆ ಸೋಲ್ತಿರಿ’

ಮೂಡಲಗಿ (ಬೆಳಗಾವಿ ಜಿಲ್ಲೆ): ‘ಮುಂದಿನ ಚುನಾವಣೆಯಲ್ಲಿ ಯಡಿಯೂರಪ್ಪ ಜೊತೆಗೆ ಹೋದರೆ ರಾಜ್ಯದಲ್ಲಿ ಬಿಜೆಪಿಯನ್ನು ಲಗಾಟಿ ಹೊಡೆಸುತ್ತೀರಿ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಮುಖ್ಯಮಂತ್ರಿ ಬೊಮ್ಮಾಯಿ ಹೆಸರು ಹೇಳದೇ ಲೇವಡಿ ಮಾಡಿದರು.

ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡುವ ಸಂಬಂಧವಾಗಿ ತಾಲ್ಲೂಕಿನ ಕಲ್ಲೋಳಿಯಲ್ಲಿ ಶುಕ್ರವಾರ ನಡೆದ ಬೃಹತ್ ಸಮಾವೇಶದಲ್ಲಿ ಮಾತನಾಡಿದ ಅವರು, ‘ಯಡಿಯೂರಪ್ಪ ಅವರನ್ನು ಕರೆದುಕೊಂಡು ಓಡಾಡಿದರೆ ನೀವು ಕೂಡಾ ಲಾಗಾ ಹಾಕ್ತೀರಿ’ ಎಂದು ಎಚ್ಚರಿಸಿದರು.


‘ಯಡಿಯೂರಪ್ಪ ಪಂಚಮಸಾಲಿ ಸಮುದಾಯದ ವಿರೋಧಿ ಅಲ್ಲದಿದ್ದರೆ ಮೀಸಲಾತಿ ಜಾರಿ ಮಾಡುತ್ತಿದ್ದರು’ ಎಂದೂ ಕಿಡಿ ಕಾರಿದರು.

ಸಾನ್ನಿಧ್ಯ ವಹಿಸಿದ್ದ ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರು, ‘ಅಕ್ಟೋಬರ್ 21ರಂದು ಹುಕ್ಕೇರಿಯಲ್ಲಿ ಅಂತಿಮ ಸಮಾವೇಶ ನಡೆಸಿ, ಅಲ್ಲಿ ದಿನ ನಿರ್ಧರಿಸಲಾಗುವುದು’ ಎಂದರು.

ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಮಾತನಾಡಿ, ‘ಪರಿಶಿಷ್ಟರಿಗೆ ಮೀಸಲಾತಿ ಹೆಚ್ಚಿಸಿದ ರೀತಿಯಲ್ಲೇ ಪಂಚಮಸಾಲಿ ಸಮಾಜಕ್ಕೂ ನೀಡಬೇಕು’ ಎಂದು ಆಗ್ರಹಪಡಿಸಿದರು.

ಮಾಜಿ ಸಚಿವ ಜಬ್ಬಾರಖಾನ್ ಹೊನ್ನಳ್ಳಿ ನಿಧನ

ಹುಬ್ಬಳ್ಳಿ: ಮಾಜಿ ಸಚಿವ ಜಬ್ಬಾರಖಾನ್ ಹೊನ್ನಳ್ಳಿ (80) ಶುಕ್ರವಾರ ನಿಧನರಾದರು.



ಆರೋಗ್ಯದಲ್ಲಿ ಏರುಪೇರಾಗಿದ್ದರಿಂದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಬೆಳಿಗ್ಗೆ 6.45ಕ್ಕೆ ಕೊನೆಯುಸಿರೆಳೆದರು.

ಅವರಿಗೆ ಪತ್ನಿ, ಪುತ್ರ, ಆರು ಪುತ್ರಿಯರಿದ್ದಾರೆ. ನಗರದ ತೊರವಿ ಹಕ್ಕಲದಲ್ಲಿರುವ ಕಬರಸ್ತಾನದಲ್ಲಿ ಹೊನ್ನಳ್ಳಿ ಅವರ ಅಂತ್ಯಕ್ರಿಯೆ ನೆರವೇರಿತು.

ಉರ್ದು ಮಾದರಿ ಬಾಲಕಿಯರ ಶಾಲೆ ಶಿಕ್ಷಕರಾಗಿದ್ದ ಹೊನ್ನಳ್ಳಿ ಅವರು, ಎಸ್.ಆರ್.ಬೊಮ್ಮಾಯಿ ಅವರಿಂದ ಪ್ರಭಾವಿತರಾಗಿ ಜನತಾ ದಳ ಸೇರುವುದರೊಂದಿಗೆ ರಾಜಕೀಯ ಪ್ರವೇಶಿಸಿದ್ದರು. ನಂತರ ರಾಮಕೃಷ್ಣ ಹೆಗಡೆ ಅವರ ಲೋಕಶಕ್ತಿ, ಕಾಂಗ್ರೆಸ್, ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದ ಕೆಜೆಪಿ ಸೇರಿದ್ದರು. ಬಿಎಸ್‌ವೈ ಅವರು ಬಿಜೆಪಿಗೆ ಮರಳಿದ ಬಳಿಕ, ತಟಸ್ಥರಾಗಿ ಉಳಿದಿದ್ದರು.

ನಾಲ್ಕು ಬಾರಿ ಅಂಜುಮನ್ ಸಂಸ್ಥೆಯ ಅಧ್ಯಕ್ಷರೂ ಹಾಗೂ ಎರಡು ಸಲ ಪ್ರಧಾನ ಕಾರ್ಯದರ್ಶಿ ಆಗಿದ್ದರು. 1989–90ರಲ್ಲಿ ಮೊದಲ ಬಾರಿಗೆ ವಿಧಾನ ಪರಿಷತ್ ಸದಸ್ಯರಾಗಿ ನಾಮನಿರ್ದೇಶನಗೊಂಡಿದ್ದರು. ನಂತರ ಕಾಂಗ್ರೆಸ್ ಸೇರಿದ್ದ ಅವರು, ಹುಬ್ಬಳ್ಳಿ ನಗರ ವಿಧಾನಸಭಾ ಕ್ಷೇತ್ರದಿಂದ (ಇಂದಿನ ಪೂರ್ವ ವಿಧಾನಸಭಾ ಕ್ಷೇತ್ರ) ಕಾಂಗ್ರೆಸ್‌ನಿಂದ 1999 ಮತ್ತು 2007ರಲ್ಲಿ ಎರಡು ಸಲ ಗೆದ್ದಿದ್ದರು. ಎನ್.ಧರಂಸಿಂಗ್ ಅವರ ನೇತೃತ್ವದ ಸರ್ಕಾರದಲ್ಲಿ ಯುವಜನ ಮತ್ತು ಕ್ರೀಡಾ ಸಚಿವರಾಗಿದ್ದರು.

ಕ್ಷೇತ್ರ ವ್ಯಾಪ್ತಿಯಲ್ಲಿ ಎಸ್.ಎಂ.ಕೃಷ್ಣ ನಗರ, ಸೋನಿಯಾಗಾಂಧಿ ನಗರ, ಬೀಡಿ ಕಾರ್ಮಿಕರ ನಗರ ನಿರ್ಮಾಣಕ್ಕೆ ಶ್ರಮಿಸಿದ್ದು, ಬಡವರಿಗೆ ಆಶ್ರಯ ಯೋಜನೆಯಡಿ ಹೆಚ್ಚಿನ ಮನೆಗಳ ಸೌಲಭ್ಯ ಒದಗಿಸಿದ್ದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	123.72	5,484	2,349
ಹಾರಂಗಿ	2,859	2,854.08	896	1,800
ಕಬಿನಿ	2,284	2,282.15	975	1,550
ಹೇಮಾವತಿ	2,922	2,921.45	2,903	3,067
ಲಿಂಗನಮಕ್ಕಿ	1,819	1,815	2,219	7,018
ಸೂಪಾ (ಮೀ)	564	553.68	1,092	2,356
ಮಾಣಿ	594	590	188	751
ತುಂಗಭದ್ರಾ	1,633	1,632.98	35,226	28,777
ಮಲಪ್ರಭಾ	2,079.50	2,079.50	1,794	1,794
ಘಟಪ್ರಭಾ	2,175	2,174.61	1,873	2,207
ಭದ್ರಾ	186	185	3,617	897
ಆಲಮಟ್ಟಿ (ಮೀ)	519.60	519.60	13,951	13,951
ನಾರಾಯಣಪುರ (ಮೀ)	492.25	492.13	25,000	41,000

* ನೆಲಮಟ್ಟದಿಂದ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಡಿಎಂಕೆ ಅಧ್ಯಕ್ಷರಾಗಿ 2ನೇ ಅವಧಿಗೆ ಸ್ಟಾಲಿನ್ ಆಯ್ಕೆ?

ಚೆನ್ನೈ: ತಮಿಳುನಾಡಿನ ಆಡಳಿತಾರೂಢ ದ್ರಾವಿಡ ಮುನ್ನೇತ್ರ ಕಳಗಂ (ಡಿಎಂಕೆ) ಪಕ್ಷದ ಸಾಮಾನ್ಯ ಸಭೆ ಭಾನುವಾರ (ಅ.9) ನಡೆಯಲಿದ್ದು, ಪಕ್ಷದ ಅಧ್ಯಕ್ಷರಾಗಿ ಎರಡನೇ ಅವಧಿಗೆ ಎಂ.ಕೆ.ಸ್ಟಾಲಿನ್ ಅವರು ಅವಿರೋಧವಾಗಿ ಆಯ್ಕೆಯಾಗುವುದು ಬಹುತೇಕ ಖಚಿತವಾಗಿದೆ.

ಪಕ್ಷದ ಹಿರಿಯ ನಾಯಕರಾದ ದೊರೈ ಮುರುಗನ್ ಮತ್ತು ಟಿ.ಆರ್. ಬಾಲು ಕ್ರಮವಾಗಿ ಪಕ್ಷದ ಪ್ರಧಾನ ಕಾರ್ಯದರ್ಶಿ ಮತ್ತು ಖಜಾಂಚಿಯಾಗಿ ಅವಿರೋಧವಾಗಿ ಆಯ್ಕೆಯಾಗಲಿದ್ದಾರೆ. ಮೂವರೂ ಪಕ್ಷದ ಸಂಘಟನಾ ಕಾರ್ಯದರ್ಶಿ ಆರ್.ಎಸ್. ಭಾರತಿ ಅವರಿಗೆ ಶುಕ್ರವಾರ ತಮ್ಮ ನಾಮಪತ್ರಗಳನ್ನು ಸಲ್ಲಿಸಿದ್ದು, ಪ್ರತಿ ಹುದ್ದೆಗೂ ಒಬ್ಬ ಅಭ್ಯರ್ಥಿಯೇ ಸ್ಪರ್ಧಿಸುತ್ತಿರುವುದರಿಂದ ಚುನಾವಣೆ ನಡೆಯುವುದಿಲ್ಲ. 2018ರ ಆಗಸ್ಟ್ 7ರಂದು ಸ್ಟಾಲಿನ್ ಅವರ ತಂದೆ ಎಂ. ಕರುಣಾನಿಧಿ ಅವರು ನಿಧನರಾದ ಬಳಿಕ ಅದೇ ವರ್ಷ ಆಗಸ್ಟ್ 28ರಂದು ಡಿಎಂಕೆ ಅಧ್ಯಕ್ಷರಾಗಿ ಮೊದಲ ಅವಧಿಗೆ ಸ್ಟಾಲಿನ್ ಆಯ್ಕೆಯಾಗಿದ್ದರು.

ನ್ಯಾಷನಲ್ ಹೆರಾಲ್ಡ್ ಹಣ ಅಕ್ರಮ ವರ್ಗಾವಣೆ ಪ್ರಕರಣದ ಇ.ಡಿ ತನಿಖೆ

ಡಿ.ಕೆ. ಸೋದರರ ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದ ಭಾಗವಾಗಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಅವರ ಸೋದರ ಮತ್ತು ಸಂಸದ ಡಿ.ಕೆ.ಸುರೇಶ್ ಅವರನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಶುಕ್ರವಾರ ಇಲ್ಲಿ ವಿಚಾರಣೆಗೆ ಒಳಪಡಿಸಿತು. ಕಾಂಗ್ರೆಸ್‌ನ 'ಭಾರತ್ ಜೋಡೊ' ಯಾತ್ರೆ ಈಗ ಕರ್ನಾಟಕದಲ್ಲಿ ನಡೆಯುತ್ತಿದ್ದು, ಯಾತ್ರೆಯ ಮಧ್ಯೆಯೇ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರನ್ನು ಇ.ಡಿ ವಿಚಾರಣೆಗೆ ಒಳಪಡಿಸಿದೆ.

ಇಲ್ಲಿನ ಇ.ಡಿ ಕಚೇರಿಗೆ ಸೋದರರಿಬ್ಬರೂ ಬೆಳಿಗ್ಗೆ 10.30ರ ವೇಳೆಗೆ ಬಂದರು. ಇ.ಡಿ ಅಧಿಕಾರಿಗಳು ಇಬ್ಬರನ್ನು ಪ್ರತ್ಯೇಕವಾಗಿ ಐದು ತಾಸುಗಳವರೆಗೆ ವಿಚಾರಣೆ ನಡೆಸಿದರು.

ನ್ಯಾಷನಲ್ ಹೆರಾಲ್ಡ್‌ನ ಮಾತೃ ಸಂಸ್ಥೆಯಾದ ಯಂಗ್ ಇಂಡಿಯನ್ ಲಿಮಿಟೆಡ್‌ಗೆ ತಾವು ನೀಡಿರುವ ದೇಣಿಗೆ ಕುರಿತು ತನಿಖಾಧಿಕಾರಿಗಳು ಪ್ರಶ್ನೆ ಕೇಳಿದರು ಎಂದು ಶಿವಕುಮಾರ್ ಮತ್ತು ಸುರೇಶ್ ಹೇಳಿದ್ದಾರೆ.

'ಈ ವರ್ಷ ಯಂಗ್ ಇಂಡಿಯನ್ ಕಂಪನಿಗೆ ನಾವು ಸ್ವಲ್ಪ ದೇಣಿಗೆ ನೀಡಿದ್ದೆವು. ಅದರ ಮಾಹಿತಿಯನ್ನು ಅಧಿಕಾರಿಗಳು ಕೇಳಿದರು. ಜತೆಗೆ ಹತ್ತು ವರ್ಷಗಳಲ್ಲಿ ನಾವು ಮತ್ತು ನಮ್ಮ ಕುಟುಂಬದವರು ನಡೆಸಿರುವ ಹಣ ವರ್ಗಾವಣೆಗೆ ಸಂಬಂಧಿಸಿದ ಮಾಹಿತಿ ನೀಡುವಂತೆ ಸೂಚಿಸಿದ್ದಾರೆ. ಇ–ಮೇಲ್ ಮೂಲಕ ಆ ಮಾಹಿತಿಯನ್ನು ಸಲ್ಲಿಸುತ್ತೇನೆ' ಎಂದು ಹೇಳಿದರು.

ಡಿ.ಕೆ.ಸುರೇಶ್ ಅವರು, 'ನಾನು ಈ ವರ್ಷ ಯಂಗ್ ಇಂಡಿಯನ್ ಕಂಪನಿಗೆ ₹25 ಲಕ್ಷ ದೇಣಿಗೆ ನೀಡಿದ್ದೇನೆ. ಆ ಕಂಪನಿಗೆ ನೀಡುವ ದೇಣಿಗೆಗೆ ತೆರಿಗೆ ವಿನಾಯಿತಿ ರದ್ದುಪಡಿಸಲಾಗಿದೆ. ಹೀಗಿದ್ದೂ ದೇಣಿಗೆ ಹೇಗೆ ನೀಡಿದಿರಿ ಎಂದು ನನ್ನನ್ನು ಅಧಿಕಾರಿಗಳು ಪ್ರಶ್ನಿಸಿದರು. ವಿನಾಯಿತಿ ರದ್ದಾಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ವರ್ಷ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವಾಗ ತೆರಿಗೆ ವಿನಾಯಿತಿ ಕೇಳುವುದಿಲ್ಲ ಎಂದು ಅವರಿಗೆ ಹೇಳಿದೆ' ಎಂದು ಮಾಹಿತಿ ನೀಡಿದರು.

ಮುಖ್ಯಾಂಶಗಳು

- ಭಾರತ್ ಜೋಡೊ ಯಾತ್ರೆಯ ಮಧ್ಯೆಯೇ ಇ.ಡಿ. ವಿಚಾರಣೆ
- ದೇಣಿಗೆ ಸಂಬಂಧ ಮಾಹಿತಿ ಕೇಳಿರುವ ಇ.ಡಿ ಅಧಿಕಾರಿಗಳು
- ಸೋದರರ 10 ವರ್ಷಗಳ ಹಣ ವರ್ಗಾವಣೆ ಮಾಹಿತಿ ನೀಡಲು ಸೂಚನೆ

ನಾವು ಕಾನೂನು ಪಾಲಿಸುವ ಜನ. ಅಗತ್ಯಬಿದ್ದರೆ ಮತ್ತೆ ವಿಚಾರಣೆಗೆ ಕರೆಸುತ್ತೇವೆ ಎಂದು ಅಧಿಕಾರಿಗಳು ಹೇಳಿದ್ದಾರೆ. ವಿಚಾರಣೆಗೆ ಹಾಜರಾಗಲು ನಾವೂ ಒಪ್ಪಿದ್ದೇವೆ

ಡಿ.ಕೆ.ಶಿವಕುಮಾರ್, ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ

'ತನಿಖೆ ಎದುರಿಸಲು ಸಿದ್ಧ'

ನವದೆಹಲಿ: ಇಂಧನ ಇಲಾಖೆಗೆ ಸಂಬಂಧಿಸಿದ ಯಾವುದೇ ತನಿಖೆ ಎದುರಿಸಲು ಸಿದ್ಧ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಶುಕ್ರವಾರ ಹೇಳಿದ್ದಾರೆ.

ಸಿದ್ದರಾಮಯ್ಯ ಅವರ ಸರ್ಕಾರದ ಅವಧಿಯಲ್ಲಿ ಡಿ.ಕೆ.ಶಿವಕುಮಾರ್ ಅವರು ಇಂಧನ ಸಚಿವರಾಗಿದ್ದಾಗ ನಡೆದಿದ್ದ ಸೌರವಿದ್ಯುತ್ ಉತ್ಪಾದನಾ ಘಟಕಗಳ ಹಂಚಿಕೆ ಪ್ರಕ್ರಿಯೆ ಕುರಿತು ಕರ್ನಾಟಕದ ಬಿಜೆಪಿ ಸರ್ಕಾರ ನ್ಯಾಯಾಂಗ ತನಿಖೆಗೆ ಆದೇಶಿಸಲಿದೆ ಎಂಬ ಪತ್ರಿಕಾ ವರದಿಗೆ ಅವರು ಪ್ರತಿಕ್ರಿಯಿಸಿದರು.

'ನ್ಯಾಯಾಂಗ ತನಿಖೆ ಯಾಕೆ?, ರಾಜ್ಯ ಸರ್ಕಾರ ಸಿಬಿಐ ತನಿಖೆಗೆ ಒಪ್ಪಿಸಲಿ. ಎದುರಿಸಲು ನಾನು ಸಿದ್ಧನಿದ್ದೇನೆ' ಎಂದು ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯದ ವಿಚಾರಣೆಗೆ ಹಾಜರಾಗಲು ದೆಹಲಿಗೆ ಬಂದಿರುವ ಶಿವಕುಮಾರ್ ಅವರು ಹೇಳಿದ್ದಾರೆ.

'ನಾನು ಇಂಧನ ಸಚಿವನಾಗಿದ್ದಾಗ ನವೀಕರಿಸಬಹುದಾದ ಇಂಧನ ವಲಯದಲ್ಲಿ ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದೇನೆ. ಈ ಯೋಜನೆಗಳು ಕೇಂದ್ರ ಸರ್ಕಾರದ ಪ್ರಶಂಸೆಗೂ ಪಾತ್ರವಾಗಿವೆ' ಎಂದೂ ತಿಳಿಸಿದ್ದಾರೆ.

'ಕರ್ನಾಟಕದ ಬಿಜೆಪಿ ಸರ್ಕಾರವು ವಿವಿಧ ಯೋಜನೆಗಳ ಅನುಷ್ಠಾನದಲ್ಲಿ ಹೇಗೆ ಭ್ರಷ್ಟಾಚಾರ ನಡೆಸಿದೆ ಎಂಬುದು ನಮಗೆ ತಿಳಿದಿದೆ. ಅದನ್ನು ಮುಚ್ಚಿ ಹಾಕಲು ಹಿಂದಿನ ಸರ್ಕಾರದ ಅವಧಿಯಲ್ಲಿ ಅನುಷ್ಠಾನಗೊಂಡಿರುವ ಯೋಜನೆಗಳ ತನಿಖೆ ನಡೆಸುತ್ತಿದೆ' ಎಂದು ಅವರು ಹೇಳಿದ್ದಾರೆ.

ಎಲ್ಸ್, ಎರಡು ಸಂಘಟನೆಗಳಿಗೆ ನೊಬೆಲ್ ಶಾಂತಿ ಪುರಸ್ಕಾರ

ಓಸ್ಲೋ (ಎಪಿ): ಈ ವರ್ಷದ ನೊಬೆಲ್ ಶಾಂತಿ ಪುರಸ್ಕಾರವು ಬೆಲರೂಸ್‌ನ ಮಾನವ ಹಕ್ಕುಗಳ ಹೋರಾಟಗಾರ ಎಲ್ಸ್ ಬಿಯಾಲಿಯಾಸ್ಕಿ, ರಷ್ಯಾದ 'ಮೆಮೋರಿಯಲ್' ಮತ್ತು ಉಕ್ರೇನ್‌ನ 'ಸೆಂಟರ್ ಫಾರ್ ಸಿವಿಲ್ ಲಿಬರ್ಟೀಸ್' ಸಂಘಟನೆಗಳಿಗೆ ಒಲಿದಿದೆ.



ಎಲ್ಸ್ ಬಿಯಾಲಿಯಾಸ್ಕಿ

ಮಾನವ ಹಕ್ಕುಗಳ ರಕ್ಷಣೆಗಾಗಿ ಹೋರಾಟ ನಡೆಸಿರುವ ಎಲ್ಸ್ ಬಿಯಾಲಿಯಾಸ್ಕಿ ಅವರು ಜೈಲು ಶಿಕ್ಷೆಗೂ ಒಳಗಾಗಿದ್ದರು.

ಸಂಘರ್ಷ ನಿಲ್ಲಿಸಲು ಮತ್ತು ಮಾನವ ಹಕ್ಕುಗಳ ರಕ್ಷಣೆಗಾಗಿ ಹೋರಾಟ ನಡೆಸಿದ ಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳಿಗೆ ಈ ಹಿಂದೆಯೂ ಈ ಪುರಸ್ಕಾರವನ್ನು ನೀಡಲಾಗಿತ್ತು. ಉಭಯ ದೇಶಗಳ ನಡುವೆ ಯುದ್ಧ ನಡೆಯುತ್ತಿರುವ ಈ ಸಂದರ್ಭದಲ್ಲಿ, ರಷ್ಯಾ ಮತ್ತು ಉಕ್ರೇನ್‌ನ ಸಂಘಟನೆಗಳು ಹಾಗೂ ಬೆಲರೂಸ್‌ನ ಎಲ್ಸ್ ಅವರನ್ನು ಈ ಪುರಸ್ಕಾರಕ್ಕೆ ಆಯ್ಕೆ ಮಾಡಿದ್ದಕ್ಕೆ ಮಹತ್ವ ಬಂದಿದೆ.

ಅರ್ಥಶಾಸ್ತ್ರ ವಿಭಾಗದಲ್ಲಿ ನೊಬೆಲ್ ಪುರಸ್ಕಾರಕ್ಕೆ ಆಯ್ಕೆಯಾದವರ ಹೆಸರನ್ನು ಅಕ್ಟೋಬರ್ 10ರಂದು ಘೋಷಿಸಲಾಗುವುದು ಎಂದು ನೊಬೆಲ್ ಸಮಿತಿಯ ಅಧ್ಯಕ್ಷ ಬೆರಿಟ್ ರೀಸ್-ಆಂಡರ್ಸನ್ ಅವರು ಶುಕ್ರವಾರ ತಿಳಿಸಿದ್ದಾರೆ.

ಉಕ್ರೇನ್ ಮೇಲೆ ರಷ್ಯಾ ಯುದ್ಧ ಆರಂಭಿಸಿದ ನಂತರದ ದಿನಗಳಲ್ಲಿ ಕಂಡು ಬಂದ ಮಾನವ ಹಕ್ಕುಗಳ ಉಲ್ಲಂಘನೆ, ಅಧಿಕಾರ ದುರುಪಯೋಗವನ್ನು ದಾಖಲಿಸುವ ನಿಟ್ಟಿನಲ್ಲಿ ಎಲ್ಸ್, 'ಮೆಮೋರಿಯಲ್' ಹಾಗೂ 'ಸೆಂಟರ್ ಫಾರ್ ಸಿವಿಲ್ ಲಿಬರ್ಟೀಸ್'ನ ಕಾರ್ಯ ಗಮನಾರ್ಹವಾದುದು ಎಂದು ಬೆರಿಟ್ ಹೇಳಿದ್ದಾರೆ.

ಮುಖ್ಯಾಂಶಗಳು

- ಜೈಲು ಶಿಕ್ಷೆಗೆ ಒಳಗಾಗಿದ್ದ ಎಲ್ಸ್ ಬಿಯಾಲಿಯಾಸ್ಕಿ
- ಮಾನವ ಹಕ್ಕುಗಳ ರಕ್ಷಣೆಗಾಗಿ ಹೋರಾಟ

ನೆಚ್ಚಿನ ಸ್ಪರ್ಧಿಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದ ಭಾರತೀಯರು: ಆಲ್ಟ್ ನ್ಯೂಸ್ ಸಹ ಸಂಸ್ಥಾಪಕರಾದ ಪ್ರತೀಕ್ ಸಿನ್ಹಾ ಮತ್ತು ಮೊಹಮ್ಮದ್ ಜುಬೈರ್ ಹಾಗೂ ಭಾರತದ ಲೇಖಕ ಹರ್ಷ ಮಂದರ್ ಅವರು ಈ ವರ್ಷದ ನೊಬೆಲ್ ಶಾಂತಿ ಪುರಸ್ಕಾರ ಪಡೆಯುವ ನೆಚ್ಚಿನ ಸ್ಪರ್ಧಿಗಳೆನಿಸಿದ್ದರು. ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯಲ್ಲಿ ಇವರ ಹೆಸರುಗಳಿದ್ದವು.

ದಿ ಪೀಸ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಓಸ್ಲೊ (ಪಿಆರ್‌ಐಒ) ನಿರ್ದೇಶಕ ಹೆನ್ರಿಕ್ ಉರ್ದಾಲ್ ಬಿಡುಗಡೆ ಮಾಡಿರುವ ಸಂಭಾವ್ಯರ ಪಟ್ಟಿಯಲ್ಲಿ ಜುಬೈರ್, ಪ್ರತೀಕ್ ಹಾಗೂ ಮಂದರ್ ಅವರ ಹೆಸರುಗಳಿದ್ದವು. ಜೊತೆಗೆ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಜೆಲೆನ್‌ಸ್ಕಿ, ವಿಶ್ವ ಸಂಸ್ಥೆಯ ನಿರಾಶ್ರಿತರ ಏಜೆನ್ಸಿ, ಬೆಲರೂಸ್‌ನ ಹೋರಾಟಗಾರ್ತಿ ಸ್ವಿಯಾಟ್ಲಾನಾ ಸಿಖಾನೌಸ್ಕಾಯ, ಡಬ್ಲ್ಯುಎಚ್‌ಒ, ರಷ್ಯಾದ ಪ್ರತಿಪಕ್ಷ ನಾಯಕ ಅಲೆಕ್ಸಿ ನವಲ್ನಿ, ಸ್ವೀಡನ್‌ನ ಪರಿಸರ ಹೋರಾಟಗಾರ್ತಿ ಗ್ರೆತಾ ಥನ್‌ಬರ್ಗ್ ಅವರ ಹೆಸರುಗಳೂ ಮುಂಚೂಣಿಯಲ್ಲಿದ್ದವು.

'ಟಿಪ್ಪು' ಎಕ್ಸ್‌ಪ್ರೆಸ್ ಇನ್ನು 'ಒಡೆಯರ್' ಎಕ್ಸ್‌ಪ್ರೆಸ್

ಮೈಸೂರು: ಮೈಸೂರು– ಬೆಂಗಳೂರು ನಡುವೆ ಸಂಚರಿಸುತ್ತಿರುವ 'ಟಿಪ್ಪು ಎಕ್ಸ್‌ಪ್ರೆಸ್' ರೈಲಿನ ಹೆಸರನ್ನು 'ಒಡೆಯರ್ ಎಕ್ಸ್‌ಪ್ರೆಸ್' ಎಂದು ಬದಲಾಯಿಸಿ ಕೇಂದ್ರ ರೈಲ್ವೆ ಮಂಡಳಿ ಶುಕ್ರವಾರ ಆದೇಶ ಹೊರಡಿಸಿದೆ.

ಅಂತೆಯೇ ಮೈಸೂರು– ತಾಳಗುಪ್ಪ ಎಕ್ಸ್‌ಪ್ರೆಸ್ ರೈಲಿಗೆ 'ಕುವೆಂಪು ಎಕ್ಸ್‌ಪ್ರೆಸ್' ಎಂದು ನಾಮಕರಣ ಮಾಡಿರುವುದಾಗಿ ಮಂಡಳಿಯ ಉಪನಿರ್ದೇಶಕ ರಾಜೇಶ್ ಕುಮಾರ್ ನೈರುತ್ಯ ರೈಲ್ವೆ ವ್ಯವಸ್ಥಾಪಕರಿಗೆ ಪತ್ರ ಬರೆದಿದ್ದಾರೆ. ಈ ಕುರಿತ ಮಾಹಿತಿಯನ್ನು ಸಂಸದ ಪ್ರತಾಪಸಿಂಹ ಅವರು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ.

ಹೆಸರು ಬದಲಾವಣೆ; ಸಿದ್ದರಾಮಯ್ಯ ಕಿಡಿ

ಮಂಡ್ಯ: ಟಿಪ್ಪು ಎಕ್ಸ್‌ಪ್ರೆಸ್ ರೈಲಿನ ಹೆಸರು ಬದಲಾವಣೆ ಕುರಿತು ವಿಧಾನಸಭೆ ವಿರೋಧಪಕ್ಷದ ಮುಖಂಡ ಸಿದ್ದರಾಮಯ್ಯ ಶುಕ್ರವಾರ ರಾಜ್ಯ, ಕೇಂದ್ರ ಸರ್ಕಾರಗಳ ವಿರುದ್ಧ ಕಿಡಿಕಾರಿದರು. ಆದಿಚುಂಚನಗಿರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು 'ಒಡೆಯರ್ ಹೆಸರಿಟ್ಟಿರುವುದು ತಪ್ಪಲ್ಲ. ಆದರೆ ಬೇರೆ ರೈಲುಗಳೇ ಇರಲಿಲ್ಲವೇ? ಎಂದರು.

ಯುಪಿಎಸ್‌ಸಿಯಿಂದ ಮೊಬೈಲ್ ಅಪ್ಲಿಕೇಷನ್

ನವದೆಹಲಿ (ಪಿಟಿಐ): ಸ್ಪರ್ಧಾತ್ಮಕ ಪರೀಕ್ಷೆ ಮತ್ತು ನೇಮಕಾತಿಗೆ ಸಂಬಂಧಿಸಿದಂತೆ ವಿವಿಧ ಮಾಹಿತಿಗಳಿಗಾಗಿ ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) ಆ್ಯಂಡ್ರಾಯ್ಡ್ ಮೊಬೈಲ್ ಅಪ್ಲಿಕೇಷನ್ ಅನ್ನು ರೂಪಿಸಿದೆ. ಇದು, ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಲಭ್ಯವಿದೆ.

ಆದರೆ, ಈ ಅಪ್ಲಿಕೇಷನ್ ಅನ್ನು ಬಳಕೆ ಮಾಡುವ ಮೂಲಕ ಪರೀಕ್ಷೆಯ ಅರ್ಜಿ ನಮೂನೆಯನ್ನು ಭರ್ತಿ ಮಾಡಲಾಗದು ಎಂದು ಯುಪಿಎಸ್‌ಸಿ ಸ್ಪಷ್ಟಪಡಿಸಿದೆ.

ಐಎಎಸ್, ಐಪಿಎಸ್, ಐಎಫ್‌ಎಸ್ ಒಳಗೊಂಡಂತೆ ಕೇಂದ್ರ ನಾಗರಿಕ ಸೇವೆ ಹುದ್ದೆಗಳು ಒಳಗೊಂಡಂತೆ ಕೇಂದ್ರ ಸರ್ಕಾರದ ವಿವಿಧ ಹುದ್ದೆಗಳಿಗೆ ಅನ್ವಯಿಸಿ ವಿವಿಧ ನೇಮಕಾತಿ ಪರೀಕ್ಷೆಗಳನ್ನು ಯುಪಿಎಸ್ ನಡೆಸಲಿದೆ.

ಮುಂಬೈ, ಗುಜರಾತ್‌ನಲ್ಲಿ ಎನ್‌ಸಿಬಿ ದಾಳಿ

₹120 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಮುಂಬೈ (ಪಿಟಿಐ): ಮುಂಬೈ ಮತ್ತು ಗುಜರಾತ್‌ನ ವಿವಿಧೆಡೆ ದಾಳಿ ನಡೆಸಿರುವ ರಾಷ್ಟ್ರೀಯ ಮಾದಕವಸ್ತು ನಿಯಂತ್ರಣ ಘಟಕದ (ಎನ್‌ಸಿಬಿ) ಅಧಿಕಾರಿಗಳು ₹120 ಕೋಟಿ ಮೌಲ್ಯದ ಮೆಫೆಡ್ರೋನ್ ಹೆಸರಿನ 60 ಕೆ.ಜಿ. ಡ್ರಗ್ಸ್ ವಶಪಡಿಸಿಕೊಂಡಿದ್ದಾರೆ.

ಅಂತರರಾಜ್ಯ ಡ್ರಗ್ಸ್ ಪೂರೈಕೆ ಜಾಲಕ್ಕೆ ಸಂಬಂಧಿಸಿದಂತೆ ಏರ್ ಇಂಡಿಯಾದ ಮಾಜಿ ಪೈಲಟ್ ಒಳಗೊಂಡಂತೆ ಆರು ಜನರನ್ನು ಎನ್‌ಸಿಬಿ ಅಧಿಕಾರಿಗಳು ಬಂಧಿಸಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನೌಕಾಪಡೆಯ ಗುಜರಾತ್‌ನ ಗುಪ್ತಚರ ವಿಭಾಗಕ್ಕೆ ಬಂದ ಖಚಿತ ಮಾಹಿತಿಯನ್ನು ಆಧರಿಸಿ ದಾಳಿ ನಡೆಸಲಾಯಿತು ಎಂದು ಎನ್‌ಸಿಬಿಯ ಉಪ ಮಹಾನಿರ್ದೇಶಕ ಸಂಜಯ್ ಸಿಂಗ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಜಾಲ ವಿವಿಧ ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಎನ್‌ಸಿಬಿ ತಂಡ ಜಾಮ್‌ನಗರದಲ್ಲಿ ಒಬ್ಬನನ್ನು ಬಂಧಿಸಿ 10 ಕೆ.ಜಿ ಮೆಫೆಡ್ರೋನ್ ವಶಕ್ಕೆ ಪಡೆದಿದ್ದು, ಮುಂಬೈನಲ್ಲಿ ಮೂವರನ್ನು ಬಂಧಿಸಲಾಗಿದೆ. ಗುರುವಾರ ದಕ್ಷಿಣ ಮುಂಬೈನ ಎಸ್.ಬಿ.ರಸ್ತೆಯಲ್ಲಿನ ಗೋದಾಮಿನ ಮೇಲೆ ದಾಳಿ ನಡೆಸಿ ಮತ್ತೆ 50 ಕೆ.ಜಿ. ಮೆಫೆಡ್ರೋನ್ ವಶಕ್ಕೆ ಪಡೆದಿದ್ದು, ಇಬ್ಬರನ್ನು ಬಂಧಿಸಲಾಗಿದೆ ಎಂದು ವಿವರಿಸಿದರು.

ಆರೋಪಿಯಲ್ಲಿ ಒಬ್ಬನು ಏರ್ ಇಂಡಿಯಾಗೆ ಕೆಳಹಂತದ ಸಿಬ್ಬಂದಿಯಾಗಿ ಸೇರಿದ್ದು, ಬಳಿಕ ಪೈಲಟ್ ಕೋರ್ಸ್ ಮಾಡಿಕೊಂಡು 2016ರಿಂದ 2018ರ ಅವಧಿಯಲ್ಲಿ ಪೈಲಟ್ ಆಗಿ ಕಾರ್ಯನಿರ್ವಹಿಸಿದ್ದ. ಟೆಕ್ಸಾಸ್‌ನ ಸ್ಯಾನ್ ಆ್ಯಂಟನಿಯೊದಲ್ಲಿ ತರಬೇತಿಯನ್ನೂ ಪಡೆದಿದ್ದ. ಆರೋಗ್ಯಕ್ಕೆ ಸಂಬಂಧಿಸಿದ ಕಾರಣಗಳಿಗೆ ಕೆಲಸವನ್ನು ಬಿಟ್ಟ ಬಳಿಕ ಈ ದಂಧೆಯನ್ನು ಆರಂಭಿಸಿದ್ದ ಎಂದು ವಿವರಿಸಿದರು.

ಈ ಜಾಲದ ಮೂಲಕ ಆರೋಪಿಗಳು ಇದುವರೆಗೂ ವಿವಿಧ ರಾಜ್ಯಗಳಿಗೆ ಸುಮಾರು 225 ಕೆ.ಜಿ. ಮೆಫೆಡ್ರೋನ್ ಸರಬರಾಜು ಮಾಡಿರುವ ಕುರಿತ ಮಾಹಿತಿ ತನಿಖೆಯಿಂದ ತಿಳಿದುಬಂದಿದೆ ಎಂದು ಅಧಿಕಾರಿ ವಿವರಿಸಿದರು.

ಇಂದು 25 ಸಾವಿರ ಕೆ.ಜಿ ಡ್ರಗ್ಸ್ ನಾಶ: ಎನ್‌ಸಿಬಿ

ಗುವಾಹಟಿ (ಪಿಟಿಐ): ರಾಷ್ಟ್ರೀಯ ಮಾದಕವಸ್ತು ನಿಯಂತ್ರಣ ಘಟಕ (ಎನ್‌ಸಿಬಿ) ವಿವಿಧ ಸಂದರ್ಭಗಳಲ್ಲಿ ವಶಪಡಿಸಿಕೊಂಡಿದ್ದ 25 ಸಾವಿರ ಕೆ.ಜಿ ಡ್ರಗ್ಸ್‌ಅನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಉಪಸ್ಥಿತಿಯಲ್ಲಿ ಶನಿವಾರ ನಾಶಪಡಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈಶಾನ್ಯ ವಲಯದಲ್ಲಿ ಡ್ರಗ್ಸ್ ಕುರಿತ ಸ್ಥಿತಿಗತಿ ಮತ್ತು ಅದಕ್ಕೆ ಕಡಿವಾಣ ಹಾಕಬೇಕಾದ ಕ್ರಮಗಳಿಗೆ ಸಂಬಂಧಿಸಿ ಶನಿವಾರ ನಡೆಯುವ 'ಮಾದಕವಸ್ತು ಸಾಗಣೆ ಮತ್ತು ರಾಷ್ಟ್ರೀಯ ಭದ್ರತೆ' ಕುರಿತ ಪ್ರಾದೇಶಿಕ ಸಭೆಯ ಅಧ್ಯಕ್ಷತೆಯನ್ನು ಶಾ ವಹಿಸುವರು ಎಂದು ತಿಳಿಸಿದ್ದಾರೆ.

ಈಶಾನ್ಯ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಪೊಲೀಸ್ ಮಹಾನಿರ್ದೇಶಕರು ಸಭೆಯಲ್ಲಿ ಭಾಗವಹಿಸುವರು. ಎನ್‌ಸಿಬಿ ಶನಿವಾರ ಇಲ್ಲಿ ಸುಮಾರು 11 ಸಾವಿರ ಕೆ.ಜಿ ಮಾದಕವಸ್ತುಗಳನ್ನು ನಾಶಪಡಿಸಲು ಉದ್ದೇಶಿಸಿದೆ ಎಂದು ವಿವರಿಸಿದ್ದಾರೆ.

ತಾರತಮ್ಯಕ್ಕೆ ಅವಕಾಶ ನೀಡುವ ವ್ಯವಸ್ಥೆ ತೊಲಗಬೇಕು: ಮೋಹನ್ ಭಾಗವತ್

ನಾಗ್ಪುರ (ಪಿಟಿಐ): ವರ್ಣ, ಜಾತಿ.. ಹೀಗೆ ತಾರತಮ್ಯಕ್ಕೆ ಅವಕಾಶ ನೀಡುವ ಪ್ರತಿಯೊಂದು ವ್ಯವಸ್ಥೆ ಸಹ ಸಮಾಜದಿಂದ ತೊಲಗಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಅಭಿಪ್ರಾಯಪಟ್ಟಿದ್ದಾರೆ.

ಶುಕ್ರವಾರ ಇಲ್ಲಿ ಪುಸ್ತಕ ಬಿಡುಗಡೆ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಜಾತಿ ವ್ಯವಸ್ಥೆಗೆ ಸದ್ಯ ಯಾವುದೇ ಪ್ರಸ್ತುತತೆ ಇಲ್ಲ. ಸಾಮಾಜಿಕ ಸಮಾನತೆ ಭಾರತೀಯ ಸಂಪ್ರದಾಯದ ಭಾಗವಾಗಿತ್ತು. ಇದನ್ನು ಮರೆತ ಪರಿಣಾಮ ಸಮಾಜದ ಮೇಲೆ ದುಷ್ಪರಿಣಾಮ ಉಂಟಾಗಿದೆ. ಮೂಲತಃ ವರ್ಣ ಮತ್ತು ಜಾತಿ ವ್ಯವಸ್ಥೆ ತಾರತಮ್ಯವನ್ನು ಹೊಂದಿಲ್ಲ ಎಂದು ಹೇಳಿದರು.

'ಈಗಲೂ ಈ ವರ್ಣ ಮತ್ತು ಜಾತಿ ಬಗ್ಗೆ ಯಾರಾದರೂ ಕೇಳಿದರೆ, 'ಅದು ಭೂತಕಾಲ, ಮರೆತುಬಿಡೋಣ' ಎಂದು ಉತ್ತರಿಸಬೇಕು. ತಾರತಮ್ಯ ಮಾಡುವ ಎಲ್ಲಾ ವ್ಯವಸ್ಥೆಯೂ ತೊಲಗಬೇಕು. ಈ ಹಿಂದಿನ ಪೀಳಿಗೆ ಎಲ್ಲೆಡೆ ತಪ್ಪು ಮಾಡಿದೆ, ಅದಕ್ಕೆ ಭಾರತ ಸಹ ಹೊರತಾಗಿಲ್ಲ. ಅಂತಹ ತಪ್ಪುಗಳನ್ನು ಒಪ್ಪಿಕೊಳ್ಳುವುದಲ್ಲಿ ಸಮಸ್ಯೆ ಇಲ್ಲ' ಎಂದರು.

ರತನ್ ಟಾಟಾಗೆ ಸೇವಾ ರತ್ನ ಪ್ರಶಸ್ತಿ

ನವದೆಹಲಿ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಂಗಸಂಸ್ಥೆ ಸೇವಾ ಭಾರತಿಯು ಉದ್ಯಮಿ ರತನ್ ಟಾಟಾ ಮತ್ತು ಚಲಸಾನಿ ಬಾಬು ರಾಜೇಂದ್ರ ಪ್ರಸಾದ್ ಅವರಿಗೆ 'ಸೇವಾ ರತ್ನ' ಪ್ರಶಸ್ತಿ ನೀಡಿ ಗೌರವಿಸಿತು. ಇವರ ಪರೋಪಕಾರ ಗುಣವನ್ನು ಗುರುತಿಸಿ ಈ ಗೌರವ ನೀಡಲಾಯಿತು. ಇವರ ಜತೆಗೆ ಇತರ 24 ಮಂದಿಗೂ ಈ ಪ್ರಶಸ್ತಿ ನೀಡಿ ಗೌರವಿಸಲಾಯಿತು. ರತನ್ ಟಾಟಾ ಕಾರ್ಯಕ್ರಮದಲ್ಲಿ ಭಾಗಿಯಾಗಲು ಸಾಧ್ಯವಾಗಿರಲಿಲ್ಲ.

ಸಂಕ್ಷಿಪ್ತ ಸುದ್ದಿ

ಹಿಮಪಾತ ಮತ್ತೆ 10 ಮೃತದೇಹ ಪತ್ತೆ

ಉತ್ತರಕಾಶಿ: ಇಲ್ಲಿನ ದ್ರೌಪದಿ ಕಾ ದಂಡ ಶಿಖರದಲ್ಲಿ ಈಚೆಗೆ ಹಿಮಪಾತ ಸಂಭವಿಸಿದ್ದರಿಂದ ನಾಪತ್ತೆಯಾಗಿದ್ದವರ ಪೈಕಿ ಮತ್ತೆ 10 ಮಂದಿಯ ಮೃತದೇಹಗಳು ಪತ್ತೆಯಾಗಿದ್ದು, ಮೃತರ ಸಂಖ್ಯೆ 26ಕ್ಕೆ ಏರಿಕೆಯಾಗಿದೆ ಎಂದು ನೆಹರೂ ಪರ್ವತಾರೋಹಣ ಸಂಸ್ಥೆ (ಎನ್‌ಐಎಂ) ಶುಕ್ರವಾರ ತಿಳಿಸಿದೆ.ಭೂಸೇನೆಯ 2 ಚೀತಾ ಹೆಲಿಕಾಪ್ಟರ್‌ಗಳನ್ನು ಶೋಧ ಕಾರ್ಯಾಚರಣೆಗೆ ಬಳಸಲಾಗಿದೆ.

ಕಮಾಂಡರ್ ಸೇರಿ ಇಬ್ಬರ ಸಾವು

ನವದೆಹಲಿ(ಪಿಟಿಐ): ಮಧ್ಯಪ್ರದೇಶದ ಬಬಿನಾದಲ್ಲಿ ಗುಂಡು ಹಾರಿಸುವ ತಾಲೀಮಿನ ವೇಳೆ ಟ್ಯಾಂಕ್ ಸ್ಫೋಟಗೊಂಡು ಭಾರತೀಯ ಸೇನೆಯ ಕಮಾಂಡರ್ ಸೇರಿ ಇಬ್ಬರು ಮೃತಪಟ್ಟಿದ್ದು ಇನ್ನೊಬ್ಬರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಮೃತರನ್ನು ಸುಮರ್ ಸಿಂಗ್ ಬಗಾರಿಯಾ ಮತ್ತು ಸೊವಾರ್ ಸುಕಾಂತ ಮಂಡಲ್ ಎಂದು ಗುರುತಿಸಲಾಗಿದೆ.

ಜಪಾನ್‌ನ ಟೋಕಿಯೊದಲ್ಲಿ ಬಿಸಿಐಸಿ ಕಚೇರಿ

ಬೆಂಗಳೂರು: ಬೆಂಗಳೂರು ಚೇಂಬರ್ ಆಫ್ ಇಂಡಸ್ಟ್ರಿ ಅಂಡ್ ಕಾಮರ್ಸ್ (ಬಿಸಿಐಸಿ) ಜಪಾನ್‌ನ ಟೋಕಿಯೊದಲ್ಲಿ ಮೊದಲ ಅಂತರರಾಷ್ಟ್ರೀಯ ಕಚೇರಿ ತೆರೆದಿದೆ.

ಉಭಯ ದೇಶಗಳ ನಡುವೆ ಹೂಡಿಕೆಗೆ ಪ್ರೋತ್ಸಾಹ, ಮಾರಾಟ ಹಾಗೂ ವಾಣಿಜ್ಯ ಕಾರ್ಯ ವಿಸ್ತರಿಸುವ ಉದ್ದೇಶದಿಂದ ಕಚೇರಿ ತೆರೆಯಲಾಗಿದೆ.

ಜಪಾನ್‌ನಲ್ಲಿ ಭಾರತದ ರಾಯಭಾರಿ ಸಂಜಯ್‌ಕುಮಾರ್ ವರ್ಮಾ ಅವರು ಕಚೇರಿ ಉದ್ಘಾಟಿಸಿದರು.

ಬಿಸಿಐಸಿನ ಅಧ್ಯಕ್ಷ ಡಾ.ಎಲ್. ರವೀಂದ್ರನ್ ಮಾತನಾಡಿ, 'ಉಭಯ ದೇಶಗಳಿಗೆ ಈ ಕ್ರಮ ಉತ್ತಮ ರೀತಿಯಲ್ಲಿ ನೆರವಾಗುತ್ತದೆ. ಭಾರತೀಯರು ಮತ್ತು ಜಪಾನ್ ಜನರ ನಡುವೆ ನಿಗದಿತ ಮತ್ತು ಹೆಚ್ಚಿನ ಸಂವಾದಗಳನ್ನು ನಡೆಸಲು ವೇದಿಕೆಯನ್ನು ಬಿಸಿಐಸಿ ಸೃಷ್ಟಿಸಿದೆ. ಇದರಿಂದ ಚಿಂತನೆಗಳನ್ನು ಹಂಚಿಕೊಳ್ಳಬಹುದಾಗಿದೆ. ಇದರಿಂದ ದೇಶಗಳ ನಡುವೆ ಮಾರಾಟ ಮತ್ತು ವಾಣಿಜ್ಯ ಅವಕಾಶಗಳು ಹೆಚ್ಚುವುದಕ್ಕೆ ದಾರಿ ಆಗಲಿವೆ' ಎಂದರು.

ಬಿಸಿಐಸಿ 1976ರಿಂದ ಅಸ್ತಿತ್ವದಲ್ಲಿದ್ದು, ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಕರ್ನಾಟಕ ರಾಜ್ಯದಲ್ಲಿನ ತಂತ್ರಜ್ಞಾನ ಕಂಪನಿ ಪ್ರತಿನಿಧಿಸುತ್ತದೆ ಎಂದು ಪ್ರಕಟಣೆ ತಿಳಿಸಿದೆ.

'ಪೂರ್ವ ಲಡಾಖ್ ಸಾಮಾನ್ಯ ಸ್ಥಿತಿಗೆ ಮರಳಿಲ್ಲ'

ನವದೆಹಲಿ (ಪಿಟಿಐ): ಪೂರ್ವ ಲಡಾಖ್ ಸಂಪೂರ್ಣವಾಗಿ ಸಾಮಾನ್ಯ ಸ್ಥಿತಿಗೆ ಮರಳಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಹೇಳಿದ್ದಾರೆ.

2020ರ ಜೂನ್‌ನಲ್ಲಿ ಪೂರ್ವ ಲಡಾಖ್‌ನ ಗಾಲ್ವಾನ್ ಕಣಿವೆಯಲ್ಲಿ ಭಾರತ ಮತ್ತು ಚೀನಾ ಸೈನಿಕರ ಮಧ್ಯೆ ಸಂಘರ್ಷ ನಡೆದಿತ್ತು. ಆನಂತರ ಎರಡೂ ದೇಶಗಳು ಪೂರ್ವ ಲಡಾಖ್‌ನ ಹಲವು ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯ ಸೈನಿಕರನ್ನು ನಿಯೋಜಿಸಿದ್ದವು. ಸೈನಿಕರನ್ನು ವಾಪಸ್ ಕರೆಸಿಕೊಳ್ಳುವ ಸಂಬಂಧ ಹಲವು ಸುತ್ತಿನ ಮಾತುಕತೆ ನಡೆದಿತ್ತು.

ಪೂರ್ವ ಲಡಾಖ್‌ನ ವಾಸ್ತವ ನಿಯಂತ್ರಣ ರೇಖೆಯ ಗಸ್ತು ಕೇಂದ್ರ 15ರಿಂದ ಎರಡೂ ದೇಶಗಳ ಸೈನಿಕರನ್ನು ಸೆಪ್ಟೆಂಬರ್‌ನಲ್ಲಿ ವಾಪಸ್ ಕರೆಸಿಕೊಳ್ಳಲಾಗಿತ್ತು. ಅದರ ಬೆನ್ನಲ್ಲೇ ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರರು, 'ಪೂರ್ವ ಲಡಾಖ್‌ನಲ್ಲಿ ಸಾಮಾನ್ಯ ಸ್ಥಿತಿ ಮರಳಿದೆ' ಎಂದು ಹೇಳಿಕೆ ನೀಡಿದ್ದರು. 'ಸಾಮಾನ್ಯ ಸ್ಥಿತಿ ಇನ್ನೂ ನಿರ್ಮಾಣವಾಗಿಲ್ಲ. ಕೆಲವು ಸಕಾರಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ, ಇನ್ನೂ ಹಲವು ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ' ಎಂದು ಬಾಗ್ಚಿ ಟ್ವೀಟ್ ಮಾಡಿದ್ದಾರೆ.

ಉತ್ತರಾಧಿಕಾರಿ ಹೆಸರು ಶಿಫಾರಸು ಸಿಜೆಐಗೆ ಕೇಂದ್ರ ಸರ್ಕಾರದ ಪತ್ರ

ನವದೆಹಲಿ(ಪಿಟಿಐ) : ತಮ್ಮ ಉತ್ತರಾಧಿಕಾರಿಯಾಗಿ ಯಾರನ್ನು ನೇಮಕ ಮಾಡಬೇಕು ಎಂದು ಶಿಫಾರಸು ಮಾಡುವಂತೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ(ಸಿಜೆಐ) ಉದಯ್ ಉಮೇಶ್ ಲಲಿತ್ ಅವರಿಗೆ ಕೇಂದ್ರ ಸರ್ಕಾರವು ಶುಕ್ರವಾರ ಪತ್ರ ಬರೆದಿದೆ.



ಸಿಜೆಐ ಆಗಿ 74 ದಿನಗಳ ಸೇವಾವಧಿ ಪೂರ್ಣಗೊಳಿಸಿ ನವೆಂಬರ್ 8ರಂದು ಲಲಿತ್ ಅವರು ನಿವೃತ್ತರಾಗಲಿದ್ದಾರೆ.

'ಮುಂದಿನ ಮುಖ್ಯ ನ್ಯಾಯಮೂರ್ತಿ ಹುದ್ದೆಗೆ ಶಿಫಾರಸು ಮಾಡುವಂತೆ ಕೇಂದ್ರ ಕಾನೂನು ಸಚಿವರು ಲಲಿತ್ ಅವರಿಗೆ ಪತ್ರ ಬರೆದಿದ್ದಾರೆ' ಎಂದು ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವಾಲಯ ಟ್ವೀಟ್ ಮಾಡಿದೆ.

'ನ್ಯಾಯಾಂಗ ನೇಮಕಾತಿ ನಿಯಮಾವಳಿ'(ಎಂಒಪಿ) ಪ್ರಕಾರ ಅತ್ಯಂತ ಹಿರಿಯ ನ್ಯಾಯಮೂರ್ತಿಯನ್ನು ಸಿಜೆಐ ಆಗಿ ಶಿಫಾರಸು ಮಾಡಲಾಗುತ್ತದೆ.

ಲಲಿತ್ ಅವರ ನಂತರ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಸುಪ್ರೀಂ ಕೋರ್ಟ್‌ನ ಅತ್ಯಂತ ಹಿರಿಯ ನ್ಯಾಯಮೂರ್ತಿಯಾಗಿದ್ದಾರೆ.

ಮಾಧ್ಯಮಗಳು ಸಾಮಾನ್ಯರ ಧ್ವನಿಯಾಗಲಿ: ನ್ಯಾ.ಸಂತೋಷ್ ಹೆಗ್ಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಧ್ಯಮ ಕ್ಷೇತ್ರಕ್ಕೆ ಹೆಚ್ಚಿನ ಸ್ವಾತಂತ್ರ್ಯದ ಅಗತ್ಯವಿದ್ದು, ಮಾಧ್ಯಮಗಳು ಯೋಗ್ಯರ ಕೈಯಲ್ಲಿದ್ದರೆ ಸಾಮಾನ್ಯ ಜನರಿಗೂ ನ್ಯಾಯ ಸಿಗುತ್ತದೆ ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಅವರು ಪ್ರತಿಪಾದಿಸಿದರು.

ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ಸಹಯೋಗದಲ್ಲಿ 'ಮಾಧ್ಯಮದ ಸ್ವಾತಂತ್ರ್ಯ, ಸ್ವರೂಪ ವ್ಯಾಪ್ತಿ ಮತ್ತು ಅದರ ಇತಿಮಿತಿ' ಕುರಿತು ಶುಕ್ರವಾರ ಹಮ್ಮಿಕೊಂಡಿದ್ದ ವಿಚಾರಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಪತ್ರಕರ್ತರಿಗೆ ಸಮಾಜದ ಆಗುಹೋಗುಗಳ ಅರಿವಿರಬೇಕು. ರಾಜಕೀಯ ಗುಂಪುಗಳ ಜತೆ ಗುರುತಿಸಿಕೊಳ್ಳಬಾರದು, ಸುಳ್ಳು ಲಾಭಕ್ಕಾಗಿ ಮಾಹಿತಿ ನೀಡಬಾರದು. ದೇಶದ ಏಕತೆಗೆ ಕುಂದು ಬರುವ ಎಲ್ಲ ವಿಷಯಗಳನ್ನೂ ವಿರೋಧಿಸುವ ದೃಢತೆ ಇರಬೇಕು ಎಂದು ಕಿವಿಮಾತು ಹೇಳಿದರು.

ಹಿಂದೆ ಕಾನೂನು ಚೌಕಟ್ಟಿನಲ್ಲಿ ಜನರು ಶ್ರೀಮಂತರಾಗುತ್ತಿದ್ದರು. ಅಂಥವರಿಗೆ ಸಮಾಜದಲ್ಲಿ ಗೌರವ ಸಿಗುತ್ತಿತ್ತು. ಆದರೆ, ಶ್ರೀಮಂತರಾಗಲು ಈಗ ಪೈಪೋಟಿ ಇದೆ. ಅಡ್ಡದಾರಿ ಮೂಲಕ ಹಣ ಗಳಿಸುತ್ತಿದ್ದಾರೆ. ಹಾಗಾಗಿ ಅವರಿಗೆ ಬೆಲೆ ಸಿಗುತ್ತಿಲ್ಲ. ಹಿರಿಯರು, ಪೋಷಕರು ಬುದ್ಧಿ ಹೇಳಿ ಸರಿದಾರಿಗೆ ತರುವ ಕೆಲಸ ಮಾಡುತ್ತಿಲ್ಲ. ಇಂತಹ ಸಮಯದಲ್ಲಿ ಮಾಧ್ಯಮಗಳು ಸಮಾಜಮುಖಿಯಾಗಿ ಚಿಂತಿಸಬೇಕು ಎಂದು ಹೇಳಿದರು.



ನಗರದಲ್ಲಿ ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಕರ್ನಾಟಕ ಪತ್ರಕರ್ತರ ಸಹಕಾರ ಸಂಘ ಶುಕ್ರವಾರ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ವಿಭಾಗದ ಮುಖ್ಯಸ್ಥ ಸತೀಶ್ ಗೌಡ ಮಾತನಾಡಿದರು. ಕರ್ನಾಟಕ ಕಾನೂನು, ಸಂಸದೀಯ ಸುಧಾರಣಾ ಸಂಸ್ಥೆಯ ಸಂಶೋಧನಾ ಮುಖ್ಯಸ್ಥ ರೇವಯ್ಯ ಒಡೆಯರ್, ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ, ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಯ ನಿರ್ದೇಶಕ ಕೆ.ದ್ವಾರಕನಾಥ ಬಾಬು ಇದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ವಿಭಾಗದ ಮುಖ್ಯಸ್ಥ ಸತೀಶ್ ಗೌಡ, 'ಭಾರತದಲ್ಲಿ ಮಾಧ್ಯಮ ಕ್ಷೇತ್ರದ ಸ್ವಾತಂತ್ರ್ಯ ಎತ್ತಿಹಿಡಿದಿರುವ ಏಕೈಕ ಸಂಸ್ಥೆ ಸುಪ್ರೀಂಕೋರ್ಟ್, ಅಮೆರಿಕ ಸಂವಿಧಾನ ಮಾಧ್ಯಮಗಳಿಗೆ ಮುಕ್ತ ಸ್ವಾತಂತ್ರ್ಯ ನೀಡಿದೆ. ದೇಶದಲ್ಲಿ ನಿರ್ಬಂಧಿತ ಸ್ವಾತಂತ್ರ್ಯವಿದೆ' ಎಂದು ವಿಶ್ಲೇಷಿಸಿದರು.

ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಯ ನಿರ್ದೇಶಕ ಕೆ.ದ್ವಾರಕನಾಥ್ ಬಾಬು ಅಧ್ಯಕ್ಷತೆ ವಹಿಸಿದ್ದರು. ಸಂಶೋಧನಾ ಮುಖ್ಯಸ್ಥ ರೇವಯ್ಯ ಒಡೆಯರ್, ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ಅಧ್ಯಕ್ಷ ರಾಘವೇಂದ್ರ ತೊಗರ್ಸಿ ಉಪಸ್ಥಿತರಿದ್ದರು.

ಪಿಎಫ್‌ಐ ಪ್ರಕರಣ ಎನ್‌ಐಎಗೆ ನೋಟಿಸ್

ನವದೆಹಲಿ (ಪಿಟಿಐ): ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸದಸ್ಯರ ವಿರುದ್ಧ ದಾಖಲಿಸಿರುವ ಪ್ರಕರಣದ ಎಫ್‌ಐಆರ್ ಪ್ರತಿ ಕೋರಿದ್ದ ಅರ್ಜಿಗೆ ಸಂಬಂಧಿಸಿ ಪ್ರತಿಕ್ರಿಯೆ ದಾಖಲಿಸಲು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ದೆಹಲಿ ಹೈಕೋರ್ಟ್ ಸೂಚಿಸಿದೆ.

ನ್ಯಾಯಮೂರ್ತಿ ಅನೂಪ್ ಕುಮಾರ್ ಮೆಂಡಿತ್ತಾಯ ಅವರು ಶುಕ್ರವಾರ ಈ ಕುರಿತು ಎನ್‌ಐಎಗೆ ನೋಟಿಸ್ ಜಾರಿ ಮಾಡಿದರು. ಪ್ರಕರಣ ಸಂಬಂಧ ಬಂಧನಕ್ಕೆ ಒಳಗಾಗಿರುವ ಚೆನ್ನೈನ ಮೊಹಮ್ಮದ್ ಯೂಸೂಫ್ ಅವರು ಈ ಸಂಬಂಧ ಅರ್ಜಿ ಸಲ್ಲಿಸಿದ್ದರು.

ಪ್ರಕರಣದಲ್ಲಿ ವಾದ ಮಂಡಿಸುತ್ತಿರುವ ಹೆಚ್ಚುವರಿ ಸಾಲಿಸಿಟರ್ ಜನರಲ್ ಅವರಿಗೆ ಅನಾರೋಗ್ಯವಿದೆ. ಹೀಗಾಗಿ, ವಿಚಾರಣೆಯನ್ನು ಅಕ್ಟೋಬರ್ 10ಕ್ಕೆ ನಿಗದಿಪಡಿಸಬೇಕು ಎಂದು ಎನ್‌ಐಎ ಪರ ಹಾಜರಿದ್ದ ವಕೀಲರು ಮನವಿ ಮಾಡಿದರು.

ವಕೀಲ ವೃತ್ತಿ ತರಬೇತಿ ಪಡೆಯುತ್ತಿರುವ ಅರ್ಜಿದಾರ ಯೂಸೂಫ್, ತನ್ನ ವಿರುದ್ಧ ದಾಖಲಿಸಿರುವ ಪ್ರಕರಣ ಸಂಬಂಧ ಎಫ್‌ಐಆರ್ ಪ್ರತಿ ನೀಡಬೇಕು. ಅಲ್ಲದೆ ಈ ಪ್ರಕರಣದಲ್ಲಿ ಬಂಧಿತರಾಗಿರುವ ಎಲ್ಲರಿಗೂ ಎಫ್‌ಐಆರ್ ಪ್ರತಿ ಒದಗಿಸಬೇಕು ಎಂದು ಅರ್ಜಿಯಲ್ಲಿ ಕೋರಿದ್ದರು.

ಶಿವಸೇನಾದ ಚಿಹ್ನೆ ಕುರಿತು ಠಾಕ್ರೆಯಿಂದ ಪ್ರತಿಕ್ರಿಯೆ ಕೇಳಿದ ಚುನಾವಣಾ ಆಯೋಗ

ನವದೆಹಲಿ: ಶಿವಸೇನಾದ ಬಂಡಾಯ ಬಣ, ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಗುಂಪು ಬಿಲ್ಲು ಮತ್ತು ಬಾಣದ ಗುರುತನ್ನು ಪಕ್ಷದ ಚಿಹ್ನೆಯಾಗಿ ಹಂಚಿಕೆ ಮಾಡಬೇಕೆಂದು ಮನವಿ ಮಾಡಿದ್ದು, ಈ ಸಂಬಂಧ ಚುನಾವಣಾ ಆಯೋಗವು ಶಿವಸೇನಾದ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರಿಗೆ ಶನಿವಾರ ಮಧ್ಯಾಹ್ನ 2 ಗಂಟೆಯೊಳಗೆ ಪ್ರತಿಕ್ರಿಯೆ ನೀಡುವಂತೆ ಸೂಚಿಸಿದೆ.

ಮಹಾರಾಷ್ಟ್ರದ ಪೂರ್ವ ಅಂಧೇರಿಯಲ್ಲಿ ವಿಧಾನಸಭಾ ಉಪ ಚುನಾವಣೆ ಸಮೀಪಿಸುತ್ತಿರುವ ಬೆನ್ನಲ್ಲೇ ಶಿಂದೆ ನೇತೃತ್ವದ ಬಣವು ಬಿಲ್ಲು ಮತ್ತು ಬಾಣವನ್ನು ಪಕ್ಷದ ಚಿಹ್ನೆಯನ್ನಾಗಿ ಹಂಚಿಕೆ ಮಾಡುವಂತೆ ಆಯೋಗಕ್ಕೆ ಮನವಿ ಸಲ್ಲಿಸಿದೆ.



ಶಿವಸೇನಾ ಚಿಹ್ನೆ

ಈ ಹಿನ್ನೆಲೆಯಲ್ಲಿ ಆಯೋಗವು ಠಾಕ್ರೆ ಬಣಕ್ಕೆ ಪ್ರತಿಕ್ರಿಯೆ ಸಲ್ಲಿಸಲು ನಿರ್ದೇಶನ ನೀಡಿದೆ.

ಸಿಖ್ ಕುಟುಂಬದವರ ಹತ್ಯೆ: ಕಳವಳ

ನವದೆಹಲಿ(ಪಿಟಿಐ): 'ಕ್ಯಾಲಿಫೋರ್ನಿಯಾದಲ್ಲಿ ಭಾರತ ಮೂಲದ ಸಿಖ್ ಕುಟುಂಬದ ನಾಲ್ವರನ್ನು ಹತ್ಯೆ ಮಾಡಿರುವ ಸಂಗತಿಯು ಆಘಾತಕಾರಿಯಾದುದು' ಎಂದು ಭಾರತವು ಶುಕ್ರವಾರ ಪ್ರತಿಕ್ರಿಯೆ ವ್ಯಕ್ತಪಡಿಸಿದೆ.

'ಈ ಘಟನೆಯ ಬಗ್ಗೆ ನಮಗೆ ತಿಳಿದುಬಂದಿದ್ದು, ಸ್ಥಳೀಯ ಪೊಲೀಸ್ ಅಧಿಕಾರಿಗಳು ಪ್ರಕರಣದ ಕುರಿತು ತನಿಖೆ ನಡೆಸುತ್ತಿದ್ದಾರೆ. ಈ ಸಂಬಂಧ ಸ್ಯಾನ್‌ಫ್ರಾನ್ಸಿಸ್ಕೊದಲ್ಲಿರುವ ಭಾರತೀಯ ರಾಯಭಾರ ಕಚೇರಿಯು ನಿರಂತರ ನಿಗಾ ವಹಿಸಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಅವರು ಹೇಳಿದ್ದಾರೆ.

'ಹತ್ಯೆಯಾದ ಕುಟುಂಬದ ಸಂಬಂಧಿಕರೊಂದಿಗೆ ಸಂಪರ್ಕದಲ್ಲಿದ್ದು, ಅವರಿಗೆ ಬೇಕಾದ ಎಲ್ಲಾ ಸಹಾಯವನ್ನು ಒದಗಿಸಲಾಗುವುದು. ಇದೊಂದು ಆಘಾತಕಾರಿ ಘಟನೆ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.



ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಹತ್ಯೆಗೀಡಾದ ಸಿಖ್ ಕುಟುಂಬದ ಸದಸ್ಯರ ಸ್ಮರಣಾರ್ಥ ಅಮೆರಿಕದ ಪೀಚ್ ಏವ್ ಗುರುದ್ವಾರದಲ್ಲಿ ಸಿಖ್ಖರ ಧಾರ್ಮಿಕ ಗುರು ಬಾಬಾಜಿ ಕರ್ಮಜಿತ್ ಸಿಂಗ್ ಅವರ ನೇತೃತ್ವದಲ್ಲಿ ಶುಕ್ರವಾರ ಪ್ರಾರ್ಥನೆ ಸಲ್ಲಿಸಲಾಯಿತು –ಪಿಟಿಐ ಚಿತ್ರ

ಪಂಜಾಬ್‌ನ ಹೋಶಿಯಾರ್‌ಪುರದ ಹರ್ಸಿಪಿಂಡ್‌ನವರಾದ ಸಿಖ್ ಕುಟುಂಬವನ್ನು ಸೋಮವಾರ ಶಸ್ತ್ರಸಜ್ಜಿತ ವ್ಯಕ್ತಿಯೊಬ್ಬ ಕ್ಯಾಲಿಫೋರ್ನಿಯಾದಲ್ಲಿ ಅಪಹರಿಸಿದ್ದ. ಬಳಿಕ ಅಲ್ಲಿನ ಮರ್ಸಿಡ್ ಕೌಂಟಿಯ ತೋಟವೊಂದರಲ್ಲಿ ನಾಲ್ವರ ಮೃತದೇಹಗಳು ಪತ್ತೆಯಾಗಿದ್ದವು ಎಂದು ಸ್ಥಳೀಯ ಪೊಲೀಸರು ತಿಳಿಸಿದ್ದರು.

ನಿವೇಶನ ಹಗರಣ: ಲಾಲು, ರಾಬ್ಡಿ ವಿರುದ್ಧ ಸಿಬಿಐ ಚಾರ್ಜ್‌ಶೀಟ್

ನವದೆಹಲಿ (ಪಿಟಿಐ): ರೈಲ್ವೆ ಸಚಿವರಾಗಿದ್ದ ವೇಳೆ ನಡೆದ ಉದ್ಯೋಗಕ್ಕಾಗಿ ನಿವೇಶನ ಹಗರಣಕ್ಕೆ ಸಂಬಂಧಿಸಿದಂತೆ ಮಾಜಿ ರೈಲ್ವೆ ಸಚಿವ ಲಾಲು ಪ್ರಸಾದ್, ಅವರ ಪತ್ನಿ ರಾಬ್ಡಿ ದೇವಿ ಹಾಗೂ ಇತರ 14 ಮಂದಿ ವಿರುದ್ಧ ಕೇಂದ್ರ ತನಿಖಾ ದಳ (ಸಿಬಿಐ) ಚಾರ್ಜ್‌ಶೀಟ್ ಸಲ್ಲಿಸಿದೆ ಎಂದು ಶುಕ್ರವಾರ ಅಧಿಕಾರಿಗಳು ತಿಳಿಸಿದ್ದಾರೆ.



ಲಾಲು ಪ್ರಸಾದ್

ಲಾಲು ಅವರ ಮಗಳು ಮೀಸಾ ಭಾರತಿ ಮತ್ತು ರೈಲ್ವೆ ಇಲಾಖೆಯ ಮಾಜಿ ಪ್ರಧಾನ ವ್ಯವಸ್ಥಾಪಕ ಅವರನ್ನೂ ಹಗರಣದಲ್ಲಿ ಆರೋಪಿಗಳೆಂದು ಸಿಬಿಐನ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದ್ದ ಚಾರ್ಜ್‌ಶೀಟ್‌ನಲ್ಲಿ ಹೆಸರಿಸಲಾಗಿದೆ ಎಂದೂ ಅವರು ಹೇಳಿದ್ದಾರೆ.

ಉದ್ಯೋಗಕ್ಕಾಗಿ ನಿವೇಶನ ಹಗರಣಕ್ಕೆ ಸಂಬಂಧಿಸಿದ ದೂರನ್ನು ಮೇ 18ರಂದು ಎಫ್‌ಐಆರ್ ಆಗಿ ಪರಿವರ್ತಿಸಲಾಗಿತ್ತು. ಈ ಬಗ್ಗೆ ಸಿಬಿಐ 2021ರ ಸೆ. 23ರಂದು ಪ್ರಾಥಮಿಕ ವಿಚಾರಣೆಯನ್ನು ನಡೆಸಿತ್ತು.

ಹಗರಣಕ್ಕೆ ಸಂಬಂಧಿಸಿದಂತೆ ಲಾಲು ಕುಟುಂಬದ ಸದಸ್ಯರು ಪಟ್ನಾದಲ್ಲಿ ಸುಮಾರು 1.05 ಲಕ್ಷ ಚದರ ಅಡಿಗಳಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಎಂದೂ ಸಿಬಿಐ ಆರೋಪಿಸಿದೆ.

ರೈಲ್ವೆ ಇಲಾಖೆಯಲ್ಲಿ ನಡೆದಿದ್ದ ನೇಮಕಾತಿಯಲ್ಲಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದ ಮೂರು ದಿನಗಳಲ್ಲೇ ಗ್ರೂಡ್ ಡಿ ಹುದ್ದೆಗಳಿಗೆ ನೇಮಕ ಮಾಡಲಾಗಿತ್ತು. ಈ ಅಭ್ಯರ್ಥಿಗಳು ತಮ್ಮ ಅಥವಾ ಅವರ ಕುಟುಂಬ ಸದಸ್ಯರು ತಮ್ಮ ಭೂಮಿಯನ್ನು ವರ್ಗಾಯಿಸಿದಾಗ ಅವರ ಉದ್ಯೋಗವನ್ನು ಕ್ರಮಬದ್ಧಗೊಳಿಸಲಾಗಿತ್ತು ಎಂದೂ ಸಿಬಿಐ ತಿಳಿಸಿದೆ.

ವಿಲೇವಾರಿಯಾಗದ ಹೆಸರು ಕಾಳು: ಮುತ್ತಿಗೆ

ನರಗುಂದ (ಗದಗ ಜಿಲ್ಲೆ): ಸರ್ಕಾರವು ಬೆಂಬಲ ಬೆಲೆಯಡಿ ಹೆಸರು ಖರೀದಿ ಆರಂಭಿಸಿದೆ. ಆದರೆ ಖರೀದಿಯಾಗುತ್ತಿರುವ ಹೆಸರು ಕಾಳು ಕಳೆದ ಐದು ದಿನಗಳಿಂದ ವಿಲೇವಾರಿಯಾಗದಿರುವುದಕ್ಕೆ ಶುಕ್ರವಾರ ತಾಲ್ಲೂಕಿನ ವಿವಿಧ ಗ್ರಾಮಗಳ ರೈತರು ಹಾಗೂ ಖರೀದಿ ಕೇಂದ್ರಗಳ ವ್ಯವಸ್ಥಾಪಕರು ನರಗುಂದ ಪಟ್ಟಣದ ಕೇಂದ್ರೀಯ ಉಗ್ರಾಣ ನಿಗಮಕ್ಕೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ದಾಸ್ತಾನು ಮಾಡಿಕೊಳ್ಳಬೇಕಾದ ಸಹಕಾರಿ ಮಾರಾಟ ಮಂಡಳ ಹಾಗೂ ಉಗ್ರಾಣ ನಿಗಮದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಮಾತಿನ ಚಕಮಕಿ ನಡೆದಿದ್ದರಿಂದ ಉಗ್ರಾಣ ನಿಗಮದ ಆವರಣದಲ್ಲಿ ಗೊಂದಲದ ಪರಿಸ್ಥಿತಿ ಮೂಡಿ, ರೈತರನ್ನು ನಿಯಂತ್ರಿಸುವಲ್ಲಿ ಪೊಲೀಸರು ಹರಸಾಹಸ ಪಡಬೇಕಾಯಿತು.

ಲೈಂಗಿಕ ದೌರ್ಜನ್ಯ: 20 ವರ್ಷ ಜೈಲು ಶಿಕ್ಷೆ

ಪ್ರಜಾವಾಣಿ ವಾರ್ತೆ

ಕೋಲಾರ: ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಕೆಜಿಎಫ್ ತಾಲ್ಲೂಕು ಆ್ಯಂಡರ್‌ಸನ್‌ಪೇಟೆ ಪೊಲೀಸ್ ಠಾಣಾ ಸರಹದ್ದಿನ ಕ್ಯಾಸಂಬಳ್ಳಿ ಹೋಬಳಿ ಗ್ರಾಮವೊಂದರ ನಿವಾಸಿ ಕಣ್ಣಪ್ಪ ಎಂಬಾತನಿಗೆ ಇಲ್ಲಿನ ಪೋಕ್ಸೊ ವಿಶೇಷ ನ್ಯಾಯಾಲಯವು ಗುರುವಾರ 20 ವರ್ಷ ಕಠಿಣ ಜೈಲು ಶಿಕ್ಷೆ ವಿಧಿಸಿದೆ. 2020ರ ಫೆ.3ರಂದು ಬಾಲಕಿಯನ್ನು ತನ್ನ ಮನೆಗೆ ಕರೆದೊಯ್ದು ಲೈಂಗಿಕ ದೌರ್ಜನ್ಯ ಎಸಗಿರುವುದು ತನಿಖೆಯಿಂದ ಸಾಬೀತಾಗಿತ್ತು.

ಗೋಬಿ ಮಂಚೂರಿ ಬಿಸಾಕಿದ್ದಕ್ಕೆ ವೃದ್ಧೆ ಹತ್ಯೆ ● ಮೃತದೇಹ ಕಪಾಟಿನಲ್ಲಿಟ್ಟು ಪ್ಲಾಸ್ಟಿಂಗ್

5 ವರ್ಷದ ಬಳಿಕ ತಾಯಿ–ಮಗ ಬಂಧನ

ಪ್ರಜಾವಾಣಿ ವಾರ್ತೆ



ಶಾಂತಕುಮಾರಿ



ರಾಧಾ ಹಾಗೂ ಸಂಜಯ್

ಅಪರಾಧ ಸುದ್ದಿ

ಬೆಂಗಳೂರು: ಕೆಂಗೇರಿ ಠಾಣೆ ವ್ಯಾಪ್ತಿಯಲ್ಲಿ 2017ರಲ್ಲಿ ನಡೆದಿದ್ದ ಶಾಂತಕುಮಾರಿ (70) ಎಂಬುವವರ ಕೊಲೆ ಪ್ರಕರಣ ಭೇದಿಸಿರುವ ಪೊಲೀಸರು, ಮೃತರ ಮಗಳು ರಾಧಾ ಶ್ರೀವಾಸುದೇವ್ ರಾವ್ ಅಲಿಯಾಸ್ ಶಶಿಕಲಾ (50) ಹಾಗೂ ಮೊಮ್ಮಗ ಸಂಜಯ್ (27) ಅವರನ್ನು ಬಂಧಿಸಿದ್ದಾರೆ.

‘ಕೆಂಗೇರಿ ಉಪನಗರ 7ನೇ ಮುಖ್ಯರಸ್ತೆಯಲ್ಲಿ ವಾಸವಿದ್ದ ರಾಧಾ ಹಾಗೂ ಅವರ ಮಗ ಸಂಜಯ್, ಶಾಂತಕುಮಾರಿ ಅವರನ್ನು ಕೊಂದು ಪರಾರಿಯಾಗಿದ್ದರು. ಐದು ವರ್ಷಗಳಿಂದ ತಲೆಮರೆಸಿಕೊಂಡಿದ್ದ ಇಬ್ಬರನ್ನೂ ಮಹಾರಾಷ್ಟ್ರದ ಕೊಲ್ಲಾಪುರ ಬಸ್ ನಿಲ್ದಾಣದಲ್ಲಿ ಇತ್ತೀಚೆಗೆ ಬಂಧಿಸಿ ನಗರಕ್ಕೆ ಕರೆತರಲಾಗಿದೆ’ ಎಂದು ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ ಹೇಳಿದರು.

‘ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ರಾಧಾ ಅವರ ಪತಿ ತೀರಿಕೊಂಡಿದ್ದರು. ಮಗ ಸಂಜಯ್ ಹಾಗೂ ತಾಯಿ ಶಾಂತಕುಮಾರಿ ಜೊತೆ ಬೆಂಗಳೂರಿಗೆ ಬಂದಿದ್ದರು. ಕೆಂಗೇರಿ ಉಪನಗರದ ಬಾಡಿಗೆ ಮನೆಯಲ್ಲಿ ವಾಸವಿದ್ದರು. ನಗರದ ಎಂಜಿನಿಯರಿಂಗ್ ಕಾಲೇಜೊಂದರಲ್ಲಿ ವ್ಯಾಸಂಗ ಮಾಡುತ್ತಿದ್ದ ಸಂಜಯ್, ಇಂದಿರಾನಗರದ ರಿಯಲ್ ಎಸ್ಟೇಟ್ ಕಚೇರಿಯೊಂದರಲ್ಲಿ ಅರೆಕಾಲಿಕ ಕೆಲಸ ಸಹ ಮಾಡುತ್ತಿದ್ದರು’ ಎಂದು ತಿಳಿಸಿದರು.

ಗೋಬಿ ಮಂಚೂರಿ ಬಿಸಾಕಿದ್ದಕ್ಕೆ ಹಲ್ಲೆ: ‘ಧಾರ್ಮಿಕ ಆಚರಣೆಗೆ ಒತ್ತು ನೀಡುತ್ತಿದ್ದ ಶಾಂತಕುಮಾರಿ, ಮಡಿವಂತಿಕೆ ಪಾಲಿಸುತ್ತಿದ್ದರು. ಇದು ರಾಧಾ ಹಾಗೂ ಸಂಜಯ್‌ಗೆ ಆಗುತ್ತಿರಲಿಲ್ಲ. ಕಾಲೇಜು ಮುಗಿಸಿ ಮನೆಗೆ ಬಂದಿದ್ದ ಸಂಜಯ್, ಅಜ್ಜಿಗೆ ತಿನ್ನಿಸಲೆಂದು ಗೋಬಿ ಮಂಚೂರಿ ತಂದಿದ್ದ. ಅದನ್ನು ತಿನ್ನಲು ನಿರಾಕರಿಸಿದ್ದ ಶಾಂತಕುಮಾರಿ, ಸಂಜಯ್ ಮುಖಕ್ಕೆ ಬಿಸಾಕಿ ಬೈದಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅಜ್ಜಿ ಶಾಂತಕುಮಾರಿ ಮೇಲೆ ಸಿಟ್ಟಾಗಿದ್ದ ಸಂಜಯ್, ಲಟ್ಟಣಿಗೆಯಿಂದ ತಲೆ ಹಾಗೂ ಹಣೆಗೆ ಹೊಡೆದಿದ್ದ. ಗಾಯಗೊಂಡು ಪ್ರಜ್ಞೆ ತಪ್ಪಿ ಬಿದ್ದಿದ್ದ ಶಾಂತಕುಮಾರಿ, ಮೂರು ದಿನಗಳ ನಂತರ ಮೃತಪಟ್ಟಿದ್ದರು. ತಾಯಿ ಮೃತಪಟ್ಟ ಸಂಗತಿ ಹೊರಗೆ ಗೊತ್ತಾದರೆ ಕೊಲೆ ಪ್ರಕರಣದಲ್ಲಿ ಮಗ ಸಂಜಯ್ ಜೈಲಿಗೆ ಹೋಗಬಹುದೆಂದು ರಾಧಾ ಹೆದರಿದ್ದರು. ಹೀಗಾಗಿ, ಎರಡು ದಿನ ಮೃತದೇಹವನ್ನು ಮನೆಯಲ್ಲಿ ಇಟ್ಟುಕೊಂಡಿದ್ದರು’ ಎಂದು ತಿಳಿಸಿವೆ.

‘ಮೃತದೇಹದಿಂದ ವಾಸನೆ ಬರಲಾರಂಭಿಸಿತ್ತು. ಮನೆಯ ಗೋಡೆಯ ಕಪಾಟಿನೊಳಗೆ ಮೃತದೇಹ ಇರಿಸಿದ್ದ ಆರೋಪಿಗಳು, ಅದರ ಬಾಗಿಲು ಮುಚ್ಚಿದ್ದರು. ನಂತರ, ಕಪಾಟಿನ ಸುತ್ತಲೂ ಕೆಮ್ಮಣ್ಣು ಹಾಗೂ ಸಿಮೆಂಟ್‌ನಿಂದ ಪ್ಲಾಸ್ಟಿಂಗ್ ಮಾಡಿದ್ದರು. ಬಣ್ಣ ಬಳೆದಿದ್ದರು. ಇದಾದ ನಂತರ, ನಾಲ್ಕು ತಿಂಗಳು ಅದೇ ಮನೆಯಲ್ಲಿ ವಾಸವಿದ್ದರು. ಶಾಂತಕುಮಾರಿ ಮೃತಪಟ್ಟ ಬಗ್ಗೆ ಅಕ್ಕ-ಪಕ್ಕದವರಿಗೆ ಯಾವುದೇ ಅನುಮಾನ ಬಂದಿರಲಿಲ್ಲ’ ಎಂದು ಮೂಲಗಳು ಹೇಳಿವೆ.

ಅಜ್ಜನ ಆರೋಗ್ಯ ಸರಿ ಇಲ್ಲವೆಂದು ಹೇಳಿ ಪರಾರಿ: ‘ಬಂಧನ ಭೀತಿಯಲ್ಲೇ ಇದ್ದ ರಾಧಾ ಹಾಗೂ ಸಂಜಯ್, ನಗರ ತೊರೆಯಲು ಮುಂದಾಗಿದ್ದರು. ಸಾಗರದಲ್ಲಿರುವ ಅಜ್ಜ ಆರೋಗ್ಯ ಸರಿ ಇಲ್ಲವೆಂದು ಮನೆ ಮಾಲೀಕನಿಗೆ ಹೇಳಿ ಆರೋಪಿಗಳು ಪರಾರಿಯಾಗಿದ್ದರು. ಕೊಲ್ಲಾಪುರಕ್ಕೆ ಹೋಗಿ ಹೋಟೆಲ್‌ನಲ್ಲಿ ಕೆಲಸಕ್ಕೆ ಸೇರಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಹಲವು ದಿನವಾದರೂ ಆರೋಪಿಗಳು ವಾಪಸು ಬಂದಿರಲಿಲ್ಲ. ಹೀಗಾಗಿ, ಮಾಲೀಕರು ಮನೆ ಬಾಗಿಲು ತೆಗೆದಿದ್ದರು. ಕಪಾಸಿಗೆ ಪ್ಲಾಸ್ಟಿಂಗ್ ಮಾಡಿದ್ದನ್ನು ಗಮನಿಸಿದ್ದರು. ರಕ್ತಸಿಕ್ತ ಬಟ್ಟೆಗಳೂ ಕೊಳೆತ ಸ್ಥಿತಿಯಲ್ಲಿ ಸಿಕ್ಕಿದ್ದವು. ಅನುಮಾನಗೊಂಡು ಠಾಣೆಗೆ ಮಾಹಿತಿ ನೀಡಿದ್ದರು’ ಎಂದು ಹೇಳಿವೆ.

‘ಮನೆಯಲ್ಲಿ ಪರಿಶೀಲನೆ ನಡೆಸಿದಾಗ, ಸಂಜಯ್ ಮೊಬೈಲ್ ಸಿಕ್ಕಿತ್ತು. ಮೃತದೇಹ ವಿಲೇವಾರಿ ಬಗ್ಗೆ ಸ್ನೇಹಿತ ಎ.ಎಸ್. ನಂದೀಶ್ ಜೊತೆ ಸಂಜಯ್ ಮಾತನಾಡಿದ್ದ ಸಂಗತಿ ಕರೆ ವಿವರದಿಂದ ತಿಳಿಯಿತು. ನಂತರ, ನಂದೀಶ್‌ನನ್ನು 2017ರಲ್ಲೇ ಬಂಧಿಸಲಾಗಿತ್ತು. ಆತನೇ ಬಳಿಕ ಕೊಲೆ ರಹಸ್ಯ ಬಹಿರಂಗಪಡಿಸಿದ್ದ’ ಎಂದೂ ತಿಳಿಸಿವೆ.

‘ಆ್ಯಪ್’ ಸಾಲ ಕಿರುಕುಳ: ₹ 70 ಕೋಟಿ ಜಪ್ತಿ

ಬೆಂಗಳೂರು: ಆ್ಯಪ್ ಮೂಲಕ ಸಾರ್ವಜನಿಕರಿಗೆ ಸಾಲ ನೀಡಿ, ವಸೂಲಿ ನೆಪದಲ್ಲಿ ಕಿರುಕುಳ ನೀಡುತ್ತಿದ್ದ ಕಂಪನಿಗಳ ವಿರುದ್ಧ ದಾಖಲಾಗಿರುವ 18 ಪ್ರಕರಣಗಳ ತನಿಖೆ ನಡೆಸುತ್ತಿರುವ ಸಿಸಿಬಿ ಪೊಲೀಸರು, ಕಂಪನಿ ಖಾತೆಗಳಲ್ಲಿದ್ದ ₹ 70 ಕೋಟಿಯನ್ನು ಜಪ್ತಿ ಮಾಡಿದ್ದಾರೆ.

ಈ ಬಗ್ಗೆ ಸುದ್ದಿಗಾರರ ಜೊತೆ ಮಾತನಾಡಿದ ಸಿಸಿಬಿ ಜಂಟಿ ಕಮಿಷನರ್ ರಮಣ್ ಗುಪ್ತಾ, ‘ಸಾಮಾಜಿಕ ಮಾಧ್ಯಮಗಳಲ್ಲಿ ನೀಡುವ ಜಾಹೀರಾತು ನೋಡಿ ಸಾರ್ವಜನಿಕರು, ಆ್ಯಪ್ ಮೂಲಕ ಸಾಲ ಪಡೆಯುತ್ತಿದ್ದಾರೆ. ನಿಗದಿತ ದಿನದೊಳಗೆ ಸಾಲ ಮರುಪಾವತಿ ಮಾಡಿದರೂ ಕಂಪನಿಯವರು ಸಾರ್ವಜನಿಕರ ವೈಯಕ್ತಿಕ ಮಾಹಿತಿ ಇಟ್ಟುಕೊಂಡು ಕಿರುಕುಳ ನೀಡುತ್ತಿದ್ದಾರೆ. ಈ ಸಂಬಂಧ ನಗರದ ಸೈಬರ್ ಕ್ರೈಂ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗುತ್ತಿವೆ’ ಎಂದರು.

‘ಚೀನಾದ ವ್ಯಕ್ತಿಗಳು, ನಕಲಿ ಕಂಪನಿ ಹೆಸರಿನಲ್ಲಿ ಆ್ಯಪ್ ಸೃಷ್ಟಿಸಿ ಕೃತ್ಯ ಎಸಗುತ್ತಿರುವುದು ತನಿಖೆಯಿಂದ ಗೊತ್ತಾಗಿದೆ. ಪ್ರಕರಣದ ಸಂಬಂಧ ಈಗಾಗಲೇ ಹಲವರನ್ನು ಬಂಧಿಸಲಾಗಿದೆ. ಕಂಪನಿಗಳ ಅಕ್ರಮ ಹಣದ ವಹಿವಾಟು ಸಂಬಂಧ ಜಾರಿ ನಿರ್ದೇಶನಾಲಯಕ್ಕೂ ಪತ್ರ ಬರೆಯಲಾಗಿದೆ’ ಎಂದು ತಿಳಿಸಿದರು.

ಯುವತಿ ಮೇಲೆ ಲೈಂಗಿಕ ಕಿರುಕುಳ: ವೈದ್ಯ ಪರಾರಿ

ಬೆಂಗಳೂರು: ಚಿಕಿತ್ಸೆಗೆ ಹೋಗಿದ್ದ ಯುವತಿಗೆ ಲೈಂಗಿಕ ಕಿರುಕುಳ ನೀಡಿದ್ದ ಆರೋಪದಡಿ ವೈದ್ಯ ಉಬೇದುಲ್ಲಾ ಎಂಬುವವರ ವಿರುದ್ಧ ಚಂದ್ರಾಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಅರುಂಧತಿ ನಗರದಲ್ಲಿರುವ ಕ್ಲಿನಿಕ್‌ನಲ್ಲಿ ನಡೆದಿರುವ ಘಟನೆ ಸಂಬಂಧ ಯುವತಿ ಸಂಬಂಧಿಕರು ಹೇಳಿಕೆ ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ. ಆರೋಪಿ ಉಬೇದುಲ್ಲಾ, ತಲೆಮರೆಸಿಕೊಂಡಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಹೊಟ್ಟೆ ನೋವಿನಿಂದ ಬಳಲುತ್ತಿದ್ದ ಯುವತಿ, ಚಿಕಿತ್ಸೆಗೆಂದು ಅಜ್ಜಿ ಜೊತೆ ಕ್ಲಿನಿಕ್‌ಗೆ ಹೋಗಿದ್ದರು. ಈ ವೇಳೆ ವೈದ್ಯ, ಮೈ ಕೈ ಮುಟ್ಟಿ ಅಸಭ್ಯವಾಗಿ ವರ್ತಿಸಿ ಲೈಂಗಿಕ ಕಿರುಕುಳ ನೀಡಿದ್ದನೆಂದು ಹೇಳಲಾಗಿದೆ’ ಎಂದು ತಿಳಿಸಿದರು.

ಉದ್ಯೋಗ ಕೊಡಿಸುವುದಾಗಿ ಲಂಚ: ಹೆಡ್ ಕಾನ್‌ಸ್ಟೆಬಲ್ ಬಂಧನ

ತಲೆಮರೆಸಿಕೊಂಡ ಚಿಕ್ಕಜಾಲ ಠಾಣೆ ಇನ್‌ಸ್ಪೆಕ್ಟರ್ ಪ್ರವೀಣ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಉದ್ಯೋಗ ಕೊಡಿಸುವುದಾಗಿ ಆಮಿಷವೊಡ್ಡಿ ₹ 1.53 ಕೋಟಿ ಪಡೆದು ವಂಚಿಸಿದ ಪ್ರಕರಣದ ತನಿಖೆಯಲ್ಲಿ ಆರೋಪಿಗಳಿಗೆ ಅನುಕೂಲ ಮಾಡಿಕೊಡುವುದಾಗಿ ಭರವಸೆ ನೀಡಿ ₹ 3.70 ಲಕ್ಷ ಲಂಚ ಪಡೆದಿದ್ದು, ಇನ್ನೂ ₹ 5 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಚಿಕ್ಕಜಾಲ ಠಾಣೆಯ ಹೆಡ್ ಕಾನ್‌ಸ್ಟೆಬಲ್ ರವಿ ಎಸ್. ಎಂಬುವವರನ್ನು ಲೋಕಾಯುಕ್ತ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಈ ಪ್ರಕರಣದಲ್ಲಿ ರವಿ ಎರಡನೇ ಆರೋಪಿಯಾಗಿದ್ದು, ಚಿಕ್ಕಜಾಲ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಪ್ರವೀಣ್ ಮೊದಲ ಆರೋಪಿ. ಇನ್‌ಸ್ಪೆಕ್ಟರ್ ಪರವಾಗಿ ಹೆಡ್ ಕಾನ್‌ಸ್ಟೆಬಲ್ ಲಂಚಕ್ಕೆ ಬೇಡಿಕೆ ಇಟ್ಟಿರುವುದು ಮತ್ತು ಹಣ ಪಡೆದುಕೊಂಡಿರುವುದಕ್ಕೆ ಲಭ್ಯವಿರುವ ಸಾಕ್ಷ್ಯಗಳನ್ನು ಆಧರಿಸಿ ಅವರನ್ನು ಬಂಧಿಸಲಾಗಿದೆ. ಹೆಡ್ ಕಾನ್‌ಸ್ಟೆಬಲ್ ಬಂಧನವಾಗುತ್ತಿದ್ದಂತೆ ಇನ್‌ಸ್ಪೆಕ್ಟರ್ ಪ್ರವೀಣ್ ತಲೆಮರೆಸಿಕೊಂಡಿದ್ದಾರೆ.

ಪೊಲೀಸ್ ಇಲಾಖೆ, ಬೆಂಗಳೂರು ಜಲಮಂಡಳಿ ಸೇರಿದಂತೆ ವಿವಿಧೆಡೆ ಸರ್ಕಾರಿ ನೌಕರಿ ಕೊಡಿಸುವ ಭರವಸೆ ನೀಡಿ ಹಲವು ಮಂದಿಯಿಂದ ₹ 1.53 ಕೋಟಿ ಪಡೆದು ವಂಚಿಸಿದ ಆರೋಪದ ಮೇಲೆ ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಹುಲಿಯೂರು ದುರ್ಗ ಹೋಬಳಿ ಮಾಚೋನಹಳ್ಳಿ ಗ್ರಾಮದ ಪ್ರಕಾಶ್ ಮತ್ತು ಇತರರ ವಿರುದ್ಧ ಇದೇ ಜೂನ್‌ನಲ್ಲಿ ಪ್ರಕರಣ ದಾಖಲಾಗಿತ್ತು. ಯಲಹಂಕ ತಾಲ್ಲೂಕಿನ ತರಹುಣಸೆ ನಿವಾಸಿ ಟಿ.ಪಿ. ಮುನಿರಾಜು ಎಂಬುವವರು ನೀಡಿದ್ದ ದೂರನ್ನು ಆಧರಿಸಿ ಎಫ್‌ಐಆರ್ ದಾಖಲಿಸಿದ್ದ ಚಿಕ್ಕಜಾಲ ಠಾಣೆ ಪೊಲೀಸರು, ಆರೋಪಿಗಳನ್ನು ಬಂಧಿಸಿದ್ದರು.

‘ಈ ಪ್ರಕರಣದಲ್ಲಿ ಆರೋಪಪಟ್ಟಿಯಲ್ಲಿ ಆರೋಪಿಗಳ ಹೆಸರು ಕೈಬಿಡುವ ಭರವಸೆ ನೀಡಿ ಚಿಕ್ಕಜಾಲ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಮತ್ತು ಹೆಡ್ ಕಾನ್‌ಸ್ಟೆಬಲ್ ₹ 3.70 ಲಕ್ಷ ಲಂಚ ಪಡೆದುಕೊಂಡಿದ್ದರು. ಮತ್ತೆ ₹ 5 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಕುರಿತು ಪ್ರಕಾಶ್ ಅವರ ಮಾವ ಎಚ್.ಎನ್. ದೇವರಾಜು, ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ವಿಭಾಗಕ್ಕೆ ದೂರು ಸಲ್ಲಿಸಿದ್ದರು’ ಎಂದು ಲೋಕಾಯುಕ್ತದ ಅಧಿಕಾರಿಗಳು ತಿಳಿಸಿದ್ದಾರೆ.

ಲಂಚಕ್ಕೆ ಬೇಡಿಕೆ ಇಟ್ಟಿರುವ ಸಾಕ್ಷ್ಯಗಳನ್ನು ಆಧರಿಸಿ ರವಿ ಅವರನ್ನು ಬಂಧಿಸಲಾಗಿದೆ. ಪ್ರವೀಣ್ ಪತ್ತೆಗೆ ಕಾರ್ಯಾಚರಣೆ ನಡೆಯುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

ಮೊಬೈಲ್ ಸುಲಿಗೆ: ಮೂವರ ಬಂಧನ

ಬೆಂಗಳೂರು: ಈಶಾನ್ಯ ವಿಭಾಗದಲ್ಲಿ ಸಾರ್ವಜನಿಕರನ್ನು ಅಡ್ಡಗಟ್ಟಿ ಮೊಬೈಲ್ ಸುಲಿಗೆ ಮಾಡಿದ್ದ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಕನ್ನಮಂಗಲದ ಕೆ.ಎಸ್. ನಾಗೇಶ್ (20), ಯಲಹಂಕದ ಅಬ್ದುಲ್ ಸಮದ್ (33) ಹಾಗೂ ವಿದ್ಯಾರಣ್ಯಪುರದ ಬಿ.ಎಸ್. ಶಿವಕುಮಾರ್ (34) ಬಂಧಿತರು. ಇವರಿಂದ ಮೂರು ಮೊಬೈಲ್ ಹಾಗೂ ಎರಡು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಈಶಾನ್ಯ ವಿಭಾಗದ ಡಿಸಿಪಿ ಅನೂಪ್ ಶೆಟ್ಟಿ ತಿಳಿಸಿದರು.

‘ಚಿಕ್ಕಜಾಲ ಠಾಣೆ ವ್ಯಾಪ್ತಿಯ ಎಂ.ವಿ.ಐ.ಟಿ ಕಾಲೇಜು ಕ್ಯಾಂಪಸ್‌ನಲ್ಲಿ ವ್ಯಕ್ತಿಯೊಬ್ಬರನ್ನು ಬೆದರಿಸಿದ್ದ ನಾಗೇಶ್, ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದ. ಅಬ್ದುಲ್ ಹಾಗೂ ಶಿವಕುಮಾರ್, ವಿದ್ಯಾರಣ್ಯಪುರದ ಸಂಭ್ರಮ್ ಕಾಲೇಜು ಬಳಿ ಯುವಕರೊಬ್ಬರನ್ನು ಬೆದರಿಸಿ ಮೊಬೈಲ್ ಸುಲಿಗೆ ಮಾಡಿದ್ದರು. ಎರಡೂ ಘಟನೆಗಳ ಬಗ್ಗೆ ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡು, ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಹೇಳಿದರು.

‘ಸೈಬರ್ ಬೆದರಿಕೆ ತಡೆಗೆ ಸಿಇಆರ್‌ಟಿ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕಾಲೇಜುಗಳಲ್ಲಿ ಸೈಬರ್ ಸೆಕ್ಯೂರಿಟಿ ಕೋರ್ಸ್ ಅಳವಡಿಕೆ
- ಶಾಲಾ ಹಂತದಿಂದಲೇ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ಕ್ರಮ: ಸಚಿವ

ಬೆಂಗಳೂರು: ಸೈಬರ್ ಬೆದರಿಕೆ ಸಮರ್ಥವಾಗಿ ಎದುರಿಸಲು ರಾಜ್ಯದಲ್ಲಿ 'ಕಂಪ್ಯೂಟರ್ ತುರ್ತು ಸ್ಪಂದನಾ ತಂಡ' (ಸಿಇಆರ್‌ಟಿ) ವ್ಯವಸ್ಥೆಯನ್ನು ಅಸ್ತಿತ್ವಕ್ಕೆ ತರಲಾಗುತ್ತಿದೆ ಎಂದು ಉನ್ನತ ಶಿಕ್ಷಣ ಮತ್ತು ಐಟಿ-ಬಿಟಿ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಹೇಳಿದರು.

ವಿಧಾನಸೌಧದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ‘ರಾಷ್ಟ್ರೀಯ ಸೈಬರ್ ಸೆಕ್ಯೂರಿಟಿ ಜಾಗೃತಿ ಮಾಸ’ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿ ದಿಸೆಯಿಂದಲೇ ಜಾಗೃತಿ ಮೂಡಿಸಲು ಪಾಲಿಟೆಕ್ನಿಕ್, ಡಿಪ್ಲೊಮಾ ಮತ್ತು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಸೈಬರ್ ಸೆಕ್ಯೂರಿಟಿ ಕೋರ್ಸ್ ಅಳವಡಿಸಲಾಗುತ್ತಿದೆ. ಐಟಿ ಸ್ವತ್ತುಗಳನ್ನು ಸುರಕ್ಷಿತೆಗೆ ಸೈಬರ್ ಬೆದರಿಕೆ ದೊಡ್ಡ ಸವಾಲಾಗಿದೆ. ಇಂತಹ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಯುವ ಸಮೂಹ ಸನ್ನದ್ಧಗೊಳಿಸಲು ಶಾಲಾ ಹಂತದಿಂದಲೇ ರಾಜ್ಯದಲ್ಲಿ ವಿದ್ಯಾರ್ಥಿಗಳಿಗೆ ಸೈಬರ್ ಜಾಗೃತಿ ಮೂಡಿಸಲಾಗುತ್ತಿದೆ. ಕೋವಿಡ್ ನಂತರ ಬಹುದೊಡ್ಡ ಮಟ್ಟದಲ್ಲಿ ಡಿಜಿಟಲ್ ಪರಿವರ್ತನೆಯಾಗುತ್ತಿದೆ. ಅವುಗಳ ಸುರಕ್ಷತೆಯೂ ಮುಖ್ಯವಾಗಿದೆ ಎಂದರು.

ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ಬಿ.ತಿಮ್ಮೇಗೌಡ, ಸೈಬರ್ ಸೆಕ್ಯೂರಿಟಿ ಕರ್ನಾಟಕದ ಡಾ. ಕಾರ್ತೀಕ್ ಬಪ್ಪನಾಡು, ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಸಮಿತಿಯ ಮುಖ್ಯಸ್ಥ ಡಾ.ಅಶೋಕ ರಾಯಚೂರು, ಐಟಿ ಇಲಾಖೆಯ ನಿರ್ದೇಶಕಿ ಮೀನಾ ನಾಗರಾಜ್ ಉಪಸ್ಥಿತರಿದ್ದರು.

ನಿಷೇಧಿತ ಔಷಧ ಮಾರಾಟ: ಆರೋಪಿ ಬಂಧನ

ಬೆಂಗಳೂರು: ಮತ್ತು ಬರುವ ಅಂಶವುಳ್ಳ ಔಷಧ ಮಾರುತ್ತಿದ್ದ ಆರೋಪದಡಿ ಅಮಾನ್‌ವುಲ್ಲಾ (44) ಎಂಬುವವರನ್ನು ದಕ್ಷಿಣ ವಿಭಾಗದ ಪೊಲೀಸರು ಬಂಧಿಸಿದ್ದು, ಈತನಿಂದ 356 ಬಾಟಲಿ ಔಷಧವನ್ನು ಜಪ್ತಿ ಮಾಡಿದ್ದಾರೆ.

‘ಜೆ.ಪಿ. ನಗರ ಬಳಿಯ ಕನಕನಗರದ ಅಮಾನುಲ್ಲಾ, ನಿಷೇಧಿತ ಔಷಧ ಇಸ್ಕೂಫ್ ಬಾಟಲಿಗಳನ್ನು ಅಕ್ರಮವಾಗಿ ಮಾರುತ್ತಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕೆಮ್ಮು ನಿವಾರಣೆಗೆಂದು ಬಳಸುತ್ತಿದ್ದ ಇಸ್ಕೂಫ್ ಔಷಧದಲ್ಲಿ ಮತ್ತು ಬರುವ ಅಂಶವಿತ್ತು. ಈ ಔಷಧವನ್ನು ಡ್ರಗ್ಸ್ ಎಂದು ಪರಿಗಣಿಸಿ ನಿಷೇಧಿಸಲಾಗಿತ್ತು. ಅದೇ ಔಷಧವನ್ನು ಸಗಟು ರೀತಿಯಲ್ಲಿ ಆರೋಪಿ ಅಮಾನ್‌ವುಲ್ಲಾ ಮಾರುತ್ತಿದ್ದ. ಇದರಿಂದ ಹಣ ಸಂಪಾದಿಸಿ, ಐಷಾರಾಮಿ ಜೀವನ ನಡೆಸುತ್ತಿದ್ದ’ ಎಂದು ತಿಳಿಸಿದರು.

‘ಆರೋಪಿ ಎಲ್ಲಿಂದ ಔಷಧ ತಂದಿದ್ದನೆಂಬುದು ಗೊತ್ತಾಗಿಲ್ಲ. ಕೃತ್ಯದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವ ಶಂಕೆ ಇದ್ದು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಶ್ರೀರಾಮುಲು ವಜಾಕ್ಕೆ ಉಗ್ರಪ್ಪ ಆಗ್ರಹ

ಬೆಂಗಳೂರು: ತುಂಗ ಭದ್ರಾ ನಾಲೆ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಂಡಿದ್ದ ಜಮೀನನ್ನು ಕಬಳಿಸಿರುವ ಆರೋಪ ಎದುರಿಸುತ್ತಿರುವ ಸಚಿವ ಬಿ. ಶ್ರೀರಾಮುಲು ಅವರನ್ನು ಸಂಪುಟದಿಂದ ವಜಾಗೊಳಿಸಬೇಕು ಎಂದು ಕೆಪಿಸಿಸಿ ಉಪಾಧ್ಯಕ್ಷ ವಿ.ಎಸ್. ಉಗ್ರಪ್ಪ ಆಗ್ರಹಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಶ್ರೀರಾಮುಲು ಅವರು ಮಾಜಿ ಸಚಿವ ಜಿ. ಜನಾರ್ದನ ರೆಡ್ಡಿ ಅವರೊಂದಿಗೆ ಶಾಮೀಲಾಗಿ 27 ಎಕರೆ 5 ಗುಂಟೆ ಸರ್ಕಾರಿ ಜಮೀನು ಕಬಳಿಸಿರುವುದು ಲೋಕಾಯುಕ್ತ ಪೊಲೀಸರ ತನಿಖೆಯಲ್ಲಿ ಸಾಬೀತಾಗಿದೆ. ನ್ಯಾಯಾಲಯಕ್ಕೆ ಆರೋಪಪಟ್ಟಿಯೂ ಸಲ್ಲಿಕೆಯಾಗಿದೆ. ಬಿಜೆಪಿ ನಾಯಕರಿಗೆ ನೈತಿಕತೆ ಇದ್ದರೆ ರಾಮುಲು ಅವರನ್ನು ಸಂಪುಟದಿಂದ ಕೈಬಿಡಲಿ’ ಎಂದರು.



ನೃತ್ಯ ಪ್ರದರ್ಶನ

ಸಂಗೀತ ಸಂಭ್ರಮ ನಗರದಲ್ಲಿ ಶುಕ್ರವಾರ ಆಯೋಜಿಸಿದ ಸ್ನೇಹ ಸಂಭ್ರಮ ಕಾರ್ಯಕ್ರಮದಲ್ಲಿ ವಸುಂಧರಾ ದೊರೆಸ್ವಾಮಿ ನೃತ್ಯ ಪ್ರದರ್ಶಿಸಿದರು

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಒತ್ತಾಯ

‘ಕನ್ನಡದಲ್ಲಿ ಎಸ್‌ಎಸ್‌ಸಿ ಪರೀಕ್ಷೆ ನಡೆಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಸ್ಟಾಫ್ ಸೆಲೆಕ್ಷನ್ ಕಮಿಷನ್ (ಎಸ್‌ಎಸ್‌ಸಿ) 20 ಸಾವಿರ ಹುದ್ದೆಗಳ ನೇಮಕಾತಿಗೆ ಹಿಂದಿ ಹಾಗೂ ಇಂಗ್ಲಿಷ್‌ನಲ್ಲಿ ಪರೀಕ್ಷೆ ನಡೆಸುತ್ತಿದೆ. ಕನ್ನಡ ಸೇರಿ ಯಾವುದೇ ಪ್ರಾದೇಶಿಕ ಭಾಷೆಯಲ್ಲಿ ಅವಕಾಶವಿಲ್ಲ. ಇದು ಕೇಂದ್ರದ ಹಿಂದಿ ಹೇರಿಕೆ, ಭಾಷಾ ತಾರತಮ್ಯಕ್ಕೆ ಸಾಕ್ಷಿ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರು ಟೀಕಿಸಿದ್ದಾರೆ.

ಈ ಕುರಿತು ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದಿರುವ ಅವರು, ಆಯಾ ರಾಜ್ಯದಲ್ಲಿ ಭಾಷಾವಾರು ಪರೀಕ್ಷೆಗೆ ಅವಕಾಶ ನೀಡಬೇಕು. ಯುಪಿಎಸ್‌ಸಿ ಮಾದರಿಯಲ್ಲೇ ಆದ್ಯತೆ ನೀಡಬೇಕು. ಈಗ ಆರಂಭಿಸಿರುವ ನೇಮಕಾತಿ ಪ್ರಕ್ರಿಯೆಯನ್ನು ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿದ್ದಾರೆ.

ಕೇಂದ್ರ ಸರ್ಕಾರವು ಪ್ರಾದೇಶಿಕ ಭಾಷೆ ಗಳನ್ನು ಹತ್ತಿಕ್ಕುತ್ತಿದೆ. ತ್ರಿಭಾಷಾ ಸೂತ್ರ ಸಮಾಧಿ ಮಾಡುತ್ತಿದೆ. ಹಿಂದಿ ಭಾಷಿಗರನ್ನು ಕರ್ನಾಟಕ, ದಕ್ಷಿಣ ಭಾರತದಲ್ಲಿ ತುಂಬುವ ದುಸ್ಸಾಹಸ ಮಾಡುತ್ತಿದೆ ಎಂದು ಅವರು ಕೇಂದ್ರದ ನೀತಿ ವಿರುದ್ಧ ಅಸಮಾಧಾನ ಹೊರಹಾಕಿದ್ದಾರೆ.

ಕನ್ನಡದಲ್ಲೂ ಪರೀಕ್ಷೆಗೆ ಅವಕಾಶ ನೀಡಬೇಕು. ಕರ್ನಾಟಕದ ಹುದ್ದೆಗಳಿಗೆ ಕನ್ನಡಿಗರನ್ನೇ ನೇಮಿಸಬೇಕು. ಕನ್ನಡದಲ್ಲೇ ಪರೀಕ್ಷೆ ನಡೆಸಿದರೆ ಕರ್ನಾಟಕದ ಹಲವು ಪ್ರತಿಭಾವಂತ ಯುವಜನರ ಆಯ್ಕೆಗೆ ಅನುಕೂಲವಾಗುತ್ತದೆ. ರಾಜ್ಯದ ಜನರಿಗೆ ಕನ್ನಡದಲ್ಲಿ ಸೇವೆ ದೊರೆಯುತ್ತದೆ. ಈ ಬದಲಾವಣೆ ನಂತರವಷ್ಟೇ ಸಿಬ್ಬಂದಿ ಆಯ್ಕೆಗೆ ಆಯೋಗ ಪರೀಕ್ಷೆ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ.

ಅಪಪ್ರಚಾರ–ಸಿ.ಟಿ.ರವಿ

ಬೆಂಗಳೂರು: ಕೇಂದ್ರ ಸರ್ಕಾರ ನಡೆಸುವ ಸ್ಟಾಫ್ ಸೆಲೆಕ್ಷನ್ ಕಮಿಷನ್ (ಎಸ್‌ಎಸ್‌ಸಿ) ತಾಂತ್ರಿಕ ಪರೀಕ್ಷೆಗಳನ್ನು 1975 ರಿಂದಲೇ ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲೇ ನಡೆಸಲಾಗುತ್ತಿದೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದರು.

ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಪರೀಕ್ಷೆ ಆರಂಭಿಸಿದ್ದಲ್ಲ. ಎಚ್. ಡಿ. ದೇವೇಗೌಡ ಅವರು ಪ್ರಧಾನಿ ಆಗಿದ್ದರು. ಆಗ ಏಕೆ ಕನ್ನಡ ಅಥವಾ ಇತರ ಭಾಷೆಗಳಲ್ಲಿ ಪರೀಕ್ಷೆ ನಡೆಸುವ ಬಗ್ಗೆ ನಿರ್ಣಯ ತೆಗೆದುಕೊಳ್ಳಲಿಲ್ಲ ಎಂದು ಸುದ್ದಿಗೋಷ್ಠಿಯಲ್ಲಿ ಅವರು ಪ್ರಶ್ನಿಸಿದರು.

ಯುಪಿಎ ಕಾಲದಲ್ಲೂ ಹಿಂದಿ, ಇಂಗ್ಲಿಷ್‌ನಲ್ಲೇ ಪರೀಕ್ಷೆ ನಡೆಯುತ್ತಿತ್ತು. ಆಗ ಅದರ ಅಂಗ ಪಕ್ಷವಾಗಿದ್ದ ಡಿಎಂಕೆ ಸುಮ್ಮನೆಯೇ ಇತ್ತು. ಈಗ ಕುಮಾರಸ್ವಾಮಿ, ಡಿಎಂಕೆ, ಟಿಆರ್‌ಎಸ್ ನಾಯಕರು ಬಿಜೆಪಿ ಸರ್ಕಾರದ ವಿರುದ್ಧ ಅಪಪ್ರಚಾರದಲ್ಲಿ ತೊಡಗಿದ್ದಾರೆ. ತಾಂತ್ರಿಕವಲ್ಲದ ಪರೀಕ್ಷೆಗಳನ್ನು 22 ಭಾರತೀಯ ಭಾಷೆಗಳಲ್ಲಿ ನಡೆಸಲಾಗುತ್ತಿದೆ ಎಂದು ಅವರು ಹೇಳಿದರು.

ಕಾಂಗ್ರೆಸಿಗರು ಮನುಷ್ಯರಲ್ಲವೇ?: ‘ರಾಹುಲ್ ಗಾಂಧಿಯವರ ಭಾರತ್ ಜೋಡೊ ಯಾತ್ರೆಯ ಬಗ್ಗೆ ನಾವು ಹೆದರಿಕೊಂಡಿಲ್ಲ. ನಾವು ಹೆದರಿಕೊಳ್ಳಲು ಅವರೇನೂ ಗುಮ್ಮನೂ ಅಲ್ಲ, ದೆವ್ವ, ಪಿಶಾಚಿ, ಪ್ರೇತಗಳೂ ಅಲ್ಲ. ಅವರೂ ನಮ್ಮಂತೆಯೇ ಮನುಷ್ಯರಲ್ಲವೇ? ಪ್ರಜಾತಂತ್ರ ಮತ್ತು ಹೆದರಿಕೆ ಒಟ್ಟಿಗೆ ಹೋಗುವಂತಹದ್ದಲ್ಲ. ಒಂದು ವೇಳೆ ಅವರು ತಮ್ಮನ್ನು ತಾವು ದೆವ್ವ, ಪಿಶಾಚಿಗಳು ಅಂದುಕೊಂಡಿದ್ದರೆ ಏನೂ ಮಾಡಲು ಆಗಲ್ಲ’ ಎಂದು ಲೇವಡಿ ಮಾಡುವ ಮೂಲಕ, ಭಾರತ್ ಜೋಡೋ ಯಾತ್ರೆಯಿಂದ ಬಿಜೆಪಿ ನಾಯಕರು ಹೆದರಿಕೊಂಡಿದ್ದಾರೆ ಎಂಬ ಕಾಂಗ್ರೆಸ್ ನಾಯಕರ ಟೀಕೆಗೆ ಸಿ.ಟಿ.ರವಿ ತಿರುಗೇಟು ನೀಡಿದರು.

ಪ್ರವಾದಿ ಸ್ಮರಣೆಯ ‘ಈದ್ ಮಿಲಾದ್’



• ಮಹಮ್ಮದ್ ನೂಮಾನ್

ಮುಸ್ಲಿಮರ ನಂಬಿಕೆಯ ಪ್ರಕಾರ ಪ್ರವಾದಿ ಮಹಮ್ಮದ್, ಇಸ್ಲಾಂನ ಕೊನೆಯ ಪ್ರವಾದಿಯಾಗಿದ್ದಾರೆ. ಅವರಿಗೂ ಮುನ್ನ ಲಕ್ಷಕ್ಕೂ ಅಧಿಕ ಪ್ರವಾದಿಗಳು ವಿವಿಧ ಕಾಲ, ದೇಶಗಳಲ್ಲಿ ಬಂದಿದ್ದಾರೆ. ಅಂತಿಮ ಪ್ರವಾದಿಯು ಸೌದಿ ಅರೇಬಿಯಾದ ಮಕ್ಕಾದಲ್ಲಿ ಕ್ರಿ.ಶ. 571ರಲ್ಲಿ ಜನಿಸಿದರು. ಎಳವೆಯಲ್ಲೇ ಅನಾಥರಾದ ಅವರ ಪೋಷಣೆಯನ್ನು ತಾತ ಅಬ್ದುಲ್ ಮುತ್ತಲಿಬ್ ವಹಿಸಿಕೊಂಡರು. ಅವರಿಗೆ 8 ವರ್ಷವಾಗಿದ್ದಾಗ ತಾತ ಕೂಡ ನಿಧನರಾದರು. ಆ ಬಳಿಕ ಚಿಕ್ಕಪ್ಪನ ಪೋಷಣೆಯಲ್ಲಿ ಬೆಳೆದರು. ಚಿಕ್ಕಪ್ಪ ಅಬೂತಾಲಿಬ್ ಬಡವರಾಗಿದ್ದ ಕಾರಣ ಪ್ರವಾದಿಗೆ ಸಣ್ಣ ವಯಸ್ಸಿನಲ್ಲೇ ಬಡತನದ ಅರಿವು ಉಂಟಾಯಿತು. ಅವರಿಗೆ ಅಕ್ಷರ ಕಲಿಯುವ ಅವಕಾಶ ಲಭಿಸಲಿಲ್ಲ. ಚಿಕ್ಕಪ್ಪನೊಂದಿಗೆ ವ್ಯಾಪಾರದಲ್ಲಿ ತೊಡಗಿಸಿಕೊಂಡರು. ವ್ಯಾಪಾರದಲ್ಲಿ ತೋರುತ್ತಿದ್ದ ಪ್ರಾಮಾಣಿಕತೆಯಿಂದಾಗಿ ಅವರು ಮಕ್ಕಾದಲ್ಲಿದ್ದ ಎಲ್ಲ ವರ್ಗ, ಪಂಗಡಗಳ ಜನರ ಪ್ರೀತಿಗೆ ಪಾತ್ರರಾದರು.

ಅವರಿಗೆ 40ನೇ ವಯಸ್ಸಿನಲ್ಲಿ ಪ್ರವಾದಿತ್ವ ಲಭಿಸುತ್ತದೆ. ಅಲ್ಲಾಹನು ದೇವದೂತ ‘ಜಿಬ್ರೀಲ’ರ ಮೂಲಕ ದೇವನ ಸಂದೇಶ ನೀಡುವನು. ಆ ಬಳಿಕ ನಿರಂತರ 23 ವರ್ಷ ದೇವನ ಸಂದೇಶ ಲಭಿಸುತ್ತಲೇ ಇರುತ್ತದೆ. ಆ ಸಂದೇಶಗಳು ಪವಿತ್ರ ಗ್ರಂಥ ‘ಕುರ್‌ಆನ್’ ರೂಪದಲ್ಲಿ ಇಂದು ಜಗತ್ತಿನ ಮುಂದಿದೆ. ಪ್ರವಾದಿತ್ವ ಲಭಿಸಿದ ಬಳಿಕ ಅವರು ಅರೇಬಿಯಾದಲ್ಲಿ ಇಸ್ಲಾಮಿನ ಜೀವನಪದ್ಧತಿಯನ್ನು ಪಸರಿಸಿದರು.

ಇಸ್ಲಾಂ ಬಗ್ಗೆ ತಿಳಿದುಕೊಳ್ಳಲು ‘ಕುರ್‌ಆನ್’ ಬಳಿಕ ಇರುವ ಅತ್ಯಂತ ಮಹತ್ವದ ಮೂಲ ಎಂದರೆ ಪ್ರವಾದಿಯವರ ಸಂದೇಶ ಮತ್ತು ಜೀವನಚರಿತ್ರೆಯಾಗಿದೆ. ಪ್ರವಾದಿ ಜೀವನದಲ್ಲಿ ನಡೆದಿರುವ ಎಲ್ಲ ಘಟನೆಗಳನ್ನು ಇತಿಹಾಸಕಾರರು ಬರೆದಿಟ್ಟಿದ್ದಾರೆ. ಅವರ ಜೀವನ ತೆರೆದ ಗ್ರಂಥವಾಗಿದೆ. ಅವರ ನಾಯಕತ್ವ ಕೇವಲ ಧಾರ್ಮಿಕ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ರಾಜಕೀಯ, ಸಾಮಾಜಿಕ, ಆರ್ಥಿಕ, ಶಿಕ್ಷಣ ಕ್ಷೇತ್ರಗಳಲ್ಲೂ ಮಾದರಿಯಾಗಿದ್ದರು. ಮೂಢನಂಬಿಕೆ, ಕಂದಾಚಾರಗಳಲ್ಲಿ ಮುಳುಗಿದ್ದ ಅರೇಬಿಯಾದ ಜನರನ್ನು ಸರಿದಾರಿಗೆ ತರಲು ಪ್ರಯತ್ನಿಸಿದ್ದರಲ್ಲದೆ, ಆ ಕೆಲಸದಲ್ಲಿ ಯಶಸ್ವಿಯೂ ಆಗಿದ್ದರು. ಮದ್ಯಪಾನ, ಜೂಜು, ಬಡ್ಡಿ, ಲಂಚವನ್ನು ನಿಷೇಧಿಸಿದ್ದರು.

ಎಲ್ಲ ಬಗೆಯ ಕೆಡುಕು ಮತ್ತು ಅನಾಚಾರಗಳಿಂದ ಮುಳುಗಿದ್ದ ಸಮಾಜವನ್ನು ವಿಶ್ವಕ್ಕೆ ಮಾದರಿಯಾಗುವ ರೀತಿಯಲ್ಲಿ ಕಟ್ಟಿದ್ದರು. ವ್ಯಾಪಾರ ವಹಿವಾಟಿನಲ್ಲಿ ಪ್ರಾಮಾಣಿಕತೆ ತಂದಿದ್ದರು. ಪರಸ್ಪರ ಕಿತ್ತಾಡುತ್ತಿದ್ದ ವಿವಿಧ ಪಂಗಡಗಳ ನಡುವೆ ಶಾಂತಿ, ಸೌಹಾರ್ದ ಮೂಡಿಸಿದ್ದರು. ಇಡೀ ಅರೇಬಿಯಾದ ಆಡಳಿತ ತಮ್ಮ ಕೈಗೆ ಬಂದರೂ ಜನರ ಮಧ್ಯೆ, ಸಾಮಾನ್ಯನಂತೆ ಬದುಕಿದ್ದರು. ಧರ್ಮ, ಮೈಬಣ್ಣ, ಪ್ರಾದೇಶಿಕತೆಯ ಆಧಾರದಲ್ಲಿ ಮನುಷ್ಯರ ನಡುವೆ ಮೇಲು–ಕೀಳು ಇಲ್ಲ ಎಂಬುದನ್ನು ಸಾರಿದ್ದರು. ‘ಅರಬನಿಗೆ ಅರಬೇತರನಿಗಿಂತ, ಬಿಳಿಯನಿಗೆ ಕಪ್ಪುವರ್ಣದವನಿಗಿಂತ, ಶ್ರೀಮಂತರಿಗೆ ಬಡವರಿಗಿಂತ ಯಾವುದೇ ಶ್ರೇಷ್ಠತೆ ಇಲ್ಲ. ನಿಮ್ಮಲ್ಲಿ ಒಳಿತಿನಲ್ಲಿ ಮುಂದಿರುವವರೇ ಉತ್ತಮರು’ ಎಂದು ಸಾರಿದ್ದ ಅವರ ಸಂದೇಶ ಎಲ್ಲ ಕಾಲಕ್ಕೂ ಪ್ರಸ್ತುತವಾಗಿದೆ.

ಜಗತ್ತಿನಾದ್ಯಂತ ಇರುವ ಮುಸ್ಲಿಮರು ಪ್ರವಾದಿ ಅವರೊಂದಿಗೆ ತುಂಬಾ ವಿಶಿಷ್ಟವಾದ ಸಂಬಂಧ ಹೊಂದಿದ್ದು, ಆ ಮಹಾನ್ ವ್ಯಕ್ತಿಯ ಜೀವನವನ್ನು 14 ಶತಮಾನಗಳಿಂದಲೂ ಕಟ್ಟುನಿಟ್ಟಾಗಿ ಅನುಸರಿಸಿಕೊಂಡು ಬರುತ್ತಿದ್ದಾರೆ.

ಜನ್ಮದಿನ ಆಚರಣೆ: ಪ್ರವಾದಿ ಜನ್ಮದಿನವನ್ನು ‘ಈದ್ ಮಿಲಾದ್’ ಅಥವಾ ‘ಮಿಲಾದುನ್ನಬಿ’ ಎಂಬ ಹೆಸರಿನಲ್ಲಿ ಆಚರಿಸಲಾಗುತ್ತದೆ. ಇಸ್ಲಾಮಿಕ್ ಕ್ಯಾಲೆಂಡರಿನ ಮೂರನೇ ತಿಂಗಳು ‘ರಬೀವುಲ್ ಅವ್ವಲ್’ 12ರಂದು ಅವರು ಜನಿಸಿದರು.

ಅವರ ಹುಟ್ಟುಹಬ್ಬದ ಆಚರಣೆ ಬಗ್ಗೆ ಮುಸ್ಲಿಮರಲ್ಲಿ ಭಿನ್ನಾಭಿಪ್ರಾಯಗಳಿವೆ. ಕೆಲವರು ವಿಜೃಂಭಣೆಯಿಂದ ಆಚರಿಸುವುದಾದರೆ, ಮತ್ತೆ ಕೆಲವರು ಆಚರಣೆ ವಿರೋಧಿಸುವರು. ವಾದ -ವಿವಾದಗಳು ಇದ್ದರೂ ಪ್ರತಿವರ್ಷ (ಈ ಬಾರಿ ಅ.9 ರಂದು) ಜನ್ಮದಿನದಂದು ಮೆರವಣಿಗೆ ಹಾಗೂ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಅವರ ಜೀವನಚರಿತ್ರೆ ಮತ್ತು ಸಂದೇಶಗಳನ್ನು ನೆನಪಿಸಲಾಗುತ್ತದೆ.

ದೇಶದ ಎಲ್ಲಾ ಪಂಚಾಯಿತಿಗಳಲ್ಲೂ ಪಿಎಸಿಎಸ್ ಸ್ಥಾಪನೆ: ಅಮಿತ್ ಶಾ

ಗ್ಯಾಂಗ್‌ಟಕ್ (ಸಿಕ್ಕಿಂ) (ಪಿಟಿಐ): ಕ್ಷೀರ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಹಾಗೂ ವಿವಿಧ ಕೃಷಿ ಚಟುವಟಿಕೆಗಳಿಗೆ ಉತ್ತೇಜನ ನೀಡಲು ಮುಂದಿನ ಐದು ವರ್ಷಗಳಲ್ಲಿ ದೇಶದ ಎಲ್ಲಾ ಪಂಚಾಯಿತಿಗಳಲ್ಲೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ಪಿಎಸಿಎಸ್) ಸ್ಥಾಪಿಸಲಾಗುವುದು ಎಂದು ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಶುಕ್ರವಾರ ಹೇಳಿದ್ದಾರೆ.

ಇಲ್ಲಿ ಹಮ್ಮಿಕೊಂಡಿದ್ದ ಪೂರ್ವ ಮತ್ತು ಈಶಾನ್ಯ ವಲಯದ ಹಾಲು ಉತ್ಪಾದಕರ ಸಹಕಾರಿ ಸಂಘದ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು ‘ಸದ್ಯ ದೇಶದಾದ್ಯಂತ ಕೇವಲ 65 ಸಾವಿರ ಪಿಎಸಿಎಸ್‌ಗಳು ಸಕ್ರಿಯವಾಗಿವೆ. 2027ರ ಹೊತ್ತಿಗೆ ದೇಶದ ಎಲ್ಲಾ ಪಂಚಾಯಿತಿಗಳೂ ಪಿಎಸಿಎಸ್‌ಗಳನ್ನು ಹೊಂದಲಿವೆ’ ಎಂದೂ ಭರವಸೆ ನೀಡಿದ್ದಾರೆ.


ಅಮಿತ್ ಶಾ

ಗ್ಯಾಸ್, ಪೆಟ್ರೋಲ್ ಮಾರಾಟ, ಹಾಲು ಮತ್ತು ಕೃಷಿ ಉತ್ಪನ್ನಗಳ ಸಂಗ್ರಹಣೆ ಹಾಗೂ ಮಾರಾಟಕ್ಕಾಗಿ ಪಿಎಸಿಎಸ್‌ಗಳು ಕಾರ್ಯನಿರ್ವಹಿಸಲಿವೆ. ಇದರಿಂದ ಮಹಿಳೆಯರ ಸಬಲೀಕರಣ ಸಾಧ್ಯ ಎಂದಿದ್ದಾರೆ.

ಹಿಂದಿನ ಸರ್ಕಾರಗಳು ಸಹಕಾರ ಕ್ಷೇತ್ರವನ್ನು ಕಡೆಗಣಿಸಿದ್ದವು ಎಂದೂ ಆರೋಪಿಸಿದ ಶಾ ಅವರು, ಬಡತನ ನಿರ್ಮೂಲನೆ ಹಾಗೂ ಮಹಿಳೆಯರ ಸಬಲೀಕರಣದ ಉದ್ದೇಶದಿಂದ ಪ್ರತ್ಯೇಕ ಸಚಿವಾಲಯವನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಪಿಒಕೆಗೆ ಅಮೆರಿಕ ರಾಯಭಾರಿ ಭೇಟಿ: ಭಾರತದ ಆಕ್ಷೇಪ

ನವದೆಹಲಿ(ಪಿಟಿಐ): ಇಸ್ಲಾಮಾಬಾದ್‌ನಲ್ಲಿರುವ ಅಮೆರಿಕದ ರಾಯಭಾರಿ ಇತ್ತೀಚೆಗೆ ಪಾಕ್ ಆಕ್ರಮಿತ ಕಾಶ್ಮೀರ್‌ಗೆ (ಪಿಒಕೆ) ಭೇಟಿ ನೀಡಿರುವುದಕ್ಕೆ ಭಾರತ ತನ್ನ ಆಕ್ಷೇಪಣೆಯನ್ನು ಅಮೆರಿಕಕ್ಕೆ ತಿಳಿಸಿದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಶುಕ್ರವಾರ ತಿಳಿಸಿದರು.

‘ಅಮೆರಿಕದ ರಾಯಭಾರಿಯು ಪಿಒಕೆಯಲ್ಲಿ ಕೆಲವು ಸಭೆಗಳನ್ನು ನಡೆಸಿದ್ದ ಬಗ್ಗೆಯೂ ಅಮೆರಿಕಕ್ಕೆ ಆಕ್ಷೇಪಣೆಗಳನ್ನು ತಿಳಿಸಿದ್ದೇವೆ’ ಎಂದೂ ಅವರು ಹೇಳಿದರು.

ಆದೇಶ ಪ್ರತಿ ಸಿಕ್ಕಿದ ಮೇಲೆ ಪ್ರತಿಭಟನೆ ಸ್ಥಗಿತ

ಬೆಂಗಳೂರು: ಮೀಸಲಾತಿ ಹೆಚ್ಚಿಸುವ ಸಂಬಂಧ ಅಧಿಕೃತ ಆದೇಶದ ಪ್ರತಿ ಸಿಕ್ಕಿದ ಬಳಿಕ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಅವರ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿರುವ ಪ್ರತಿಭಟನೆ ಸ್ಥಗಿತಗೊಳಿಸಲು ಪರಿಶಿಷ್ಟ ಜಾತಿ (ಎಸ್‌ಸಿ) ಹಾಗೂ ಪರಿಶಿಷ್ಟ ಪಂಗಡ (ಎಸ್‌ಟಿ) ಮೀಸಲಾತಿ ಹೆಚ್ಚಳ ಹೋರಾಟ ಕ್ರಿಯಾ ಸಮಿತಿ ನಿರ್ಧರಿಸಿದೆ.

‘ಮೀಸಲಾತಿ ಪ್ರಮಾಣ ಹೆಚ್ಚಿಸಲು ನಿರ್ಧರಿಸಿರುವುದು ಸಂತಸ ತಂದಿದೆ. ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ. ಆದರೆ, ಆದೇಶ ಸಿಕ್ಕಿದ ಬಳಿಕವಷ್ಟೆ ಪ್ರತಿಭಟನೆ ಕೈಬಿಡಲು ತೀರ್ಮಾನ ಕೈಗೊಳ್ಳಲಾಗಿದೆ’ ಎಂದು ಸಮಿತಿ ಸಂಚಾಲಕ ಬಸವರಾಜ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಸ್ವಾಮೀಜಿ ನೇತೃತ್ವದಲ್ಲಿ ನಡೆಯುತ್ತಿರುವ ಪ್ರತಿಭಟನೆಯು 246 ದಿನ ಪೂರೈಸಿದೆ’ ಎಂದು ತಿಳಿಸಿದರು.

ಎಸ್ಸಿ,ಎಸ್ಟಿ ಮೀಸಲಾತಿ ಹೆಚ್ಚಳಕ್ಕೆ ಅಸ್ತು

ಒಂದನೇ ಪುಟದಿಂದ

ಸಂವಿಧಾನದ ಆಶಯದಂತೆ ಎಸ್.ಸಿ ಹಾಗೂ ಎಸ್.ಟಿ ಸಮುದಾಯಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡಬೇಕೆಂಬ ಬೇಡಿಕೆ ಹಲವು ವರ್ಷಗಳಿಂದಲೂ ಇದೆ. ಅದಕ್ಕೆ ಪೂರಕವಾಗಿ ನಾಗಮೋಹನದಾಸ್ ಆಯೋಗದ ಎಲ್ಲ ಶಿಫಾರಸುಗಳು ಹಾಗೂ ನಿವೃತ್ತ ನ್ಯಾಯಮೂರ್ತಿ ಸುಭಾಷ್ ಬಿ. ಅಡಿ ನೇತೃತ್ವದ ಸಮಿತಿಯ ಶಿಫಾರಸುಗಳನ್ನೂ ಒಪ್ಪಿಕೊಳ್ಳುವ ನಿರ್ಧಾರ ಮಾಡಲಾಗಿದೆ ಎಂದು ಹೇಳಿದರು.

ಮೀಸಲಾತಿ ಹೆಚ್ಚಳಕ್ಕೆ ಕ್ರಮ ಕೈಗೊಳ್ಳುವುದಾಗಿ ವಿಧಾನಮಂಡಲದಲ್ಲಿ ನೀಡಿದ್ದ ಭರವಸೆಯಂತೆ ಸದನ ನಾಯಕರ ಸಭೆ ನಡೆಸಲಾಗಿದೆ. ನಾಗಮೋಹನ ದಾಸ್ ವರದಿಯ ಶಿಫಾರಸುಗಳನ್ನು ಕುರಿತು ಸಂಪುಟ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಗುವುದು. ವರದಿಯನ್ನು ಅಂಗೀಕರಿಸುವ ತೀರ್ಮಾನವನ್ನು ಕೈಗೊಂಡ ಬಳಿಕ ಮೀಸಲಾತಿ ಹೆಚ್ಚಳಕ್ಕೆ ಪೂರಕವಾಗಿ ಆದೇಶ ಹೊರಡಿಸಲಾಗುವುದು. ಡಿಸೆಂಬರ್‌ನಲ್ಲಿ ನಡೆಯುವ ವಿಧಾನ ಮಂಡಲ ಅಧಿವೇಶನದಲ್ಲಿ ಸದನದಲ್ಲಿ ನಿರ್ಣಯ ಕೈಗೊಳ್ಳಲಾಗುವುದು ಎಂದರು.

ಯಾರಿಗೂ ತೊಂದರೆಯಾಗದು: ಎಸ್.ಸಿ ಮತ್ತು ಎಸ್.ಟಿ ಸಮುದಾಯಗಳ ಮೀಸಲಾತಿ ಪ್ರಮಾಣ ಹೆಚ್ಚಿಸುವುದಕ್ಕಾಗಿ ಇತರ ಯಾವುದೇ ಸಮುದಾಯಗಳ ಮೀಸಲಾತಿ ಪ್ರಮಾಣವನ್ನು ಕಡಿತಗೊಳಿಸುವುದಿಲ್ಲ. ಉಳಿದ ಎಲ್ಲ ಸಮುದಾಯಗಳ ಮೀಸಲಾತಿ ಪ್ರಮಾಣ ಈಗಿನಂತೆಯೇ ಮುಂದುವರಿಯಲಿದೆ. ಈ ವಿಚಾರದಲ್ಲಿ ಯಾವುದೇ ಸಮುದಾಯದ ಜನರು ಆತಂಕಪಡುವ ಅಗತ್ಯವಿಲ್ಲ ಎಂದು ಬೊಮ್ಮಾಯಿ ಹೇಳಿದರು.

9ನೇ ಪರಿಚ್ಛೇದಕ್ಕೆ ಸೇರಬೇಕು: ಒಟ್ಟು ಮೀಸಲಾತಿಯ ಪ್ರಮಾಣ ಶೇ 50ರಷ್ಟನ್ನು ಮೀರುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆದರೆ, ಈ ವಿಚಾರವನ್ನು ಸಂವಿಧಾನದ ಒಂಬತ್ತನೇ ಪರಿಚ್ಛೇದಕ್ಕೆ ಸೇರಿಸಿದರೆ ಮೀಸಲಾತಿಯ ಪ್ರಮಾಣವನ್ನು ಶೇ 50ಕ್ಕಿಂತಲೂ ಹೆಚ್ಚಿಸಲು ಸಾಧ್ಯವಿದೆ ಎಂದರು.

ತಮಿಳುನಾಡು ಸರ್ಕಾರ 1994ರಲ್ಲಿ ಮೀಸಲಾತಿ ಪ್ರಮಾಣವನ್ನು ಶೇ 50ಕ್ಕಿಂತಲೂ ಹೆಚ್ಚಿಸಿದೆ. ಸಂವಿಧಾನದ ಪರಿಚ್ಛೇದ 9ರ ವ್ಯಾಪ್ತಿಗೆ ಆ ವಿಷಯವನ್ನು ಸೇರಿಸಿರುವುದರಿಂದ ಮೀಸಲಾತಿಗೆ ರಕ್ಷಣೆ ದೊರೆತಿದೆ. 2007ರಲ್ಲಿ ಸುಪ್ರೀಂ ಕೋರ್ಟ್‌ನಿಂದ ಮತ್ತೊಂದು ತೀರ್ಪು ಬಂದಿದ್ದರೂ ಮೀಸಲಾತಿ ಪ್ರಮಾಣದ ಹೆಚ್ಚಳದ ತೀರ್ಮಾನಕ್ಕೆ ರಕ್ಷಣೆ ದೊರೆತಿದೆ. ಅದೇ ಮಾದರಿಯಲ್ಲಿ ಮೀಸಲಾತಿ ಹೆಚ್ಚಿಸುವ ತೀರ್ಮಾನವನ್ನು ರಾಜ್ಯದಲ್ಲೂ ಕೈಗೊಳ್ಳಲು ನಿರ್ಧರಿಸಲಾಗಿದೆ ಎಂದು ಬೊಮ್ಮಾಯಿ ಹೇಳಿದರು.

ಸಚಿವರಾದ ಗೋವಿಂದ ಕಾರಜೋಳ, ಜೆ.ಸಿ. ಮಾಧುಸ್ವಾಮಿ, ಆರ್. ಅಶೋಕ, ಬಿ. ಶ್ರೀರಾಮುಲು, ಕೋಟ ಶ್ರೀನಿವಾಸ ಪೂಜಾರಿ, ಎಸ್. ಅಂಗಾರ, ಆನಂದ್ ಸಿಂಗ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಉಪ ನಾಯಕ ಯು.ಟಿ. ಖಾದರ್, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ವಿಧಾನ ಪರಿಷತ್‌ನಲ್ಲಿ ವಿರೋಧ ಪಕ್ಷದ ಮುಖ್ಯ ಸಚೇತಕ ಪ್ರಕಾಶ್ ರಾಥೋಡ್, ಕಾಂಗ್ರೆಸ್ ಶಾಸಕ ಸತೀಶ ಜಾರಕಿಹೊಳಿ, ಮುಖಂಡ ವಿ.ಎಸ್. ಉಗ್ರಪ್ಪ, ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಎಸ್.ಎಲ್. ಭೋಜೇಗೌಡ, ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವದಗಿ ಸಭೆಯಲ್ಲಿದ್ದರು.

ತುರ್ತು ಅಧಿವೇಶನಕ್ಕೆ ಆಗ್ರಹ

‘ಮೀಸಲಾತಿ ಹೆಚ್ಚಳಕ್ಕೆ ರಾಜ್ಯ ಸರ್ಕಾರ ಶಿಫಾರಸು ಮಾಡಬಹುದು. ಕೇಂದ್ರ ಸರ್ಕಾರವೇ ತೀರ್ಮಾನ ಕೈಗೊಂಡು, ಸಂವಿಧಾನ ತಿದ್ದುಪಡಿಯ ಮೂಲಕ ಅದಕ್ಕೆ ರಕ್ಷಣೆ ನೀಡಬೇಕು. ಈ ಸಂಬಂಧ ಒಕ್ಕೊರಲಿನ ನಿರ್ಣಯ ಕೈಗೊಳ್ಳಲು ತುರ್ತಾಗಿ ವಿಧಾನಮಂಡಲದ ಅಧಿವೇಶನ ಕರೆಯುವಂತೆ ಸರ್ಕಾರವನ್ನು ಆಗ್ರಹಿಸಿದ್ದೇನೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

‘ಮೀಸಲಾತಿ ಹೆಚ್ಚಳದ ತೀರ್ಮಾನವನ್ನು ಸಂವಿಧಾನದ 9ನೇ ಪರಿಚ್ಛೇದದ ವ್ಯಾಪ್ತಿಗೆ ತರಬೇಕು. ಇದಕ್ಕಾಗಿ ಸಂವಿಧಾನ ತಿದ್ದುಪಡಿ ಮಾಡಬೇಕು. ಈಗಾಗಲೇ ಸಾಕಷ್ಟು ವಿಳಂಬವಾಗಿದೆ. ಕೇಂದ್ರ ಹಾಗೂ ರಾಜ್ಯ ಎರಡೂ ಕಡೆಗಳಲ್ಲಿ ಬಿಜೆಪಿ ಸರ್ಕಾರವಿದೆ. ಇನ್ನು ತಡವಾಗದಂತೆ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

ನಾನು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲೇ ನಿವೃತ್ತ ನ್ಯಾ. ನಾಗಮೋಹನ ದಾಸ್ ಆಯೋಗ ರಚಿಸಲಾಗಿತ್ತು. ಅದರ ವರದಿಯನ್ನು ಅನುಷ್ಠಾನಕ್ಕೆ ಸರ್ಕಾರ ನಿರ್ಧರಿಸಿದೆ

ಎಚ್‌.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಮೀಸಲಾತಿ ಹೆಚ್ಚಳದ ತೀರ್ಮಾನವನ್ನು ಸರ್ವ ಪಕ್ಷಗಳ ನಾಯಕರ ಸಭೆಯಲ್ಲಿ ಕೈಗೊಳ್ಳಲಾಗಿದೆ. ಈಗಲಾದರೂ ವಾಲ್ಮೀಕಿ ಸ್ವಾಮೀಜಿ ಧರಣಿ ಅಂತ್ಯ ಗೊಳಿಸಬೇಕು.

ಬಿ. ಶ್ರೀರಾಮುಲು, ಸಾರಿಗೆ ಸಚಿವ

ಬಿಜೆಪಿ ಪ್ರಮುಖರ ಸಮಿತಿ ಸಭೆಯಲ್ಲೂ ನಿರ್ಣಯ

ಬೆಂಗಳೂರು: ಪರಿಶಿಷ್ಟ ಪಂಗಡದ ಮೀಸಲಾತಿ ಪ್ರಮಾಣವನ್ನು ಶೇ 7 ಕ್ಕೆ ಹೆಚ್ಚಿಸಲು ಶುಕ್ರವಾರ ಬೆಳಿಗ್ಗೆ ನಡೆದ ಬಿಜೆಪಿ ಪ್ರಮುಖರ ಸಮಿತಿ ಸಭೆಯಲ್ಲಿ ಸರ್ವಾನುಮತದ ನಿರ್ಣಯ ತೆಗೆದುಕೊಳ್ಳಲಾಯಿತು.

‘ಈ ಐತಿಹಾಸಿಕ ನಿರ್ಣಯಕ್ಕೆ ಕೂಡಲೇ ಒಪ್ಪಿಗೆ ನೀಡಿ ಜಾರಿಗೆ ತರಬೇಕು’ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಅವರಿಗೆ ಸಮಿತಿ ಮನವಿ ಮಾಡಿತು. ಬಳಿಕ ನಡೆದ ಕಾರ್ಯಕಾರಿಣಿಯಲ್ಲಿ ಮಾತನಾಡಿದ ಬೊಮ್ಮಾಯಿ, ಸರ್ವ ಪಕ್ಷಗಳ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಿ, ಮೀಸಲಾತಿ ಹೆಚ್ಚಳ ಪ್ರಕಟಿಸುವುದಾಗಿ ಭರವಸೆ ನೀಡಿದರು. ಕಾರ್ಯಕಾರಿಣಿ ಸದಸ್ಯರು ಎದ್ದು ನಿಂತು ಒಪ್ಪಿಗೆ ಸೂಚಿಸಿದರು.

ಮಕ್ಕಳ ಕಳ್ಳನೆಂದು ಶಂಕಿಸಿ ಕಾರ್ಮಿಕನ ಹತ್ಯೆ

ಒಂದನೇ ಪುಟದಿಂದ

‘ಸ್ಥಳಕ್ಕೆ ಹೋಗಿದ್ದ ರಾಮಮೂರ್ತಿನಗರ ಠಾಣೆ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ, ಸಂಜಯ್ ಅವರನ್ನು ರಕ್ಷಿಸಿ ಠಾಣೆಗೆ ಕರೆದೊಯ್ದಿದ್ದರು. ಅಮಾಯಕರೆಂಬುದು ತಿಳಿಯುತ್ತಿದ್ದಂತೆ ಬಿಟ್ಟು ಕಳುಹಿಸಿದ್ದರು. ಠಾಣೆಯಿಂದ ನಡೆದುಕೊಂಡು ಐಟಿಐ ಗೇಟ್ ರಸ್ತೆಯವರೆಗೂ ಬಂದಿದ್ದ ಸಂಜಯ್, ಕುಸಿದು ಬಿದ್ದು ಮೃತಪಟ್ಟಿದ್ದರೆಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಹಣದ ಕೊರತೆ– ನಗರಕ್ಕೆ ಬಾರದ ಪತ್ನಿ’

‘ಸಂಜಯ್ ಮೃತದೇಹ ಸಿಕ್ಕ ನಂತರ ಜಾರ್ಖಂಡ್‌ನಲ್ಲಿರುವ ಪತ್ನಿಗೆ ವಿಷಯ ತಿಳಿಸಲಾಯಿತು. ಹಣವಿಲ್ಲದಿದ್ದರಿಂದ ಬೆಂಗಳೂರಿಗೆ ಬರಲು ಸಾಧ್ಯವಿಲ್ಲವೆಂದು ಪತ್ನಿ ಹೇಳಿದರು. ಹಣ ಕೊಡುವುದಾಗಿ ಹೇಳಿದರೂ ನಗರಕ್ಕೆ ಬರಲಿಲ್ಲ. ಅವರ ಒಪ್ಪಿಗೆ ಪಡೆದು ಮೃತದೇಹದ ಮರಣೋತ್ತರ ಪರೀಕ್ಷೆ ಮಾಡಿಸಲಾಯಿತು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.


ಪೊಲೀಸರಿಂದ ಕೊಲೆ: ದೂರು

‘ಜನರು ಥಳಿಸುತ್ತಿದ್ದ ವೇಳೆ ಸ್ಥಳಕ್ಕೆ ಹೋಗಿದ್ದ ಪೊಲೀಸರು, ಸಂಜಯ್ ಅವರನ್ನು ಠಾಣೆಗೆ ಕರೆದೊಯ್ದು ಹೊಡೆದಿದ್ದಾರೆ. ಇದರಿಂದ ಗಾಯಗೊಂಡು ಸಂಜಯ್ ಮೃತಪಟ್ಟಿದ್ದಾರೆ. ಪ್ರಕರಣದಿಂದ ಪಾರಾಗಲು ಪೊಲೀಸರು ಸಾಕ್ಷ್ಯ ನಾಶ ಮಾಡಿದ್ದಾರೆ. ಹೀಗಾಗಿ, ಸಂಜಯ್ ಸಾವಿನ ಬಗ್ಗೆ ತನಿಖೆ ನಡೆಸಬೇಕು. ಮೃತ ಕಾರ್ಮಿಕನ ಸಾವಿಗೆ ನ್ಯಾಯ ಒದಗಿಸಬೇಕು’ ಎಂದು ಆರೋಪಿಸಿ ವಿ. ಪರಮೇಶ್ ಎಂಬುವರು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಹಾಗೂ ಮುಖ್ಯಮಂತ್ರಿ ಅವರಿಗೆ ದೂರು ಸಲ್ಲಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಪೂರ್ವ ವಿಭಾಗದ ಡಿಸಿಪಿ ಭೀಮಾ ಶಂಕರ ಗುಳೇದ್, ‘ಸಂಜಯ್ ನಾಲ್ಕು ನಿಮಿಷ ಮಾತ್ರ ಠಾಣೆಯಲ್ಲಿದ್ದರು. ಈ ದೃಶ್ಯ ಠಾಣೆಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ನಂತರ, ಅವರನ್ನು ಬಿಟ್ಟು ಕಳುಹಿಸಲಾಗಿತ್ತು. ಹಲ್ಲೆ ಮಾಡಿದವರ ವಿರುದ್ಧ ದೂರು ನೀಡಲು ಸಂಜಯ್ ನಿರಾಕರಿಸಿದ್ದರು. ಪೊಲೀಸರು ಹೊಡೆದಿದ್ದಾರೆ ಎಂಬುದು ಸುಳ್ಳು’ ಎಂದರು.

‘ಚಿಕಿತ್ಸೆ ಕೊಡಿಸದ ಪೊಲೀಸರು’: ‘ಸಂಜಯ್ ಅವರನ್ನು ಠಾಣೆಗೆ ಕರೆದೊಯ್ದಿದ್ದ ಪೊಲೀಸರು, ಮದ್ಯ ಕುಡಿದಿದ್ದಾನೆಂಬ ಕಾರಣಕ್ಕೆ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿಲ್ಲ. ಯಾವುದೇ ಹೇಳಿಕೆಯನ್ನೂ ಪಡೆಯದೇ ಬಿಟ್ಟು ಕಳುಹಿಸಿದ್ದರು. ದೇಹದ ಒಳಭಾಗದಲ್ಲಿ ಪೆಟ್ಟಾಗಿದ್ದರಿಂದ, ನಡೆದುಕೊಂಡು ಹೋಗುವ ಸಂದರ್ಭದಲ್ಲಿ ಕುಸಿದು ಬಿದ್ದು ಸಂಜಯ್ ಮೃತಪಟ್ಟಿದ್ದಾರೆ’ ಎಂದು ಸ್ಥಳೀಯರು ಹೇಳಿದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,332
ಇಂದಿನ ಅಂತ್ಯ	17,315
▼	17
ದಿನದ ಕನಿಷ್ಠ	17,216

ವಿನಿಮಯ ದರ

$ ಡಾಲರ್	82.30
£ ಪೌಂಡ್	92.15
€ ಯುರೊ	80.71
¥ ಯೆನ್ (100ಕ್ಕೆ)	57

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹437

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1680 (1660)
ಸೋಯಾ (ರಿಫೈಂಡ್)	₹1237 (1215)
ಸೂರ್ಯಕಾಂತಿ (ರಿಫೈಂಡ್)	₹1350 (1350)
ಪಾಮೋಲಿನ್	₹935 (905)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1200-1800
ಮಧ್ಯಮ	₹800-1200
ಸಣ್ಣ	₹400-800

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹150
ಆರ್‌ಎಸ್‌ಎಸ್-5	₹140
ಗುಡ್ ಲಾಟ್	₹135

ಸಂಕ್ಷಿಪ್ತ ಸುದ್ದಿ

ಜೆಮಿನಿ ಎಡಿಬಲ್ಸ್‌ಗೆ 'ಡೈಮಂಡ್' ಪ್ರಶಸ್ತಿ

ಬೆಂಗಳೂರು: ಭಾರತಕ್ಕೆ 2021–22ರಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಸೂರ್ಯಕಾಂತಿ ಎಣ್ಣೆ ಆಮದು ಮಾಡಿಕೊಂಡಿದ್ದಕ್ಕಾಗಿ ಜೆಮಿನಿ ಎಡಿಬಲ್ಸ್ ಆ್ಯಂಡ್ ಫ್ಯಾಟ್ಸ್ ಇಂಡಿಯಾ ಲಿಮಿಟೆಡ್‌ಗೆ ಡೈಮಂಡ್ ಪ್ರಶಸ್ತಿ ಲಭಿಸಿದೆ.

ಗ್ಲೋಬ್‌ಆಯಿಲ್ ಅವಾರ್ಡ್‌–2022ರಲ್ಲಿ ಈ ಪ್ರಶಸ್ತಿ ನೀಡಲಾಗಿದೆ. ಕಂಪನಿಯು ಸತತ ಎರಡನೇ ವರ್ಷವೂ ಈ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ.

ಜಿಇಎಫ್ ಇಂಡಿಯಾದ ಸಮೂಹದ ಉಪಾಧ್ಯಕ್ಷ ಅಕ್ಷಯ್ ಚೌಧರಿ ಅವರು ಪ್ರಶಸ್ತಿ ಸ್ವೀಕರಿಸಿದರು. ಉದ್ಯೋಗಿಗಳು, ವಿತರಕರ ಪರಿಶ್ರಮ ಮತ್ತು ಗ್ರಾಹಕರ ಪ್ರೋತ್ಸಾಹದಿಂದ ಈ ಗೌರವ ದೊರೆತಿದೆ ಎಂದರು.

ಸೂರ್ಯಕಾಂತಿ ಎಣ್ಣೆ ಮಾರಾಟದಲ್ಲಿ ದೇಶದ ನಂಬರ್ 1 ಬ್ರ್ಯಾಂಡ್ ಆಗಿ ಬೆಳೆಯಲು ಇದು ನೆರವಾಗಿದೆ ಎಂದು ಫ್ರೀಡಂ ಹೆಲ್ದಿ ಕುಕಿಂಗ್ ಆಯಿಲ್‌ನ ಹಿರಿಯ ಉಪಾಧ್ಯಕ್ಷ ಚಂದ್ರಶೇಖರ ರೆಡ್ಡಿ ಹೇಳಿದರು.

ಕಾವೇರಿ ಬ್ರ್ಯಾಂಡ್: ರೂಪಾಲಿ ಗಂಗುಲಿ ರಾಯಭಾರಿ

ಬೆಂಗಳೂರು: ವೆಲ್ನಿಕ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿಯು ಕಿರುತೆರೆ ನಟಿ ರೂಪಾಲಿ ಗಂಗುಲಿ ಅವರನ್ನು ಕಾವೇರಿ ಮೆಹೆಂದಿ ಕೋನ್ ಮತ್ತು ಕಾವೇರಿ ಈಸಿ ಹೇರ್ ಕಲರ್ ಉತ್ಪನ್ನಗಳ ಬ್ರ್ಯಾಂಡ್ ರಾಯಭಾರಿ ಆಗಿ ನೇಮಿಸಿದೆ.

ಎರಡು ಉತ್ಪನ್ನಗಳ ಟಿವಿ ಜಾಹೀರಾತಿನಲ್ಲಿ ರೂಪಾಲಿ ಅವರು ಕಾಣಿಸಿಕೊಳ್ಳಲಿದ್ದಾರೆ. ಈ ನಿರ್ಧಾರದಿಂದಾಗಿ ಮಾರುಕಟ್ಟೆಯಲ್ಲಿ ಹೆಚ್ಚಿನ ಗ್ರಾಹಕರನ್ನು ತಲುಪಲು ಸಾಧ್ಯವಾಗಲಿದೆ ಎಂದು ಕಂಪನಿಯು ತಿಳಿಸಿದೆ.

ಕಾವೇರಿ ಬ್ರ್ಯಾಂಡ್ ಗುಣಮಟ್ಟಕ್ಕೆ ಹೆಸರಾಗಿದೆ. ರೂಪಾಲಿ ಅವರಿಂದ ನಮ್ಮ ಬ್ರ್ಯಾಂಡ್ ಮೌಲ್ಯವು ಇನ್ನಷ್ಟು ವೃದ್ಧಿಯಾಗುವ ವಿಶ್ವಾಸವಿದೆ ಎಂದು ವೆಲ್ನಿಕ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಸುಖ್‌ದೇವ್ ಗೆಹ್ಲೋಟ್ ಹೇಳಿದರು.

ಐಡಿಬಿಐ ಬ್ಯಾಂಕ್ ಮಾರಾಟಕ್ಕೆ ಬಿಡ್



ನವದೆಹಲಿ (ಪಿಟಿಐ): ಐಡಿಬಿಐ ಬ್ಯಾಂಕ್‌ನ ಶೇ 60.72ರಷ್ಟು ಷೇರುಗಳನ್ನು ಮಾರಾಟ ಮಾಡುವ ಸಂಬಂಧ ಕೇಂದ್ರ ಸರ್ಕಾರವು ಶುಕ್ರವಾರ ಬಿಡ್ ಆಹ್ವಾನಿಸಿದೆ. ಖರೀದಿ ಆಸಕ್ತಿ ತಿಳಿಸಲು ಹೂಡಿಕೆದಾರರಿಗೆ ಡಿಸೆಂಬರ್ 16ರವರೆಗೆ ಅವಕಾಶ ನೀಡಲಾಗಿದೆ.

ಐಡಿಬಿಐ ಬ್ಯಾಂಕ್‌ನಲ್ಲಿ ಎಲ್‌ಐಸಿ ಶೇ 49.24ರಷ್ಟು ಷೇರುಪಾಲು ಹೊಂದಿದ್ದು, ಅದರಲ್ಲಿ ಶೇ 30.24ರಷ್ಟನ್ನು ಮಾರಾಟ ಮಾಡಲಿದೆ. ಕೇಂದ್ರ ಸರ್ಕಾರವು ಬ್ಯಾಂಕ್‌ನಲ್ಲಿ ಶೇ 45.48ರಷ್ಟು ಷೇರುಪಾಲು ಹೊಂದಿದ್ದು, ಅದರಲ್ಲಿ ಶೇ 30.48ರಷ್ಟನ್ನು ಮಾರಾಟ ಮಾಡಲಿದೆ.

ಐಡಿಬಿಐ ಬ್ಯಾಂಕ್‌ನ ಆಡಳಿತದ ನಿಯಂತ್ರದ ಜೊತೆಗೆ ಒಟ್ಟಾರೆ ಶೇ 60.72 ರಷ್ಟು ಷೇರುಗಳನ್ನು ಮಾರಾಟ ಮಾಡಲು ನಿರ್ಧರಿಸಲಾಗಿದೆ ಎಂದು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯು (ಡಿಐಪಿಎಎಂ) ತಿಳಿಸಿದೆ.

ಶೇ 60.72ರಷ್ಟು ಷೇರುಗಳನ್ನು ಮಾರಾಟ ಮಾಡಿದ ಬಳಿಕ ಎಲ್‌ಐಸಿ ಮತ್ತು ಸರ್ಕಾರದ ಬಳಿ ಒಟ್ಟು ಶೇ 34ರಷ್ಟು ಷೇರು ಉಳಿಯಲಿದೆ.

ಬಿಡ್ ಸಲ್ಲಿಸುವವರ ನಿವ್ವಳ ಮೌಲ್ಯವು ಕನಿಷ್ಠ ₹22,500 ಕೋಟಿ ಇರಬೇಕು. ಕಳೆದ ಐದು ವರ್ಷಗಳಲ್ಲಿ ಮೂರು ವರ್ಷಗಳು ನಿವ್ವಳ ಲಾಭ ಗಳಿಸಿರಬೇಕು ಎಂದು ಇಲಾಕೆಯು ತಿಳಿಸಿದೆ.

ಗರಿಷ್ಠ ನಾಲ್ವರು ಸದಸ್ಯರು ಇರುವ ಒಕ್ಕೂಟ ಸಹ ಬಿಡ್ ಸಲ್ಲಿಸಬಹುದು ಎಂದು ಹೇಳಿದೆ.

ಬಿಎಸ್‌ಇನಲ್ಲಿ ಐಡಿಬಿಐ ಬ್ಯಾಂಕ್‌ನ ಷೇರು ಮೌಲ್ಯವು ಶುಕ್ರವಾರ ಶೇ 0.71ರಷ್ಟು ಹೆಚ್ಚಾಗಿ ₹42.70ಕ್ಕೆ ತಲುಪಿತು. ಸದ್ಯದ ಮಾರುಕಟ್ಟೆ ದರದ ಪ್ರಕಾರ, ಶೇ 60.72 ರಷ್ಟು ಷೇರುಗಳ ಮೌಲ್ಯವು ₹27,800 ಕೋಟಿ ಆಗಲಿದೆ.

'ಕಾರಿನ ಆಮದು ತೆರಿಗೆ ತಗ್ಗಿಸಿ'

ನವದೆಹಲಿ (ರಾಯಿಟರ್ಸ್): ಆಮದು ಮಾಡಿಕೊಳ್ಳುವ ಕಾರುಗಳ ಮೇಲಿನ ತೆರಿಗೆಯನ್ನು ಶೇ 30ರಷ್ಟು ಇಳಿಕೆ ಮಾಡುವಂತೆ ದೇಶದ ಕಾರು ತಯಾರಿಕಾ ಕಂಪನಿಗಳು ಸರ್ಕಾರವನ್ನು ಒತ್ತಾಯಿಸಿವೆ ಎಂದು ಮೂಲಗಳು ಹೇಳಿವೆ.

ಭಾರತವು ಬ್ರಿಟನ್‌ನೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳುತ್ತಿರುವ ಬೆನ್ನಲ್ಲೇ ಕಂಪನಿಗಳು ಈ ಬೇಡಿಕೆ ಇಟ್ಟಿವೆ ಎಂದು ಮೂಲಗಳು ತಿಳಿಸಿವೆ.

ಕಾರುಗಳ ಆಮದು ಮೇಲೆ ಶೇ 60 ರಿಂದ ಶೇ 100ರವರೆಗೆ ತೆರಿಗೆ ವಿಧಿಸಲಾಗುತ್ತಿದೆ.

ಐದು ವರ್ಷಗಳ ಬಳಿಕ ಹಂತ ಹಂತವಾಗಿ ತೆರಿಗೆ ದರವನ್ನು ಶೇ 30ರಷ್ಟು ಇಳಿಕೆ ಮಾಡುವಂತೆ ಭಾರತೀಯ ವಾಹನ ತಯಾರಿಕಾ ಕಂಪನಿಗಳ ಒಕ್ಕೂಟವು (ಎಸ್‌ಐಎಎಂ) ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದೆ ಎಂದು ಹೇಳಿವೆ. ಬ್ರಿಟನ್ ಜೊತೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳುತ್ತಿರುವ ವಾಣಿಜ್ಯ ಸಚಿವಾಲಯವು ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಆಮದು ಸುಂಕ ತಗ್ಗಿಸಿದರೆ ಭಾರತದಲ್ಲಿಯೇ ತಯಾರಿಕೆ ಮಾಡುವುದಾಗಿ ಟೆಸ್ಲಾ ಕಂಪನಿ ಈಗಾಗಲೇ ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-48000
ಹಳತು	46000-56000
ಹೊಸನಗರ	
ಬಿಳಿಗೋಟು	25639-25639
ಚಾಲಿ	38699-39500
ಕೆಂಪುಗೋಟು	35000-38659
ರಾಶಿ	47809-50669
ಕುಮಟ	
ಚಿಪ್ಪು	29019-33339
ಕೋಕ	19018-31089
ಹೊಸಚಾಲಿ	38399-42699
ಫ್ಯಾಕ್ಟರಿ	12509-22699
ಶಿವಮೊಗ್ಗ	
ಬೆಟ್ಟೆ	50580-52700
ಗೊಬರಲು	28699-34169
ರಾಶಿ	46109-50599
ಸರಕು	61069-75996
ಸಿದ್ದಾಪುರ	
ಬಿಳಿಗೋಟು	28699-34169
ಚಾಲಿ	39189-41699
ಕೋಕ	26109-32099
ಕೆಂಪುಗೋಟು	26699-35589
ರಾಶಿ	48489-49849
ತಟ್ಟಿಬೆಟ್ಟೆ	38989-46699
ಶಿರಸಿ	
ಬೆಟ್ಟೆ	37109-46999
ಬಿಳಿಗೋಟು	17069-36001
ಚಾಲಿ	38613-43512
ಕೆಂಪುಗೋಟು	24311-40589
ರಾಶಿ	42899-49399
ಯಲ್ಲಾಪುರ	
ಬಿಳಿಗೋಟು	24118-36292
ಚಾಲಿ	35226-42893
ಕೋಕ	18899-31911
ರಾಶಿ	47699-53699
ತಟ್ಟಿಬೆಟ್ಟೆ	37609-46919

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16200	15800	16250	217.70 ಸೆಂಟ್ಸ್
ಎಸಿ	9100	8400	9000	
ಆರ್‌ಪಿ	9800	9800	9850	ಲಂಡನ್
ಆರ್‌ಸಿ	4800	4500	4800	2140 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

7–10-2022

ಜಾವಾ 70/80(ಹೊಸ)	11200-11250
ಜಾವಾ 80/90(ಹೊಸ)	10900-10950
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1690 (1670)
ಒಂದು ವಾರದ ಡೆಲಿವರಿ	1685 (1665)
ಸೋಯಾ ಕಚ್ಚಾ	1180 (1150)
ಪಾಮ್ ವಾರದ ಡೆಲಿವರಿ	933 (903)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1250)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,600 (51,600)
ಬೆಳ್ಳಿ ಕೆ.ಜಿ 60,900 (60,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ


ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಅಡಮಾನ ಇಲ್ಲದೇ ಸಾಲ ● ಕೇಂದ್ರ ಸರ್ಕಾರದ ಅಧಿಸೂಚನೆ ಪ್ರಕಟ

ನವೋದ್ಯಮಕ್ಕೆ ಸಾಲ ಖಾತರಿ

ಮುಖ್ಯಾಂಶಗಳು

- ಸಾಲದ ಗರಿಷ್ಠ ಮೊತ್ತ ₹10 ಕೋಟಿ
- ಹಣಕಾಸು ಸಂಸ್ಥೆಗಳಿಂದ ಸಾಲಗಾರರ ಖಾತೆ ಮೇಲ್ವಿಚಾರಣೆ



ನವದೆಹಲಿ (ಪಿಟಿಐ): ನವೋದ್ಯಮಗಳನ್ನು ಸಾಲ ಖಾತರಿ ಯೋಜನೆಯ (ಸಿಜಿಎಸ್) ವ್ಯಾಪ್ತಿಗೆ ತರುವ ಸಂಬಂಧ ಕೇಂದ್ರ ಸರ್ಕಾರವು ಶುಕ್ರವಾರ ಅಧಿಸೂಚನೆ ಹೊರಡಿಸಿದೆ.

ಕೈಗಾರಿಕಾ ಉತ್ತೇಜನ ಮತ್ತು ಆಂತರಿಕ ವ್ಯಾಪಾರ ಇಲಾಖೆಯ (ಡಿಪಿಐಐಟಿ) ಅಧಿಸೂಚನೆಯ ಪ್ರಕಾರ, ಅಕ್ಟೋಬರ್ 6ರಂದು ಅಥವಾ ನಂತರ ಸಾಲ ಮಂಜೂರು ಆಗಿದ್ದರೆ ಅಂತಹ ನವೋದ್ಯಮಗಳು ಯೋಜನೆಯ ವ್ಯಾಪ್ತಿಗೆ ಬರಲಿವೆ.

ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳು ನೀಡಿರುವ ಸಾಲಕ್ಕೆ ಸರ್ಕಾರವೇ ಖಾತರಿದಾರ ಆಗುವ ಉದ್ದೇಶದಿಂದ ನವೋದ್ಯಮಗಳಿಗೆ ಸಾಲ ಖಾತರಿ ಯೋಜನೆಗೆ (ಸಿಜಿಎಸ್‌ಎಸ್) ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ ಎಂದು ಇಲಾಖೆಯು ತಿಳಿಸಿದೆ.

ಯಾವುದೇ ಅಡಮಾನ ಇಲ್ಲದೆ ಸಾಲ ಪಡೆಯಲು ಈ ಯೋಜನೆಯು ನವೋದ್ಯಮಗಳಿಗೆ ನೆರವಾಗಲಿದೆ. ಪ್ರತಿ ಸಾಲಗಾರನಿಗೆ ನೀಡುವ ಸಾಲದ ಗರಿಷ್ಠ ಮೊತ್ತವು ₹10 ಕೋಟಿಯನ್ನು ಮೀರುವಂತಿಲ್ಲ ಎಂದು ಇಲಾಖೆಯು ಸೂಚನೆ ನೀಡಿದೆ.

ಸ್ಥಿರವಾದ ವರಮಾನ ಹೊಂದಿರುವ, ಒಂದು ವರ್ಷಕ್ಕೂ ಅಧಿಕ ಸಮಯದವರೆಗಿನ ಪ್ರತಿ ತಿಂಗಳ ಲೆಕ್ಕಪರಿಶೋಧಿತ ವರದಿ ಹೊಂದಿರುವ, ಸಾಲಕ್ಕೆ ಉತ್ತರದಾಯಿ ಆಗಿರುವ, ಸಾಲ ಬಾಕಿ ಉಳಿಸಿಕೊಂಡಿರದ ಹಾಗೂ ಆರ್‌ಬಿಐ ಮಾರ್ಗಸೂಚಿಯ ಪ್ರಕಾರ, ಅನುತ್ಪಾದಕ ಆಸ್ತಿ ಹೊಂದಿರದೇ ಇರುವ ನವೋದ್ಯಮವು ಈ ಯೋಜನೆಯ ಪ್ರಯೋಜನ ಪಡೆದುಕೊಳ್ಳಬಹುದು.

ನವೋದ್ಯಮಕ್ಕೆ ನೀಡುವ ಸಾಲಕ್ಕೆ ಖಾತರಿ ಆಗುವ ಉದ್ದೇಶದಿಂದ ಕೇಂದ್ರ ಸರ್ಕಾರವು ಒಂದು ಟ್ರಸ್ಟ್ ಅಥವಾ ನಿಧಿಯನ್ನು ಸ್ಥಾಪಿಸಲಿದೆ. ಈ ನಿಧಿಯನ್ನು ರಾಷ್ಟ್ರೀಯ ಸಾಲ ಖಾತರಿ ಟ್ರಸ್ಟೀ ಕಂಪನಿಯು ನಿರ್ವಹಣೆ ಮಾಡಲಿದೆ.

ಇ–ರುಪಿ: ಶೀಘ್ರವೇ ಪರೀಕ್ಷಾರ್ಥ ಬಳಕೆ

ಮುಂಬೈ (ಪಿಟಿಐ/ರಾಯಿಟರ್ಸ್): ದೇಶದಲ್ಲಿ 'ಇ–ರುಪಿ' ಶೀಘ್ರವೇ ಪರೀಕ್ಷಾರ್ಥವಾಗಿ ಬಳಕೆಗೆ ಲಭ್ಯವಾಗಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ಹೇಳಿದೆ.

ನಿರ್ದಿಷ್ಟ ಉದ್ದೇಶಕ್ಕಷ್ಟೇ ಬಳಕೆ ಮಾಡಬಹುದಾಗಿರಲಿದೆ ಎಂದೂ ತಿಳಿಸಿದೆ.

ಸದ್ಯ ಚಾಲ್ತಿಯಲ್ಲಿ ಇರುವ ಹಣದ ರೂಪಗಳಿಗೆ ಹೆಚ್ಚುವರಿ ಆಯ್ಕೆಯಾಗಿ ಇ–ರುಪಿ ಬಳಕೆಗೆ ಬರಲಿದೆ. ಬಳಕೆದಾರರಿಗೆ ಹೆಚ್ಚುವರಿ ಪಾವತಿ ಸೌಲಭ್ಯ ಕಲ್ಪಿಸುವುದು ಕೇಂದ್ರೀಯ ಬ್ಯಾಂಕ್‌ನ ಡಿಜಿಟಲ್ ಕರೆನ್ಸಿಯ (ಸಿಬಿಡಿಸಿ) ಉದ್ದೇಶವಾಗಿದೆ ಎಂದು ಟಿಪ್ಪಣಿಯಲ್ಲಿ ತಿಳಿಸಿದೆ.

ರೂಪಾಯಿ ಕುಸಿತ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಶುಕ್ರವಾರ 13 ಪೈಸೆ ಇಳಿಕೆ ಕಂಡು ಸಾರ್ವಕಾಲಿಕ ಕನಿಷ್ಠ ಮಟ್ಟವಾದ ಒಂದು ಡಾಲರ್‌ಗೆ ₹82.30ಕ್ಕೆ ಕುಸಿತ ಕಂಡಿತು.

ದೇಶದ ಷೇರುಪೇಟೆಗಳಲ್ಲಿ ನಡೆದ ನಕಾರಾತ್ಮಕ ವಹಿವಾಟು ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಏರಿಕೆಯು ರೂಪಾಯಿ ಮೌಲ್ಯದಲ್ಲಿ ಇಳಿಕೆ ಕಾಣಲು ಕಾರಣವಾಯಿತು ಎಂದು ವರ್ತಕರು ಹೇಳಿದ್ದಾರೆ.

ಹೀರೊ ಮೋಟೊ ಇ–ಸ್ಕೂಟರ್ 'ವಿಡಾ ವಿ1' ಮಾರುಕಟ್ಟೆಗೆ

ಜೈಪುರ (ಪಿಟಿಐ): ಹೀರೊ ಮೊಟೊಕಾರ್ಪ್ ಕಂಪನಿಯು ತನ್ನ ಮೊದಲ ವಿದ್ಯುತ್ ಚಾಲಿತ ಸ್ಕೂಟರ್ 'ವಿಡಾ ವಿ1' ಬಿಡುಗಡೆ ಮಾಡಿದೆ.

ವಿಡಾ ವಿ1 ಪ್ಲಸ್ ಮತ್ತು ವಿಡಾ ವಿ1 ಪ್ರೊ ಎಂಬ ಎರಡು ಅವತರಣಿಕೆಗಳನ್ನು ನೀಡಿದ್ದು, ಬೆಲೆಯು ಕ್ರಮವಾಗಿ ₹1.45 ಲಕ್ಷ ಮತ್ತು ₹1.59 ಲಕ್ಷ ಇದೆ. ಒಮ್ಮೆ ಚಾರ್ಜ್ ಮಾಡಿದರೆ ವಿಡಾ 1 ಪ್ಲಸ್ 143 ಕಿಲೋ ಮೀಟರ್ ಮತ್ತು ವಿ1 ಪ್ರೊ 165 ಕಿಲೋ ಮೀಟರ್‌ವರೆಗೆ ಚಲಾಯಿಸಬಹುದು ಎಂದು ಕಂಪನಿಯು ತಿಳಿಸಿದೆ.

ಮೊದಲಿಗೆ ಬೆಂಗಳೂರು, ದೆಹಲಿ, ಜೈಪುರದಲ್ಲಿ ಮಾರಾಟ ಆರಂಭ ಆಗಲಿದೆ. ಬಳಿಕ ಇತರೆ ಸ್ಥಳಗಳಲ್ಲಿಯೂ ಮಾರಾಟ ಮಾಡಲಾಗುವುದು ಎಂದು ಕಂಪನಿಯು ತಿಳಿಸಿದೆ.

ಇದೇ ತಿಂಗಳ 10ರಿಂದ ಬುಕಿಂಗ್ ಆರಂಭ ಆಗಲಿದ್ದು, ಡಿಸೆಂಬರ್ ತಿಂಗಳ ಎರಡನೇ ವಾರದಿಂದ ವಿತರಣೆ ಆರಂಭ ಆಗಲಿದೆ ಎಂದು ಹೇಳಿದೆ.

ಬಜಾಜ್ ಚೇತಕ್, ಟಿವಿಎಸ್ ಐಕ್ಯೂಬ್, ಏಥರ್ ಎನರ್ಜಿ, ಓಲಾ ಎಲೆಕ್ಟ್ರಿಕ್ ಸ್ಕೂಟರ್‌ಗಳಿಗೆ ಪೈಪೋಟಿ ನೀಡುವ ನಿರೀಕ್ಷೆ ಮಾಡಲಾಗಿದೆ.

ಈಗಲೇ ದೊಡ್ಡ ಪ್ರಮಾಣದಲ್ಲಿ ಮಾರಾಟ ಮಾಡಲು ನಾವು ಮುಂದಾಗುವುದಿಲ್ಲ. ಡಿಸೆಂಬರ್‌ನಲ್ಲಿ 8 ನಗರಗಳಲ್ಲಿ ಬುಕಿಂಗ್ ಆರಂಭಿಸಲಾಗುವುದು. ಆ ಬಳಿಕವಷ್ಟೇ ಮತ್ತಷ್ಟು ನಗರಗಳಿಗೆ ಪ್ರವೇಶ ಮಾಡಲಿದ್ದೇವೆ ಎಂದು ಕಂಪನಿಯ ಅಧ್ಯಕ್ಷ ಪವನ್ ಮುಂಜಾಲ್ ತಿಳಿಸಿದರು. ಆಂಧ್ರಪ್ರದೇಶದ ಚಿತ್ತೂರಿನಲ್ಲಿ ಇರುವ ಘಟಕದಲ್ಲಿ ಇ–ಸ್ಕೂಟರ್‌ಗಳನ್ನು ತಯಾರಿಸಲಾಗುವುದು ಎಂದು ತಿಳಿಸಿದ್ದಾರೆ.



ಹೀರೊ ಮೊಟೊಕಾರ್ಪ್ ಕಂಪನಿಯ ಸಿಇಒ ಪವನ್ ಮುಂಜಾಲ್ ಅವರು ಶುಕ್ರವಾರ ಇ–ಸ್ಕೂಟರ್ ಹೀರೊ ವಿಡಾ ವಿ1 ಬಿಡುಗಡೆ ಮಾಡಿದರು –ಪಿಟಿಐ ಚಿತ್ರ

ಲಾಸ್ ವೇಗಸ್: ಚೂರಿ ಇರಿತ– ಇಬ್ಬರ ಸಾವು

ಲಾಸ್ ವೇಗಸ್, ಅಮೆರಿಕ (ಎಪಿ): ಲಾಸ್ ವೇಗಸ್‌ನಲ್ಲಿ ದುಷ್ಕರ್ಮಿಯೊಬ್ಬ ಚಾಕುವಿನಿಂದ ಇರಿದು ಇಬ್ಬರನ್ನು ಹತ್ಯೆ ಮಾಡಿದ್ದಾನೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

30 ವರ್ಷ ವಯಸ್ಸಿನ ದುಷ್ಕರ್ಮಿ ಬೀದಿಯಲ್ಲಿ ತೆರಳುತ್ತಿದ್ದವರ ಮೇಲೆ ದಾಳಿ ನಡೆಸಿದ್ದು, ಗಾಯಗೊಂಡಿರುವ ಆರು ಮಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದಿದ್ದಾರೆ.

ದಾಳಿಕೋರನ ಪತ್ತೆಗಾಗಿ ಶೋಧ ಕಾರ್ಯ ಆರಂಭಿಸಿದ್ದೇವೆ. ಆತ ಲಾಸ್ ವೇಗಸ್‌ನ ನಿವಾಸಿ ಅಲ್ಲ ಎಂದೂ ವಿವರಿಸಿದ್ದಾರೆ.

ಭಾರತಕ್ಕೆ ಪ್ರಯಾಣ: ಅಮೆರಿಕ ಎಚ್ಚರಿಕೆ

ವಾಷಿಂಗ್ಟನ್(ಪಿಟಿಐ): 'ಅಪರಾಧ ಮತ್ತು ಭಯೋತ್ಪಾದನೆ' ಕಾರಣದಿಂದ ಭಾರತಕ್ಕೆ ಪ್ರಯಾಣಿಸುವಾಗ ಹೆಚ್ಚಿನ ಎಚ್ಚರಿಕೆ ವಹಿಸುವಂತೆ ಅಮೆರಿಕವು ತನ್ನ ನಾಗರಿಕರಿಗೆ ಸೂಚನೆ ನೀಡಿದೆ. ಅದರಲ್ಲೂ, ಜಮ್ಮು ಮತ್ತು ಕಾಶ್ಮೀರಕ್ಕೆ ಪ್ರಯಾಣಿಸದಂತೆಯೂ ಸಲಹೆ ನೀಡಿದೆ.

ಶುಕ್ರವಾರ ಹೊಸ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿರುವ ಅಮೆರಿಕ, ಭಾರತಕ್ಕೆ ಕೈಗೊಳ್ಳುವ ಪ್ರಯಾಣದ ಸಲಹಾ ಮಟ್ಟವನ್ನು ನಾಲ್ಕರಿಂದ 2ನೇ ಹಂತಕ್ಕೆ ಇಳಿಸಿದೆ.

ಒಂದು ದಿನದ ಹಿಂದಷ್ಟೇ ವಿದೇಶಾಂಗ ಇಲಾಖೆ ನೀಡಿರುವ ಪ್ರತ್ಯೇಕ ಸಲಹೆಯಲ್ಲಿ, ಪಾಕಿಸ್ತಾನವನ್ನು 3ನೇ ಹಂತದಲ್ಲಿ ಇರಿಸಿತ್ತು. ಭಯೋತ್ಪಾದನೆ ಮತ್ತು ಹಿಂಸಾಚಾರದ ಕಾರಣದಿಂದ ಪಾಕಿಸ್ತಾನದ ಪ್ರಕ್ಷುಬ್ಧ ಪ್ರಾಂತ್ಯಗಳ ಪ್ರಯಾಣದ ಕುರಿತು ಮರುಪರಿಶೀಲಿಸುವಂತೆಯೂ ಸೂಚನೆ ನೀಡಿತ್ತು.

'ಪೂರ್ವ ಲಡಾಖ್ ಮತ್ತು ಅದರ ರಾಜಧಾನಿ ಲೇಹ್ ಅನ್ನು ಹೊರತುಪಡಿಸಿ, ಜಮ್ಮು–ಕಾಶ್ಮೀರಕ್ಕೆ ನಾಗರಿಕರು ಪ್ರಯಾಣಿಸಬಾರದು ಎಂದಿರುವ ಅಮೆರಿಕವು ಅಲ್ಲಿನ ಪ್ರದೇಶದಲ್ಲಿ ಭಯೋತ್ಪಾದನೆ ಮತ್ತು ಅಶಾಂತಿಯ ಕಾರಣ ನೀಡಿದೆ. ಅಂತೆಯೇ ಭಾರತ–ಪಾಕಿಸ್ತಾನದ ಗಡಿ ಪ್ರದೇಶದಲ್ಲಿನ ಹತ್ತು ಕಿ.ಮೀ. ವ್ಯಾಪ್ತಿಯಲ್ಲಿ ಸಶಸ್ತ್ರ ಸಂಘರ್ಷದ ಸಾಧ್ಯತೆ ಇರುವ ಕಾರಣ ಆ ಪ್ರದೇಶಗಳಲ್ಲೂ ಪ್ರಯಾಣಿಸಬಾರದು ಎಂದಿದೆ.

'ಭಾರತದಲ್ಲಿ ಅತ್ಯಾಚಾರ ಪ್ರಕರಣಗಳು ಹೆಚ್ಚುತ್ತಿವೆ ಎಂದು ಅಲ್ಲಿನ ಅಧಿಕಾರಿಗಳು ವರದಿ ಮಾಡಿದ್ದಾರೆ' ಎಂದು ತಿಳಿಸಿದೆ. 'ಪ್ರವಾಸಿ ಸ್ಥಳಗಳು, ಸಾರಿಗೆ ಕೇಂದ್ರಗಳು, ಮಾರುಕಟ್ಟೆಗಳು, ಶಾಪಿಂಗ್ ಮಾಲ್‌ಗಳನ್ನು ಗುರಿಯಾಗಿಸಿಕೊಂಡು ಭಯೋತ್ಪಾದಕರು ದಾಳಿ ಮಾಡಬಹುದು' ಎಂದೂ ಹೇಳಿದೆ.

5 ನಿಮಿಷದಲ್ಲಿ ಕಾರು ಚಾರ್ಜ್ ಸಾಧ್ಯ: ನಾಸಾ

ವಾಷಿಂಗ್ಟನ್ (ಪಿಟಿಐ): ಭವಿಷ್ಯದ ಬಾಹ್ಯಾಕಾಶ ಕಾರ್ಯಕ್ರಮಗಳಿಗಾಗಿ ಅಭಿವೃದ್ಧಿಪಡಿಸಿರುವ ನೂತನ ತಂತ್ರಜ್ಞಾನ ಬಳಸಿ, ವಿದ್ಯುತ್ ಚಾಲಿತ ಕಾರುಗಳನ್ನು ಕೇವಲ ಐದು ನಿಮಿಷಗಳಲ್ಲಿ ಚಾರ್ಜ್ ಮಾಡಲು ಸಾಧ್ಯವಿದೆ ಎಂದು ಅಮೆರಿಕ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ನಾಸಾ ತಿಳಿಸಿದೆ.

ಸದ್ಯ ವಿದ್ಯುತ್ ಚಾಲಿತ ಕಾರುಗಳನ್ನು ಚಾರ್ಜ್ ಮಾಡಲು ಕನಿಷ್ಠ 20 ನಿಮಿಷದಿಂದ 60 ನಿಮಿಷಗಳು ಬೇಕಾಗುತ್ತಿವೆ. ಇದರಿಂದಲೇ ಜನರು ವಿದ್ಯುತ್ ಚಾಲಿತ ಕಾರು ಖರೀದಿಗೆ ಹಿಂದೇಟು ಹಾಕುತ್ತಿದ್ದಾರೆ. ಈ ನೂತನ ತಂತ್ರಜ್ಞಾನದ ಆವಿಷ್ಕಾರದಿಂದಾಗಿ ವಿದ್ಯುತ್ ಚಾಲಿತ ಕಾರುಗಳತ್ತ ಜನರ ಒಲವು ಹೆಚ್ಚಾಗಲಿದೆ ಎಂದು ನಾಸಾ ವಿಶ್ವಾಸ ವ್ಯಕ್ತಪಡಿಸಿದೆ.

ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದ (ಐಎಸ್‌ಎಸ್) ಪರಿಸರದಲ್ಲಿ ಕಡಿಮೆ ಅವಧಿಯಲ್ಲಿ ವಿದ್ಯುತ್ ಪ್ರಸರಣ ಸಾಧ್ಯವಾಗಿಸಲು ನೂತನ ತಂತ್ರಜ್ಞಾನವನ್ನು (ಎಫ್‌ಬಿಸಿಇ) ಅಭಿವೃದ್ಧಿಪಡಿಸಲಾಗಿದೆ. ಈ ತಂತ್ರಜ್ಞಾನವನ್ನು ಭೂಮಿಯ ಮೇಲೂ ಬಳಸಿ, ವಿದ್ಯುತ್ ಚಾಲಿತ ವಾಹನಗಳನ್ನು ಕಡಿಮೆ ಅವಧಿಯಲ್ಲಿ ಚಾರ್ಜ್ ಮಾಡಲು ಸಾಧ್ಯವಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ರಷ್ಯಾದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ: ಪರಿಶೀಲನೆ ಹೆಚ್ಚಿಸಲು ವಿಶ್ವಸಂಸ್ಥೆ ನಿರ್ಧಾರ

ಜಿನೀವಾ (ಎಪಿ): ರಷ್ಯಾದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಆರೋಪಗಳ ಕುರಿತ ಪರಿಶೀಲನೆಯನ್ನು ಮತ್ತಷ್ಟು ಹೆಚ್ಚಿಸಲು ಮುಂದಾಗಿರುವ ವಿಶ್ವಸಂಸ್ಥೆ, ಈ ಸಂಬಂಧ ಸ್ವತಂತ್ರ ತಜ್ಞರ ತಂಡವನ್ನು ರಚಿಸಲು ಶುಕ್ರವಾರ ನಿರ್ಧರಿಸಿದೆ.

ಉಕ್ರೇನ್ ವಿರುದ್ಧ ಯುದ್ಧ ಸಾರಿದ ನಂತರದ ದಿನಗಳಲ್ಲಿ ರಷ್ಯಾದಲ್ಲಿ ನಿಯಮಬಾಹಿರ ಬಂಧನಗಳು, ಭಿನ್ನಧ್ವನಿ ಹಾಗೂ ವಾಕ್ ಸ್ವಾತಂತ್ರ್ಯ ದಮನಿಸುವ ಪ್ರಕರಣಗಳೂ ಹೆಚ್ಚಾದವು ಎಂಬ ಆರೋಪಗಳ ಹಿನ್ನೆಲೆಯಲ್ಲಿ ವಿಶ್ವಸಂಸ್ಥೆ ಈ ಕ್ರಮಕ್ಕೆ ಮುಂದಾಗಿದೆ.

47 ಸದಸ್ಯಬಲದ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯಲ್ಲಿ ಈ ಕುರಿತ ಪ್ರಸ್ತಾವವನ್ನು 17–6 ಮತಗಳಿಂದ ಅಂಗೀಕರಿಸಲಾಯಿತು. ಮಂಡಳಿಯ 24 ಸದಸ್ಯ ರಾಷ್ಟ್ರಗಳು ಮತದಾನದಿಂದ ದೂರ ಉಳಿದಿದ್ದವು. ಈ ವರ್ಷದ ಆರಂಭದವರೆಗೂ ರಷ್ಯಾ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯ ಸದಸ್ಯ-ರಾಷ್ಟ್ರವಾಗಿತ್ತು. ಉಕ್ರೇನ್ ಮೇಲೆ ಆಕ್ರಮಣ ಮಾಡಿದ ನಂತರ, ಮಂಡಳಿ ಸದಸ್ಯತ್ವವನ್ನು ತ್ಯಜಿಸಿತು.

ರಷ್ಯಾ ಕ್ಷಿಪಣಿ, ಡ್ರೋನ್ ದಾಳಿ: ಸಾವಿನ ಸಂಖ್ಯೆ 11ಕ್ಕೆ ಏರಿಕೆ

ಕೀವ್ (ಎಪಿ): ದಕ್ಷಿಣ ಉಕ್ರೇನ್‌ನ ಝುಪೊರಿಜಝಿಯಾ ನಗರದ ಅಪಾರ್ಟ್‌ಮೆಂಟ್ ಮೇಲೆ ರಷ್ಯಾ ನಡೆಸಿದ ಕ್ಷಿಪಣಿ ಮತ್ತು ಡ್ರೋನ್ ದಾಳಿಯಲ್ಲಿ ಮೃತಪಟ್ಟವರ ಸಂಖ್ಯೆ 11ಕ್ಕೆ ಏರಿಕೆಯಾಗಿದೆ.

'ಇರಾನ್ ನಿರ್ಮಿತ 'ಶಹೀದ್–136' ಡ್ರೋನ್‌ಗಳು ನಗರದ ಎರಡು ಮೂಲಸೌಕರ್ಯಗಳ ಮೇಲೆ ದಾಳಿ ನಡೆಸಿವೆ. ಇದೇ ಮೊದಲ ಬಾರಿಗೆ ಇವುಗಳನ್ನು ಇಲ್ಲಿ ಬಳಸಲಾಗಿದೆ' ಎಂದು ಪ್ರಾದೇಶಿಕ ಗವರ್ನರ್ ಒಲೆಕ್ಸಾಂಡರ್ ಸ್ಟಾರುಖ್ ತಿಳಿಸಿದ್ದಾರೆ.

ರಷ್ಯಾ, ಇರಾನ್ ನಿರ್ಮಿತ ಡ್ರೋನ್ ಮೂಲಕ ಉಕ್ರೇನ್ ಮೇಲೆ ದಾಳಿ ನಡೆಸುತ್ತಿದೆ. ಮಾನವರಹಿತ ಮತ್ತು ಬಿಸಾಡಬಹುದಾದ 'ಕಮಿಕಝೆ ಡ್ರೋನ್'ಗಳು ಕಡಿಮೆ ಬೆಲೆಗೆ ಲಭ್ಯವಾಗುತ್ತವೆ. ಕ್ಷಿಪಣಿಯಷ್ಟು ನಿಖರತೆ ಇಲ್ಲದಿದ್ದರೂ ನಿಗದಿತ ಗುರಿಯ ಮೇಲೆ ದಾಳಿ ನಡೆಸಿ ಪರಿಣಾಮಕಾರಿ ಹಾನಿಯುಂಟುಮಾಡುತ್ತವೆ.

'ಕೊಲೆಯಾದ ಕುಟುಂಬದೊಂದಿಗೆ ಶಂಕಿತ ಆರೋಪಿ ಕೆಲಸ ಮಾಡಿದ್ದ'

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ಮರ್ಸಿಡ್ ನಗರದಲ್ಲಿನ ಪಂಜಾಬ್ ಮೂಲದ ಒಂದೇ ಕುಟುಂಬದ 4 ಮಂದಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತ ಶಂಕಿತ ಆರೋಪಿ ಈ ಹಿಂದೆ ಅದೇ ಕುಟುಂಬದೊಂದಿಗೆ ಕೆಲಸ ಮಾಡಿದ್ದ ಎಂದು ಅಮೆರಿಕದ ಪೊಲೀಸರು ಹೇಳಿದ್ದಾರೆ.

ಕ್ಯಾಲಿಫೋರ್ನಿಯಾದ ಮರ್ಸಿಡ್ ಕೌಂಟಿಯ ತೋಟವೊಂದರಲ್ಲಿ 8 ತಿಂಗಳ ಮಗು ಸೇರಿದಂತೆ ಕುಟುಂಬದ ನಾಲ್ಕು ಜನರ ಮೃತದೇಹಗಳು ಪತ್ತೆಯಾಗಿದ್ದವು. 'ಗುರುವಾರ ಶಂಕಿತ ಆರೋಪಿ ಜೀಸಸ್ ಮ್ಯಾನುವಲ್ ಸಲ್ಗಾಡೊನನ್ನು ಬಂಧಿಸಿ ಮರ್ಸಿಡ್ ಕೌನ್ಸಿಲ್ ಜೈಲಿಗೆ ಕಳುಹಿಸಲಾಗಿದೆ. ಈತ ಕೊಲೆಯಾದ ಜಸ್‌ಪ್ರೀತ್ ಅವರ ಟ್ರಕ್ಕಿಂಗ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತನಿಖೆ ಮುಂದುವರಿದಿದ್ದು ಕೊಲೆಯಲ್ಲಿ ಭಾಗಿಯಾದ ಇತರರ ಬಗ್ಗೆ ಮಾಹಿತಿ ಪಡೆಯಲಾಗುತ್ತಿದೆ. ಶಂಕಿತ ಮತ್ತು ಕೊಲೆಯಾದ ಕುಟುಂಬದ ನಡುವೆ ಬಹಳ ಕಾಲದಿಂದ ಬಗೆಹರಿಯದ ಹಳೆ ದ್ವೇಷವಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.

ಅಪಹರಣ ಮಾಡಿದ ಒಂದು ಗಂಟೆಯೊಳಗೆ ಅಪಹೃತರನ್ನು ಹತ್ಯೆ ಮಾಡಲಾಗಿದೆ. ಸಲ್ಗಾಡೊ, 2005ರಲ್ಲಿ ಸಶಸ್ತ್ರ ಸಹಿತ ಕಳ್ಳತನದ ಆರೋಪದಲ್ಲಿ ಬಂಧಿತನಾಗಿದ್ದ, 2015ರಲ್ಲಿ ಆತನನ್ನು ಬಿಡುಗಡೆಗೊಳಿಸಲಾಗಿತ್ತು ಎಂದು ಅವರು ತಿಳಿಸಿದ್ದಾರೆ.

ಶ್ರೀಲಂಕಾ: ರಾಜಪಕ್ಸ ಕುಟುಂಬದ ವಿರುದ್ಧ ವಿಚಾರಣೆಗೆ ಸಮ್ಮತಿ

ಕೊಲಂಬೊ (ಪಿಟಿಐ): ಶ್ರೀಲಂಕಾದಲ್ಲಿನ ಆರ್ಥಿಕ ಅಧಃಪತನಕ್ಕೆ ರಾಜಪಕ್ಸ ಕುಟುಂಬ ಸದಸ್ಯರೇ ಕಾರಣ ಎಂದು ಮಾನವ ಹಕ್ಕುಗಳ ಸಂಸ್ಥೆಯೊಂದು ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿದ್ದು, ಈ ಅರ್ಜಿ ವಿಚಾರಣೆಗೆ ಸುಪ್ರೀಂಕೋರ್ಟ್ ಶುಕ್ರವಾರ ಒಪ್ಪಿಗೆ ನೀಡಿದೆ.

ಟ್ರಾನ್ಸ್‌ಪರೆನ್ಸಿ ಇಂಟರ್‌ನ್ಯಾಷನಲ್ ಶ್ರೀಲಂಕಾ ಎಂಬ ಸಂಸ್ಥೆ ಈ ಸಂಬಂಧ ಜೂ. 17ರಂದು ಪಿಐಎಲ್ ಸಲ್ಲಿಸಿತ್ತು.

ದೇಶದ ಆರ್ಥಿಕ ಸಂಕಷ್ಟಕ್ಕೆ ಮಾಜಿ ಅಧ್ಯಕ್ಷ ಗೊಟಬಯ ರಾಜಪಕ್ಸ, ಅವರ ಸಹೋದರರು ಅವರೇ ನೇರ ಹೊಣೆಗಾರರು ಎಂದು ಪಿಐಎಲ್‌ನಲ್ಲಿ ದೂರಲಾಗಿದೆ.

ರಾಷ್ಟ್ರೀಯ ಕ್ರೀಡಾಕೂಟ: ಈಜುಕೊಳದಲ್ಲಿ ಕರ್ನಾಟಕ ಪದಕ ಬೇಟೆ

ಮತ್ತೆ ಮಿಂಚಿದ ಹಷಿಕಾ, ಶ್ರೀಹರಿ

ಪ್ರಜಾವಾಣಿ ವಾರ್ತೆ



ಶ್ರೀಹರಿ ನಟರಾಜ್



ಹಷಿಕಾ ರಾಮಚಂದ್ರ

ಬೆಂಗಳೂರು: ಕರ್ನಾಟಕದ ಹಷಿಕಾ ರಾಮಚಂದ್ರ ಮತ್ತು ಶ್ರೀಹರಿ ನಟರಾಜ್ ಅವರು ಗುಜರಾತ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದ ಈಜು ಸ್ಪರ್ಧೆಯಲ್ಲಿ ಕೂಟ ದಾಖಲೆ ಸ್ಥಾಪಿಸಿದರು. ಹಷಿಕಾ ಎರಡು ಚಿನ್ನ ಗೆದ್ದು ಸಂಭ್ರಮಿಸಿದರು.

ರಾಜ್‌ಕೋಟ್‌ನ ಸರ್ದಾರ್ ಪಟೇಲ್ ಈಜು ಕಾಂಪ್ಲೆಕ್ಸ್‌ನಲ್ಲಿ ಶುಕ್ರವಾರ ನಡೆದ ಮಹಿಳೆಯರ ವಿಭಾಗದ 400 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಹಷಿಕಾ 4 ನಿಮಿಷ 32.17 ಸೆ.ಗಳಲ್ಲಿ ಗುರಿ ತಲುಪಿ ಕೂಟ ದಾಖಲೆ ನಿರ್ಮಿಸಿದರು. ಮಹಾರಾಷ್ಟ್ರದ ಆಕಾಂಕ್ಷ ವೋರಾ (4:32.50 ಸೆ.) ಹೆಸರಿನಲ್ಲಿದ್ದ ದಾಖಲೆ ಮುರಿದರು.

ಆ ಬಳಿಕ 200 ಮೀ. ಮೆಡ್ಲೆ ವಿಭಾಗದಲ್ಲಿ ಸ್ಪರ್ಧಿಸಿದ ಹಷಿಕಾ 2 ನಿಮಿಷ 26.23 ಸೆ.ಗಳಲ್ಲಿ ಮೊದಲಿಗರಾಗಿ ಗುರಿ ತಲುಪಿ ಚಿನ್ನ ಜಯಿಸಿದರು. ಕರ್ನಾಟಕದ ಮಾನವಿ ವರ್ಮಾ (2:27.13 ಸೆ.) ಅವರು ಈ ವಿಭಾಗದಲ್ಲಿ ಬೆಳ್ಳಿ ಪಡೆದರು.

ಪುರುಷರ 50 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ಮಿಂಚು ಹರಿಸಿದ ಶ್ರೀಹರಿ 25.65 ಸೆ.ಗಳಲ್ಲಿ ಗುರಿ ತಲುಪಿ ಕೂಟ ದಾಖಲೆಯೊಂದಿಗೆ ಚಿನ್ನ ತಮ್ಮದಾಗಿಸಿಕೊಂಡರು. 25.88 ಸೆ.ಗಳೊಂದಿಗೆ ತಾವೇ ಸ್ಥಾಪಿಸಿದ್ದ ದಾಖಲೆಯನ್ನು ಉತ್ತಮಪಡಿಸಿಕೊಂಡರು. ಎಸ್. ಶಿವ (27.11 ಸೆ.) ಮೂರನೇ ಸ್ಥಾನ ಗಳಿಸಿದರು.

ಶಿವ ಅವರು ಪುರುಷರ 200 ಮೀ. ಮೆಡ್ಲೆ ಸ್ಪರ್ಧೆಯಲ್ಲಿ 2 ನಿ. 7.47 ಸೆ.ಗಳಲ್ಲಿ ಗುರಿತಲುಪಿ ಬೆಳ್ಳಿ ಜಯಿಸಿದರು. ಕೇರಳ ಸಜನ್ ಪ್ರಕಾಶ್ (2:5.81 ಸೆ.) ಅವರು ಕೂಟ ದಾಖಲೆಯೊಂದಿಗೆ ತಮ್ಮ ಗೆದ್ದರು.

ಪುರುಷರ 400 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಅನೀಶ್ ಎಸ್. ಗೌಡ (3 ನಿ. 58.85 ಸೆ.) ಅವರು ಕಂಚು ಪಡೆದರು.

ಮಹಿಳೆಯರ 50 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ರಿಧಿಮಾ ವೀರೇಂದ್ರಕುಮಾರ್ (30.13 ಸೆ.) ಅವರು ಕರ್ನಾಟಕಕ್ಕೆ ಬೆಳ್ಳಿ ತಂದುಕೊಟ್ಟರು. ಈ ಸ್ಪರ್ಧೆಯ ಚಿನ್ನವನ್ನು ಗುಜರಾತ್‌ನ ಮಾನಾ ಪಟೇಲ್ (29.77ಸೆ.) ಜಯಿಸಿದರು.

ರಿಲೇ ತಂಡಕ್ಕೆ ಚಿನ್ನ: ಕರ್ನಾಟಕ ತಂಡ ಮಿಶ್ರ ವಿಭಾಗದ 4X100 ಮೀ. ಫ್ರೀಸ್ಟೈಲ್ ರಿಲೇ ಸ್ಪರ್ಧೆಯಲ್ಲಿ ಅಗ್ರಸ್ಥಾನ ಗಳಿಸಿತು.

ಶ್ರೀಹರಿ ನಟರಾಜ್, ಆರ್. ಸಂಭವ್, ನೀನಾ ವೆಂಕಟೇಶ್ ಮತ್ತು ಎಸ್.ರುಜುಲಾ ಅವರನ್ನೊಳಗೊಂಡ ತಂಡ 3 ನಿ. 44.62 ಸೆ.ಗಳಲ್ಲಿ ಗುರಿ ತಲುಪಿತು.

ಕರ್ನಾಟಕ ತಂಡ ಈಜು ಸ್ಪರ್ಧೆಯಲ್ಲಿ 18 ಚಿನ್ನ, 8 ಬೆಳ್ಳಿ ಮತ್ತು 10 ಕಂಚು ಸೇರಿದಂತೆ ಒಟ್ಟು 36 ಪದಕ ಗೆದ್ದುಕೊಂಡಿದೆ.

ಹಾಕಿ: ಸತತ ಎರಡನೇ ವರ್ಷ ಎಫ್‌ಐಎಚ್ ಗೌರವ

ಹರ್ಮನ್‌ಪ್ರೀತ್ 'ವರ್ಷದ ಆಟಗಾರ'



ಹರ್ಮನ್‌ಪ್ರೀತ್ ಸಿಂಗ್

ನವದೆಹಲಿ (ಪಿಟಿಐ): ಭಾರತ ಹಾಕಿ ತಂಡದ ಡಿಫೆಂಡರ್ ಹರ್ಮನ್‌ಪ್ರೀತ್ ಸಿಂಗ್ ಅವರು ಅಂತರರಾಷ್ಟ್ರೀಯ ಹಾಕಿ ಫೆಡರೇಷನ್‌ನ (ಎಫ್‌ಐಎಚ್) 'ವರ್ಷದ ಶ್ರೇಷ್ಠ ಆಟಗಾರ' ಎನಿಸಿಕೊಂಡಿದ್ದಾರೆ.

26 ವರ್ಷದ ಅವರು ಸತತ ಎರಡನೇ ಸಲ ಈ ಗೌರವಕ್ಕೆ ಪಾತ್ರರಾಗಿದ್ದಾರೆ. ಈ ಮೂಲಕ ಸತತ ಎರಡು ಸಲ ಪ್ರಶಸ್ತಿ ಗೆದ್ದಿರುವ ಪ್ರಮುಖ ಆಟಗಾರರಾದ ಟೆನ್ ಡಿ ನುಯೆರ್ (ನೆದರ್ಲೆಂಡ್ಸ್), ಜೇಮಿ ಡ್ವಾಯೆರ್ (ಆಸ್ಟ್ರೇಲಿಯಾ) ಮತ್ತು ಆರ್ಥರ್ ವಾನ್ ಡೊರೆನ್ (ಬೆಲ್ಜಿಯಂ) ಅವರ ಸಾಲಿಗೆ ಸೇರಿದ್ದಾರೆ.

'ಹರ್ಮನ್‌ಪ್ರೀತ್ ಅವರು ಆಧುನಿಕ ಯುಗದ ಹಾಕಿ ಸೂಪರ್‌ಸ್ಟಾರ್ ಆಗಿದ್ದಾರೆ. ಎದುರಾಳಿ ತಂಡದ ಆಕ್ರಮಣವನ್ನು ತಡೆಯಲು ಅವರು ಸೂಕ್ತ ಸಮಯದಲ್ಲಿ ಅಂಗಳದ ಸರಿಯಾದ ಜಾಗದಲ್ಲಿ ನಿಂತಿರುತ್ತಾರೆ' ಎಂದು ಎಫ್‌ಐಎಚ್ ಪ್ರಕಟಣೆ ತಿಳಿಸಿದೆ.

ಆನ್‌ಲೈನ್ ಮೂಲಕ ನಡೆದ ಮತದಾನದಲ್ಲಿ ಹರ್ಮನ್‌ಪ್ರೀತ್ ಶೇ 29.4 ಮತಗಳನ್ನು ಪಡೆದರು. ಥಿಯೆರಿ ಬ್ರಿಂಕ್‌ಮನ್ (ಶೇ 23.6) ಮತ್ತು ಟಾಮ್ ಬೂನ್ (ಶೇ 23.4) ಅವರನ್ನು ಭಾರತದ ಆಟಗಾರ ಹಿಂದಿಕ್ಕಿದರು.

ಭಾರತ ತಂಡದ ಉಪನಾಯಕನೂ ಆಗಿರುವ ಹರ್ಮನ್‌ಪ್ರೀತ್ 2021–22ರ ಎಫ್‌ಐಎಚ್ ಹಾಕಿ ಪ್ರೊ ಲೀಗ್‌ನಲ್ಲಿ 16 ಪಂದ್ಯಗಳಿಂದ 18 ಗೋಲುಗಳನ್ನು ಗಳಿಸಿದ್ದರು. ಪ್ರೊ ಲೀಗ್‌ನ ಒಂದು ಋತುವಿನಲ್ಲಿ ಅತಿಹೆಚ್ಚು ಗೋಲು ಗಳಿಸಿದ ದಾಖಲೆಯನ್ನು ಅವರು ಹೊಂದಿದ್ದಾರೆ.

ಕಳೆದ ವರ್ಷ ಢಾಕಾದಲ್ಲಿ ನಡೆದಿದ್ದ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲೂ ಗಮನಾರ್ಹ ಪ್ರದರ್ಶನ ನೀಡಿದ್ದ ಅವರು ಆರು ಪಂದ್ಯಗಳಿಂದ 8 ಗೋಲು ಗಳಿಸಿದ್ದರು. ಆಡಿದ ಎಲ್ಲ ಪಂದ್ಯಗಳಲ್ಲೂ ಗೋಲು ಗಳಿಸಲು ಯಶಸ್ವಿಯಾಗಿದ್ದರು.

ಪಿಸಿಎ ಅಕ್ರಮ: ಹರಭಜನ್ ಆರೋಪ

ಮೊಹಾಲಿ (ಪಿಟಿಐ): ಪಂಜಾಬ್ ಕ್ರಿಕೆಟ್ ಸಂಸ್ಥೆಯ (ಪಿಸಿಎ)ಕೆಲವು ಪದಾಧಿಕಾರಿಗಳು ಅಕ್ರಮ ಚಟುವಟಿಕೆಗಳಲ್ಲಿ ತೊಡಗಿದ್ದಾರೆಂದು ಭಾರತ ತಂಡದ ಮಾಜಿ ಆಟಗಾರ ಹರಭಜನ್ ಸಿಂಗ್ ದೂರಿದ್ದಾರೆ.

ಪಿಸಿಎಗೆ ಮುಖ್ಯ ಸಲಹೆಗಾರರೂ ಆಗಿರುವ ಅವರು, 'ಸುಮಾರು 150 ಜನರನ್ನು ಅಕ್ರಮವಾಗಿ ಸಂಸ್ಥೆಗೆ ಸೇರ್ಪಡೆ ಮಾಡಲು ಕೆಲವರು ಪ್ರಯತ್ನಿಸುತ್ತಿದ್ದಾರೆ. ಇದರಿಂದಾಗಿ ಅವರು ತಮ್ಮ ಮತಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ಹುನ್ನಾರ ನಡೆಸುತ್ತಿದ್ದಾರೆ. ಸದಸ್ಯರ ಸೇರ್ಪಡೆಗೆ ಮಹಾಸಭೆಯಲ್ಲಿ ಅನುಮೋದನೆ ಪಡೆದಿಲ್ಲ. ಇದರಿಂದಾಗಿ ಸಂಸ್ಥೆಯ ಆಡಳಿತವು ಅಸಮತೋಲನಗೊಳ್ಳಲಿದೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಬೇರೆ ಬೇರೆ ಜಿಲ್ಲೆಗಳಿಂದಲೂ ಬಹಳಷ್ಟು ದೂರುಗಳು ನನಗೆ ಬರುತ್ತಿವೆ. ಮುಖ್ಯ ಸಲಹೆಗಾರನಾಗಿರುವ ನನ್ನಿಂದಲೂ ಕೆಲವು ಕಾರ್ಯಸೂಚಿಗಳನ್ನು ಗುಟ್ಟಾಗಿ ಇಡಲಾಗಿದೆ. ಈ ಬಗ್ಗೆಯೂ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಹರಭಜನ್ ಹೇಳಿದ್ದಾರೆ.

ಬೆಂಗಳೂರು ಬುಲ್ಸ್ ಶುಭಾರಂಭ

ಪ್ರೊ ಕಬಡ್ಡಿ: ಖಂಡೋಲಾ, ನೀರಜ್ ಮಿಂಚಿನ ದಾಳಿ; ಡೆಲ್ಲಿ ಜಯದ ಆರಂಭ

ಪ್ರಜಾವಾಣಿ ವಾರ್ತೆ



ಪ್ರೊ ಕಬಡ್ಡಿ ಟೂರ್ನಿಯ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ಆಟಗಾರರು ತೆಲುಗು ಟೈಟನ್ಸ್ ತಂಡದ ಸಿದ್ಧಾರ್ಥ್ ದೇಸಾಯಿ ಅವರನ್ನು ಹಿಡಿತಕ್ಕೆ ಪಡೆದ ಕ್ಷಣ –ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ಬೆಂಗಳೂರು: ನೀರಜ್ ನರ್ವಾಲ್ ಹಾಗೂ ವಿಕಾಶ್ ಖಂಡೋಲಾ ಅವರ ಚುರುಕಿನ ದಾಳಿಯ ಬಲದಿಂದ ಆತಿಥೇಯ ಬೆಂಗಳೂರು ಬುಲ್ಸ್ ತಂಡವು ಶುಕ್ರವಾರ ಇಲ್ಲಿ ಆರಂಭವಾದ ಪ್ರೊ ಕಬಡ್ಡಿ ಟೂರ್ನಿಯಲ್ಲಿ ಜಯದ ಆರಂಭ ಮಾಡಿತು.

ಶ್ರೀಕಂಠೀರವ ಕ್ರೀಡಾಂಗಣದ ಒಳಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು 34–29ರಿಂದ ತೆಲುಗು ಟೈಟನ್ಸ್ ಸವಾಲನ್ನು ಮೆಟ್ಟಿ ನಿಂತಿತು.

ಮಹೇಂದರ್ ಸಿಂಗ್ ನಾಯಕತ್ವದ ಬುಲ್ಸ್ ತಂಡವು ಆರಂಭದಿಂದಲೇ ಆಕ್ರಮಣಕಾರಿ ಆಟವಾಡಿತು. ಟೈಟನ್ಸ್ ಕೂಡ ಅದಕ್ಕೆ ತಕ್ಕ ಪ್ರತ್ಯುತ್ತರ ನೀಡಿತು. ಇದರಿಂದಾಗಿ ಪಂದ್ಯದ ಬಹುಭಾಗದಲ್ಲಿ ಉಭಯ ತಂಡಗಳು ಸಮಬಲ ಗಳಿಸಿದ್ದವು.

ಆದರೆ ಒಟ್ಟು ಏಳು ಅಂಕ ಗಳಿಸಿ ಮಿಂಚಿದ ನೀರಜ್, ತಲಾ ಐದು ಅಂಕ ಗಳಿಸಿದ ಖಂಡೋಲಾ ಮತ್ತು ಭರತ್ ಬುಲ್ಸ್ ತಂಡಕ್ಕೆ ಬಲ ತುಂಬಿದರು. ಬಲಿಷ್ಠ ರಕ್ಷಣಾ ತಂತ್ರ ಹೆಣೆದ ಡಿಫೆಂಡರ್ ಮಹೇಂದರ್ ಕೂಡ ನಾಲ್ಕು ಅಂಕ ಗಳಿಸಿದರು. ಅವರಿಗೆ ಲೆಫ್ಟ್ ಕಾರ್ನರ್ ಡಿಫೆಂಡರ್ ಸೌರಭ್ ನಂದಾಲ್ (4) ಕೂಡ ಉತ್ತಮ ಜೊತೆ ನೀಡಿದರು. ಟೈಟನ್ಸ್ ಪರವಾಗಿ ರಜನೀಶ್ ಏಳು ಅಂಕ ಗಳಿಸಿದರು.

ಡೆಲ್ಲಿ ಶುಭಾರಂಭ

ಹಾಲಿ ಚಾಂಪಿಯನ್ ದಬಾಂಗ್ ಡೆಲ್ಲಿ ತಂಡವು ಯು ಮುಂಬಾ ವಿರುದ್ಧ 41-27 ಅಂತರದಲ್ಲಿ ಜಯ ಗಳಿಸುವ ಮೂಲಕ ಶುಭಾರಂಭ ಮಾಡಿತು.

ಟೂರ್ನಿಯ ಉದ್ಘಾಟನೆ ಪಂದ್ಯದಲ್ಲಿ ಡೆಲ್ಲಿ ತಂಡದ ನಾಯಕ ನಾಯಕ ನವೀನ್ ಚುರುಕಿನ ದಾಳಿ ನಡೆಸಿದರು. ಅವರು 13 ಅಂಕಗಳನ್ನು ಗಳಿಸಿದರು. ನವೀನ್ ಲೀಗ್ ಇತಿಹಾಸಲ್ಲಿ 43ನೇ ಬಾರಿಗೆ ಸೂಪರ್ ಟೆನ್ ಅಂಕಗಳನ್ನು ಗಳಿಸಿದ ಸಾಧನೆ ಮಾಡಿದರು.

ಇನ್ನೊಂದೆಡೆ ಯು ಮುಂಬಾ ತಂಡ ಎರಡು ಬಾರಿ ಆಲೌಟ್ ಆಯಿತು. ತಂಡದ ಪರ ಆಶೀಶ್ 7 ಅಂಕಗಳನ್ನು ಗಳಿಸಿದರು.

ದಿನದ ಕೊನೆಯ ಪಂದ್ಯದಲ್ಲಿ ಯುಪಿ ಯೋಧಾಸ್ 34–32 ರಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವನ್ನು ಮಣಿಸಿತು.

ವಂಶಿಕಾ ರಾಷ್ಟ್ರಗೀತೆ : ಕನ್ನಡ ವಾಹಿನಿಗಳ ರಿಯಾಲಿಟಿ ಶೋನಲ್ಲಿ ಜನಮನ ಗೆದ್ದ ಪುಟ್ಟ ತಾರೆ ವಂಶಿಕಾ ಅಂಜನಿ ಕಶ್ಯಪ್ ಅವರು ರಾಷ್ಟ್ರಗೀತೆಯನ್ನು ಹಾಡುವುದರೊಂದಿಗೆ ಟೂರ್ನಿ ಉದ್ಘಾಟನೆಗೊಂಡಿತು.

ಕೋವಿಡ್ ಕಾರಣದಿಂದ ಹೋದ ವರ್ಷ ಪ್ರೇಕ್ಷಕರಿಗೆ ಅವಕಾಶವಿರಲಿಲ್ಲ. ಈ ಬಾರಿ ಅವಕಾಶ ನೀಡಲಾಗಿದೆ. ಮೊದಲ ದಿನವೇ ಎಲ್ಲ ಆಸನಗಳೂ ಭರ್ತಿಯಾಗಿದ್ದವು.

ಇಂದಿನ ಪಂದ್ಯಗಳು

ಪಟ್ನಾ ಪೈರೆಟ್ಸ್–ಪುಣೇರಿ ಪಲ್ಟನ್

ಗುಜರಾತ್ ಜೈಂಟ್ಸ್–ತಮಿಳ್ ತಲೈವಾಸ್

ಬೆಂಗಾಲ್ ವಾರಿಯರ್ಸ್–ಹರಿಯಾಣ ಸ್ಟೀಲರ್ಸ್

ಆರಂಭ: ರಾತ್ರಿ 7.30ರಿಂದ

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್

ರಿಜ್ವಾನ್ ಮಿಂಚು: ಪಾಕ್ ಜಯಭೇರಿ



ಮೊಹಮ್ಮದ್ ರಿಜ್ವಾನ್ ಬ್ಯಾಟಿಂಗ್ –ಎಎಫ್‌ಪಿ ಚಿತ್ರ

ಕ್ರೈಸ್ಟ್‌ಚರ್ಚ್ (ಎಪಿ): ಮೊಹಮ್ಮದ್ ರಿಜ್ವಾನ್ (ಅಜೇಯ 78, 50 ಎಸೆತ) ಅವರ ಅರ್ಧಶತಕದ ನೆರವಿನಿಂದ ಪಾಕಿಸ್ತಾನ ತಂಡ ಇಲ್ಲಿ ಆರಂಭವಾದ ತ್ರಿಕೋನ ಟಿ20 ಸರಣಿಯ ಮೊದಲ ಪಂದ್ಯದಲ್ಲಿ 21 ರನ್‌ಗಳಿಂದ ಬಾಂಗ್ಲಾದೇಶ ತಂಡವನ್ನು ಮಣಿಸಿತು.

ಪಾಕಿಸ್ತಾನ, ಬಾಂಗ್ಲಾ ಮತ್ತು ಆತಿಥೇಯ ನ್ಯೂಜಿಲೆಂಡ್ ತಂಡಗಳು ಟಿ20 ವಿಶ್ವಕಪ್‌ಗೆ ಪೂರ್ವಭಾವಿಯಾಗಿ ಈ ಸರಣಿಯಲ್ಲಿ ಆಡುತ್ತಿವೆ.

ಶುಕ್ರವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಪಾಕ್, 20 ಓವರ್‌ಗಳಲ್ಲಿ 5 ವಿಕೆಟ್‌ಗೆ 167 ರನ್ ಗಳಿಸಿತು. ರಿಜ್ವಾನ್ ಅಲ್ಲದೆ ಬಾಬರ್ ಅಜಂ (22) ಮತ್ತು ಶಾನ್ ಮಸೂದ್ (31) ಉತ್ತಮ ಆಟವಾಡಿದರು.

ಬಾಂಗ್ಲಾ ತಂಡ ನಿಗದಿತ ಓವರ್‌ಗಳಲ್ಲಿ 8 ವಿಕೆಟ್‌ಗೆ 146 ರನ್ ಕಲೆಹಾಕಿತು. ಯಾಸಿರ್ ಅಲಿ (ಔಟಾಗದೆ 42) ಮತ್ತು ಲಿಟನ್ ದಾಸ್ (35 ರನ್) ಹೊರತುಪಡಿಸಿ ಇತರ ಬ್ಯಾಟರ್‌ಗಳು ವಿಫಲರಾದರು. ಪಾಕ್ ತಂಡದ ಮೊಹಮ್ಮದ್ ವಸೀಂ (24ಕ್ಕೆ 3) ಮತ್ತು ಮೊಹಮ್ಮದ್ ನವಾಜ್ (25ಕ್ಕೆ 2) ಶಿಸ್ತಿನ ಬೌಲಿಂಗ್ ನಡೆಸಿದರು.

ಸಂಕ್ಷಿಪ್ತ ಸ್ಕೋರ್: ಪಾಕಿಸ್ತಾನ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 167 (ಮೊಹಮ್ಮದ್ ರಿಜ್ವಾನ್ ಔಟಾಗದೆ 78, ಬಾಬರ್ ಅಜಂ 22, ಶಾನ್ ಮಸೂದ್ 31, ತಸ್ಕಿನ್ ಅಹ್ಮದ್ 25ಕ್ಕೆ 2, ಮೆಹ್ದಿ ಹಸನ್ 12ಕ್ಕೆ 1)

ಬಾಂಗ್ಲಾದೇಶ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 146 (ಶಬ್ಬೀರ್ ರಹಮಾನ್ 14, ಲಿಟನ್ ದಾಸ್ 35, ಅಫೀಫ್ ಹೊಸೇನ್ 25, ಯಾಸಿರ್ ಅಲಿ ಔಟಾಗದೆ 42, ಮೊಹಮ್ಮದ್ ವಸೀಂ 24ಕ್ಕೆ 3, ಮೊಹಮ್ಮದ್ ನವಾಜ್ 25ಕ್ಕೆ 2, ಶಾನವಾಜ್ ದಹಾನಿ 24ಕ್ಕೆ 1, ಹ್ಯಾರಿಸ್ ರವೂಫ್ 38ಕ್ಕೆ 1)

ಕೇರಳ ಬ್ಲಾಸ್ಟರ್ಸ್‌ಗೆ ಗೆಲುವು

ಕೊಚ್ಚಿ (ಪಿಟಿಐ): ಇವಾನ್ ಕಲಿಯುಜ್ನಿ ತಂದಿತ್ತ ಎರಡು ಗೋಲುಗಳ ನೆರವಿನಿಂದ ಕೇರಳ ಬ್ಲಾಸ್ಟರ್ಸ್ ತಂಡ ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ಬ್ಲಾಸ್ಟರ್ಸ್ 3–1 ಗೋಲುಗಳಿಂದ ಈಸ್ಟ್ ಬೆಂಗಾಲ್ ತಂಡವನ್ನು ಮಣಿಸಿತು.

ಪಂದ್ಯದ ಮೊದಲಾರ್ಧ ಗೋಲುರಹಿತವಾಗಿತ್ತು. ಅಡ್ರಿಯಾನ್ ಲಿಮಾ ಅವರು 72ನೇ ನಿಮಿಷದಲ್ಲಿ ಬ್ಲಾಸ್ಟರ್ಸ್‌ಗೆ ಮೊದಲ ಗೋಲು ತಂದಿತ್ತರು. ಇವಾನ್ 82 ಹಾಗೂ 89ನೇ ನಿಮಿಷಗಳಲ್ಲಿ ಚೆಂಡನ್ನು ಗುರಿ ಸೇರಿಸಿದರು.

ಈಸ್ಟ್ ಬೆಂಗಾಲ್ ತಂಡದ ಏಕೈಕ ಗೋಲನ್ನು ಅಲೆಕ್ಸ್ ಲಿಮಾ ಅವರು 87ನೇ ನಿಮಿಷದಲ್ಲಿ ಗಳಿಸಿದರು.

ಹಿರಿಯ ನಟ ಅರುಣ್ ಬಾಲಿ ನಿಧನ



ಮುಂಬೈ: ಧಾರಾವಾಹಿ ಮತ್ತು ಹಿಂದಿ ಚಿತ್ರರಂಗದ ಹಿರಿಯ ನಟ ಅರುಣ್ ಬಾಲಿ(79) ಅವರು ಶುಕ್ರವಾರ ಬೆಳಿಗ್ಗೆ ನಿಧನರಾದರು. ಕೆಲವು ವರ್ಷಗಳಿಂದ ಅವರು ಅನಾರೋಗ್ಯಕ್ಕೆ ಒಳಗಾಗಿದ್ದರು. ಅವರಿಗೆ ಒಬ್ಬ ಗಂಡು ಮತ್ತು ಮೂವರು ಹೆಣ್ಣು ಮಕ್ಕಳಿದ್ದಾರೆ.

ಚಾಣಕ್ಯ, ಸ್ವಾಭಿಮಾನ್, ದೇಸ್ ಮೆ ನಿಕ್ಲಾ ಹೋಗಾ ಚಾಂದ್ ಮುಂತಾದ ಧಾರಾವಾಹಿಗಳಲ್ಲಿ ನಟಿಸಿದ್ದಾರೆ. ಸೌಗಂಧ್, ಖಳನಾಯಕ್, ಸತ್ಯ, ತ್ರೀ ಈಡಿಯಟ್ಸ್, ಲಾಲ್ ಸಿಂಗ್ ಛಡ್ಡಾ ಮುಂತಾದ ಚಿತ್ರಗಳಲ್ಲಿ ಅವರು ನಟಿಸಿದ್ದಾರೆ. ಅವರು ನಟಿಸಿದ್ದ ಕೊನೆಯ ಚಿತ್ರ 'ಗುಡ್ ಬೈ' ತೆರೆಕಂಡ ದಿನವೇ ಅವರು ನಿಧನರಾಗಿದ್ದಾರೆ.

ಅಬಕಾರಿ ನೀತಿ ಹಗರಣ; 35 ಕಡೆ ಇ.ಡಿ ದಾಳಿ

ನವದೆಹಲಿ (ಪಿಟಿಐ): ದೆಹಲಿಯ ಅಬಕಾರಿ ನೀತಿ ಅನುಷ್ಠಾನದಲ್ಲಿ ನಡೆದಿದೆ ಎನ್ನಲಾಗಿರುವ ಅಕ್ರಮ ಹಾಗೂ ದುರ್ಬಳಕೆ ಆರೋಪಗಳಿಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಶುಕ್ರವಾರ 35 ಕಡೆ ಏಕಕಾಲದಲ್ಲಿ ದಾಳಿ ನಡೆಸಿದರು.

ದೆಹಲಿ, ಪಂಜಾಬ್, ಹೈದರಾಬಾದ್‌ನಲ್ಲಿ ಮದ್ಯ ವಿತರಕರು, ಕಂಪನಿಗಳು, ಭಾಗಿದಾರ ಸಂಸ್ಥೆಗಳಿಗೆ ಸೇರಿದ ವಿವಿಧೆಡೆ ದಾಳಿ ನಡೆಯಿತು. ಕೆಲ ಆರೋಪಿಗಳನ್ನು ತನಿಖೆಗೆ ಒಳಪಡಿಸಿದ್ದು, ದಾಖಲೆಗಳನ್ನೂ ವಶಕ್ಕೆ ಪಡೆಯಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಾರಿ ನಿರ್ದೇಶನಾಲಯವು ಈ ಹಗರಣಕ್ಕೆ ಸಂಬಂಧಿಸಿ ಇದುವರೆಗೂ ಸುಮಾರು 103 ದಾಳಿ ನಡೆಸಿದೆ. ಅಲ್ಲದೆ, ಇಂಡೊಸ್ಪಿರಿಟ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ, ಉದ್ಯಮಿ ಸಮೀರ್ ಮಹಾಂದ್ರು ಅವರನ್ನೂ ಬಂಧಿಸಿದೆ.

ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದ ಸಿಬಿಐ ದಾಖಲಿಸಿರುವ ಎಫ್‌ಐಆರ್‌ನಲ್ಲಿ ದೆಹಲಿಯ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಸೇರಿದಂತೆ ಹಲವರನ್ನು ಆರೋಪಿಗಳಾಗಿ ಹೆಸರಿಸಲಾಗಿದೆ ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಕೆಟ್ಟ ರಾಜಕಾರಣ: ಕೇಜ್ರಿವಾಲ್

ನವದೆಹಲಿ(ಪಿಟಿಐ): ಇ.ಡಿ ಅಧಿಕಾರಿಗಳು ಶುಕ್ರವಾರ ವಿವಿಧೆಡೆ ದಾಳಿ ನಡೆಸಿದ್ದಾರೆ. ಮನೀಶ್ ಸಿಸೋಡಿಯಾ ವಿರುದ್ಧ ಸಾಕ್ಷ್ಯ ಸಂಗ್ರಹಿಸುವ ಗುರಿ ಇದ್ದರೂ ಅಧಿಕಾರಿಗಳು ದಾಳಿಯಲ್ಲಿ ಏನೂ ಸಿಕ್ಕಿಲ್ಲ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಪ್ರತಿಕ್ರಿಯಿಸಿದ್ದಾರೆ.

ಕೆಟ್ಟ ರಾಜಕಾರಣದ ಭಾಗವಾಗಿ ಸಿಬಿಐ ಮತ್ತು ಇ.ಡಿಗೆ ಸೇರಿದ ನೂರಾರು ಅಧಿಕಾರಿಗಳ ಸಮಯವನ್ನು ವ್ಯರ್ಥ ಮಾಡಲಾಗುತ್ತಿದೆ. ಇಂತಹ ಮನಸ್ಥಿತಿಯಿಂದ ದೇಶದ ಅಭಿವೃದ್ಧಿ ಹೇಗೆ ಸಾಧ್ಯ ಎಂದೂ ಪ್ರಶ್ನಿಸಿದ್ದಾರೆ.

ಕಾರ್ಬನ್ ಡೇಟಿಂಗ್ ಪರೀಕ್ಷೆ: 11ಕ್ಕೆ ವಿಚಾರಣೆ

ಲಖನೌ (ಪಿಟಿಐ): ಜ್ಞಾನವಾಪಿ ಮಸೀದಿ ಒಳಗೆ ಇದೆ ಎನ್ನಲಾದ ಶಿವಲಿಂಗವನ್ನು ಕಾರ್ಬನ್ ಡೇಟಿಂಗ್ ಪರೀಕ್ಷೆಗೆ (ವೈಜ್ಞಾನಿಕ ಪರೀಕ್ಷೆ) ಒಳಪಡಿಸಬೇಕು ಎಂದು ಕೋರಿ ಹಿಂದೂ ಮಹಿಳೆಯರು ಸಲ್ಲಿಸಿರುವ ಅರ್ಜಿಯ ವಿಚಾರಣೆಯು ಅಕ್ಟೋಬರ್ 11ಕ್ಕೆ ನಿಗದಿ ಆಗಿದೆ. ಈ ಅರ್ಜಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ ಅಂದೇ ದಾಖಲಿಸುವಂತೆ ಜ್ಞಾನವಾಪಿ ಮಸೀದಿ ಆಡಳಿತಕ್ಕೆ ಇಲ್ಲಿಯ ನ್ಯಾಯಾಲಯವು ಶುಕ್ರವಾರ ಹೇಳಿದೆ.

ಮೇ 16ರಂದು ಜ್ಞಾನವಾಪಿ ಮಸೀದಿಯ ಆವರಣದೊಳಗೆ ವಿಡಿಯೊ ಸಮೀಕ್ಷೆ ನಡೆಸಲಾಗಿತ್ತು. 'ವಝೂಖಾನ' ಕೊಳದಲ್ಲಿ ಶಿವಲಿಂಗದ ಆಕೃತಿ ಪತ್ತೆಯಾಗಿದೆ ಎಂದು ಆಗ ಹೇಳಲಾಗಿತ್ತು. ಆ ಆಕೃತಿಯನ್ನು ಕಾರ್ಬನ್ ಡೇಟಿಂಗ್‌ಗೆ ಒಳಪಡಿಸಬೇಕು ಎಂದು ಜ್ಞಾನವಾಪಿ–ಶೃಂಗಾರ ಗೌರಿ ಮೊಕದ್ದಮೆಯ ಹಿಂದೂ ಪರ ಅರ್ಜಿದಾರರು ಅರ್ಜಿ ಸಲ್ಲಿಸಿದ್ದಾರೆ.

ಶಿವಲಿಂಗವನ್ನು ಕಾರ್ಬನ್ ಡೇಟಿಂಗ್‌ಗೆ ಒಳಪಡಿಸುವಂತೆ ಆದೇಶ ನೀಡಬೇಕೇ ಅಥವಾ ಶಿವಲಿಂಗವನ್ನು ಈ ಮೊಕದ್ದಮೆಯ ಭಾಗವನ್ನಾಗಿಸಬೇಕೇ ಎಂದು ನ್ಯಾಯಾಲಯವು ಸ್ಪಷ್ಟನೆ ಕೇಳಿದೆ ಎಂದು ಹಿಂದೂ ಅರ್ಜಿದಾರರ ಪರ ವಕೀಲ ವಿಷ್ಣು ಶಂಕರ್ ಜೈನ್ ಅವರು ತಿಳಿಸಿದ್ದಾರೆ.

ವಿಡಿಯೊ ಸಮೀಕ್ಷೆಯಲ್ಲಿ ಕಂಡುಬಂದಿರುವ ಆಕೃತಿಯು ಕಾರಂಜಿ ಎಂದು ಮಸೀದಿ ಆಡಳಿತವು ಲಿಖಿತ ಹೇಳಿಕೆ ನೀಡಿತ್ತು. ಅದು ಶಿವಲಿಂಗವೊ ಅಥವಾ ಕಾರಂಜಿಯೊ ಎಂದು ತಿಳಿಯಬೇಕಿದೆ. ಭಾರತೀಯ ಪ್ರಾಚ್ಯವಸ್ತು ಸರ್ವೇಕ್ಷಣೆಯು ಈ ಆಕೃತಿಯ ಪರಿಶೀಲನೆ ನಡೆಸಬೇಕು. ಅದಕ್ಕಾಗಿ ಕೋರ್ಟ್ ಆಯೋಗವನ್ನು ರಚಿಸಬೇಕು ಎಂದು ಅವರು ಹೇಳಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ನೀಡಿರುವ ಅಂಜುಮನ್ ಇಂತೆಝಾಮಿಯಾ ಸಮಿತಿಯ ಜಂಟಿ ಕಾರ್ಯದರ್ಶಿ ಮೊಹಮದ್ ಯಾಸಿನ್, ಕಾರ್ಬನ್ ಡೇಟಿಂಗ್ ಕುರಿತ ತೀರ್ಪನ್ನು ನ್ಯಾಯಾಲಯವು ಶುಕ್ರವಾರ ನೀಡಲಿದೆ ಎಂದು ಭಾವಿಸಿದ್ದೆವು. ಆದರೆ, ಮುಂದಿನ ವಿಚಾರಣೆಯನ್ನು ಅಕ್ಟೋಬರ್ 11ಕ್ಕೆ ಮುಂದೂಡಿದೆ ಎಂದಿದ್ದಾರೆ.

ಗುಜರಾತ್‌ನ ಆಣಂದ್ ಸಮೀಪ ನಡೆದ ಅಪಘಾತ

ವಂದೇ ಭಾರತ್ ರೈಲಿಗೆ ಮತ್ತೆ ಹಸು ಡಿಕ್ಕಿ



ಹಸುವಿಗೆ ಡಿಕ್ಕಿಯಾಗಿ ಹಾನಿಯಾದ ವಂದೇ ಭಾರತ್ ರೈಲು –ಪಿಟಿಐ ಚಿತ್ರ

ವಡೋದರ (ಪಿಟಿಐ): ಗಾಂಧಿನಗರ–ಮುಂಬೈ ವಂದೇ ಭಾರತ ಎಕ್ಸ್‌ಪ್ರೆಸ್ ರೈಲು ಗುಜರಾತ್‌ನ ಆಣಂದ್ ಸಮೀಪ ಶುಕ್ರವಾರ ಹಸುವಿಗೆ ಡಿಕ್ಕಿಹೊಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗುರುವಾರ ಅಷ್ಟೇ ಮುಂಬೈ–ಗಾಂಧಿನಗರ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಅಹಮದಾಬಾದ್‌ನಲ್ಲಿ ನಾಲ್ಕು ಎಮ್ಮೆಗಳಿಗೆ ಡಿಕ್ಕಿಯಾಗಿತ್ತು.

ಶುಕ್ರವಾರ ಮಧ್ಯಾಹ್ನ 3:49ರ ಸುಮಾರಿಗೆ ಕಂಜರಿ ಮತ್ತು ಆಣಂದ್ ರೈಲುನಿಲ್ದಾಣದ ಮಧ್ಯದಲ್ಲಿ ಘಟನೆ ಸಂಭವಿಸಿದೆ. ರೈಲಿನ ಮುಂಭಾಗಕ್ಕೆ ಅಲ್ಪಪ್ರಮಾಣದ ಹಾನಿಯಾಗಿದೆ. ಪ್ರಯಾಣಿಕರೆಲ್ಲರೂ ಸುರಕ್ಷಿತವಾಗಿದ್ದಾರೆ ಎಂದು ಪಶ್ಚಿಮ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ) ಸುಮಿತ್ ಠಾಕೂರ್ ತಿಳಿಸಿದ್ದಾರೆ.

'ಅವಘಡ ನಡೆದ ಹತ್ತು ನಿಮಿಷಗಳ ನಂತರ ರೈಲು ಸೇವೆ ಪುನಾರಂಭಿಸಲಾಯಿತು. ಅಪಘಾತದಲ್ಲಿ ಹಸು ಬದುಕಿದೆಯೇ ಅಥವಾ ಮೃತಪಟ್ಟಿದೆಯೇ ಎಂಬ ಬಗ್ಗೆ ಇನ್ನೂ ಮಾಹಿತಿ ಲಭಿಸಿಲ್ಲ' ಎಂದು ಹಿರಿಯ ಪಿಆರ್‌ಒ ಪ್ರದೀಪ್ ಶರ್ಮಾ ತಿಳಿಸಿದ್ದಾರೆ.

ರೈಲಿಗೆ ಅಡ್ಡಬಂದ ಎಮ್ಮೆ: ಮಾಲೀಕರ ವಿರುದ್ಧ ಎಫ್‌ಐಆರ್ ದಾಖಲು

ಮುಂಬೈ/ಅಹಮದಾಬಾದ್: ಮುಂಬೈ–ಗಾಂಧಿನಗರ ವಂದೇ ಭಾರತ್ ಎಕ್ಸ್‌ಪ್ರೆಸ್ ಅಹಮದಾಬಾದ್‌ನಲ್ಲಿ ಗುರುವಾರ ನಾಲ್ಕು ಎಮ್ಮೆಗಳಿಗೆ ಡಿಕ್ಕಿ ಹೊಡೆದ ಪರಿಣಾಮ ರೈಲಿನ ಮುಂಭಾಗಕ್ಕೆ ಹಾನಿಯಾಗಿತ್ತು. ಇದಕ್ಕೆ ಸಂಬಂಧಿಸಿ, ಎಮ್ಮೆಗಳ ಮಾಲೀಕರ ವಿರುದ್ಧ ಗುಜರಾತ್‌ನ ರೈಲು ರಕ್ಷಣಾ ಪಡೆಯು ಪ್ರಕರಣ ದಾಖಲಿಸಿದೆ.

ರೈಲ್ವೆ ಪ್ರದೇಶಕ್ಕೆ ಅನಧಿಕೃತ ಪ್ರವೇಶ ಮತ್ತು ರೈಲ್ವೆ ಆಸ್ತಿಯ ದುರ್ಬಳಕೆ (ರೈಲ್ವೆ ಕಾಯ್ದೆ 1989ರ 147 ಸೆಕ್ಷನ್) ಅಡಿ ಗುರುವಾರ ಪ್ರಕರಣ ದಾಖಲು ಮಾಡಲಾಗಿದೆ ಎಂದು ಪಶ್ಚಿಮ ರೈಲ್ವೆ ಹಿರಿಯ ವಕ್ತಾರ ಜಿತೇಂದ್ರ ಕುಮಾರ್ ಜಯಂತ್ ಹೇಳಿದರು.

'ಘಟನೆಯಲ್ಲಿ ನಾಲ್ಕು ಎಮ್ಮೆಗಳು ಸಾವನ್ನಪ್ಪಿವೆ. ಎಮ್ಮೆಗಳ ಮಾಲೀಕರ ಮೇಲೆ ಎಫ್‌ಐಆರ್ ದಾಖಲು ಮಾಡಲಾಗಿದೆ. ಆದರೆ, ಮಾಲೀಕರು ಯಾರು ಎಂಬುದು ಪತ್ತೆಯಾಗಿಲ್ಲ. ಈ ಕಾರ್ಯ ಪ್ರಗತಿಯಲ್ಲಿದೆ' ಎಂದು ಅವರು ತಿಳಿಸಿದರು.

ಹಾನಿಯಾಗಿದ್ದ ರೈಲಿನ ಭಾಗವನ್ನು 24 ಗಂಟೆಯಲ್ಲಿ ಸರಿಪಡಿಸಲಾಗಿದೆ.

ಬಿಎಫ್‌ಸಿಗೆ ನಾರ್ತ್‌ಈಸ್ಟ್ ಸವಾಲು

ಐಎಸ್‌ಎಲ್: ಕಂಠೀರವ ಕ್ರೀಡಾಂಗಣದಲ್ಲಿ ಮತ್ತೆ 'ಫುಟ್‌ಬಾಲ್ ಹಬ್ಬ'

ಪ್ರಜಾವಾಣಿ ವಾರ್ತೆ



ಬಿಎಫ್‌ಸಿ ತಂಡದ ನಾಯಕ ಸುನಿಲ್ ಚೆಟ್ರಿ (ಎಡ) ಹಾಗೂ ಕೋಚ್ ಸೈಮನ್ ಗ್ರೇಸನ್ ಪ್ರಜಾವಾಣಿ ಚಿತ್ರ: ಎಸ್.ಕೆ.ದಿನೇಶ್

ಬೆಂಗಳೂರು: ಎರಡು ವರ್ಷಗಳ ಬಿಡುವಿನ ಬಳಿಕ ಕಂಠೀರವ ಕ್ರೀಡಾಂಗಣಕ್ಕೆ 'ಫುಟ್‌ಬಾಲ್ ಹಬ್ಬ' ಮರಳಿದ್ದು, ಬೆಂಗಳೂರಿನ ಫುಟ್‌ಬಾಲ್ ಪ್ರೇಮಿಗಳ ಕುತೂಹಲ ಗರಿಗೆದರಿದೆ.

ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯ ತನ್ನ ಮೊದಲ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ ತಂಡ ಶನಿವಾರ, ನಾರ್ತ್ ಈಸ್ಟ್ ಯುನೈಟೆಡ್ ಎಫ್‌ಸಿ ತಂಡವನ್ನು ಎದುರಿಸಲಿದೆ.

ಕೋವಿಡ್ ಕಾರಣ ಕಳೆದ ಎರಡು ಋತುಗಳಲ್ಲಿ ಕಂಠೀರವ ಕ್ರೀಡಾಂಗಣದಲ್ಲಿ ಐಎಸ್‌ಎಲ್ ಪಂದ್ಯಗಳು ನಡೆದಿರಲಿಲ್ಲ. ಇದೀಗ ತವರು ನೆಲದಲ್ಲಿ ಆಡಲು ಅವಕಾಶ ಲಭಿಸಿರುವುದು ಬಿಎಫ್‌ಸಿ ಆಟಗಾರರ ಉತ್ಸಾಹ ಇಮ್ಮಡಿಗೊಳಿಸಿದೆ. ಮೊದಲ ಪಂದ್ಯದಲ್ಲಿ ಗೆದ್ದು, ಪ್ರಶಸ್ತಿಯೆಡೆಗಿನ ಅಭಿಯಾನವನ್ನು ಸಕಾರಾತ್ಮಕವಾಗಿ ಆರಂಭಿಸುವ ವಿಶ್ವಾಸದಲ್ಲಿದೆ.

ಕಂಠೀರವ ಕ್ರೀಡಾಂಗಣದಲ್ಲಿ ಮತ್ತೆ ಆಡುವ ಅವಕಾಶ ಲಭಿಸಿರುವುದಕ್ಕೆ ಬಿಎಫ್‌ಸಿ ತಂಡದ ನಾಯಕ ಸುನಿಲ್ ಚೆಟ್ರಿ ಮತ್ತು ಕೋಚ್ ಸೈಮನ್ ಗ್ರೇಸನ್ ಅವರು ಸಂತಸ ವ್ಯಕ್ತಪಡಿಸಿದ್ಧಾರೆ.

'ಕಿಕ್ಕಿರಿದು ತುಂಬುವ ಪ್ರೇಕ್ಷಕರ ಬೆಂಬಲದೊಂದಿಗೆ ಇಲ್ಲಿ ಆಡುವುದನ್ನು ಎದುರು ನೋಡುತ್ತಿದ್ದೇವೆ. ಕೋವಿಡ್‌ಗೆ ಮುಂಚೆ ಇಲ್ಲಿ ಪಂದ್ಯ ನಡೆಯುತ್ತಿದ್ದಾಗ ಅನುಭವಿಸಿದ್ದ ಪ್ರತಿಯೊಂದು ಕ್ಷಣವೂ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದೆ' ಎಂದು ಚೆಟ್ರಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಳೆದ ಎರಡು ಋತುಗಳಲ್ಲಿ ಉತ್ತಮ ಪ್ರದರ್ಶನ ನೀಡಲು ವಿಫಲವಾಗಿದ್ದ ಬಿಎಫ್‌ಸಿ, ಈ ಬಾರಿ ಹೊಸ ಆಟಗಾರರನ್ನು ಸೇರಿಸಿಕೊಂಡು ಶಕ್ತಿಯನ್ನು ವೃದ್ಧಿಸಿಕೊಂಡಿದೆ. ರಾಯ್ ಕೃಷ್ಣ, ಪ್ರಬೀರ್ ದಾಸ್ ಮತ್ತು ಜಾವಿ ಹೆರ್ನಾಂಡೆಸ್ ಅವರ ಮೇಲೆ ಹೆಚ್ಚಿನ ನಿರೀಕ್ಷೆ ಇಡಲಾಗಿದೆ. ಸಂದೇಶ್ ಜಿಂಗಾನ್, ಅಲೆಕ್ಸಾಂಡರ್ ಜವನೊವಿಚ್ ಮತ್ತು ಹೀರಾ ಮೊಂಡಲ್ ಅವರು ರಕ್ಷಣಾ ವಿಭಾಗಕ್ಕೆ ಬಲ ತುಂಬಲಿದ್ದಾರೆ.

'ಅಂತಿಮ ಇಲೆವೆನ್‌ನಲ್ಲಿ ಸ್ಥಾನ ಖಚಿತಪಡಿಸಿಕೊಳ್ಳಲು ನಾನು ಪ್ರಯತ್ನಿಸುತ್ತಿದ್ದೇನೆ' ಎಂದು ಚೆಟ್ರಿ ನಗು ಬೀರಿದರು. 'ಯಾರಿಗೆಲ್ಲಾ ಆಡುವ ಅವಕಾಶ ಲಭಿಸುತ್ತದೆ ಎಂಬುದು ಖಚಿತವಿಲ್ಲ. ತಂಡದಲ್ಲಿ ಅಷ್ಟೊಂದು ಪೈಪೋಟಿಯಿದೆ' ಎಂದು ಹೇಳಿದರು.

ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ಕಳೆದ ಋತುವಿಗೆ ಹೋಲಿಸಿದರೆ, ತಂಡದಲ್ಲಿ ಭಾರಿ ಬದಲಾವಣೆಗಳನ್ನು ಮಾಡಿಕೊಂಡಿದೆ. 'ಇದು ಕಠಿಣ ಪಂದ್ಯ ಎಂಬುದರ ಅರಿವಿದೆ. ಬಿಎಫ್‌ಸಿ ತಂಡ ಸಮತೋಲನದಿಂದ ಕೂಡಿದೆ. ಆದರೆ ನಾವು ತಕ್ಕ ಸಿದ್ಧತೆಯೊಂದಿಗೆ ಬಂದಿದ್ದೇವೆ' ಎಂದು ತಂಡದ ಕೋಚ್ ಮಾರ್ಕೊ ಬಲ್ಬುಲ್ ತಿಳಿಸಿದರು.

ಪಂದ್ಯ ಆರಂಭ: ಸಂಜೆ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



ಲಿಖಿತ್ ಮತ್ತು ಅಹಿದಾ

ಟೆನಿಸ್: ಲಿಖಿತಾ, ಅಹಿದಾ ಚಾಂಪಿಯನ್

ಬೆಂಗಳೂರು: ಲಿಖಿತ್ ಗೌಡ ಮತ್ತು ಅಹಿದಾ ಸಿಂಗ್ ಅವರು ಇಲ್ಲಿ ನಡೆದ ಟಾಪ್‌ಸ್ಪಿನ್ ಎಐಟಿಎ 14 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಹಾಗೂ ಬಾಲಕಿಯರ ವಿಭಾಗಗಳಲ್ಲಿ ಚಾಂಪಿಯನ್ ಆದರು.

ಟಾಪ್‌ಸ್ಪಿನ್ ಅಕಾಡೆಮಿ ಕೋರ್ಟ್‌ನಲ್ಲಿ ಶುಕ್ರವಾರ ನಡೆದ ಬಾಲಕರ ವಿಭಾಗದ ಫೈನಲ್‌ನಲ್ಲಿ ಲಿಖಿತ್ 6–4, 6–3 ರಲ್ಲಿ ನಿಯಂತ್ ವಿಕಾಸ್ ವಿರುದ್ಧ ಗೆದ್ದರು.

ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಅಹಿದಾ 6–3, 6–0 ರಲ್ಲಿ ಸನ್ಮಿತಾ ಹರಿಣಿ ಅವರನ್ನು ಮಣಿಸಿದರು.

ಫುಟ್‌ಬಾಲ್: ಎಂಇಜಿಗೆ ಗೆಲುವು

ಪ್ರಜಾವಾಣಿ ವಾರ್ತೆ



ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ತಂಡದ ಜಿಗ್ಮೆ ತಶಿ ಲಾಮಾ (ಎಡ) ಮತ್ತು ಥಾಂಕೋಸ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿಯ ಜಯ್ ಕನನಿ ಪೈಪೋಟಿ ನಡೆಸಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ಅಹ್ಮದ್ ಅಸ್ರಾರುಲ್ ಅವರು ಕೊನೆಯ ನಿಮಿಷದಲ್ಲಿ ಗಳಿಸಿದ ಗೋಲಿನ ನೆರವಿನಿಂದ ಎಂಇಜಿ ಮತ್ತು ಸೆಂಟರ್ ತಂಡದವರು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ರೋಚಕ ಗೆಲುವು ಪಡೆದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಎಂಇಜಿ ತಂಡ 2–1 ಗೋಲುಗಳಿಂದ ಫ್ರೆಂಡ್ಸ್ ಯುನೈಟೆಡ್ ಎಫ್‌ಸಿ ತಂಡವನ್ನು ಮಣಿಸಿತು.

ಮಗ್ತೇಶ್ ಸೆಲ್ವ ಅವರು 10ನೇ ನಿಮಿಷದಲ್ಲಿ ಪೆನಾಲ್ಟಿ ಅವಕಾಶದಲ್ಲಿ ಗೋಲು ಗಳಿಸಿ ಫ್ರೆಂಡ್ಸ್ ಯುನೈಟೆಡ್ ಎಫ್‌ಸಿಗೆ ಮುನ್ನಡೆ ತಂದಿತ್ತರು. ಅರ್ಜುನ ಮಧು 41ನೇ ನಿಮಿಷದಲ್ಲಿ ಎಂಇಜಿಗೆ ಸಮಬಲದ ಗೋಲು ಗಳಿಸಿದರು.

ಪಂದ್ಯದ ಇನ್ನೇನು ಡ್ರಾದಲ್ಲಿ ಕೊನೆಗೊಳ್ಳಲಿದೆ ಅನ್ನುವಷ್ಟರಲ್ಲಿ ಅಸ್ರಾರುಲ್ ಅಹ್ಮದ್ (90 + 4) ಅವರು ಗೋಲು ಗಳಿಸಿ ಎಂಇಜಿ ಮತ್ತು ಸೆಂಟರ್ ತಂಡದ ಗೆಲುವಿಗೆ ಕಾರಣರಾದರು.

ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ಮತ್ತು ಥಾಂಕೋಸ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡಗಳ ನಡುವಿನ ಪಂದ್ಯ ಗೋಲುರಹಿತ ಡ್ರಾದಲ್ಲಿ ಕೊನೆಗೊಂಡಿತು.


ಮಹಿಳೆಯರ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿ: ನಿದಾ ಮಿಂಚು

ಪಾಕ್‌ಗೆ ಮಣಿದ ಹರ್ಮನ್‌ಪ್ರೀತ್ ಬಳಗ

ಸಿಲೆಟ್ (ಪಿಟಿಐ): ನಿದಾ ದಾರ್ ಆಲ್‌ರೌಂಡ್ ಆಟದ ಬಲದಿಂದ ಪಾಕಿಸ್ತಾನ ತಂಡವು ಶುಕ್ರವಾರ ನಡೆದ ಏಷ್ಯಾ ಕಪ್ ಮಹಿಳೆಯರ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಭಾರತ ತಂಡವನ್ನು ಸೋಲಿಸಿತು.

ಚುಟುಕು ಮಾದರಿಯಲ್ಲಿ 2016ರ ನಂತರ ಪಾಕ್ ತಂಡವು ಭಾರತದ ಎದುರು ಸಾಧಿಸಿದ ಮೊದಲ ಜಯ ಇದಾಗಿದೆ.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಪಾಕ್ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 137 ರನ್‌ಗಳ ಸಾಧಾರಣ ಮೊತ್ತ ಕಲೆ ಹಾಕಿತು. ದೀಪ್ತಿ ಶರ್ಮಾ (27ಕ್ಕೆ3) ಹಾಗೂ ಪೂಜಾ ವಸ್ತ್ರಕರ್ (23ಕ್ಕೆ2) ಅವರ ಬಿಗಿ ದಾಳಿಯಿಂದಾಗಿ ಪಾಕ್ ತಂಡವು ಆರಂಭದಲ್ಲಿ ಕುಸಿತ ಕಂಡಿತು. ಆದರೆ, ನಾಯಕಿ ಮರೂಫ್ (32; 35ಎ) ಹಾಗೂ ಮಧ್ಯಮ ಕ್ರಮಾಂಕದ ಬ್ಯಾಟರ್ ನಿದಾ (ಅಜೇಯ 56; 37ಎ, 4X5, 6X1) ಇನಿಂಗ್ಸ್‌ಗೆ ಬಲ ತುಂಬಿದರು.



ಪಾಕಿಸ್ತಾನ ತಂಡದ ಆಟಗಾರ್ತಿ ನಿದಾ ದಾರ್ –ಎಎಫ್‌ಪಿ ಚಿತ್ರ

ಈ ಸಾಧಾರಣ ಗುರಿ ಬೆನ್ನಟ್ಟಿದ ಹರ್ಮನ್‌ಪ್ರೀತ್ ಕೌರ್ ಬಳಗಕ್ಕೆ ಆಫ್‌ಸ್ಪಿನ್ನರ್ ಬೌಲರ್ ಕೂಡ ಆಗಿರುವ ನಿದಾ (23ಕ್ಕೆ2) ಹಾಗೂ ನಶ್ರಾ ಸಂಧು (30ಕ್ಕೆ3) ಅವರ ಪರಿಣಾಮಕಾರಿ ದಾಳಿಯ ಮುಂದೆ ಭಾರತದ ಬ್ಯಾಟಿಂಗ್ ಪಡೆ ಕುಸಿಯಿತು. 19.4 ಓವರ್‌ಗಳಲ್ಲಿ 124 ರನ್ ಗಳಿಸಲಷ್ಟೇ ಶಕ್ತವಾಯಿತು. ಇದರಿಂದಾಗಿ ಪಾಕ್ ತಂಡವು 13 ರನ್‌ಗಳಿಂದ ಜಯಿಸಿತು.

ಟೂರ್ನಿಯ ಮೊದಲ ಮೂರು ಪಂದ್ಯಗಳಲ್ಲಿ ಗೆದ್ದಿತ್ತು. ಪಾಕ್ ತಂಡಕ್ಕೂ ಇದು ನಾಲ್ಕನೇ ಪಂದ್ಯ. ತನ್ನ ಮೂರನೇ ಪಂದ್ಯದಲ್ಲಿ ಥಾಯ್ಲೆಂಡ್ ಎದುರು ಸೋಲಿನ ಕಹಿಯುಂಡಿತ್ತು. ಭಾರತ ತಂಡದ ಎದುರು ಪುಟಿದೆದ್ದಿತು. ಉಭಯ ತಂಡಗಳೂ ತಲಾ ಆರು ಅಂಕ ಗಳಿಸಿವೆ.ಆದರೆ ಉತ್ತಮ ರನ್‌ರೇಟ್ ಹೊಂದಿರುವ ಹರ್ಮನ್‌ಪ್ರೀತ್ ಕೌರ್ ಬಳಗವು ಅಗ್ರಸ್ಥಾನ ಕಾಪಾಡಿಕೊಂಡಿದೆ. ಭಾರತ ತಂಡವು ಇನ್ನೆರಡು ಪಂದ್ಯಗಳಲ್ಲಿ ಬಾಂಗ್ಲಾದೇಶ ಹಾಗೂ ಥಾಯ್ಲೆಂಡ್ ಎದುರು ಸೆಣಸಲಿದೆ. ಪಾಕ್ ತಂಡವೂ ತನ್ನ ಪಾಲಿನ ಇನ್ನೆರಡು ಪಂದ್ಯಗಳಲ್ಲಿ ಯುಎಇ ಹಾಗೂ ಶ್ರೀಲಂಕಾ ತಂಡಗಳನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: 20 ಓವರ್‌ಗಳಲ್ಲಿ 6ಕ್ಕೆ137 (ಮುನೀಬ್ ಅಲಿ 17, ಬಿಸ್ಮಾ ಮರೂಫ್ 32, ನಿದಾ ದಾರ್ ಔಟಾಗದೆ 56, ದೀಪ್ತಿ ಶರ್ಮಾ 27ಕ್ಕೆ3, ಪೂಜಾ ವಸ್ತ್ರಕರ್ 23ಕ್ಕೆ2) ಭಾರತ: 19.4 ಓವರ್‌ಗಳಲ್ಲಿ 124 (ಸುಬಿನೇನಿ ಮೇಘನಾ 15, ಸ್ಮೃತಿ ಮಂದಾನ 17, ದಯಾಳನ್ ಹೇಮಲತಾ 20, ದೀಪ್ತಿ ಶರ್ಮಾ 16, ರಿಚಾ ಘೋಷ್ 26, ಸಾದಿಯಾ ಇಕ್ಬಾಲ್ 24ಕ್ಕೆ2, ನಿದಾ ಧಾರ್ 23ಕ್ಕೆ2, ನಷ್ರಾ ಸಂಧು 30ಕ್ಕೆ3) ಫಲಿತಾಂಶ: ಪಾಕಿಸ್ತಾನ ತಂಡಕ್ಕೆ 13 ರನ್‌ಗಳ ಜಯ.

ಇಂದಿನ ಪಂದ್ಯಗಳು

ಶ್ರೀಲಂಕಾ–ಮಲೇಷ್ಯಾ (ಬೆಳಿಗ್ಗೆ 8.30ರಿಂದ)

ಭಾರತ–ಬಾಂಗ್ಲಾದೇಶ (ಮಧ್ಯಾಹ್ನ 1ರಿಂದ)

ಕ್ರಿಕೆಟ್: ದೀಪಕ್ ಚಾಹರ್‌ಗೆ ಗಾಯ

ನವದೆಹಲಿ (ಪಿಟಿಐ): ಭಾರತ ಏಕದಿನ ಕ್ರಿಕೆಟ್ ತಂಡದ ಬೌಲರ್ ದೀಪಕ್ ಚಾಹರ್ ಅವರ ಕಾಲು ಉಳುಕಿ ಗಾಯಗೊಂಡಿದ್ದಾರೆ. ಆದ್ದರಿಂದ ಅವರು ದಕ್ಷಿಣ ಆಫ್ರಿಕಾ ಸರಣಿಯಲ್ಲಿ ಉಳಿದಿರುವ ಇನ್ನೆರಡು ಪಂದ್ಯಗಳಲ್ಲಿ ಆಡುವುದಿಲ್ಲ.


ಗುರುವಾರ ಲಖನೌನಲ್ಲಿ ಉಭಯ ತಂಡಗಳ ನಡುವಣ ನಡೆದ ಮೊದಲ ಏಕದಿನ ಪಂದ್ಯಕ್ಕೂ ಮುನ್ನ ನೆಟ್ಸ್‌ನಲ್ಲಿ ಅಭ್ಯಾಸ ಮಾಡುವಾಗ ದೀಪಕ್ ಗಾಯಗೊಂಡಿದ್ದರು. ಅದರಿಂದಾಗಿ ಅವರನ್ನು ಪಂದ್ಯದಲ್ಲಿ ಕಣಕ್ಕಿಳಿಸಿರಲಿಲ್ಲ.

‘ದೀಪಕ್ ಕಾಲು ಉಳುಕಿದೆ. ಗಾಯ ಗಂಭೀರವಾಗಿಲ್ಲ. ಆದರೆ ಕೆಲವು ದಿನಗಳ ವಿಶ್ರಾಂತಿಯೊಂದಿಗೆ ಗುಣ-ಮುಖರಾಗುವರು’ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಆಸ್ಟ್ರೇಲಿಯಾಕ್ಕೆ ಮುಕೇಶ್, ಚೇತನ್

ಮಧ್ಯಮವೇಗಿಗಳಾದ ಮುಕೇಶ್ ಚೌಧರಿ ಹಾಗೂ ಚೇತನ್ ಸಕಾರಿಯಾ ಅವರು ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಭಾರತ ತಂಡದ ನೆಟ್ಸ್ ಬೌಲರ್‌ಗಳಾಗಿ ಆಯ್ಕೆ-ಯಾಗಿದ್ದಾರೆ.

‘ಪರ್ತ್‌ನಲ್ಲಿ ಭಾರತ ತಂಡವು ಅಭ್ಯಾಸ ಪಂದ್ಯಗಳನ್ನು ಆಡಲಿದೆ. ಅದಕ್ಕೂ ಮುನ್ನ ಮೂರು ದಿವಸ ತಂಡವು ಅಭ್ಯಾಸ ನಡೆಸಲಿದೆ. ಈ ಸಂದರ್ಭದಲ್ಲಿ ನೆಟ್ಸ್ ಬೌಲರ್‌ಗಳು ಬ್ಯಾಟರ್‌ಗಳಿಗೆ ಬೌಲಿಂಗ್ ಮಾಡಲಿದ್ದಾರೆ’ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.



ದೀಪಕ್ ಚಾಹರ್



ಸಂಕ್ಷಿಪ್ತ ಸುದ್ದಿ

ಜಿಯೊಸಿನಿಮಾದಲ್ಲಿ ಫಿಫಾ ವಿಶ್ವಕಪ್ ಪ್ರಸಾರ ಉಚಿತ

ಮುಂಬೈ: ವಯಕಾಮ್ 18 ಸ್ಪೋರ್ಟ್ಸ್ ನೆಟ್‌ವರ್ಕ್‌ ನ ಜಿಯೊ ಸಿನಿಮಾ ಆ್ಯಪ್‌ನಲ್ಲಿ ಮುಂಬರಲಿರುವ ಫಿಫಾ ವಿಶ್ವಕಪ್ ಟೂರ್ನಿಯ ನೇರಪ್ರಸಾರವನ್ನು ಉಚಿತವಾಗಿ ವೀಕ್ಷಿಸಬಹುದಾಗಿದೆ.

ಕತಾರ್‌ನಲ್ಲಿ ನ. 20ರಿಂದ ಡಿ. 18 ರವರೆಗೆ ಫಿಫಾ ವಿಶ್ವಕಪ್ ನಡೆಯಲಿದೆ. ಸ್ಪೋರ್ಟ್ಸ್ 18 ಒನ್ ಎಸ್‌ಡಿ ಹಾಗೂ ಎಚ್‌ಡಿಯಲ್ಲಿ ಟಿವಿ ಪ್ರಸಾರವೂ ಇರಲಿದೆ. ಇಂಗ್ಲಿಷ್, ಹಿಂದಿ, ತಮಿಳು, ಮಲಯಾಳಂ ಹಾಗೂ ಬಂಗಾಳಿ ಭಾಷೆಗಳಲ್ಲಿ ಲೈವ್ ಸ್ಟ್ರೀಮಿಂಗ್ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಡೆಲ್ಲಿ ಹಾಫ್ ಮ್ಯಾರಥಾನ್ ಕಣಕ್ಕೆ ಅವಿನಾಶ್ ಸಬ್ಳೆ


ನವದೆಹಲಿ (ಪಿಟಿಐ): ಒಲಿಂಪಿಯನ್ ಅಥ್ಲೀಟ್ ಅವಿನಾಶ್ ಸಬ್ಳೆ ಇದೇ 16ರಂದು ನಡೆಯಲಿರುವ ಡೆಲ್ಲಿ ಹಾಫ್ ಮ್ಯಾರಥಾನ್‌ನಲ್ಲಿ ಕಣಕ್ಕಿಳಿಯಲಿದ್ದಾರೆ.

ವಿಶ್ವ ಅಥ್ಲೆಟಿಕ್ಸ್‌ನ ಎಲೀಟ್ ಲೇಬಲ್ ರಸ್ತೆ ಓಟ ಇದಾಗಿದ್ದು ಜವಾಹರಲಾಲ್ ನೆಹರು ಕ್ರೀಡಾಂಗಣದಿಂದ ಆರಂಭವಾಗಲಿದೆ. ವಿಶ್ವದ ಖ್ಯಾತನಾಮ ಅಥ್ಲೀಟ್‌ಗಳು ಸ್ಪರ್ಧಿಸಲಿದ್ದಾರೆ.

ಗೌತಮ್ ಗಂಭೀರ್ ಗ್ಲೋಬಲ್ ಮೆಂಟರ್

ನವದೆಹಲಿ (ಪಿಟಿಐ): ಕ್ರಿಕೆಟಿಗ ಗೌತಮ್ ಗಂಭೀರ್ ಅವರನ್ನು ಆರ್.ಪಿ. ಸಂಜೀವ ಗೋಯೆಂಕಾ ಸಮೂಹವು ಜಾಗತಿಕ ಮಹಾಪೋಷಕ ಸ್ಥಾನಕ್ಕೆ ನೇಮಕ ಮಾಡಿದೆ. ಐಪಿಎಲ್‌ನಲ್ಲಿ ಆಡುವ ಲಖನೌ ಸೂಪರ್ ಜೈಂಟ್ಸ್ ತಂಡವು ಗೊಯೆಂಕಾ ಸಮೂಹದ ಮಾಲಿ-ಕತ್ವದ್ದಾಗಿದೆ. ಈ ತಂಡಕ್ಕೆ ಗೌತಮ್ ಮಾರ್ಗದರ್ಶಕರಾಗಿದ್ದಾರೆ.

ಇದೇ ಸಮೂಹದ ಮಾಲೀಕತ್ವದ ಡರ್ಬನ್ಸ್ ಸೂಪರ್ ಜೈಂಟ್ಸ್ ತಂಡವು ದ.ಆಫ್ರಿಕಾ ಕ್ರಿಕೆಟ್ ಲೀಗ್‌ನಲ್ಲಿ ಆಡಲಿದೆ.



ಸೆಪಕ್ ಟಕ್ರಾ: ದೆಹಲಿ, ಕೇರಳ ತಂಡಗಳಿಗೆ ಚಿನ್ನ

ಬೆಳಗಾವಿ: ದೆಹಲಿ ಹಾಗೂ ಕೇರಳ ತಂಡಗಳು ಚಂದರಗಿಯ ಎಸ್.ಎಂ. ಕಲೂತಿ ಕ್ರೀಡಾ ವಸತಿ ಶಾಲೆಯಲ್ಲಿ ನಡೆದ ಸೆಪಕ್ ಟಕ್ರಾ ಸಬ್‌ಜೂನಿಯರ್ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ, ಕ್ರಮವಾಗಿ ಬಾಲಕ ಹಾಗೂ ಬಾಲಕರ ರೆಗೋ ವಿಭಾಗದಲ್ಲಿ ಚಿನ್ನದ ಪದಕ ಜಯಿಸಿದವು.


ಶುಕ್ರವಾರ ನಡೆದ ಐದನೇ ದಿನದಾಟದಲ್ಲಿ ದೆಹಲಿ ಬಾಲಕರ ತಂಡವು ಮಣಿಪುರ ತಂಡವನ್ನು 17–21, 22–20, 21–13 ಅಂಕಗಳಿಂದ ಸೋಲಿಸಿತು. ಸೆಮಿಫೈನಲ್ ಪಂದ್ಯದಲ್ಲಿ ದೆಹಲಿ ತಂಡದ ಆಟಗಾರರು ನಾಗಾಲ್ಯಾಂಡ್ ವಿರುದ್ಧ ಹಾಗೂ ಮಣಿಪುರ ತಂಡದವರು ಬಿಹಾರ ವಿರುದ್ಧ ಜಯ ಸಾಧಿಸಿದ್ದರು.

ಬಾಲಕಿಯರ ವಿಭಾಗದಲ್ಲಿ ಕೇರಳ ತಂಡವು 21-11, 21-16 ಅಂಕಗಳಿಂದ ಗುಜರಾತನ್ನು ಮಣಿಸಿ ಬಂಗಾರ ಗೆದ್ದಿತು. ಸೆಮಿಫೈನಲ್ ಪಂದ್ಯದಲ್ಲಿ ಕೇರಳ ಬಾಲಕಿಯರು ಮಣಿಪುರ ವಿರುದ್ಧ ಹಾಗೂ ಗುಜರಾತ್ ತಂಡದವರು ಹರ್ಯಾಣದ ವಿರುದ್ಧ ಗೆದ್ದಿದ್ದರು.


ಸಮಾರೋಪ: ಐದು ದಿನಗಳಿಂದ ನಡೆದ ರಾಷ್ಟ್ರಮಟ್ಟದ ಕ್ರೀಡಾಕೂಟಕ್ಕೆ 29 ರಾಜ್ಯಗಳಿಂದ 600 ಕ್ರೀಡಾಪಟುಗಳು ಹಾಗೂ 50 ಜನ ತರಬೇತುದಾರು, ನಿರ್ಣಾಯಕರು ಪಾಲ್ಗೊಂಡರು.

ಶುಕ್ರವಾರ ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಸ್ಪೋಕೋ ಸಂಸ್ಥೆಯ ನಿರ್ದೇಶಕರಾದ ಎಸ್.ಆರ್.ನವರಕ್ಕಿ, ಎಂ.ಎಸ್. ಮನೋಳಿ, ಎಸ್.ಬಿ. ಯರಗಣವಿ, ಮಾಜಿ ಅಂತರರಾಷ್ಟ್ರೀಯ ಸೆಪೆಕ್ ಟಕ್ರಾ ಆಟಗಾರ ಮಂಜುನಾಥ್ ಹಾಜರಿದ್ದರು.









ಹಣ್ಣು ತಿನ್ನುವುದಷ್ಟೇ ಡಯಟ್ ಅಲ್ಲ

ಪೂರ್ಣಾ

ಬಹಳಷ್ಟು ಮಂದಿ ಡಯಟ್ ಮಾಡೋದು ಎಂದರೆ, ಊಟದ ಬದಲಿಗೆ ಕೇವಲ ಹಣ್ಣನ್ನಷ್ಟೇ ತಿಂದುಕೊಂಡಿರೋದು ಎಂದುಕೊಂಡಿದ್ದಾರೆ. ಆದರೆ, ಡಯಟ್‌ನ ಪಟ್ಟಿಯಲ್ಲಿ ಹಣ್ಣು ಒಂದು ಆಹಾರವಷ್ಟೇ. ಕೇವಲ ಹಣ್ಣು ತಿನ್ನುವುದೇ ಡಯಟ್ ಅಲ್ಲ ಎನ್ನುತ್ತಾರೆ ಆಹಾರ ತಜ್ಞರು.

ಹಣ್ಣು ಆರೋಗ್ಯಕರ ಎನ್ನುವುದರಲ್ಲಿ ಎರಡು ಮಾತಿಲ್ಲ. ಹಾಗಂತ ಬರೀ ಹಣ್ಣೇ ತಿಂದು ಜೀವಿಸಬಹುದೆ? ಖಂಡಿತ ಸಾಧ್ಯವಿಲ್ಲ. ಮನುಷ್ಯನ ದೇಹಕ್ಕೆ ಹಣ್ಣಿನಷ್ಟೇ ಇತರ ಆಹಾರಗಳೂ ಮುಖ್ಯ ಎನ್ನುವುದು ತಜ್ಞರ ಅಭಿಪ್ರಾಯ.

ಡಯಟ್ ಬಗ್ಗೆ ಮಾತಾಡುವಾಗ ಅನೇಕ ವೈದ್ಯರು, 'ತೂಕವನ್ನು ಕಳೆದುಕೊಳ್ಳಬೇಕು, ಆರೋಗ್ಯವನ್ನಲ್ಲ' ಎಂದು ಹೇಳುವುದಿದೆ. ಹಾಗಾದರೆ, ತೂಕವನ್ನು ಕಳೆದುಕೊಳ್ಳಬೇಕು, ಆರೋಗ್ಯವಾಗಿಯೂ ಇರಬೇಕೆಂದರೆ ಎಷ್ಟು ಪ್ರಮಾಣದಲ್ಲಿ ಹಣ್ಣುಗಳನ್ನು ತಿನ್ನಬೇಕು? ಮತ್ತು ಯಾವ ಹಣ್ಣುಗಳನ್ನು ತಿನ್ನಬೇಕು ಎನ್ನುವುದನ್ನು ತಿಳಿದುಕೊಳ್ಳುವುದು ಬಹಳ ಮುಖ್ಯ.

ಆಹಾರ ಅರಿವು



ಫ್ರೂಟ್ ಡಯಟ್

ಆಹಾರ ಕ್ರಮದಲ್ಲಿ ಪ್ರಧಾನವಾಗಿ ಹಣ್ಣುಗಳನ್ನು ತಿನ್ನುವುದನ್ನೇ ಪ್ರೂಟ್ ಡಯಟ್ ಎನ್ನುತ್ತಾರೆ. ಈ ಪದ್ಧತಿಯಲ್ಲಿ ಮಾಂಸಾಹಾರ, ಡೇರಿ ಪದಾರ್ಥ ಸೇರಿದಂತೆ, ಕೊಬ್ಬಿನ ಅಂಶ ಮತ್ತು ಕಾರ್ಬೊಹೈಡ್ರೇಟ್ ಹೆಚ್ಚಿರುವಂತಹ ಎಲ್ಲ ಉತ್ಪನ್ನಗಳನ್ನು ಹೊರಗಿಡಲಾಗುತ್ತದೆ.

ಫ್ರೂಡ್ ಡಯಟ್‌ನಲ್ಲಿ ಕೆಲವರು ಹಣ್ಣಿನ ಜೊತೆಗೆ ತರಕಾರಿಗಳು, ಒಣ ಹಣ್ಣುಗಳು ಮತ್ತು ತರಕಾರಿ / ಹಣ್ಣಿನ ಬೀಜಗಳನ್ನೂ (ಕುಂಬಳ, ಅಗಸೆ, ಸೌತೆಕಾಯಿ ಬೀಜ) ಮಿತವಾಗಿ ಸೇವಿಸುತ್ತಾರೆ. ಇನ್ನೂ ಕೆಲವರು, ಸಿರಿಧಾನ್ಯಗಳು, ದ್ವಿದಳ ಧಾನ್ಯಗಳು ಮತ್ತು ಗೆಡ್ಡೆಗಳಂತಹ ಆಹಾರಗಳನ್ನು ಮಿತವಾಗಿ ತಿನ್ನುವುದುಂಟು. ಆದರೆ, ಯಾವುದೇ ಪ್ರಕಾರದ ಬೇಯಿಸಿದ ಆಹಾರವನ್ನು ಸೇವಿಸುವುದಿಲ್ಲ.

ಹಣ್ಣುಗಳಲ್ಲಿ ಯಾವ ಅಂಶಗಳಿವೆ?

- ಹಣ್ಣುಗಳಲ್ಲಿ ನಾರಿನ(ಫೈಬರ್) ಅಂಶ ಯಥೇಚ್ಛವಾಗಿರುತ್ತದೆ. ಇದು ದೇಹದಲ್ಲಿರುವ ಕೊಲೆಸ್ಟ್ರಾಲ್ (ಕೊಬ್ಬು) ಕಡಿಮೆ ಮಾಡಲು ಸಹಾಯ ಮಾಡುತ್ತದೆ ಮತ್ತು ಕರುಳಿನ ಆರೋಗ್ಯಕ್ಕೆ ಉತ್ತಮ.
- ಸೇಬು, ಪೇರಳೆ, ಪಪ್ಪಾಯ, ಬಾಳೆಹಣ್ಣುಗಳಲ್ಲಿ ಫೈಬರ್ ಅಂಶ ಹೆಚ್ಚಿರುತ್ತದೆ.
- ಕಿತ್ತಳೆ ಮತ್ತು ಸ್ಟ್ರಾಬೆರಿಗಳಲ್ಲಿ ಸಾಕಷ್ಟು ವಿಟಮಿನ್ ಸಿ ಸಿಗುತ್ತದೆ. ಇದು ಹಲ್ಲು ಮತ್ತು ಒಸಡಿನ ಆರೋಗ್ಯಕ್ಕೆ ಪೂರಕ.
- ಬಾಳೆಹಣ್ಣು, ಹಲಸಿನಹಣ್ಣು ಮತ್ತು ಮಾವಿನ ಹಣ್ಣುಗಳಲ್ಲಿ ಪೊಟ್ಯಾಸಿಯಂ ಅಧಿಕವಾಗಿರುತ್ತದೆ. ರಕ್ತದೊತ್ತಡವನ್ನು ನಿಯಂತ್ರಿಸಲು ಇದು ಸಹಾಯ ಮಾಡುತ್ತದೆ.
- ಕಿತ್ತಳೆ ಮತ್ತು ಮಾವಿನ ಹಣ್ಣುಗಳಲ್ಲಿ ಪೋಲೇಟ್ ಅಧಿಕವಾಗಿರುತ್ತದೆ. ಇದು ದೇಹದಲ್ಲಿ ಕೆಂಪು ರಕ್ತ ಕಣಗಳ ವೃದ್ಧಿಗೆ ಸಹಾಯ ಮಾಡುತ್ತದೆ. ಫೋಲೇಟ್ ಆರೋಗ್ಯಕರ ಭ್ರೂಣದ ಬೆಳವಣಿಗೆಗೂ ಒಳ್ಳೆಯದು.
- ಪ್ಲಮ್ ಹಣ್ಣಿನಲ್ಲಿ ಉತ್ಕರ್ಷಣ ನಿರೋಧಕ ಅಂಶವಿದೆ. ಉತ್ಕರ್ಷಣ ನಿರೋಧಕಗಳು ಚರ್ಮದ ರಕ್ಷಣೆಗೆ ಅತ್ಯುತ್ತಮ ಆಯ್ಕೆ.

ಅತಿಯಾದರೆ ಹಣ್ಣೂ ಹಾನಿಕಾರಕ!

'ಹಣ್ಣುಗಳು ಆರೋಗ್ಯಕರ. ಆದರೆ, ಅತಿ ಹೆಚ್ಚಾದರೆ ಹಾನಿಕಾರಕವಾ ಗಬಹುದು. ಹಾಗಾಗಿ, ಯಾರಿಗೂ ವಾರ–ತಿಂಗಳುಗಟ್ಟಲೆ ಬರೀ ಹಣ್ಣು ಸೇವಿಸುತ್ತಿರಿ ಎಂದು ಸೂಚಿಸುವುದಿಲ್ಲ' ಎನ್ನುತ್ತಾರೆ ಫೋರ್ಟಿಸ್ ಆಸ್ಪತ್ರೆಯ ಆಹಾರ ತಜ್ಞೆ ಶಾಲಿನಿ ಅರವಿಂದ್.


ಶಾಲಿನಿ ಅರವಿಂದ್

'ನಾವು ತೂಕವನ್ನು ಕಳೆದುಕೊಳ್ಳಬೇಕೆ ಹೊರತು ಆರೋಗ್ಯವ ನ್ನಲ್ಲ. ಈ ಎಚ್ಚರಿಕೆಯಿಂದ ವಾರದಲ್ಲಿ ಒಂದು ದಿನ, ಅಥವಾ ದಿನದಲ್ಲಿ ಒಂದು ಹೊತ್ತು ಹಣ್ಣು ಸೇವಿಸುವುದು ಉತ್ತಮ' ಎನ್ನುತ್ತಾರೆ ಅವರು.

'ಹಣ್ಣುಗಳಲ್ಲಿ ಒಮೆಗಾ–3, ಪ್ರೊಟೀನ್ ಮತ್ತು ಕೊಬ್ಬಿನಾಂಶ, ಡಿ ಜೀವಸತ್ವ, ಕೊಬ್ಬಿನಾಮ್ಲ ಗಳಂತಹ(ಫ್ಯಾಟಿ ಆಸಿಡ್) ಕೆಲ ಅಂಶಗಳು ಹೇರಳವಾಗಿರುವುದಿಲ್ಲ. ಆದರೆ, ಇವೆಲ್ಲ ಅಂಶಗಳು ದೇಹಕ್ಕೆ ಅತ್ಯಗತ್ಯವಾಗಿ ಬೇಕು. ಕೇವಲ ಹಣ್ಣನ್ನಷ್ಟೇ ಸೇವಿಸುತ್ತಾ, ಬೇರೆ ಆಹಾರ ತ್ಯಜಿಸುವುದರಿಂದ ದೇಹದಲ್ಲಿ ಚೈತನ್ಯ ಕಡಿಮೆಯಾಗುತ್ತದೆ. ಸುಸ್ತು ಆವರಿಸಿಕೊಳ್ಳುತ್ತದೆ' ಎನ್ನುತ್ತಾರೆ ಶಾಲಿನಿ.

ಪೂರಕ ಪೋಷಕಾಂಶಗಳು ದೇಹಕ್ಕೆ ಸಿಗದಿದ್ದರೆ, ಅಪೌಷ್ಟಿಕತೆ ಉಂಟಾಗುವ ಸಾಧ್ಯತೆ ಇರುತ್ತದೆ. ಮಾತ್ರವಲ್ಲ, ದೇಹದಲ್ಲಿ ಚಯಾಪಚಯ ಕ್ರಿಯೆಯೂ(ಆಹಾರ ಜೀರ್ಣಕ್ರಿಯೆ) ನಿಧಾನವಾಗುತ್ತದೆ. ರಕ್ತಹೀನತೆ, ಆಯಾಸ ಅನುಭವಕ್ಕೆ ಬರಬಹುದು. ಕಾಲಾನಂತರದಲ್ಲಿ, ಕ್ಯಾಲ್ಸಿಯಂ ಕೊರತೆಯು ಆಸ್ಟಿಯೊಪೊರೋಸಿಸ್‌ಗೆ ಕಾರಣವಾಗಬಹುದು.

* ಎಲ್ಲ ಹಣ್ಣಗಳಲ್ಲೂ ಸಕ್ಕರೆ ಅಂಶವಿರುತ್ತದೆ. ಕೆಲವು ಹಣ್ಣುಗಳಲ್ಲಿ ಅದು ಹೆಚ್ಚಾಗಿರುತ್ತದೆ. ಹೀಗಾಗಿ, ಫ್ರೂಟ್ ಡಯಟ್ ಹೆಸರಿನಲ್ಲಿ ಅಂಥ ಹಣ್ಣುಗಳನ್ನು ಹೆಚ್ಚು ಸೇವಿಸುವುದರಿಂದ ದೇಹದಲ್ಲಿ ಸಕ್ಕರೆಯ ಅಂಶ ಹೆಚ್ಚಾಗುವ ಸಾಧ್ಯತೆ ಇರುತ್ತದೆ. ಅದು ಮಧುಮೇಹ, ಪಾಲಿಸಿಸ್ಟಿಕ್ ಓವೆರಿಯನ್ ಸಿಂಡ್ರೋಮ್ ಅಥವಾ ಇನ್ಸುಲಿನ್ ಪ್ರತಿರೋಧವಿರುವಂತಹವರಲ್ಲಿ ಹೆಚ್ಚು ಸಮಸ್ಯೆಯನ್ನುಂಟು ಮಾಡಬಹುದು ಎನ್ನುತ್ತಾರೆ ತಜ್ಞರು.

ಹಾಗಾಗಿ, ವೈದ್ಯರ / ಆಹಾರ ತಜ್ಞರ ಸಲಹೆ ಮೇರೆಗೆ, ನಿಮ್ಮ ದೇಹಾರೋಗ್ಯಕ್ಕೆ ಯಾವ ಹಣ್ಣುಗಳು ಹೊಂದುತ್ತವೆ ಎಂಬುದನ್ನು ತಿಳಿದು ಡಯಟ್‌ನಲ್ಲಿ ಅಳವಡಿಸಿಕೊಳ್ಳಬೇಕು. ಹಾಗೆಯೇ, ಹಣ್ಣುಗಳ ಜೊತೆಗೆ ತರಕಾರಿಗಳು, ಮೊಳಕೆಕಾಳು ಮತ್ತು ಪೋಷಕಾಂಶಗಳಿರುವ ಆಹಾರಗಳನ್ನು ಸೇರಿಸಿಕೊಳ್ಳಬೇಕು ಎಂಬುದು ಅವರ ಸಲಹೆ.

ಡಯಟ್ ಹೀಗಿರಲಿ

ತಿನ್ನುವುದನ್ನು ಬಿಡುವುದೇ ಡಯಟ್ ಅಲ್ಲ. ಎಲ್ಲಾ ತರಹದ ಆಹಾರವನ್ನೂ ಮಿತವಾಗಿ ಸೇವಿಸುವುದು ಮತ್ತು ಸೇವಿಸಿದ್ದನ್ನು ಕರಗಿಸುವ ಕಸರತ್ತು ಮಾಡುವುದೇ ಡಯಟ್. ನಿಮ್ಮ ಆರೋಗ್ಯ, ವಯೋಮಾನ, ನಿಮ್ಮ ಅನುಕೂಲಕ್ಕೆ ಅನುಗುಣವಾಗಿ ನಿರ್ದಿಷ್ಟ ಪ್ರಮಾಣದ ಆಹಾರ ಹೊಂದಿಸಿಕೊಳ್ಳುವುದೇ ಡಯಟ್. ಅದರಲ್ಲಿ ಹಣ್ಣು, ತರಕಾರಿ, ಡೇರಿ ಉತ್ಪನ್ನ, ಕಾಳು–ಬೇಳೆ ಎಲ್ಲವೂ ಮಿತವಾಗಿರಬೇಕು ಎನ್ನುವುದು ಆಹಾರ ತಜ್ಞರ ಸಲಹೆಯಾಗಿದೆ.

ಸ್ಯಾಮ್‌ಸಂಗ್ ಗ್ಯಾಲಕ್ಸಿ ವಾಚ್ 5 ಪ್ರೊ ಹೇಗಿದೆ?

ಗ್ಯಾಲಕ್ಸಿ ವಾಚ್ 5 ಪ್ರೊ, ಪ್ರಧಾನವಾಗಿ ಎರಡು ಸ್ಯಾಮ್‌ಸಂಗ್ ಆ್ಯಪ್‌ಗಳ ಮೂಲಕ ಕೆಲಸ ಮಾಡುತ್ತದೆ: ಗ್ಯಾಲಕ್ಸಿ ವೇರೆಬಲ್ ಹಾಗೂ ಸ್ಯಾಮ್‌ಸಂಗ್ ಹೆಲ್ತ್. ಮೊಬೈಲ್‌ನಲ್ಲಿಯೂ ಈ ಆ್ಯಪ್‌ಗಳನ್ನು ಇನ್‌ಸ್ಟಾಲ್ ಮಾಡಿ, ವಾಚ್ ಜೊತೆಗೆ ಸಿಂಕ್ರನೈಸ್ ಮಾಡಿದರೆ ಅನುಕೂಲಗಳು ಹೆಚ್ಚು. ಗ್ಯಾಲಕ್ಸಿ ವೇರೆಬಲ್ ಆ್ಯಪ್ ಮೂಲಕವಾಗಿ ವಾಚ್ ಹೆಸರು, ಬ್ಯಾಟರಿ ಮಟ್ಟ, ವಾಚ್ ಫೇಸ್‌ಗಳ ಬದಲಾವಣೆ, ಸೆಟ್ಟಿಂಗ್ಸ್ ಮುಂತಾದ ಕೆಲಸಗಳನ್ನು ನಿರ್ವಹಿಸಬಹುದು.

ಅವಿನಾಶ್ ಬಿ.

ಸ್ಮಾರ್ಟ್‌ವಾಚ್‌ಗಳು ಈಗಿನ ಟ್ರೆಂಡ್. ವಿಶೇಷವಾಗಿ ಜನರು ಸಮಯ ತಿಳಿದುಕೊಳ್ಳುವುದರ ಹೊರತಾಗಿ ಫಿಟ್ನೆಸ್ ಬಗ್ಗೆಯೂ ಕಾಳಜಿ ವ್ಯಕ್ತಪಡಿಸುತ್ತಿದ್ದಾರೆ. ಈ ಟ್ರೆಂಡ್ ಆಧಾರದಲ್ಲಿಯೇ ಸ್ಯಾಮ್‌ಸಂಗ್ ತನ್ನ ಗ್ಯಾಲಕ್ಸಿ ವಾಚ್ ಸರಣಿಯ 5ನೇ ಆವೃತ್ತಿಯಲ್ಲಿ ಫಿಟ್ನೆಸ್ - ಆರೋಗ್ಯ ಕ್ಷಮತೆ ಕಾಪಾಡಿಕೊಳ್ಳುವುದರ ಬಗ್ಗೆ ಹೆಚ್ಚು ಒತ್ತು ನೀಡಿದ್ದು, ಇತ್ತೀಚೆಗೆ ಗ್ಯಾಲಕ್ಸಿ ವಾಚ್ 5 ಹಾಗೂ ಗ್ಯಾಲಕ್ಸಿ ವಾಚ್ 5 ಪ್ರೊ - ವಾಚುಗಳನ್ನು ಮಾರುಕಟ್ಟೆಗೆ ಇಳಿಸಿದೆ. ಪ್ರಜಾವಾಣಿಗೆ ರಿವ್ಯೂಗೆ ದೊರೆತ ಈ ಸರಣಿಯ ಗ್ಯಾಲಕ್ಸಿ ವಾಚ್ 5 ಪ್ರೊ ಹೇಗಿದೆ ಎಂಬ ಮಾಹಿತಿ ಇಲ್ಲಿದೆ.

ವಿನ್ಯಾಸ

45ಮಿಮೀ ವ್ಯಾಸ, 10.5 ಮಿಮೀ ದಪ್ಪನೆಯ ಗ್ಯಾಲಕ್ಸಿ ವಾಚ್ 5 ಪ್ರೊ, ವೃತ್ತಾಕಾರದ ಡಿಸ್‌ಪ್ಲೇ ಹೊಂದಿದೆ. ವಾಚ್ 5ನಲ್ಲಿ (40 ಮಿಮೀ ಹಾಗೂ 44 ಮಿಮೀ -ಎರಡು ಮಾದರಿ) 410 mAh ಬ್ಯಾಟರಿ ಇದ್ದರೆ, ವಾಚ್ 5 ಪ್ರೊ ಮಾದರಿಯಲ್ಲಿ ಹೆಚ್ಚು ಸಾಮರ್ಥ್ಯದ ಎಂದರೆ 590 mAh ಬ್ಯಾಟರಿ ಇದ್ದು, ವಾಚು 46.5 ಗ್ರಾಂ ತೂಕವಿದೆ. ಸ್ಮಾರ್ಟ್‌ವಾಚ್‌ನಲ್ಲಿ ಹಿಂಭಾಗದಲ್ಲಿ ಬಯೋಆ್ಯಕ್ಟಿವ್ ಸೆನ್ಸರ್‌ಗಳಿದ್ದು, ಆರೋಗ್ಯದ ಬಗ್ಗೆ ಗಮನ ನೀಡಲು ರೂಪುಗೊಂಡಿದೆ.

ತಂತ್ರಜ್ಞಾನ

ಗ್ಯಾಲಕ್ಸಿ ವಾಚ್ ಸರಣಿಯಲ್ಲಿ ಇದೇ ಮೊದಲ ಬಾರಿಗೆ ಸ್ಯಾಮ್‌ಸಂಗ್ 'ಪ್ರೊ' ಮಾದರಿಯನ್ನು ಪರಿಚಯಿಸಿದೆ. ಶಕ್ತಿಶಾಲಿಯಾದ ಡಿಸ್‌ಪ್ಲೇ (ಸ್ಕ್ರೀನ್), ಟೈಟಾನಿಯಂ ವಾಚ್ ಕೇಸ್ ಮತ್ತು ಹಿಂದಿನ ವಾಚ್‌ಗಳಿಗಿಂತ ಹೆಚ್ಚು ಸಾಮರ್ಥ್ಯದ ಬ್ಯಾಟರಿ - ಈ ವಿಶೇಷತೆಗಳೊಂದಿಗೆ ಸ್ಯಾಮ್‌ಸಂಗ್ ಗ್ಯಾಲಕ್ಸಿ ವಾಚ್ 5 ಗಮನ ಸೆಳೆದಿದೆ.

ವೈಶಿಷ್ಟ್ಯಗಳುಡಿಸ್‌ಪ್ಲೇ:

1.4 ಇಂಚು ಸೂಪರ್ AMOLED ಟಚ್ ಸ್ಕ್ರೀನ್
ಪ್ರೊಸೆಸರ್: ಸ್ಯಾಮ್‌ಸಂಗ್ ಎಕ್ಸಿನೋಸ್ W920 ಡ್ಯುಯಲ್-ಕೋರ್
ಬಾಡಿ: ಟೈಟಾನಿಯಂ ಬಾಡಿ, ಸಫೈರ್ ಕ್ರಿಸ್ಟಲ್ ಗಾಜು
RAM/ಸ್ಟೋರೇಜ್: 1.5GB/16GB
ಸೆನ್ಸರ್‌ಗಳು: ಅಕ್ಸೆಲೆರೋಮೀಟರ್, ಬ್ಯಾರೋಮೀಟರ್, ಸ್ಯಾಮ್‌ಸಂಗ್ ಬಯೋ ಆ್ಯಕ್ಟಿವ್ ಸೆನ್ಸರ್, ಚರ್ಮದ ಉಷ್ಣತಾ ಮಾಪಕ, ಗೈರೋ ಸೆನ್ಸರ್, ಜಿಯೋಮ್ಯಾಗ್ನೆಟಿಕ್ ಸೆನ್ಸರ್, ಲೈಟ್ ಸೆನ್ಸರ್
ಬ್ಯಾಟರಿ: 590 mAh, ಸಾಮಾನ್ಯ ಬಳಕೆಯಲ್ಲಿ 2 ದಿನಕ್ಕೆ ಸಾಕು
ಬಣ್ಣಗಳು: ಕಪ್ಪು ಟೈಟಾನಿಯಂ ಹಾಗೂ ನಸುಗಪ್ಪು (ಗ್ರೇ) ಟೈಟಾನಿಯಂ

ಗೂಗಲ್‌ನ ವೇರ್ ಒಎಸ್ 3.0 ಆಧಾರಿತವಾಗಿ ಅಭಿವೃದ್ಧಿಪಡಿಸಲಾದ ಕಾರ್ಯಾಚರಣಾ ವ್ಯವಸ್ಥೆಯಿದ್ದು, ಅಕ್ಷರಗಳು, ವರ್ಣಗಳು ಪ್ರಖರವಾಗಿ ಕಾಣಿಸುತ್ತವೆ. ಸ್ಪರ್ಶ ಆಧಾರಿತ ಕೆಲಸ ಕಾರ್ಯಗಳು (ಟ್ಯಾಪ್, ಸ್ವೈಪ್) ಸುಲಲಿತವಾಗಿ ನಡೆಯುತ್ತವೆ. ಮೇಲ್ಭಾಗದಲ್ಲಿ ವಾಚ್‌ನ ಸ್ಪೀಕರ್ ಇದ್ದರೆ, ಬಲಭಾಗದ ನ್ಯಾವಿಗೇಶನ್ ಬಟನ್‌ಗಳ ನಡುವೆ ಮೈಕ್ ಇದೆ.

ಹೇಗೆ ಕೆಲಸ ಮಾಡುತ್ತದೆ?

ಗ್ಯಾಲಕ್ಸಿ ವಾಚ್ 5 ಪ್ರೊ, ಪ್ರಧಾನವಾಗಿ ಎರಡು ಸ್ಯಾಮ್‌ಸಂಗ್ ಆ್ಯಪ್‌ಗಳ ಮೂಲಕ ಕೆಲಸ ಮಾಡುತ್ತದೆ: ಗ್ಯಾಲಕ್ಸಿ ವೇರೆಬಲ್ ಹಾಗೂ ಸ್ಯಾಮ್‌ಸಂಗ್ ಹೆಲ್ತ್. ಮೊಬೈಲ್‌ನಲ್ಲಿಯೂ ಈ ಆ್ಯಪ್‌ಗಳನ್ನು ಇನ್‌ಸ್ಟಾಲ್ ಮಾಡಿ, ವಾಚ್ ಜೊತೆಗೆ ಸಿಂಕ್ರನೈಸ್ ಮಾಡಿದರೆ ಅನುಕೂಲಗಳು ಹೆಚ್ಚು.

ನಡೆದ ಹೆಜ್ಜೆ, ನಿದ್ರೆಯ ಲೆಕ್ಕಾಚಾರ, ಹೃದಯ ಬಡಿತ, ರಕ್ತದ ಆಮ್ಲಜನಕ ಮುಂತಾದವುಗಳನ್ನು ಸ್ಯಾಮ್‌ಸಂಗ್ ಹೆಲ್ತ್ ಮೂಲಕವಾಗಿ ಅಳೆದು, ಅದರ ಮಾಹಿತಿಯನ್ನು ಕಾಪಿಟ್ಟುಕೊಳ್ಳಬಹುದು ಮತ್ತು ಇದು ವೈದ್ಯರಿಗೆ ನಿಮ್ಮ ಆರೋಗ್ಯದ ಬಗ್ಗೆ ತಿಳಿದುಕೊಳ್ಳಲು ಅನುಕೂಲ ಮಾಡಿಕೊಡುತ್ತದೆ.

ಸ್ಯಾಮ್‌ಸಂಗ್ ಗ್ಯಾಲಕ್ಸಿ ವಾಚ್ 5 ಪ್ರೊ - ಬ್ಯಾಟರಿಯೂ ಎರಡು ದಿನಗಳಿಗೆ ಯಾವುದೇ ಸಮಸ್ಯೆಯಿಲ್ಲದಂತೆ ಉಳಿಯುತ್ತದೆ.

ಗ್ಯಾಲಕ್ಸಿ ವಾಚ್ 5 ಪ್ರೊ - ಕಪ್ಪು ಟೈಟಾನಿಯಂ ಹಾಗೂ ನಸುಗಪ್ಪು ಟೈಟಾನಿಯಂ - ಹೀಗೆ ಎರಡು ಬಣ್ಣಗಳಲ್ಲಿ ಲಭ್ಯವಿದ್ದು, GPS ಮಾತ್ರ ಇರುವ ಆವೃತ್ತಿ ಬೆಲೆ ₹44,999 ಹಾಗೂ GPS + LTE ಆವೃತ್ತಿ ಬೆಲೆ ₹49,999.


ಸಂಪೂರ್ಣ ರಿವ್ಯೂ: https://www.prajavani.net/gadget-review



ಸ್ಯಾಮ್‌ಸಂಗ್ ಗ್ಯಾಲಕ್ಸಿ ವಾಚ್ 5 ಪ್ರೊ

ಮೇಕಪ್ ಹೀಗಿರಲಿ...


ಕೆ.ವಿ.ರಾಜಲಕ್ಷ್ಮಿ



ಹಬ್ಬ ಹರಿದಿನ, ಶುಭ ಸಮಾರಂಭಗಳು ಎಂದ ಕೂಡಲೇ ಹೆಣ್ಣುಮಕ್ಕಳು ವಿಶೇಷವಾಗಿ ಅಲಂಕರಿಸಿಕೊಂಡು ಸಂಭ್ರಮಿಸುವ ಅವಕಾಶ. ವಿವಿಧ ಸೀರೆ ಉಡುಗೆಗಳ ಜೊತೆಗೆ ಪೂರಕವಾಗಿ ಒಂದಿಷ್ಟು ಮೇಕಪ್ ಇದ್ದರೆ ಅದರ ಸೆಳೆತವೇ ಬೇರೆ. ಅಲಂಕಾರಿಕ ಪ್ರಸಾದನಗಳು, ಸಹಜವಾಗಿ ಚಂದ ಇರುವವರ ಸೌಂದರ್ಯ ಹೆಚ್ಚಿಸಿದರೆ, ಸಾಧಾರಣ ರೂಪಿನವರು ಇನ್ನಷ್ಟು ಸುಂದರ ಕಾಣುವಂತೆ ಮಾಡುತ್ತದೆ.

ಬ್ಯೂಟಿ ಟಿಪ್ಸ್

ಮೇಕಪ್‌ನತ್ತಗಮನ ಹರಿಸುವ ಮುನ್ನ, ಕೇಶವಿನ್ಯಾಸಕ್ಕೆ ಆದ್ಯತೆ ಕೊಡುವುದು ಉತ್ತಮ. ಮೇಕಪ್ ಅಥವಾ ಅಂದ ಹೆಚ್ಚಿಸುವ ಈ ಕೆಲಸದಲ್ಲಿ ಮುಖ್ಯವಾದ ಹಂತಗಳು ಕ್ಲೆನ್ಸಿಂಗ್ (ಶುದ್ಧಗೊಳಿಸುವುದು), ಮಾಯಿಶ್ಚರೈಸಿಂಗ್ (ತಂಪಾಗಿಸುವುದು).



ಕ್ಲೆನ್ಸಿಂಗ್: ಮುಖವನ್ನು ಕಣ್ಣಿಗೆ ಕಾಣದ ಧೂಳು ಕೊಳೆಗಳಿಂದ ಮುಕ್ತವಾಗಿಸುವ ವಿಧಾನ. ಮಾರುಕಟ್ಟೆಯಲ್ಲಿ ಚರ್ಮದ ಸ್ವಭಾವಕ್ಕೆ ಹೊಂದುವ ಕ್ಲೆನ್ಸರ್ ಉಪಯೋಗಿಸಬಹುದು.

ಕ್ಲೆನ್ಸಿಂಗ್ ಮಿಲ್ಕ್ ಅನ್ನು ಮುಖ,ಕಿವಿ, ಕುತ್ತಿಗೆ, ಭಾಗಕ್ಕೆ ಸಣ್ಣ ಸಣ್ಣ ಚುಕ್ಕಿಗಳಂತೆ ಇಟ್ಟು ವರ್ತುಲಾಕಾರದಲ್ಲಿ ನಯವಾಗಿ ತಿಕ್ಕಿ ಎಲ್ಲಕಡೆ (ವಿಶೇಷವಾಗಿ ಕಣ್ಣು, ಮೂಗು ಮತ್ತು ತುಟಿಯ ಮೇಲ್ಭಾಗ) ಸಮವಾಗಿ ಹರಡುವಂತೆ ಗಮನಿಸಿಕೊಳ್ಳಿ. ನಂತರ ಹತ್ತಿಯಿಂದ ಒರೆಸಿದರೆ ಚರ್ಮವು ಸ್ವಚ್ಛವಾಗುತ್ತದೆ. ಮೂಗಿನ ಸುತ್ತ, ತುಸು ನೀರು ಸವರಿ ಇದರ ಮೇಲೆ ಕ್ಲೆನ್ಸಿಂಗ್ ನೋಸ್ ಸ್ಟ್ರಿಪ್ಸ್ ಅಂಟಿಸಿ. ತ್ವಚೆಯ ಗುಣಕ್ಕೆ ತಕ್ಕಂತೆ ಐದರಿಂದ ಹತ್ತು ನಿಮಿಷದೊಳಗೆ, ತೇವಾಂಶ ಹೀರಿ ಒಣಗುವ ಸ್ಟ್ರಿಪ್ಸ್ ತೆಗೆದುಬಿಡಿ. ಇದರಿಂದ ಬ್ಲಾಕ್,ವೈಟ್ ಹೆಡ್ ಚುಕ್ಕಿಗಳು ಇದ್ದಲ್ಲಿ ಶುಭ್ರವಾಗಿ, ಸಣ್ಣರಂಧ್ರಗಳು ಕಾಣದಂತೆ ಚರ್ಮ ಬಿಗಿಯಾಗಿ ಮೂಗು ಇನ್ನಷ್ಟು ಹೊಳಪುಗೊಳ್ಳುತ್ತದೆ.

ಮುಂದಿನ ಹಂತದಲ್ಲಿ ನಿಮ್ಮ ತ್ವಚೆಯ ಗುಣ ಮತ್ತು ಬಣ್ಣಕ್ಕೆ ಹೊಂದುವ ಆಲ್ ಇನ್ ಒನ್ ಕ್ರೀಮ್ (ಮಾಯಿಶ್ಚರೈಸರ್, ಪ್ರೈಮರ್, ಫೌಂಡೇಶನ್) ನ್ನು, ಕ್ಲೆನ್ಸ್ ಆದ ಜಾಗಕ್ಕೆ ಸಮವಾಗಿ ಸವರಿಕೊಳ್ಳಿ. (ಒಂದುವೇಳೆ ಈ ಕ್ರೀಮ್ ಇಲ್ಲದ ಪಕ್ಷದಲ್ಲಿ ಅನುಕ್ರಮವಾಗಿ ಮಾಯಿಶ್ಚರೈಸರ್ ಮತ್ತು ಸ್ಕಿನ್ ಟೋನ್ ಗೆ ಸರಿಹೊಂದುವ ಫೌಂಡೇಶನ್ ಕ್ರೀಮ್ ಅನ್ನು ಹಚ್ಚಿಕೊಳ್ಳಿ). ನಂತರ ಮ್ಯಾಟ್ ಫಿನಿಷ್ ಕಾಂಪ್ಯಾಕ್ಟ್ ಪೌಡರ್ ಹಚ್ಚಿಕೊಳ್ಳಬಹುದು. ಗ್ರಾಂಡ್ ಲುಕ್ ಬೇಕಿದ್ದಲ್ಲಿ ತೆಳುವಾಗಿ ಶಿಮ್ಮರ್ (shimmer) ಪೌಡರನ್ನು ಹಣೆ,ಕಣ್ಣಿನ ರೆಪ್ಪೆಯ ಮೇಲ್ಭಾಗ,ಕೆನ್ನೆ,ಮೂಗಿನ ಗೆರೆ, ಮೇಲೆ ತೆಳುವಾಗಿ ಬ್ರಶ್ ನಿಂದ ಹೈಲೈಟ್ ಮಾಡಿಕೊಳ್ಳಿ.

(ತೋಳು ರಹಿತ ಅಥವಾ ಅರೆತೋಳು ಉಡುಗೆ ಧರಿಸುವಾಗ, ಇದೇ ವಿಧಾನವನ್ನು ಅನುಸರಿಸಿ ಕೈಗಳನ್ನು ಅಂದಗೊಳಿಸಿ)


- ಕಣ್ಣಿಗೆ ಸ್ಮಡ್ಜ್‌ಪ್ರೂಫ್(smudgeproof) ಕಾಜಲ್ ಪೆನ್ಸಿಲ್ ಬಳಸಿ, ಐಲೈನರ್‌ನಿಂದ ಕಣ್ಣರೆಪ್ಪೆಯ ಅಂಚನ್ನು ತೀಡಿಕೊಳ್ಳಿ. ಅಗಲ, ಬಟ್ಟಲು ಕಂಗಳಿರುವವರು ತೆಳ್ಳಗೆ ಮತ್ತು ಕಿರಿದಾದ ಕಣ್ಣುಗಳಿಗೆ ಸ್ವಲ್ಪ ದಟ್ಟವಾಗಿ ಹಚ್ಚಿಕೊಳ್ಳಿ. ನಂತರ ಸ್ಮಡ್ಜ್‌ಪ್ರೂಫ್ ಮಸ್ಕರಾದಿಂದ ಕಣ್ಣಿನ ರೆಪ್ಪೆಗಳನ್ನು ನಾಜೂಕಾಗಿ ಬ್ರಶ್ ಮಾಡಿಕೊಳ್ಳಿ. ಇದೇ ಮಸ್ಕರಾ ಬ್ರಶ್ ಅಥವಾ ಐ ಬ್ರೋ ಬ್ರಶ್ ನಿಂದ ಹುಬ್ಬುಗಳನ್ನು ತೀಡಿಕೊಳ್ಳಿ.
- ತುಟಿಗಳಿಗೆ, ಮೊದಲು ಲಿಪ್ ಪೆನ್ಸಿಲ್‌ನಿಂದ ತುಟಿ ಅಂಚನ್ನು ಗುರುತಿಸಿಕೊಂಡು, ವ್ಯಾಸಲಿನ್ ಜೆಲ್ ಅಥವಾ ಲಿಪ್ ಬಾಮ್ ಸವರಿ. ನಂತರ ನಿಮ್ಮ ಆಯ್ಕೆಯ ಲಿಪ್‌ಸ್ಟಿಕ್ ಅನ್ನು ಸಮವಾಗಿ ಅಂಚಿನೊಳಗೆ ಹರಡಿ. ತೆಳ್ಳಗಿನ ತುಟಿಗಳು ಹೈಲೈಟ್ ಆಗಲು, ಲಿಪ್‌ಗ್ಲಾಸ್ (lipgloss) ಅನ್ನು ಲೇಪಿಸಿ. ಇದರಿಂದ ತುಟಿ ಹೆಚ್ಚು ಆಕರ್ಷಕವಾಗಿ ಕಾಣುವುದು.

ಬಾಹ್ಯ ಸೌಂದರ್ಯಕ್ಕಾಗಿ ಮೇಕಪ್ ಎಷ್ಟೇ ಮಾಡಿಕೊಂಡರೂ, ನಿದ್ರಾಹೀನ, ಅನಾರೋಗ್ಯ ಸ್ಥಿತಿಯಲ್ಲಿ ಅದರ ಪೂರ್ಣ ಪರಿಣಾಮ ನಿರೀಕ್ಷಿಸಲಾಗದು. ಹೀಗಾಗಿ, ಮೇಕಪ್‌ನ ಉತ್ತಮ ಫಲಿತಾಂಶ ಸಿಗಬೇಕೆಂದರೆ ಆಂತರಿಕ ಸೌಂದರ್ಯಕ್ಕೆ ಪೂರಕವಾದ ಆರೋಗ್ಯಕರ ಆಹಾರಸೇವನೆ ಮತ್ತು ಒಳ್ಳೆಯ ನಿದ್ದೆ ಅಪೇಕ್ಷಣೀಯ ಎಂಬುದನ್ನು ಮರೆಯಬಾರದು.



'ಪುಟ್ಟಕ್ಕನ ಮಗಳ' ಫಿಟ್‌ನೆಸ್ ಮಾತು...

ಫಿಟ್ನೆಸ್ ಫ್ರೀಕ್



ಜಿ.ಶಿವಕುಮಾರ

ಸಂಜನಾ ಬುರ್ಲಿ...ಈ ಹೆಸರು ಬಹುಪಾಲು ಮಂದಿಗೆ ಗೊತ್ತೇ ಇಲ್ಲ. ಆದರೆ 'ಪುಟ್ಟಕ್ಕನ ಮಗಳು' ಸ್ನೇಹ ಎಂದರೆ ಸಾಕು, ಎಲ್ಲರ ಕಣ್ಣುಗಳೂ ಅರಳುತ್ತವೆ. ಹಠಮಾರಿ ಹುಡುಗಿಯೊಬ್ಬಳ ಚಹರೆ ಕಣ್ಣೆದುರು ಹಾದುಹೋಗುತ್ತದೆ. ಅಷ್ಟರ ಮಟ್ಟಿಗೆ ಈ ಪಾತ್ರವನ್ನು ಜೀವಿಸಿದವರು ಸಂಜನಾ.

ಬೆಂಗಳೂರಿನಲ್ಲಿ ಹುಟ್ಟಿ ಬೆಳೆದಿರುವ ಅವರು ಇತ್ತೀಚೆಗಷ್ಟೇ ಎಂಜಿನಿಯರಿಂಗ್ ಪದವಿ ಪೂರೈಸಿದ್ದಾರೆ. ಅವರ ತಂದೆ ಅಜಿತ್ ಬುರ್ಲಿ. ಅಮ್ಮ ಭಾರತಿ. ಕಾಲೇಜು ದಿನಗಳಲ್ಲೇ ನಟನೆಯ ವ್ಯಾಮೋಹ ಬೆಳೆಸಿಕೊಂಡ ಸಂಜನಾ, 'ಪತ್ತೆದಾರಿ ಪ್ರತಿಭಾ' ಧಾರವಾಹಿಯಲ್ಲಿ ಸಣ್ಣ ಪಾತ್ರವೊಂದರಲ್ಲಿ ಕಾಣಿಸಿಕೊಳ್ಳುವ ಮೂಲಕ ಕಿರುತೆರೆಗೆ ಅಡಿ ಇಟ್ಟಿದ್ದರು. ಬಳಿಕ 'ಲಗ್ನಪತ್ರಿಕೆ' ಧಾರವಾಹಿಯಲ್ಲಿ ಮುಖ್ಯ ಭೂಮಿಕೆ ನಿಭಾಯಿಸಿದ್ದರು.

'ಪುಟ್ಟಕ್ಕನ ಮಕ್ಕಳು' ಧಾರವಾಹಿಯ ಮೂಲಕ ಜನ ಮಾನಸಕ್ಕೆ ಆಪ್ತವಾಗಿರುವ ಅವರು 'ಪ್ರಜಾ ಪ್ಲಸ್' ಜೊತೆ ತಮ್ಮ ಫಿಟ್‌ನೆಸ್ ಮಂತ್ರವನ್ನು ಬಿಚ್ಚಿಟ್ಟಿದ್ದಾರೆ.

- **ನಟ, ನಟಿಯರಿಗೆ ಫಿಟ್‌ನೆಸ್ ಏಕೆ ಮುಖ್ಯ?**

ನಟ, ನಟಿಯರು ಸದಾ ಕ್ರಿಯಾಶೀಲರಾಗಿರಬೇಕಾಗುತ್ತದೆ. ಸದೃಢ ಕಾಯದ ಜೊತೆಗೆ ಆಂತರಿಕ ಹಾಗೂ ಬಾಹ್ಯ ಸೌಂದರ್ಯವನ್ನೂ ಹೊಂದಿರಬೇಕಾಗುತ್ತದೆ. ಮುಖ್ಯವಾಗಿ ಶಿಸ್ತು ಮೈಗೂಡಿಸಿಕೊಂಡಿರಬೇಕಾಗುತ್ತದೆ. ಇದಕ್ಕಾಗಿ ಸಮಯ ಸಿಕ್ಕಾಗಲೆಲ್ಲಾ ದೇಹ ದಂಡಿಸಬೇಕಾಗುತ್ತದೆ.



- **ಸದಾ ಶೂಟಿಂಗ್‌ನಲ್ಲಿ ತೊಡಗಿಕೊಳ್ಳುವ ನೀವು ಫಿಟ್‌ನೆಸ್ ಹೇಗೆ ಕಾಪಾಡಿಕೊಳ್ಳುತ್ತೀರಿ?**

ಫಿಟ್‌ನೆಸ್‌ಗಾಗಿ ಜಿಮ್‌ನಲ್ಲಿ ಗಂಟೆಗಟ್ಟಲೆ ದೇಹ ದಂಡಿಸಬೇಕೆಂದೇನೂ ಇಲ್ಲ. ಹಿತ-ಮಿತ ಹಾಗೂ ಆರೋಗ್ಯಕರ ಆಹಾರ ಸೇವನೆಯಿಂದಲೂ ಫಿಟ್‌ನೆಸ್ ಕಾಪಾಡಿಕೊಳ್ಳಬಹುದು. ನಾವು ಎಷ್ಟೇ ದೇಹ ದಂಡಿಸಿದರೂ, ಡಯಟ್ ಪಾಲನೆ ಮಾಡಿದರೂ ಕನಿಷ್ಠ 7 ಗಂಟೆ ನಿದ್ರೆ ಮಾಡಬೇಕಾಗುತ್ತದೆ.

ಪ್ರಯಾಣದ ಸಂದರ್ಭದಲ್ಲಿ ಹಿತ-ಮಿತವಾಗಿ ಆಹಾರ ಸೇವಿಸುತ್ತೇನೆ. ಎಣ್ಣೆಯಲ್ಲಿ ಕರಿದ ಪದಾರ್ಥಗಳಿಂದ ಸಾಧ್ಯವಾದಷ್ಟು ದೂರ ಉಳಿಯುತ್ತೇನೆ. ಸಕ್ಕರೆ ಪ್ರಮಾಣ ಅಧಿಕವಿರುವ ಹಾಗೂ ಮೈದಾ ಹಿಟ್ಟಿನಿಂದ ತಯಾರಿಸಿದ ಪದಾರ್ಥಗಳನ್ನು ಸೇವಿಸುವುದಿಲ್ಲ.

ಬಿಡುವು ಸಿಕ್ಕಾಗಲೆಲ್ಲಾ ಶೂಟಿಂಗ್ ಸ್ಥಳದಲ್ಲೇ ಲಘು ವ್ಯಾಯಾಮಗಳನ್ನು ಮಾಡುತ್ತೇನೆ. ಆ ಮೂಲಕ ಫಿಟ್‌ನೆಸ್ ಕಾಯ್ದುಕೊಳ್ಳಲು ಪ್ರಯತ್ನಿಸುತ್ತೇನೆ.

- **ಯಾವ ಬಗೆಯ ಆಹಾರ ಪದಾರ್ಥಗಳಿಗೆ ನೀವು ಆದ್ಯತೆ ನೀಡುತ್ತೀರಿ?**

ನಾನು ಸಂಪೂರ್ಣ ಸಸ್ಯಹಾರಿ. ದೇಹಕ್ಕೆ ಪ್ರೊಟೀನ್‌ಗಳು ಹೇರಳವಾಗಿ ಬೇಕಿರುವುದರಿಂದ ಪನ್ನೀರ್, ಸೋಯಾ ಹಾಗೂ ಕಾಳುಗಳನ್ನು ಯಥೇಚ್ಛವಾಗಿ ಸೇವಿಸುತ್ತೇನೆ. ಬೆಲ್ಲ ಅಥವಾ ಜೇನುತುಪ್ಪದಿಂದ ಮಾಡಿದ ಪದಾರ್ಥಗಳ ಸೇವನೆಗೆ ಒತ್ತು ನೀಡುತ್ತೇನೆ. ಇದರಿಂದ ಸಕ್ಕರೆಯ ಪ್ರಮಾಣ ದೇಹ ಸೇರುವುದನ್ನು ತಪ್ಪಿಸಬಹುದು.

- **ಜಿಮ್‌ನಲ್ಲಿ ಎಷ್ಟು ಕಾಲ ದೇಹ ದಂಡಿಸುತ್ತೀರಿ?**

ಮೊದಲೆಲ್ಲಾ ಬ್ಯಾಡ್ಮಿಂಟನ್, ಈಜು ಹಾಗೂ ಇತರ ಕ್ರೀಡೆಗಳಲ್ಲಿ ಹೆಚ್ಚು ತೊಡಗಿಕೊಳ್ಳುತ್ತಿದ್ದೆ. ಈಗೀಗ ಜಿಮ್‌ಗೆ ಹೋಗುವುದನ್ನು ರೂಢಿಸಿಕೊಂಡಿದ್ದೇನೆ. ಜಿಮ್‌ನಲ್ಲಿ ಹೆಚ್ಚೆಂದರೆ ಒಂದು ಗಂಟೆ ದೇಹ ದಂಡಿಸುತ್ತೇನೆ. ಕಾರ್ಡಿಯೊ ಸೇರಿದಂತೆ ಎಲ್ಲಾ ಬಗೆಯ ವ್ಯಾಯಾಮಗಳನ್ನು ಮಾಡುತ್ತೇನೆ. ಸಮಯ ಸಿಕ್ಕಾಗ ಚಾರಣಕ್ಕೆ ಹೋಗುತ್ತೇನೆ.


ಎಳವೆಯಿಂದಲೇ ಯೋಗ ಅಭ್ಯಾಸ ಮಾಡಿಕೊಂಡು ಬಂದಿದ್ದೇನೆ. ಆಗಾಗ ಸೂರ್ಯ ನಮಸ್ಕಾರ ಮಾಡುತ್ತೇನೆ. ಅದರಿಂದ ಮನಸ್ಸು ಹಗುರವೆನಿಸುತ್ತದೆ.

- **ಫಿಟ್‌ನೆಸ್ ಕಾಪಾಡಿಕೊಳ್ಳುವುದಕ್ಕಾಗಿ ನಮಗಿಷ್ಟದ ಸಿಹಿ ಪದಾರ್ಥಗಳನ್ನು ತ್ಯಜಿಸಬೇಕೇ?**

ಹಾಗೇನಿಲ್ಲ. ನಮಗೆ ಇಷ್ಟವಿರುವ ಸಿಹಿ ಪದಾರ್ಥವನ್ನು ಸಕ್ಕರೆರಹಿತವಾಗಿ ತಯಾರಿಸಿಕೊಂಡು ಸೇವಿಸಬಹುದು. ಬ್ರೌನ್ ಷುಗರ್, ಬೆಲ್ಲ, ಖರ್ಜೂರದ ಹಣ್ಣುಗಳನ್ನು ಬಳಸಿ ಸಿದ್ಧಪಡಿಸಿರುವ ಸಿಹಿ ಪದಾರ್ಥಗಳನ್ನು ತಿನ್ನಬೇಕು. ಆ ಪದಾರ್ಥಗಳಲ್ಲಿ ಕೊಬ್ಬಿನ ಪ್ರಮಾಣ ಹೆಚ್ಚಿರುವುದಿಲ್ಲ. ಹಾಗಂತ ಇದನ್ನೂ ಮಿತಿ ಮೀರಿ ತಿನ್ನಬಾರದು.

ದಿನಕ್ಕೆ ಎರಡು ಬಾರಿ ಮಾತ್ರ ಊಟ ಮಾಡುತ್ತೇನೆ. ಆಗಾಗ ಹಣ್ಣುಗಳನ್ನು ಸೇವಿಸುತ್ತೇನೆ. ಮಿತವಾಗಿ ಅನ್ನ ಸೇವಿಸುತ್ತೇನೆ. ಯಾವಾಗಲಾದರೂ ಒಮ್ಮೆ ಕರಿದ ಪದಾರ್ಥಗಳನ್ನು ಸೇವಿಸುತ್ತೇನೆ.





ಹೃದಯದ ಆರೋಗ್ಯಕ್ಕೆ ಬೇಕು

ಬಾಯಿಯ ಸ್ವಚ್ಛತೆ

ಕಾಳಜಿ

ಡಾ. ಸ್ಮಿತಾ ಜೆ.ಡಿ.

ಬಾಯಿ ಅಥವಾ ಹಲ್ಲುಗಳಿಗೂ ದೇಹದ ಇತರೆ ಅಂಗಗಳಿಗೂ ಯಾವುದೇ ಸಂಬಂಧವಿಲ್ಲ ಎಂಬುದು ಸಾಮಾನ್ಯ ಜನರಲ್ಲಿ ನಂಬಿಕೆಯಾಗಿದೆ. ಆದರೆ, ಬಾಯಿ ಅನೇಕ ದೈಹಿಕ ಸಮಸ್ಯೆಗಳ ಕೈಗನ್ನಡಿ. ಹಾಗೆಯೇ ದಂತ ಸಮಸ್ಯೆಗಳು ಅಥವಾ ಬಾಯಿಯ ಸ್ವಚ್ಛತೆಯ ಕೊರತೆ ಇತರೆ ದೈಹಿಕ ಸಮಸ್ಯೆಗಳಾದ ಶ್ವಾಸಕೋಶ ಸಂಬಂಧಿ ಕಾಯಿಲೆಗಳಿರಬಹುದು ಅಥವಾ ಹೃದಯ ಸಂಬಂಧಿ ಕಾಯಿಲೆಗಳ ಸಂಕೀರ್ಣತೆಗಳನ್ನು ಉಲ್ಬಣಿಸಬಹುದಾಗಿದೆ.

ಬಾಯಿಯ ಸ್ವಚ್ಛತೆಯ ಕೊರತೆಯಿಂದ ಗರ್ಭಿಣಿಯರಲ್ಲಿ ಕಡಿಮೆ ತೂಕದ ಮಗುವಿನ ಜನನ, ಅವಧಿಗೆ ಮುನ್ನ ಪ್ರಸವ ಮುಂತಾದ ಸಂಕೀರ್ಣತೆಗಳನ್ನು ಎದುರಿಸಬೇಕಾಗುತ್ತದೆ. ಹಾಗೆಯೇ ಹೃದಯ ಹಾಗೂ ಬಾಯಿಯ ಸ್ವಚ್ಛತೆಗೂ ಸಂಬಂಧವಿರುವುದು ಅಧ್ಯಯನಗಳಿಂದ ತಿಳಿದುಬಂದಿದೆ.

ಹಲ್ಲುಗಳ ಸ್ವಚ್ಛತೆಯ ಕೊರತೆಯಿಂದ ಹಲ್ಲಿನ ಮೇಲೆ ನೆಲೆಸಿರುವ ಆಹಾರದ ಮೇಲೆ ಲಾಲಾರಸದಲ್ಲಿನ ಕ್ಯಾಲ್ಸಿಯಂ ಹಾಗೂ ಇತರೆ ಖನಿಜಾಂಶಗಳು ಸೇರಿಕೊಂಡು ಗಟ್ಟಿಯಾಗಿ ಕೀಚು ಅಥವಾ ಕ್ಯಾಲ್ ಕುಲಸ್‌ಗೆ (CALCULUS) ಕಾರಣವಾಗುತ್ತದೆ. ಧೀರ್ಘಕಾಲ ಈ ಪ್ರಕ್ರಿಯೆ ಮುಂದುವರಿದಲ್ಲಿ ವಸಡಿನ ಉರಿಯೂತ, ರಕ್ತಸ್ರಾವ, ಕೀವು ತುಂಬಿಕೊಂಡು ವಸಡಿನ ಆರೋಗ್ಯದಲ್ಲಿ ವ್ಯತ್ಯಯವಾಗುತ್ತದೆ. ಹೃದಯ ಕಾಯಿಲೆಗಳಲ್ಲಿ ಒಂದಾದ ಅಥೆರೋ ಸ್ಕ್ಲೀರೋಟಿಕ್ ಕಾರ್ಡಿಯೋ ವ್ಯಾಸ್ಕುಲರ್ ಕಾಯಿಲೆಯಲ್ಲಿ ಹೃದಯದ ರಕ್ತನಾಳಗಳ ಒಳಭಾಗದಲ್ಲಿ ಅಥೆರೋಮ ಅಥವಾ ಫ್ಲಾಕ್ ಶೇಖರಣೆಯಾಗಿ ಸರಾಗವಾದ ರಕ್ತ ಸಂಚಲನೆಗೆ ಅಡ್ಡಿಯುಂಟು ಮಾಡುತ್ತದೆ. ವಸಡಿನ ತೀವ್ರತರವಾದ ಸೋಂಕಿನ ಸಮಯದಲ್ಲಿ ಸೂಕ್ಷ್ಮ ಜೀವಿಗಳು ನೇರವಾಗಿ ರಕ್ತದ ಮೂಲಕ ಹೃದಯದ ರಕ್ತನಾಳಗಳ ಒಳಭಾಗದಲ್ಲಿ ಅಥೆರೋಮ ಸೃಷ್ಠಿಯಾಗಲು ಕಾರಣವಾಗಬಹುದು.

ಇದಲ್ಲದೆ ವಸಡಿನ ಉರಿಯೂತದ ಸಮಯದಲ್ಲಿ ಉರಿಊತಕ್ಕೆ ಕಾರಣವಾದ ಇನ್ಫ್ಲಾಮೇಟರಿ ಮಿಡಿಯೇಟರ್‌ಗಳು ಸಹ ಈ ಹೃದಯ ಖಾಯಿಲೆಗಳಿಗೆ ಕಾರಣವಾಗಬಹುದಾಗಿದೆ. ಪ್ರಪಂಚದಾದ್ಯಂತ 740 ಮಿಲಿಯನ್‌ಗೂ ಹೆಚ್ಚು ಜನ ವಸಡಿನ ಸಮಸ್ಯೆಗಳಿಂದ ಬಳಲುತ್ತಿರುವುದರಿಂದ ಬಾಯಿಯ ಸ್ವಚ್ಛತೆಯ ಕಡೆಗೆ ಗಮನ ಹರಿಸುವುದು ಒಳಿತು.

ಮಧುಮೇಹಿಗಳ ರಕ್ತದಲ್ಲಿ ಅಧಿಕ ಸಕ್ಕರೆ ಅಂಶವಿರುವ ಕಾರಣ ಸೋಂಕಿನ ಪ್ರಮಾಣ ಹೆಚ್ಚಾಗಿ ವಸಡಿನ ಸಮಸ್ಯೆಗೆ ದಾರಿ ಮಾಡಿಕೊಡಬಹುದಾಗಿದೆ. 65 ವರ್ಷ ಮೇಲ್ಪಟ್ಟ ಮಧುಮೇಹಿಗಳಲ್ಲಿ ಹೃದಯ ಸಂಬಂಧಿ ಕಾಯಿಲೆಗಳು ಹೆಚ್ಚಿದ್ದು, ವಸಡಿನ ಉರಿಯೂತ ಅಥವಾ ಕೀವು ತುಂಬುವುದು ಹೆಚ್ಚಿದಲ್ಲಿ ಹೃದಯಸಂಬಂಧಿ ಕಾಯಿಲೆಯ ಸಂಕೀರ್ಣತೆ ಹೆಚ್ಚಾಗಬಹುದಾಗಿದೆ.

ಇದಲ್ಲದೆ ಸಬ್ ಅಕ್ಯೂಟ್ ಬ್ಯಾಕ್ಟೀರಿಯಲ್ ಎಂಡೋಕಾರ್ಡೈಟಿಸ್ (SUB ACUTE BACTERIAL ENDOCARDITIS) ಎಂಬ ಹೃದಯದ ಕಾಯಿಲೆಯು ಬಾಯಿಯ ಸ್ವಚ್ಛತೆಯ ಕೊರತೆಯಿಂದ ಉದ್ಭವಿಸುವ ಬಾಯಿಯ ಕಾಯಿಲೆಗಳಲ್ಲಿನ ಸೂಕ್ಷ್ಮ ಜೀವಿಗಳಾದ ಬ್ಯಾಕ್ಟೀರಿಯಾದಿಂದ ಉದ್ಭವಿಸುತ್ತದೆ. ಈ ಬ್ಯಾಕ್ಟೀರಿಯಾಗಳು ರಕ್ತದ ಮೂಲಕ ಹಾದು ಹೃದಯದ ಕವಟೆಗಳ ಮೇಲೆ ಶೇಖರಣೆಯಾಗಿ ಹೃದಯದ ಕವಟೆಯ ಕಾರ್ಯ ವೈಖರಿಯಲ್ಲಿ ವ್ಯತ್ಯಯ ಉಂಟುಮಾಡುತ್ತದೆ.

ಹೃದಯ ಸಂಬಂಧಿ ಕಾಯಿಲೆಗಳಿಗೆ ತೆಗೆದುಕೊಳ್ಳುವ ಔಷಧಿಗಳು ಕೂಡ ಕೆಲವೊಮ್ಮೆ ಬಾಯಿಯ ಆರೋಗ್ಯದ ಮೇಲೆ ಪ್ರಭಾವ ಬೀರಬಹುದಾಗಿದೆ. ಅಧಿಕ ರಕ್ತದ ಒತ್ತಡಕ್ಕೆ ರೋಗಿಯು ತೆಗೆದುಕೊಳ್ಳುವ ಕೆಲವು ಔಷಧಿಗಳಿಂದ ವಸಡಿನ ಊತ ಹೆಚ್ಚಾಗಬಹುದು. ಅಲ್ಲದೆ ಕೆಲವು ಔಷಧಿಗಳು ಬಾಯಿಯ ಲಾಲಾರಸದ ಉತ್ಪತ್ತಿಯನ್ನು ಕಡಿಮೆ ಮಾಡಬಹುದಾಗಿದ್ದು, ಬಾಯಿಯ ಸ್ವಚ್ಛತೆಯನ್ನು ಕುಂದಿಸಬಹುದಾಗಿದೆ. ಬಾಯಿಯಲ್ಲಿ ಲಾಲಾರಸದ ಉತ್ಪತ್ತಿ ಕಡಿಮೆ ಆದಾಗ ರೋಗಿಯು ಬಾಯಿ ಒಣಗುವಿಕೆ, ಬಾಯಿಯ ದುರ್ವಾಸನೆ, ದಂತ ಕುಳಿ ಮುಂತಾದ ಸಮಸ್ಯೆಯನ್ನು ಅನುಭವಿಸಬೇಕಾಗುತ್ತದೆ.

(ಲೇಖಕರು: ಓರಲ್ ಮೆಡಿಸನ್ ಹಾಗೂ ರೇಡಿಯಾಲಜಿ ತಜ್ಞರು)



ಹೃದಯ ಸಂಬಂಧ ಕಾಯಿಲೆಗಳಿಂದ ಬಳಲುವವರು ದಂತ ಚಿಕಿತ್ಸೆಗಳನ್ನು ಪಡೆಯುವಾಗ ಕೆಲವು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳುವುದು ಒಳಿತು.

- ದಂತ ಚಿಕಿತ್ಸೆಗಳನ್ನು ಪಡೆಯುವಾಗ ಬೆಳಗಿನ ಸಮಾಲೋಚನೆಯನ್ನು ಪಡೆಯುವುದು ಉತ್ತಮ.
- ದಂತ ಚಿಕಿತ್ಸೆಗೂ ಮುನ್ನ ಅತಿಯಾಗಿ ಆಹಾರ ಸೇವನೆಗಿಂತ ಲಘು ಆಹಾರ ಸೇವನೆ ಉತ್ತಮ.
- ಅಧಿಕ ರಕ್ತದ ಒತ್ತಡವಿರುವ ರೋಗಿಗಳು ರಕ್ತದ ಒತ್ತಡವನ್ನು ಪರೀಕ್ಷಿಸಿಕೊಂಡು ದಂತ ಚಿಕಿತ್ಸೆಯನ್ನು ಪಡೆಯುವುದು ಉತ್ತಮ.
- ದಂತ ಕುರ್ಚಿಯ ಮೇಲೆ ಕುಳಿತಾಗ ಸರಕ್ಕನೆ / ಜರ್ಕಿ ಚಲನೆಗಳನ್ನು ಮಾಡದೇ ಇರುವುದು ಉತ್ತಮ ಇದರಿಂದ ರಕ್ತದ ಒತ್ತಡವನ್ನು ಹತೋಟಿಯಲ್ಲಿಡಲು ಸಾಧ್ಯ.
- ಹೃದಯಾಘಾತ ಅಥವಾ ಹೃದಯ ಶಸ್ತ್ರ ಚಿಕಿತ್ಸೆ ನಂತರ ಕನಿಷ್ಠ ಆರು ತಿಂಗಳು ಯಾವುದೇ ರೀತಿಯ ದಂತ ಚಿಕಿತ್ಸೆಗಳನ್ನು ಪಡೆಯುವುದು ಸೂಕ್ತವಲ್ಲ.
- ಹೃದಯ ಸಂಬಂಧಿ ಕಾಯಿಲೆಗಳಲ್ಲಿ ಸೇವಿಸುವ ಆಸ್ಪರಿನ್ (ರಕ್ತವನ್ನು ಗಟ್ಟಿಯಾಗದಂತೆ ನಿರ್ವಹಿಸುವ ಔಷಧಿ) ಅನ್ನು ಸೇವಿಸುತ್ತಿದ್ದರೆ ದಂತ ಚಿಕಿತ್ಸೆಗಳನ್ನು ಕನಿಷ್ಠ ಮೂರು ದಿನಗಳ ಮುನ್ನ ನಿಲ್ಲಿಸಬೇಕಾಗುತ್ತದೆ. ಇದರಿಂದ ಶಸ್ತ್ರ ಚಿಕಿತ್ಸೆಗಳ ಸಮಯದಲ್ಲಿ ಅಧಿಕ ರಕ್ತ ಸ್ರಾವವನ್ನು ತಡೆಯಬಹುದು.
- ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುವ ರೋಗಿಗಳಿಗೆ ಅರೆವಳಿಕೆ ಕೊಡುವಾಗ ಅದರಲ್ಲಿ ರಕ್ತನಾಳಗಳನ್ನು ಸಂಕುಚಿತಗೊಳಿಸಿ ಅರಿವಳಿಕೆಯನ್ನು ದಕ್ಷವಾಗಿ ಕಾರ್ಯ ನಿರ್ವಹಿಸಲು ಹಾಗೂ ರಕ್ತಸ್ರಾವವನ್ನು ಕಡಿಮೆ ಮಾಡಲು ಬಳಸುವ ಅಡ್ರಿನಲಿನ್ ಎಂಬ ಔಷದಿಯನ್ನು ಬಳಸದಿರುವುದು ಒಳಿತು.
- ಅಧಿಕ ಆಂತರಿಕ ಆತಂಕವಿರುವ ರೋಗಿಗಳಿಗೆ ಆತಂಕವನ್ನು ಕಡಿಮೆ ಮಾಡುವ ಔಷಧಿಗಳ ಬಳಕೆ ಚಿಕಿತ್ಸೆಗೂ ಮುನ್ನ ಅವಶ್ಯಕ.
- ದಂತ ವೈದ್ಯರು ಹೃದಯ ಸಮಸ್ಯೆ ಇರುವ ರೋಗಿಗಳಿಗೆ ಚಿಕಿತ್ಸೆಯನ್ನು ನೀಡುವಾಗ ತುರ್ತು ಚಿಕಿತ್ಸೆಗೆ ಅವಶ್ಯಕವಿರುವ ಆಮ್ಲಜನಕ, ಹಾಗೂ ಅಗತ್ಯ ಔಷಧಿಗಳ ಲಭ್ಯತೆಗಳನ್ನು ಖಾತ್ರಿ ಮಾಡಿಕೊಳ್ಳಬೇಕಾಗುತ್ತದೆ.
- ದಂತ ಶಸ್ತ್ರ ಚಿಕಿತ್ಸೆ ಅಥವಾ ದಂತ ಶುಚಿಗೊಳಿಸುವ ಕ್ರಮದ ಮುನ್ನ ಆಂಟಿಬಯೋಟಿಕ್‌ಗಳನ್ನು ರೋಗ ಪ್ರತಿರಕ್ಷಕವಾಗಿ ಬಳಸುವುದು ಸೂಕ್ತ.
- ಹೃದಯ ಸಮಸ್ಯೆಗಳ ಸಂಕೀರ್ಣತೆಗಳನ್ನು ತಡೆಯಲು ಬಾಯಿಯ ಸ್ವಚ್ಛತೆಯ ಕಡೆಗೆ ಗಮನ ಹರಿಸುವುದು ಅವಶ್ಯಕ.
- ಬಾಯಿಯನ್ನು ದಿನಕ್ಕೆ ಎರಡು ಭಾರಿ ಮೃದುವಾದ ಬ್ರಷ್ ಹಾಗೂ ಕಡಲೆಕಾಯಿ ಬೀಜದ ಗಾತ್ರದ ಪೇಸ್ಟ್ ಉಪಯೋಗಿಸಿ ಮೇಲಿಂದ ಕೆಳಗೆ ಹಾಗೂ ಕೆಳಗಿನಿಂದ ಮೇಲಕ್ಕೆ ಉದ್ದಲಾಗಿ ಉಜ್ಜುವುದರಿಂದ ವಸಡಿನ ಹಾಗೂ ಹಲ್ಲುಗಳ ನಡುವಿನ ಸಂದುಗಳಲ್ಲಿರುವ ಆಹಾರ ಪದಾರ್ಥವನ್ನು ಶುಚಿಗೊಳಿಸಿ ಹಲ್ಲುಗಳ ಸವೆಯದಂತೆ ಕಾಪಾಡಬಹುದಾಗಿದೆ.
- ಬ್ರಷ್‌ಗಳನ್ನು ಮೂರು ತಿಂಗಳಿಗೊಮ್ಮೆ ಬದಲಾಯಿಸುವುದು ಉತ್ತಮ.
- ನಾಲಿಗೆಯನ್ನು ಸ್ವಚ್ಛಗೊಳಿಸಿ, ಬಾಯಿಯನ್ನು ನೀರಿನಿಂದ ಮುಕ್ಕಳಿಸುವುದು ಅವಶ್ಯಕ.
- ಆರು ತಿಂಗಳಿಗೊಮ್ಮೆ ದಂತ ವೈದ್ಯರ ಸಮಾಲೋಚನೆ ಅವಶ್ಯಕ.
- ಹಲ್ಲುಗಳ ಸಂದುಗಳಲ್ಲಿನ ಆಹಾರ ಪದಾರ್ಥಗಳನ್ನು ದಂತ ಫ್ಲಾಸ್ (ಒಂದು ವಿಧವಾದ ದಾರ)ನ್ನು ಬಳಸಿ ಶುಚಿಗೊಳಿಸುವುದು ಅವಶ್ಯಕ.
- ಅವಶ್ಯಕವಿದ್ದರೆ ಬಾಯಿ ಮುಕ್ಕಳಿಸುವ ದ್ರವಗಳನ್ನು ಬಳಸಬಹುದು.

ಪ್ರಮೋದ್ ಶೆಟ್ಟಿ ಈಗ 'ಶಭಾಷ್ ಬಡ್ಡಿಮಗ್ನೆ'



ಪ್ರಿಯಾ, ಪ್ರಮೋದ್ ಶೆಟ್ಟಿ

'ಲಾಫಿಂಗ್ ಬುದ್ದ' 'ಕಾಶಿಯಾತ್ರೆ' ಚಿತ್ರಗಳಲ್ಲಿ ನಾಯಕನಾಗಿ ನಟಿಸಿದ್ದ ಪ್ರಮೋದ್ ಶೆಟ್ಟಿ ಅವರ ಮೂರನೇ ಚಿತ್ರ 'ಶಭಾಷ್ ಬಡ್ಡಿಮಗ್ನೆ' ಸೆಟ್ಟೇರಿದೆ. ಸಿನಿಮಾದ ಮಹೂರ್ತ ಕಂಠೀರವ ಸ್ಟುಡಿಯೋದಲ್ಲಿ ವಿಜಯದಶಮಿಯಂದು ನಡೆಯಿತು. ನಟ ಅಜಯ್‌ರಾವ್ ಮೊದಲ ದೃಶ್ಯಕ್ಕೆ ಚಾಲನೆ ನೀಡಿದರು.

ಸಹಾಯಕ ನಿರ್ದೇಶಕರಾಗಿ ಗುರುತಿಸಿಕೊಂಡಿದ್ದ ಹರೀಶ್ ಸಾ.ರಾ ಈ '...ಬಡ್ಡಿ ಮಗ್ನೆ'ಯ ನಿರ್ದೇಶಕರು. ಕಥೆ ಬಿ.ಎಸ್.ರಾಜಶೇಖರ್ ಅವರದ್ದು. ಚಿತ್ರರಂಗದಲ್ಲಿ ಪ್ರೊಡಕ್ಷನ್ ಮ್ಯಾನೇಜರ್ ಆಗಿ ಕೆಲಸ ಮಾಡಿರುವ ಪ್ರಕಾಶ್ ಅವರು ಕಿಶನ್ ಪ್ರೊಡಕ್ಷನ್ ಹೆಸರಿನಲ್ಲಿ ನಿರ್ಮಾಣ ಮಾಡುತ್ತಿದ್ದಾರೆ. 1980ರ ಕಾಲಘಟ್ಟದಲ್ಲಿ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆಯಲ್ಲಿ ನಡೆದ ನೈಜ ಘಟನೆಯನ್ನು ತೆಗೆದುಕೊಂಡು ಚಿತ್ರಕಥೆ ಬರೆಯಲಾಗಿದೆ. ಅದಕ್ಕಾಗಿ ಆ ಭಾಗದಲ್ಲೆ 45 ದಿನಗಳ ಕಾಲ ಚಿತ್ರೀಕರಣ ನಡೆಯಲಿದೆ. ಹಾಸ್ಯ, ಮರ್ಡರ್ ಮಿಸ್ಟ್ರಿ, ಥ್ರಿಲ್ಲರ್ ಅಂಶ ಈ ಚಿತ್ರದಲ್ಲಿದೆ. ಹಾಗೆಂದು ಚಿತ್ರದಲ್ಲಿ ಸಾಹಸ ದೃಶ್ಯಗಳು ಇಲ್ಲವಂತೆ.

ತರಲೆ ಮಾಡುವ ಪೋಲೀಸ್ ಆಫೀಸರ್ ಪಾತ್ರದಲ್ಲಿ ಪ್ರಮೋದ್ ಶೆಟ್ಟಿ, ಪತ್ನಿಯಾಗಿ ಪ್ರಿಯಾ ನಾಯಕಿ. ಇವರೊಂದಿಗೆ ರಂಗಾಯಣ ರಘು, ರಾಹುಲ್, ರವಿತೇಜ, ಲಕ್ಷೀಪ್ರಿಯ ಸಾಹು, ಮನು, ಅಜಯ್, ಮಿತ್ರ, ರೂಪಾ, ಸುಧಾಮಣಿ, ಇಂದಿರಮ್ಮ, ಮಮತಾ ರಾಜಶೇಖರ್ ತಾರಾಬಳಗದಲ್ಲಿದ್ದಾರೆ. ಕಾರ್ತಿಕ್ ಭೂಪತಿ ಅವರು ಈ ಚಿತ್ರದ ನಾಲ್ಕು ಹಾಡುಗಳಿಗೆ ಸಂಗೀತ ಸಂಯೋಜಿಸುತ್ತಿದ್ದಾರೆ. ಛಾಯಾಗ್ರಹಣ ಅಣಜಿ ನಾಗರಾಜ್, ಸಂಕಲನ ಪ್ರವೀಣ್ ಬೇಲೂರು ಅವರದ್ದು.



ಜವಾಹರ್ ಲಾಲ್ ನೆಹರು ತಾರಾಲಯ
-ಪ್ರಜಾವಾಣಿ ಚಿತ್ರ

9ರವರೆಗೆ ವಿಶ್ವ ಬಾಹ್ಯಾಕಾಶ ಸಪ್ತಾಹ

ನಗರದ ಜವಾಹರ್‌ಲಾಲ್ ನೆಹರೂ ತಾರಾಲಯದ ವತಿಯಿಂದ ವಿಶ್ವ ಬಾಹ್ಯಕಾಶ ಸಪ್ತಾಹದ ಅಂಗವಾಗಿ ಅಕ್ಟೋಬರ್ 7ರಿಂದ 9ರ ವರೆಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಆಸಕ್ತರು ತಾರಾಲಯದಲ್ಲಿ ನಡೆಯಲಿರುವ ಭೌತಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬಹುದು. ಹಾಗೆಯೇ, ಆನ್‌ಲೈನ್ ಮೂಲಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ.

ಅಕ್ಟೋಬರ್ 7ರಂದು ಬಾಹ್ಯಾಕಾಶ ವಿಜ್ಞಾನಿಗಳೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ಇಸ್ರೊ ಮಾಜಿ ಅಧ್ಯಕ್ಷ ಡಾ.ಎ.ಎಸ್. ಕಿರಣ್‌ಕುಮಾರ್, ನಿವೃತ್ತ ವಿಜ್ಞಾನಿಗಳಾದ ಸೀತಾ, ಪಿ.ಜೆ. ಭಟ್ ಭಾಗವಹಿಸಿದ್ದರು.

ಅಕ್ಟೋಬರ್ 8ರಂದು ಬೆಳಿಗ್ಗೆ 11ಕ್ಕೆ ಖಗೋಳ ಜೀವಶಾಸ್ತ್ರದ ಕುರಿತು ಕ್ರೈಸ್ಟ್ ಯೂನಿವರ್ಸಿಟಿಯ ಪ್ರಾಧ್ಯಪಕರಾದ ಡಾ.ಅರುಣ್ ಕೆನಾತ್ ಮಾಹಿತಿ ನೀಡಿಲಿದ್ದಾರೆ. ವರ್ಚುವಲ್ ಆಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವವರು ಈ ಕೆಳಗಿನ ಲಿಂಕ್ ಬಳಸಬೇಕು.

https://us06web.zoom.us/j/ 85278543825?pwd= WW1Za2xmcGVBdmtZMzg2V0FZbWNOUT 09

Meeting ID: 852 7854 3825, Passcode: 799758

ಅಕ್ಟೋಬರ್ 9ರಂದು ಸಂಜೆ 4ಕ್ಕೆ ಬಾಹ್ಯಾಕಾಶ ದೂರದರ್ಶಕದಿಂದ ವಿಜ್ಞಾನದ ಕುರಿತು ಎಂ.ವೈ ಆನಂದ ಉಪನ್ಯಾಸ ನೀಡಲಿದ್ದಾರೆ. ವರ್ಚುವಲ್ ಆಗಿ ಕಾರ್ಯಕ್ರಮ ಭಾಗವಹಿಸುವವರು ಈ ಕೆಳಗಿನ ಲಿಂಕ್ ಬಳಸಬೇಕು.

https://us06web.zoom.us/j/ 81862193562?pwd= WIFRNzJmR0swWHhlT3FObHBGMEE4UT 09

Meeting ID: 818 6219 3562, Passcode: 484764

ಇಂದು ಸಂಚಲನ ಪ್ರಕಾಶನದ ಕೃತಿಗಳ ಬಿಡುಗಡೆ


ನಗರದ ಸಂಚಲನ ಪ್ರಕಾಶನ ಪ್ರಕಟಿತ ಡಾ. ಸಿ.ಜಿ. ಲಕ್ಷ್ಮೀಪತಿಯವರ 'ಕ್ಯಾಸ್ಟ್ ಕೆಮಿಸ್ಟ್ರಿ' ಮತ್ತು ರೀಟಾ ರೀನಿ ಅನುವಾದಿಸಿರುವ 'ಸಿಖ್ ಕ್ರಾಂತಿ' ಕೃತಿಗಳು ಇಂದು ಸಂಜೆ 4 ಗಂಟೆಗೆ ಬಸವನಗುಡಿ ನ್ಯಾಷನಲ್ ಕಾಲೇಜು ಮಲ್ಟಿ ಮೀಡಿಯಾ ಸಭಾಂಗಣದಲ್ಲಿ ಬಿಡುಗಡೆಯಾಗಲಿವೆ.

ಕವಿ ಮತ್ತು ಸಂಸ್ಕೃತಿ ಚಿಂತಕ ಬಂಜಗೆರೆ ಜಯಪ್ರಕಾಶ್ 'ಸಿಖ್ ಕ್ರಾಂತಿ' ಕೃತಿ ಕುರಿತು ಹಾಗೂ ಹಿರಿಯ ಪತ್ರಕರ್ತ ಡಿ. ಉಮಾಪತಿ ಅವರು 'ಕ್ಯಾಸ್ಟ್ ಕೆಮಿಸ್ಟ್ರಿ' ಕೃತಿ ಕುರಿತು ಮಾತನಾಡಲಿದ್ದಾರೆ.

ದಲಿತ್ ಆಕ್ಟಿವಿಸ್ಟ್ ಮತ್ತು ಅಂತರರಾಷ್ಟ್ರೀಯ ಸ್ತ್ರೀವಾದಿ ಚಿಂತಕರಾದ ಸಿಂಥಿಯಾ ಸ್ಟೀಫನ್ ಅಧ್ಯಕ್ಷತೆ ವಹಿಸಲಿದ್ದಾರೆ. ನ್ಯಾಷನಲ್ ಎಜುಕೇಷನ್ ಸೊಸೈಟಿಯ ಕಾರ್ಯದರ್ಶಿ ಎಸ್.ಎನ್.ನಾಗರಾಜರೆಡ್ಡಿ ಮುಖ್ಯ ಅತಿಥಿಗಳಾಗಿ ಭಾಗವಹಿಸುತ್ತಿದ್ದಾರೆ. ಬಸವನಗುಡಿ ನ್ಯಾಷನಲ್ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ. ರವಿಕುಮಾರ್ ಬಾಗಿ ಉಪಸ್ಥಿತರಿರುತ್ತಾರೆ.

ಆ್ಯಪಲ್ ಬಾಕ್ಸ್‌ನಿಂದ ಸುರಿದ ಸ್ವಾತಿ ಮುತ್ತಿನ ಮಳೆ ಹನಿ...





ರಾಜ್ ಬಿ. ಶೆಟ್ಟಿ

ಮೋಹಕ ತಾರೆ ರಮ್ಯಾ ಅವರ ನಿರ್ಮಾಣ ಸಂಸ್ಥೆ ಆ್ಯಪಲ್ ಬಾಕ್ಸ್ ಸ್ಟುಡಿಯೋಸ್‌ನ ಮೊದಲ ಚಿತ್ರ ಘೋಷಣೆಯಾಗಿದೆ. 'ಸ್ವಾತಿ ಮುತ್ತಿನ ಮಳೆ ಹನಿಯೇ' ಈ ಚಿತ್ರದ ಹೆಸರು. ಈ ಚಿತ್ರವನ್ನು ಲೈಟರ್ ಬುದ್ಧ ಫಿಲ್ಮ್ಸ್ ಸಹಯೋಗದಲ್ಲಿ ನಿರ್ಮಿಸಲಾಗುತ್ತಿದೆ.

ಚಿತ್ರದಲ್ಲಿ ರಾಜ್ ಬಿ. ಶೆಟ್ಟಿ ಹಾಗೂ ರಮ್ಯಾ ಪ್ರಧಾನ ಪಾತ್ರದಲ್ಲಿದ್ದಾರೆ. ಕಥೆ, ನಿರ್ದೇಶನ ರಾಜ್ ಬಿ. ಶೆಟ್ಟಿ ಅವರದ್ದು. ರಾಜ್ ಅವರು ಕಥೆ ಹೇಳಿದ್ದು ರಮ್ಯಾ ಅವರಿಗೆ ಇಷ್ಟವಾಗಿ ಈ ಚಿತ್ರ ನಿರ್ಮಿಸಲು ಮುಂದಾದರಂತೆ. ರಾಜ್ ಅವರ 'ಗರುಡ ಗಮನ ವೃಷಭ ವಾಹನ' ಚಿತ್ರದ ತಾಂತ್ರಿಕ ತಂಡವೇ ಇಲ್ಲಿ ಕೆಲಸ ಮಾಡಲಿದೆ. ಮಿಥುನ್ ಮುಕುಂದನ್ ಅವರ ಸಂಗೀತ, ಪ್ರವೀಣ್ ಶ್ರೀಯಾನ್ ಅವರ ಸಂಗೀತವಿದೆ.

ಸದ್ಯ ಚಿತ್ರ ನಿರ್ಮಾಣ ಪೂರ್ವ ಹಂತದಲ್ಲಿದೆ. ಹೆಚ್ಚಿನ ವಿವರಗಳನ್ನು ಶೀಘ್ರವೇ ತಿಳಿಸುತ್ತೇವೆ ಎಂದಿದ್ದಾರೆ ರಮ್ಯಾ.

ಪ್ರಜಾ ಪ್ಲಸ್+

ಹಲವು ಬಂಧಗಳನ್ನು ಹೆಣೆದ ಬೆಳಗೊಂದರಿಂದ ದಿನವೊಂದು ಆರಂಭಗೊಳ್ಳದೇ ಹೋದರೆ ಬದುಕೆಷ್ಟು ಶೂನ್ಯವೆನಿಸುತ್ತದೆ. ಅನಾಮಿಕತೆಯ ಗೂಡಿನಲ್ಲಿರುವ ಚಿರಪರಿಚಿತವೆನಿಸುವ ಮುಖಗಳಿಂದಲೇ ಸಣ್ಣ ಸಣ್ಣ ಖುಷಿ ದಕ್ಕುವುದು. ಇವುಗಳಿಂದಲೇ ಬದುಕಿನ ಸೊಬಗು ಹೆಚ್ಚುವುದು.

ಬದುಕು ಸಣ್ಣದರೊಳಗಿನ ಸಂಭ್ರಮ



ಸದಾಶಿವ್ ಸೊರಟೂರು

ಲಹರಿ

ಬೆಳಿಗ್ಗೆ ಎದ್ದ ತಕ್ಷಣ ಮುಖ ತೊಳೆಯದೆ ಅಲ್ಲಿಗೆ ಓಡ್ತೀನಿ. ಟೀ ಅಂಗಡಿ ಚಾಚಾ ಬಿಸಿಬಿಸಿ ಕಾಫಿ ಜೊತೆಗೆ ಅಷ್ಟೇ ಬಿಸಿಯಾದ ಪತ್ರಿಕೆ ಕೊಡ್ತಾನೆ. ಚುಮು ಚುಮು ಚಳಿಯ ಜೊತೆಯಲ್ಲಿ ಕಾಫಿ ಮತ್ತು ಪತ್ರಿಕೆ ಎರಡನ್ನು ಮುಗ್ಸತೀನಿ. 'ಚಾಚಾ ಬರ್ತೀನಿ ಡ್ಯೂಟಿಗೆ ಲೇಟಾಗುತ್ತೆ..' ಅಂತ ಹೇಳಿ ಜಾಚನ ಕೈಯಲ್ಲಿ ಹಣ ಇಟ್ಟು ಹೊರಡ್ತೀನಿ. ಚಾಚಾ ಒಂದು ನಗು ಕೊಡ್ತಾರೆ. ದಿನವೊಂದು ಅದ್ಭುತವಾಗಿ ತೆರೆದುಕೊಳ್ಳುತ್ತದೆ. ಈ ನಡುವೆ ಚಾಚಾ ಒಂದು ವಾರದಿಂದ ಕಾಣಿಸಲಿಲ್ಲ. ನಾನು ಮತ್ತು ನನ್ನ ಬೆಳಗು ಸಂಪೂರ್ಣವಾಗಿ ಅನಾಥರಾದೆವು.

***

ಬೆಳಿಗ್ಗೆ ಪೂಜೆಯ ಹೊತ್ತಿಗೆ ಹಾಲ್ ನಲ್ಲಿರುವ ಗಣೇಶನ ಮುಂದೆ ಬೊಗಸೆಯಷ್ಟು ಮಲ್ಲಿಗೆ ಮೊಗ್ಗುಗಳಿರ್ತವೆ. ಮನೆ ತುಂಬಾ ಸೊಗಸಾದ ಕಂಪು. ಮಲ್ಲಿಗೆ ಕಂಪಿಗೆ ಎಳೆ ಬಿಸಿಲಿಗೂ ಒಳಗೆ ಬರುವ ಕಾತರ. ಹಳ್ಳಿಯಿಂದ ಹೂ ತಂದು ಕೊಡುತ್ತಿದ್ದ ಆಕೆ ಮಗಳ ಮದುವೆಯೆಂದು ನಾಲ್ಕು ದಿನ ಬರಲಿಲ್ಲ. ಅವಳು ಹೂ ಕೊಡುವಾಗ ಮಾಡುತ್ತಿದ್ದ ಕಾಳಜಿಯು ಹೂವಿನ ಘಮದಷ್ಟೇ ಚಂದವಿತ್ತು. ಅವಳ ಹೂವಿನ ಘಮವಿಲ್ಲದೆ ಇಡೀ ಮನೆ ಮತ್ತು ಎಳೆ ಬಿಸಿಲು ಅನಾಥವಾದವು. ಎಳೆ ಬಿಸಿಲು ಈಗ ಒಳಗೆ ಬರಲು ಯೋಚಿಸುತ್ತಿಲ್ಲ

***

ನಾನು ಇದುವರೆಗೂ ಒಮ್ಮೆಯೂ ಡ್ಯೂಟಿಗೆ ತಡವಾಗಿ ಹೋಗಿಲ್ಲ. ತಡವಾಗಿ ಹೋಗಲು ಪ್ರಯತ್ನ ಪಟ್ಟರೂ ಆಗಿಲ್ಲ. ..ಹಾಗೆ ಹೋಗಲು ಅವನು ಬಿಡಬೇಕಲ್ಲ! ಸರಿಯಾಗಿ 9 ಗಂಟೆಗೆ ಮನೆ ಮುಂದೆ ನಿಂತು ಹಾರ್ನ್ ಒತ್ತುತ್ತಲೇ ಇರ್ತಾನೆ. ಹೊರಗೆ ಬರುವವರೆಗೂ ಬಿಡುವುದಿಲ್ಲ. ಆಟೊ ನಿಲ್ಲಿಸಿಕೊಂಡು ಆತ ಹೊರಗೆ ಕಾಯುವುದು ನನಗೆ ಸೇರುವುದಿಲ್ಲ. ಅದಕ್ಕೆಂದೇ ಅವನಿಗಿಂತ ಮೊದಲೇ ರೆಡಿಯಾಗ್ತಿನಿ. ಬಂದವನೇ ಒಮ್ಮೆ ನಕ್ಕು 'ಗುಡ್ ಮಾರ್ನಿಂಗ್' ಹೇಳ್ತಾನೆ. ತುಂಬಾ ಆತ್ಮೀಯವಾಗಿ ಮಾತಾಡ್ತಾನೆ. 9:15ಕ್ಕೆ ಬಸ್ ಸ್ಟ್ಯಾಂಡ್ ಗೆ ತಲುಪಿಸಿ 'ಹುಷಾರ್ ಸಾರ್' ಅಂತಾನೆ. ಈ ನಡುವೆ ಅವನಿಲ್ಲ. ಕೆಲಸ ಬಿಟ್ಟು ಊರಿಗೆ ಹೋಗಿದ್ದಾನಂತೆ. ನಿತ್ಯದ ಬೆಳಗು ಈಗ ಕಸಿವಿಸಿಯೊಂದಿಗೆ ಆರಂಭ. ಡ್ಯೂಟಿಗೆ ಬರಿ ಲೇಟು. ಒಂದು ಆತ್ಮೀಯತೆ ಭಾವದ ಕೊರತೆ, ಅದರ ಅನಾಥತೆ.



ಬರೀ ಬೆಳಗೊಂದೇ ನನ್ನ ದಿನವೊಂದನ್ನು ಚಂದಗಾಣಿಸಲು ಇಷ್ಟು ಬಂಧಗಳನ್ನು ಹೆಣೆದಿದೆ. ಅದರಲ್ಲಿ ಯಾರೊ ಒಬ್ರು ಇಲ್ಲ ಅಂದ್ರೂ ಅದೆಂತಹ ಅನಾಥ ಭಾವ. ಆ ಕಾಫಿ, ಮಲ್ಲಿಗೆ, ಆಟೋದವ ಕೊಡುವ ಚಿಕ್ಕ ಪುಟ್ಟ ಭಾವಗಳು... ಅದೆಂಥ ಸೊಗಸು ಮೂಡಿಸುತ್ತವೆ. ನೋಡಿ, ಪ್ರತಿಯೊಬ್ಬರ ದಿನಗಳು ಇಂತಹ ಸಣ್ಣದರಿಂದಲೇ ಕಳೆ ಕಟ್ಟಿರುತ್ತವೆ, ಕೈ ಹಿಡಿದಿರುತ್ತವೆ. ಬಸ್ ಕಂಡಕ್ಟರ್, ಆಫೀಸ್‌ನಲ್ಲಿ ಫೈಲ್ ಎತ್ತಿ ಕೊಡುವ ಸಹಾಯಕ, ಕೇಬಲ್ ಹುಡುಗ, ಮನೆಕೆಲಸದವರು.. ಹೀಗೆ ಇವರಿಂದಲೇ ನಮ್ಮ ಚಂದದ ಬದುಕು.

ನಾವು ಬಹುತೇಕ ಬಾರಿ ಇಂಥವರ ಬಗ್ಗೆ ಉಡಾಫೆ ಮಾಡ್ತೀವಿ. ದುಡ್ಡು ಕೊಟ್ಟೆ ಅವನು ಕಾಫಿ ಕೊಟ್ಟ ಅಂತೀವಿ. ಆದರೆ ಅವರ ಆ ನಿಷ್ಕಲ್ಮಶ ನಗು ದುಡ್ಡಿಗೆ ಸಿಗಲ್ಲ. ಆಟೊದ ಹುಡುಗ 'ಹುಷಾರ್ ಸರ್' ಎನ್ನುವುದು ನಾನು ಕೊಡುವ ಕೇವಲ ಮೂವತ್ತು ರೂಪಾಯಿಗೆ ಅಲ್ಲ, ದುಡ್ಡಿಗೆ ಅಂತಹ ಕಾಳಜಿ ದಕ್ಕುವುದಿಲ್ಲ. ಹೂವು ಕೊಡುವ ಆ ತಾಯಿ ಇಲ್ಲದೆ ಬಂಗ್ಲೆಯೊಂದು ಕಳೆ ಇಲ್ಲದೆ ಹಠ ಹಿಡಿದು ಮಲಗಿ ಬಿಡುತ್ತದೆ. ಯಾವ ದುಬಾರಿ ಹವಾನಿಯಂತ್ರಿತ ಉಪಕರಣವೂ ಸಮಾಧಾನಿಸಲು ಆಗುವುದಿಲ್ಲ. ಅದಕ್ಕೆ ಬೇಕಿರುವುದು ಒಂದು ಬೊಗಸೆ ಮಲ್ಲಿಗೆ ಮತ್ತು ಅದರ ಘಮ. ಬದುಕು ಸಣ್ಣ ಸಣ್ಣದರಿಂದಲೇ ಆದ ನಿತ್ಯ ಜಾತ್ರೆ. ದೊಡ್ಡ ಮಾರಿಹಬ್ಬ ಅಲ್ಲ. ಅದು ಬರೀ ಶೋಕಿ. ಆದರೆ ಬದುಕು ಒಂದು ದಿನದಲ್ಲ ನೋಡಿ.

ಮನುಷ್ಯ ಅನಾಥನಾಗುವುದು ಕೇವಲ ತಂದೆ, ತಾಯಿ, ಹೆಂಡತಿ ಮಕ್ಕಳು ಇಲ್ಲ ಅನ್ನುವ ಕಾರಣಕ್ಕಷ್ಟೇ ಅಲ್ಲ! ಊರು ಬಿಟ್ಟು, ಊರಿನ ಮಣ್ಣನ್ನು ಅಲ್ಲೆ ತೊಳೆದುಕೊಂಡು, ತನ್ನವರನು ತೊರೆದು ಬದುಕು ಕಟ್ಟಿಕೊಳ್ಳೊಕೆ ಅಂತ ದೊಡ್ಡ ನಗರಕ್ಕೆ ಬರ್ತೀವಿ. ಅಪ್ಪ ಅಮ್ಮ ಅಣ್ಣ ತಂಗಿ ಯಾರೂ ಇರುವುದಿಲ್ಲ. ಇಲ್ಲಿ ಸಿಗುವ ಪ್ರತಿಯೊಬ್ಬರಲ್ಲೂ ಅವರನ್ನು ಹುಡುಕಿಕೊಳ್ಳಬೇಕು. ಪ್ರತಿ ಸಣ್ಣದರಲ್ಲೂ ಬದುಕಿನ ಸೊಬಗನ್ನು ಕಾಣಬೇಕು. ನನ್ನವರು, ನನ್ನೊಂದಿಗೆ ಇರುವವರು ಯಾರೂ ಇಲ್ಲವೆಂದಾಗಲೂ ಕೂಡ. ಬಾಸ್ ಮಾತನಾಡಿಸಿದಾಗ ಆಗುವ ಖುಷಿಗಿಂತ ಆಟೊದವನ ಗುಡ್ ಮಾರ್ನಿಂಗ್ ಆಪ್ತವೆನಿಸುತ್ತದೆ. ಬಾಸ್‌ನಲ್ಲಿ ಏನೋ ಒಂದು ಪ್ಲಾನ್ ಇರುತ್ತದೆ, ಆದರೆ, ಆಟೊದವನಲ್ಲಿ ಬರೀ ಪ್ರೀತಿ ಇರುತ್ತದೆ.

ಹೌದು, ಬದುಕು ಸಣ್ಣದರ ಸಂತೆ. ಅವುಗಳಿಂದಲೇ ಬದುಕನ್ನು ಸಿಂಗರಿಸಿಕೊಳ್ಳಬೇಕು ಆಗ ಬದುಕು ನಿಜಕ್ಕೂ ಸಂಭ್ರಮಿಸುತ್ತದೆ. ಬದುಕು ಸಣ್ಣದೊರಳಗೆ ಅವಿತು ಕೂತ ದೊಡ್ಡ ಸಂಭ್ರಮ.





ಹರಿಪ್ರಿಯಾ

ಲಾಸ್ ಏಂಜಲೀಸ್‌ಗೆ ಹೊರಟ 'ತಾಯಿ ಕಸ್ತೂರ್ ಗಾಂಧಿ'

ಸಿನಿ ಹನಿ

ಕಸ್ತೂರ್ ಗಾಂಧಿಯವರ ಜೀವನವನ್ನು ಆಧರಿಸಿ ಬರಗೂರು ರಾಮಚಂದ್ರಪ್ಪ ಅವರು ನಿರ್ದೇಶಿಸಿರುವ 'ತಾಯಿ ಕಸ್ತೂರ್ ಗಾಂಧಿ' ಸಿನಿಮಾ, ಇದೀಗ ಲಾಸ್ ಏಂಜಲೀಸ್ ಅಂತರರಾಷ್ಟ್ರೀಯ ಚಿತ್ರೋತ್ಸವದ ಸ್ಪರ್ಧಾ ವಿಭಾಗಕ್ಕೆ ಆಯ್ಕೆಯಾಗಿದೆ.

ಇತ್ತೀಚೆಗೆ ಲಾಸ್ ಏಂಜಲಿಸ್ ಸನ್ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಈ ಸಿನಿಮಾ ಪ್ರದರ್ಶನ ಕಂಡಿತ್ತು. 12ನೇ ದಾದಾ ಸಾಹೇಬ್ ಫಾಲ್ಕೆ ಅಂತರರಾಷ್ಟ್ರೀಯ ಚಿತ್ರೋತ್ಸವದ ಸ್ಪರ್ಧಾ ವಿಭಾಗಕ್ಕೂ ಈ ಚಿತ್ರ ಆಯ್ಕೆಯಾಗಿತ್ತು. ಅಮೆರಿಕದ ಡಲ್ಲಾಸ್ ಚಿತ್ರೋತ್ಸವದಲ್ಲಿ ಈ ಚಿತ್ರಕ್ಕೆ ಅತ್ಯುತ್ತಮ ಸಂಕಲನಕ್ಕಾಗಿ ಪ್ರಶಸ್ತಿ ಲಭಿಸಿತ್ತು. ಸುರೇಶ್ ಅರಸು ಈ ಚಿತ್ರದ ಸಂಕಲನಕಾರರು. ಬರಗೂರು ಅವರು ಬರೆದ 'ಕಸ್ತೂರ ಬಾ Vs ಗಾಂಧಿ' ಕಾದಂಬರಿಯನ್ನು ಈ ಚಿತ್ರವು ಆಧರಿಸಿದೆ. ಈ ಕಾದಂಬರಿ 'ಸುಧಾ' ವಾರ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿತ್ತು.

'ಕಸ್ತೂರ್ ತಾಯಿಯಾಗಿ ಮತ್ತು ಪತ್ನಿಯಾಗಿ ಎದುರಿಸಿದ ಬಿಕ್ಕಟ್ಟುಗಳು, ಅಪರೂಪದ ದಾಂಪತ್ಯ ಮತ್ತು ಸಾಮಾಜಿಕ ಕಾಳಜಿಗಳು ಸಿನಿಮಾದ ಮುಖ್ಯ ಕಥಾವಸ್ತು' ಎಂದಿದ್ದಾರೆ ಬರಗೂರು.

ಕಸ್ತೂರ್ ಬಾ ಪಾತ್ರದಲ್ಲಿ ನಟಿ ಹರಿಪ್ರಿಯಾ ಹಾಗೂ ಗಾಂಧಿ ಪಾತ್ರದಲ್ಲಿ ಬಹುಭಾಷಾ ನಟ ಕಿಶೋರ್ ಅಭಿನಯಿಸಿದ್ದಾರೆ. ಜನಮಿತ್ರ ಮೂವೀಸ್ ಬ್ಯಾನರ್ ಅಡಿ ಗೀತಾ ಅವರು ಈ ಚಿತ್ರ ನಿರ್ಮಿಸಿದ್ದಾರೆ.

200 ಮೆಗಾಪಿಕ್ಸೆಲ್ ಕ್ಯಾಮೆರಾ ಸಹಿತ ಸ್ಮಾರ್ಟ್‌ಫೋನ್ ಬಿಡುಗಡೆ

ಹೊಸತು



ಚೀನಾ ಮೂಲದ ಪ್ರಮುಖ ಸ್ಮಾರ್ಟ್‌ಫೋನ್ ಮತ್ತು ಗ್ಯಾಜೆಟ್ ತಯಾರಿಕ ಸಂಸ್ಥೆ ಶಓಮಿ, 200 ಮೆಗಾಪಿಕ್ಸೆಲ್ ಕ್ಯಾಮೆರಾ ಇರುವ ಹೊಸ ಪ್ರೀಮಿಯಂ ಸ್ಮಾರ್ಟ್‌ಫೋನ್ ಪರಿಚಯಿಸಿದೆ. ಬರ್ಲಿನ್ ಮಾರುಕಟ್ಟೆಗೆ ಶಓಮಿ 12T ಮತ್ತು ಶಓಮಿ 12T Pro ಲಗ್ಗೆ ಇರಿಸಿದೆ.

ಶಓಮಿ 12T Pro ಸ್ಮಾರ್ಟ್‌ಫೋನ್ ವೈಶಿಷ್ಟ್ಯಗಳು

- 6.7 ಇಂಚಿನ ಅಮೋಲೆಡ್ ಡಿಸ್‌ಪ್ಲೇ
- ಇನ್ ಸ್ಕ್ರೀನ್ ಫಿಂಗರ್‌ಪ್ರಿಂಟ್ ಸೆನ್ಸರ್
- ಕ್ವಾಲ್ಕಂ ಸ್ನ್ಯಾಪ್‌ಡ್ರ್ಯಾಗನ್ 8 + ಜೆನ್. 1 ಪ್ರೊಸೆಸರ್ ಜತೆಗೆ ಅಡ್ರೆನೊ 730 ಗ್ರಾಫಿಕ್ಸ್ ಬೆಂಬಲ ಹೊಂದಿದೆ.
- ಆ್ಯಂಡ್ರಾಯ್ಡ್ 12 ಆಧಾರಿತ MIUI 13 OS ಇದರಲ್ಲಿದೆ.
- 8GB/12GB LPDDR5 ಎಂಬ ಎರಡು RAM ಆಯ್ಕೆ, 128GB/256GB ಸ್ಟೋರೇಜ್ ಜತೆಗೆ 5,000mAh ಬ್ಯಾಟರಿ ಹಾಗೂ 120W ಫಾಸ್ಟ್ ಚಾರ್ಜಿಂಗ್ ಬೆಂಬಲ ಹೊಂದಿದೆ.

ಕ್ಯಾಮೆರಾ ವಿವರ

- ನೂತನ ಶಓಮಿ 12T Pro ಸ್ಮಾರ್ಟ್‌ಫೋನ್‌ನಲ್ಲಿ 200 ಮೆಗಾಪಿಕ್ಸೆಲ್ ಮುಖ್ಯ ಕ್ಯಾಮೆರಾ ಜತೆಗೆ 8 ಮೆಗಾಪಿಕ್ಸೆಲ್ + 2 ಮೆಗಾಪಿಕ್ಸೆಲ್ ಕ್ಯಾಮೆರಾ ಇದೆ. 20 ಮೆಗಾಪಿಕ್ಸೆಲ್ ಸೆಲ್ಫಿ ಇದರ ವಿಶೇಷತೆಯಾಗಿದೆ.
- ಭಾರತದಲ್ಲಿ ಬೆಲೆ ವಿವರ ಮತ್ತು ಬಿಡುಗಡೆ ದಿನಾಂಕವನ್ನು ಕಂಪನಿ ಬಹಿರಂಗಪಡಿಸಿಲ್ಲ.

ಕಡಿಮೆ ಕ್ಯಾಲೋರಿಯ ಹಬೆ ಕಡುಬು



ಸುಮಾ ಬಿ.

ಆಹಾರ

'ಕಡುಬು' ಎಂದಾಕ್ಷಣ ಒಂದೊಂದು ಭಾಗದವರಿಗೆ ಒಂದೊಂದು ನೆನಪು. ಕಡುಬಿನ ಕವಲುಗಳು ಸಾಕಷ್ಟಿರುವುದೇ ಇದಕ್ಕೆ ಕಾರಣ. ಕರಿಗಡುಬು, ಖಾರದ ಕಡುಬು, ಸಿಹಿ ಕಡುಬು, ಶಾಯಿ ಕಡುಬು, ಕುಚ್ಚಿದ ಕಡುಬು, ಅಕ್ಕಿ ಕಡುಬು, ಉದ್ದಿನ ಕಡುಬು, ರವೆ ಕಡುಬು, ಕೊಬ್ಬರಿ ಕಡುಬು, ಕೊಟ್ಟೆ ಕಡುಬು, ಮೂಡೆ ಕಡುಬು... ಹೀಗೆ ಪಟ್ಟಿ ಬೆಳೆಯುತ್ತ ಹೋಗುತ್ತದೆ. ಎಣ್ಣೆಯಲ್ಲಿ ಕರಿದೂ ಕಡುಬು ತಯಾರಿಸಬಹುದು. ಎಣ್ಣೆ ಪದಾರ್ಥ ವರ್ಜ್ಯ ಎನ್ನುವವರು ಹಬೆಯಲ್ಲಿ ಬೇಯಿಸಿಯೂ ಸವಿಯಬಹುದು. ಆದರೆ ಕರಿಗಡುಬಿಗೂ ರವೆ ಕಡುಬಿಗೂ ವ್ಯತ್ಯಾಸ ಉಂಟು.

ಎಲೆಯ ಒಳಗೆ ಬೇಳೆ ಹೂರಣ, ಸಕ್ಕರೆ ಕೊಬ್ಬರಿಯ ಮಿಶ್ರಣ, ಖೋವಾ ಸಕ್ಕರೆಯ ಮಿಶ್ರಣ ಹೀಗೆ ತರಹೇವಾರಿಯಾಗಿ ತುಂಬಿ ಕಡುಬು ತಯಾರಿಸಬಹುದು. ಒಂದೊಂದು ಮಿಶ್ರಣವೂ ಒಂದೊಂದು ಸ್ವಾದ ನೀಡುತ್ತವೆ. ಇದನ್ನು ಮಕ್ಕಳೂ ಹೆಚ್ಚು ಇಷ್ಟಪಟ್ಟು ಸವಿಯುವರು. ಇನ್ನು ಮಕ್ಕಳಿಗೆ ಪೋಷಕಾಂಶಯುಕ್ತ ಆಹಾರವನ್ನೇ ಕೊಡಬೇಕು ಎಂದು ಜಪ ಮಾಡುವ ಆಧುನಿಕ ಅಮ್ಮಂದಿರು ಸಕ್ಕರೆ, ಖೋವಾ ಜತೆಗೆ ಡ್ರೈಫ್ರೂಟ್ಸ್ ಹುಡಿಯನ್ನು ಬೆರೆಸಿ ಕಡುಬು ತಯಾರಿಸುವುದುಂಟು.

ಚಿಕ್ಕ ಮಕ್ಕಳಿಗೆ ಕಡುಬು ಒಂದು ರೀತಿ ಕುತೂಹಲದ ಮೂಟೆಯಾಗಿಯೂ ಕಾಣುತ್ತದೆ. ಒಳಭಾಗದಲ್ಲಿ ರುಚಿಯಾ ದುದನ್ನು ಅಡಗಿಸಿಟ್ಟು ಮೇಲ್ಭಾಗ ಮುಚ್ಚುವ ಈ ಖಾದ್ಯ ಮಕ್ಕಳಿಗೆ ಅಚ್ಚುಮೆಚ್ಚು. ಇನ್ನೂ ಹಲ್ಲು ಮೂಡಿರದ, ಹಾಲುಗಲ್ಲದ ಕಂದಮ್ಮಗಳ ಕೈಯಲ್ಲಿ ಕಡುಬು ಕೊಟ್ಟು ನೋಡಿ. ಸುಮಾರು ಒಂದು ತಾಸು ಒಂದು ಕಡುಬಿನಲ್ಲೇ ಕಾಲ ಕಳೆಯುತ್ತವೆ. ಬಾಯಿಯ ಜೊಲ್ಲಿನಿಂದ ಕಡುಬನ್ನು ಮೆತ್ತಗೆ ಮಾಡಿಕೊಳ್ಳುತ್ತಾ ಚೂರು ಚೂರೇ ಅದರ ಸ್ವಾದವನ್ನು ಸವಿಯುತ್ತಾ ಹೋಗುತ್ತದೆ. ಹೀಗಾಗಿ ಕಡುಬು ಮಕ್ಕಳ ಪಾಲಿಗೆ ಟೈಮ್‌ಪಾಸ್ ರೀತಿಯೂ ಒದಗಿಬರುತ್ತದೆ.



ಈ ಕರಿಗಡುಬು ಬಿಸಿ ಬಿಸಿಯಾಗಿ ಇದ್ದಾಗಲೂ ಚೆನ್ನ, ಆರಿದರೂ ಬಲು ರುಚಿ. ಬೆಲ್ಲ ಮಿಶ್ರಿತ ಬೇಳೆ ಹೂರಣ ವನ್ನು ಎಣ್ಣೆಯಲ್ಲಿ ಕರಿಯುವುದರಿಂದ ಮತ್ತೆ ಹೂರಣ ಬೇಯಿಸಿದ ಹಾಗಾಗುತ್ತದೆ. ಹಾಗಾಗಿ ಇದನ್ನು ಎರಡ ರಿಂದ ಮೂರು ದಿನ ಇಟ್ಟೂ ಸವಿಯಬಹುದು. ಆದರೆ, ಈ ಕಡುಬು ತಯಾರಿಸಲು ಹೆಚ್ಚು ಕೈಗಳು ಬೇಕು. ಎಲೆ(ಹಾಳೆ ಒತ್ತುವುದು)ಉದ್ದಲು, ಹೂರಣ ತುಂಬಲು, ಬಳಿಕ ಕರಿಯಲು ಇಬ್ಬರಿಂದ ಮೂವರು ಸೇರಿದರೆ ಬಹುಬೇಗ ತಯಾರಾಗುತ್ತವೆ. ಈಗೆಲ್ಲ ವಿಭಕ್ತ ಕುಟುಂಬಗಳೇ ಹೆಚ್ಚು. ಮೇಲಾಗಿ ಇವನ್ನೆಲ್ಲ ಮಾಡುತ್ತ ಕೂರಲು ಬಹುತೇಕರಿಗೆ ಸಮಯವೂ ಇರುವುದಿಲ್ಲ. ಹಾಗಾಗಿ ಈ ಕುಡುಬುಗಳೂ ಈಗ ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಹಬ್ಬದ ಸಮಯದಲ್ಲಿ ಕೆಲ ಸ್ವೀಟ್ ಅಂಗಡಿಗಳಲ್ಲಿ ಕಡುಬು ಸಿಗುತ್ತದೆ.

ಇನ್ನು ಹಬೆ ಕಡುಬಿಗೆ ಬರೋಣ. ಹಬೆಯಲ್ಲಿ ಸಿಹಿ ಕಡುಬು, ಖಾರದ ಕಡುಬು ಎರಡನ್ನೂ ತಯಾರಿಸಬಹುದು. ಅಕ್ಕಿ ಹಿಟ್ಟಿನ ಪೇಸ್ಟ್ ತಯಾರಿಸಿಕೊಂಡು ಬೇಳೆ, ಕಾಯಿ ಮಿಶ್ರಿತ ಹೂರಣ ತುಂಬಿ ಹಬೆಯಲ್ಲಿ ಬೇಯಿಸಿದರೆ ಸಿಹಿ ಕಡುಬು ಸವಿಯಲು ಸಿದ್ಧವಾಗುತ್ತದೆ.

ಇನ್ನು ಫಿಟ್‌ನೆಸ್ ಪ್ರಿಯರಿಗೆ ಕಡಿಮೆ ಕ್ಯಾಲೊರಿಯ, ಕೊಬ್ಬು, ಕೊಲೆಸ್ಟ್ರಾಲ್ ಇಲ್ಲದ ಹಬೆ ಕಡುಬು ಆಪ್ತಮಿತ್ರನಂತೆ ಒದಗಿಬರುತ್ತದೆ. ಮಧುಮೇಹಿಗಳು ಸಿಹಿ ಕಡುಬಿನ ಬದಲು ಖಾರದ ಕಡುಬು ಸವಿದು ತೃಪ್ತಿ ಗೊಳ್ಳಬಹುದು. ಎಣ್ಣೆಯ ಪಸೆ ಇಲ್ಲದ, ತಯಾರಿಕೆಗೆ ಹೆಚ್ಚು ಸಾಮಗ್ರಿ ಬೇಡದ, ಆರೋಗ್ಯಪೂರ್ಣ ಕಡುಬು ಬಹುತೇಕರಿಗೆ ಇಷ್ಟದ ಬ್ರೇಕ್‌ಫಾಸ್ಟ್. ಅಕ್ಕಿ ರವೆ ಅಥವಾ ಅಕ್ಕಿ ಹಿಟ್ಟು ಮನೆಯಲ್ಲಿದ್ದರೆ ಧಾರಾಳವಾಗಿ ಹಬೆ ಕಡುಬನ್ನು ತಯಾರಿಸಬಹುದು. ಮಲೆನಾಡಿನ ಭಾಗದ ಮನೆಗಳಲ್ಲಿ ಹಸು ಕರು ಹಾಕಿತೆಂದರೆ ಮರುದಿನ ಗಿಣ್ಣದ ಜತೆ ಅಕ್ಕಿ ಕಡುಬು ಜತೆಯಾಗುತ್ತದೆ. ಅಲ್ಲದೆ ಹಲವರು ಮಕ್ಕಳನ್ನು ಆಕರ್ಷಿಸಲು ವಿವಿಧ ಆಕಾರಗಳಲ್ಲಿ ಕಡುಬು ತಯಾರಿಸುತ್ತಾರೆ.

ಮೋಡ ಕವಿದ ವಾತಾವರಣ, ಧಾರಾಕಾರ ಸುರಿಯುವ ಮಳೆ ಜತೆ ಹಬೆಯಲ್ಲಿ ಬೆಂದ ಬಿಸಿ ಬಿಸಿ ಕಡುಬನ್ನು ಕಾಯಿ ಚಟ್ನಿ, ಜೋನಿ ಬೆಲ್ಲದೊಂದಿಗೆ ಸವಿಯುತ್ತಿದ್ದರೆ ಉದರ ಇನ್ನಷ್ಟು ಹಿಗ್ಗುತ್ತದೆ.





ಔಷಧದ ಮಾಹಿತಿ ಇರಲಿ

ನಾವು ತೆಗೆದುಕೊಳ್ಳುವ ಔಷಧ ಮತ್ತು ಮಾತ್ರೆಯ ಬಗ್ಗೆ ಕನಿಷ್ಠ ಜ್ಞಾನ ಇಟ್ಟುಕೊಳ್ಳುವುದು ಅಗತ್ಯ. ಯಾವುದೇ ಔಷಧವಿರಲಿ ಎಷ್ಟು ಪ್ರಮಾಣದಲ್ಲಿ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆಯೂ ಸರಿಯಾದ ಮಾಹಿತಿಇರಲಿ. ಆಗಷ್ಟೆ ಅದರಿಂದಾಗುವ ಅಡ್ಡಪರಿಣಾಮಗಳಿಂದ ದೂರ ಉಳಿಯಬಹುದು.

ಆರಾಧನೆಯಿಂದ ಆನಂದದೆಡೆಗೆ



ರಶ್ಮಿ ಎಸ್

ವಿಜಯದಶಮಿಗೆ ವಿಜಯೋತ್ಸವ ಆಚರಿಸಿದ ನಂತರ ನಮಗೆಲ್ಲ ಮಹಾನವಮಿ ಮುಗಿದ್ಹಂಗ. ಆದ್ರ ಅಸುರರ ಜೊತಿಗೆ ಯುದ್ಧಕ್ಕ ಇಳಿದ ದೇವಿಗೆ ಮೈತುಂಬಾ ಗಾಯ ಆಗಿರ್ತಾವ. ದೇವಿ ಆರೈಕೆ ಮಾಡೋರು ಯಾರು?

ಗೆಲುವಿನ ಸಂಭ್ರಮದೊಳಗ ಆರಾಧನೆಯೇ ಹೆಚ್ಚು ಮುಂಚೂಣಿಯೊಳಗಿರುವಾಗ ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಸಮಾಜದವರು ದೇವಿಯ ಆರೈಕೆ ಮಾಡ್ತಾರ. ಅಗ್ದಿ ಅಕ್ಕರೆಯಿಂದ, ಆಸ್ಥೆಯಿಂದ ಮಾಡ್ತಾರ. ಮತ್ತ ಈ ಆಚರಣೆಗೆ ಭಂಡಾರ ಅಂತ ಈ ಕಡೆ ಕರೀತಾರ.

ಭಂಡಾರದ ನಂತರ ಮೊಸರನ್ನದ ಅಲಂಕಾರ ಮಾಡಿ, ದೇವಿ ತಣಿಯುವಂತೆ ಮಾಡ್ತಾರ. ಅಕ್ಕರೆಯ ಆರೈಕೆ ಖರೇಯಂದ್ರ ದೇವಿಗಷ್ಟೆ ಅಲ್ಲ, ಮನ್ಯಾಗಿನ ಮಹಿಳೆಯರಿಗೂ ಬೇಕು. ದೇವಿ ಉಪಾಸನೆಯ ಹಬ್ಬಗಳು ಬಂದಾಗಲೆಲ್ಲ, ಮನೆಯ ಹೆಣ್ಣುಮಕ್ಕಳಿಗೆ ಒಂದಷ್ಟು ಕೆಲಸಗಳ ಚೌಕಟ್ಟು ಹಾಕಿ, ಹಾಡಿ, ಹೊಗಳಿ, ಆ ಕೆಲಸಗಳಿಗೆ ನೀನೆ ಆಗಬೇಕು ಅನ್ನುವ ಅಲಿಖಿತ ಆದೇಶ ಕೊಟ್ಟೇಬಿಡ್ತಾರ.

ನಮಗ ಹಾರೈಸುವ ಹಾರೈಕೆಗಳೂ ಹಂಗೇ ಇರ್ತಾವ. ಇವೆಲ್ಲ ನೋಡಿ, ಮನುಷ್ಯ ಸಹಜ ಸ್ವಭಾವದ್ಹಂಗ ನಾವೂ ಹೊಗಳಿಕೆಗೆ ಕರಗಿ ಹೋಗ್ತೀವಿ. ಕೆಲವೊಮ್ಮೆ ಉಬ್ಬಿ ಹೋಗ್ತೀವಿ. ಈ ಆರಾಧನೆಯ ಚೌಕಟ್ಟಿನಿಂದಾಚೆ ಬಂದು ಚೂರು ಆನಂದಿಸುವ ಹಂಗ ಮಾಡೂದು ಹೆಂಗ?

> ಪೂಜೆ ಪುನಸ್ಕಾರಗಳು ದೇವಿಗಿದ್ದಂಗ, ಅಕ್ಕರೆ ಆರೈಕೆಗಳು ಜೀವಿಗಳಿಗಿರಲಿ. ಸ್ತ್ರೀತ್ವದ ಆನಂದಿಸುವಿಕೆ ಅಂದ್ರ, ಅಕ್ಕರೆಯಿಂದ ಕಾಣೂದು. ಕಾಳಜಿ ಮಾಡೂದು. ಹೊಗಳದೇ ಇದ್ರೂ ಚಿಂತಿಲ್ಲ. ಅವಹೇಳನ, ತೆಗಳಿಕೆ ತೋರದೇ ಇದ್ರ ಸಾಕು. ಬದುಕು ಅರಳ್ತದ.



ಬಹಳ ಸರಳವಿದೆ...

ಅಗ್ದಿ ಸರಳದ. ಸ್ತ್ರೀತ್ವದ ಸಂಭ್ರಮಿಸುವಿಕೆ ಈ ಆರಾಧನೆಗಿಂತಲೂ ಸರಳದ. ಧೈರ್ಯ ಲಕ್ಷ್ಮಿ ಅಂತ ಹೊಗಳೂ ಬದಲಿ, ಆತ್ಮವಿಶ್ವಾಸ ಮೂಡಿಸಿದ್ರ ಸಾಕು. ಮಹಿಳೆಯರ ಆತ್ಮಗೌರವಕ್ಕ ಧಕ್ಕೆ ತರದ್ಹಂಗ, ಇದ್ರ, ನೀವು ಬೆಳಗುವ ಆರತಿಗಿಂತಲೂ, ಹಚ್ಚುವ ಊದುಬತ್ತಿಗಿಂತಲೂ ಹೆಚ್ಚಿನ ಆಸ್ಥೆ ಒಂದು ಜೀವದ ಬಗ್ಗೆ ತೋರಿದಂತೆ.

ಬಹಳಷ್ಟು ಕಡೆ ಹೆಣ್ಣುಮಕ್ಕಳನ್ನು ಹಣಿಯಬೇಕೆಂದರೆ ಅವರ ಚಾರಿತ್ರ್ಯದ ಬಗ್ಗೆಯೇ ಮಾತನಾಡುತ್ತಾರೆ. ಮನೆಯ ಹೆಣ್ಣುಮಕ್ಕಳ ಚಾರಿತ್ರ್ಯದ ಬಗ್ಗೆ ಹಳಿಯುತ್ತ, ದೂಷಿಸುತ್ತ, ಅವಮಾನಿಸುತ್ತ, ಅನುಮಾನಿಸುತ್ತಲೇ ಗುಡಿಸುತ್ತ ಸುತ್ತುತ್ತಾರೆ. ತಮ್ಮೊಳಗಿನ ಹೊಲಸನ್ನು ಗುಡಿಸುತ್ತ, ಗುಡಿ ಸುತ್ತಬೇಕು. ಒಳಗೆಲ್ಲ ವಿಷವನ್ನಿರಿಸಿ ಕೊಂಡು, ಸುದೀರ್ಘ ಕಾಲ ತಪ ಮಾಡಿದರೇನು ಫಲು, ಜಪ ಮಾಡಿದರೇನು ಫಲ? ದೇವಿಯ ಹೆಸರಿನಲ್ಲಿ ಧ್ಯಾನ, ನೈವೇದ್ಯ ಮತ್ತು ಪೂಜೆ ಮಾಡಿದರೇನು ಫಲ?

ಸ್ತ್ರೀತ್ವದ ಆನಂದಿಸುವಿಕೆ ಅಂದ್ರ, ಅಕ್ಕರೆಯಿಂದ ಕಾಣೂದು. ಕಾಳಜಿ ಮಾಡೂದು. ಹೊಗಳದೇ ಇದ್ರೂ ಚಿಂತಿಲ್ಲ. ಅವಹೇಳನ, ತೆಗಳಿಕೆ ತೋರದೇ ಇದ್ರ ಸಾಕು. ಬದುಕು ಅರಳ್ತದ. ಆದ್ರ ಗ್ರಾಮೀಣ ಭಾಗದೊಳಗ ಬಹುತೇಕ ಮನಿಯೊಳಗಿನ ಸಮಸ್ಯೆಗಳಂದ್ರ ಮಹಿಳೆಯರನ್ನು ಜೀತದಾಳುಗಳಂತೆ ಕಾಣುವುದು. ಕುಟುಂಬದವರು ಜರೆಯುವುದು, ಮಹಿಳೆಯರು ಹಿಂಜರಿಯುವುದು ತೀರ ಸಾಮಾನ್ಯವಾಗಿದೆ.

ಆತ್ಮ ವಿಶ್ವಾಸ ತುಂಬಬೇಕು

ನವರಾತ್ರಿಯ ಬಣ್ಣಗಳಲ್ಲಿ ಮಿಂದೇಳುವಾಗ, ಬದುಕಿನ ಬಣ್ಣಗಳಲ್ಲಿ ನಾವು ಹೊಳೆದಿದ್ದೆಷ್ಟು? ಬೆಳೆದಿದ್ದೆಷ್ಟು? ಗಿಲೀಟು ಎಷ್ಟು ಅನ್ನುವ ಆತ್ಮಾವಲೋಕನ ಮಾಡಿಕೊಳ್ಳುತ್ತ ಇದ್ರ, ಬದುಕು ಸಂಭ್ರಮಿಸೂದು ಸರಳ ಆಗ್ತದ. ಸುಲಭ ಆಗ್ತದ.

ಆದ್ರ ಬದುಕು ಅಷ್ಟು ಸರಳಾದ್ರ ಸಸಾರ ಆಗೂದಿಲ್ಲ? ಇಂಥದ್ದೊಂದು ಪ್ರಶ್ನೆಯನ್ನಿರಿಸಿಕೊಂಡು ಒದ್ದಾಡುವ ಹಂಗ, ಎಲ್ಲಾರೂ ಬದುಕ್ತಾರ.

ಒಂದಷ್ಟು ಜಗಳಗಳನ್ನು ನೋಡಿದಾಗ, ಒಂದು ಸಾಮಾನ್ಯ ವಾಕ್ಯ ಆಗಾಗ ಪುನರಾವರ್ತನೆ ಆಗಿಕೊಂತ ಇರ್ತದ. 'ಏನು ಕಡಿಮಿ ಆಗೇದ? ಉಡಾಕ ಇಲ್ಲ, ತೊಡಾಕ ಇಲ್ಲ, ಉಣ್ಣಾಕ ಇಲ್ಲ.. ಬಂಗಾರ, ಬೆಳ್ಳಿ, ವಸ್ತ್ರ, ವೈಢೂರ್ಯ ಎಲ್ಲ ಇದ್ದೂ ಹಿಂಗ ಜಗಳ ಬರ್ತಾವಲ್ಲ ಅಂತ...

ಇಂಥ ವಸ್ತ್ರ ಒಡವಿ ಬದಲು, ಹೆಣ್ಮಕ್ಕಳಿಗೆ ಅಗ್ದಿ ಭೂಷಣ ಅನಿಸೂದದಂದ್ರ ಆತ್ಮವಿಶ್ವಾಸ. ಅಕಿ ಚಂದ ಅದಾಳ, ಛೊಲೊ ಅದಾಳ, ಅಕಿನ್ನ ಸಾಹಚರ್ಯದಿಂದ ಬದುಕು ಚಂದಾಗೇದ, ಸಾಂಗತ್ಯದೊಳಗ ಎಲ್ಲ ಕಷ್ಟಗಳೂ ಹಗುರಾಗ್ತಾವ ಅನ್ನುವ ಭಾವ ಇದ್ರ, ಅದಕ್ಕಿಂತ ಪರಮ ತೇಜಸ್ಸು ಇನ್ನೊಂದಿರೂದಿಲ್ಲ.

ದೇವರಿಗೆ ಹೂ ಮುಡಿಸಿ, ಗಂಧ ಲೇಪಿಸಿ, ಅಲಂಕರಿಸುವಂತೆ, ಮಹಿಳೆಯರ ಸಂಘರ್ಷಗಳನ್ನು ಸ್ವೀಕರಿಸಿ, ಗೌರವಿಸಿ, ಅವನ್ನು ಒಪ್ಪಿಸಿಕೊಂಡ್ರ ಅಕ್ಕರೆ ತಾನೇ ಮೂಡ್ತದ. ಅಕ್ಕರೆ ಮತ್ತು ಆರೈಕೆಗಳೆರಡೂ ಇದ್ದಾಗ, ಆರಾಧನೆಗಿಂತಲೂ ಮಿಗಿಲಾದ ಆನಂದ ಬದುಕಿನಾಗ ಹಾಸಿಹೊಕ್ತದ.

ಮಾಯುವ ಗಾಯಗಳಿಗೆ ಅರಿಸಿನದ ಲೇಪನ ಔಷಧಿ ಆಗ್ತದ. ಮಾಯದ ಗಾಯಗಳಿಗೆ ನಾವು ಕೊಡುವ ಸಮಯ ಮತ್ತು ಕಾಳಜಿನೆ ಮುಲಾಮಾಗ್ತದ. ಮತ್ತ ಹಿಂಗ ಮಾಡಾಕ ಯಾವ ಶೌರ್ಯನೂ ಬೇಕಾಗಿಲ್ಲ. ಬರೇ ಅಂತಃಕರುಣೆ ಬೇಕು.

ಪೂಜೆ ಪುನಸ್ಕಾರಗಳು ದೇವಿಗಿದ್ದಂಗ, ಅಕ್ಕರೆ ಆರೈಕೆಗಳು ಜೀವಿಗಳಿಗಿರಲಿ. ಆವಾಗ ಹಬ್ಬ ಹಬ್ಬ ಅನಸ್ತಾವ. ಇಲ್ಲಾಂದ್ರ, ಉಂಡು, ತಿಂದು, ಉಟ್ಟು, ತೊಟ್ಟು, ಬದುಕನ್ನ ಮೌಲ್ಯಗಳಿಂದಲ್ಲ, ಬೆಲೆಗಳಿಂದಲೇ ಅಳಿಯೂಹಂಗ ಆಗ್ತದ. ಜೀವ ಅಳಿಯೂದ್ರೊಳಗ ಈ ಹಬ್ಬದಾಚರಣೆ ಬದಲಾಗಲಿ. ದೇವ ಪ್ರಸನ್ನ ಆಗೂದು, ಜೊತೆಗಿದ್ದ ಜೀವ ಪ್ರಸನ್ನ ಆದಾಗ!!

ಹೆಣ್ಣಿನ ಲೈಂಗಿಕ ಅಗತ್ಯಗಳೇನು?

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

- **ಲೈಂಗಿಕತೆಯ ವಿಚಾರ ಬಂದಾಗ ಹೆಣ್ಣನ್ನು ಭೋಗದ ವಸ್ತುವಾಗಿ ನೋಡಲಾಗುತ್ತದೆ. ಆದರೆ ಹೆಣ್ಣಿಗೂ ಲೈಂಗಿಕ ಆಸೆಗಳಿವೆ ಎಂಬುದನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ನನಗೆ ನನ್ನ ಗಂಡನಿಂದ ಸರಿಯಾದ ತೃಪ್ತಿ ಸಿಗುತ್ತಿಲ್ಲ. ಪರಪುರುಷನ ಜೊತೆ ಸಂಬಧ ಬೆಳೆಸದೆ ಲೈಂಗಿಕ ತೃಪ್ತಿ ಅನುಭವಿಸುವುದು ಹೇಗೆ?**

ಹೆಸರು ಊರು ತಿಳಿಸಿಲ್ಲ

ಇಂತಹ ಪ್ರಶ್ನೆ ಕೇಳುವ ನಿಮ್ಮ ಧೈರ್ಯ ಮೆಚ್ಚುಗೆಗೆ ಅರ್ಹವಾಗಿದೆ. ಇದು ಹೆಚ್ಚಿನ ವಿವಾಹಿತ ಮಹಿಳೆಯರ ಸಮಸ್ಯೆ ಕೂಡ. ಹಾಗೆಯೇ ಸಾಕಷ್ಟು ಪುರುಷರ ಸಮಸ್ಯೆಯೂ ಹೌದು. ಇದಕ್ಕೆ ಪರಿಹಾರ ಹುಡುಕುವಾಗ ಸಮಸ್ಯೆಯ ಸಂಕೀರ್ಣತೆಯನ್ನು ಮೊದಲು ಅರ್ಥಮಾಡಿಕೊಳ್ಳಬೇಕು. ಮೊದಲನೆಯದಾಗಿ ಲೈಂಗಿಕತೆಯ ಕುರಿತಾಗಿ ಎಲ್ಲರಲ್ಲಿಯೂ ಸಾಕಷ್ಟು ಅಜ್ಞಾನ ತಪ್ಪುತಿಳಿವಳಿಕೆಗಳಿವೆ. ಹಾಗಾಗಿ ಯಾವುದೇ ವಿಚಾರಗಳು ಮುಕ್ತವಾಗಿ ಚರ್ಚೆಯಾಗುವುದೇ ಇಲ್ಲ. ಲೈಂಗಿಕಕ್ರಿಯೆ ಪೂರ್ಣ ಖಾಸಗಿಯಾಗಿರಬೇಕು ಎನ್ನುವುದೇನೋ ನಿಜ. ಹಾಗೆಂದು, ಅದರ ಕುರಿತಾದ ಮಾಹಿತಿಗಳೂ ಕೂಡ ಸಾರ್ವಜನಿಕ ಚರ್ಚೆಗೆ ಅನರ್ಹ ಎನ್ನುವ ಮನೋಭಾವದಿಂದಾಗಿ ಈ ಕ್ಷೇತ್ರದಲ್ಲಿ ಕೇವಲ ಗೊಂದಲ ಅತೃಪ್ತಿಗಳು ಸೇರಿಕೊಂಡಿವೆ.

ಎರಡನೆಯದಾಗಿ ಮದುವೆಯಂತಹ ದೀರ್ಘಕಾಲದ ಸಂಬಂಧದಲ್ಲಿ ಸಂತೃಪ್ತ ಲೈಂಗಿಕ ಜೀವನ ನಡೆಸುವುದಕ್ಕೆ ಸಾಕಷ್ಟು ಮಾಹಿತಿ ಮತ್ತು ಸಿದ್ಧತೆಗಳು ಬೇಕಾಗುತ್ತದೆ. ಮೂರನೆಯದಾಗಿ ಪುರುಷ ಪ್ರಧಾನ ವ್ಯವಸ್ಥೆ ಮಹಿಳೆಯರ ಲೈಂಗಿಕತೆಯನ್ನು ಕೀಳಾಗಿ ನೋಡುತ್ತಾ ಬಂದಿರುವುದರಿಂದ ಹೆಚ್ಚಿನ ಮಹಿಳೆಯರು ತಮ್ಮ ಅಗತ್ಯಗಳನ್ನು ಒಪ್ಪಿಕೊಂಡು ವ್ಯಕ್ತಪಡಿಸುವುದಿರಲಿ, ಅದನ್ನು ಗುರುತಿಸುವುದನ್ನೂ ಮರೆತುಬಿಟ್ಟಿದ್ದಾರೆ. ಇದರಿಂದ ಕೇವಲ ಮಹಿಳೆಯರಿಗೆ ಮಾತ್ರ ಅನ್ಯಾಯವಾಗಿದೆ ಎನ್ನುವಂತಿಲ್ಲ. ಸಮಾನತೆಯ ವಾತಾವರಣದಲ್ಲಿ ಸಂಗಾತಿಯಿಂದ ಪಡೆಯಬಹುದಾದ ಸಂಪೂರ್ಣ ಲೈಂಗಿಕ ಸುಖದಿಂದ ಪುರುಷನೂ ಕೂಡ ವಂಚಿತನಾಗಿ ಅತೃಪ್ತನಾಗಿಯೇ ಉಳಿದಿದ್ದಾನೆ. 'ಶಯನೇಷು ವೇಶ್ಯಾ……' ಎನ್ನುವ ಮಾತಿನಲ್ಲಿಯೇ ದಾಂಪತ್ಯವನ್ನು ಮತ್ತು ಲೈಂಗಿಕತೆಯನ್ನು ಕೀಳಗೈಯಲಾಗಿದೆ.

ಇನ್ನು ನಿಮ್ಮ ವಿಚಾರಕ್ಕೆ ಬರೋಣ. ಪ್ರಶ್ನೆಯಲ್ಲಿ ವಾಸ್ತವಾಂಶದ ಜೊತೆಗೆ ಆಳವಾದ ಬೇಸರ ಅಸಹಾಯಕತೆಗಳಿವೆ. ಪರಪುರುಷನ ಜೊತೆ ಸಿಗಬಹುದಾದ ಲೈಂಗಿಕ ಸುಖವನ್ನು ದಾಂಪತ್ಯದಲ್ಲಿ ಹುಡುಕ ಬೇಕಾದರೆ ಗಂಡ ಹೆಂಡತಿಯರ ಸಂಬಂಧ ಪ್ರೇಮಿಗಳ ನಡುವಿನ ಸಂಬಂಧದಷ್ಟು ಮುಕ್ತವಾಗಬೇಕಲ್ಲವೇ? ದಾಂಪತ್ಯದ ಸೌಹಾರ್ದತೆ ಎಂದರೆ ಭಿನ್ನಾಭಿಪ್ರಾಯ ಇಲ್ಲದ ಸ್ಥಿತಿಯಲ್ಲ. ಭಿನ್ನಾಭಿಪ್ರಾಯಗಳನ್ನು ಮುಕ್ತವಾಗಿ ಚರ್ಚೆಮಾಡಿ ಪರಿಹರಿಸಿಕೊಳ್ಳಬೇಕಾಗುತ್ತದೆ. ಇದು ಒಮ್ಮೆ ನಡೆಯುವ ಕ್ರಿಯೆಯಲ್ಲ. ದಿನನಿತ್ಯ ನಡೆಯಬೇಕಾದ ಪ್ರಕ್ರಿಯೆ. ಪ್ರಶ್ನೆಯಲ್ಲಿ ನಿಮ್ಮ ದಾಂಪತ್ಯದ ಕುರಿತಾಗಿ ಯಾವುದೇ ಮಾಹಿತಿಯಿಲ್ಲ. ಈ ನಿಟ್ಟಿನಲ್ಲಿ ಮೊದಲು ಯೋಚಿಸಿ. ನಿಮ್ಮ ಲೈಂಗಿಕ ಅಗತ್ಯಗಳು, ಆಯ್ಕೆಗಳು, ರುಚಿ ರೀತಿ ನೀತಿ ಎಲ್ಲದರ ಕುರಿತಾಗಿ ಮೊದಲು ನೀವೇ ಯೋಚಿಸಿ. ನಿಮಗೆ ಬೇಕಾಗಿರುವುದೇನು, ಎಂತಹ ಸ್ಪರ್ಶ ಹಿತಕರ, ಎಂತಹ ವಾತಾವರಣ ನಿಮ್ಮನ್ನು ಉದ್ರೇಕಿಸುತ್ತದೆ, ಎಂತಹ ಅನುಭವ ಸಂಪೂರ್ಣ ತೃಪ್ತಿ ನೀಡುತ್ತದೆ ಮುಂತಾದವುಗಳನ್ನು ಅರ್ಥಮಾಡಿಕೊಂಡು ಪತಿಯ ಜೊತೆ ನೀವು ಚರ್ಚೆಮಾಡಬೇಕಾಗುತ್ತದೆ.

ಇಲ್ಲಿ ಬಹಳಷ್ಟು ಮಹಿಳೆಯರು ಕಷ್ಟಪಡುತ್ತಾರೆ. ಪುರುಷಪ್ರಧಾನ ಸಮಾಜ ಮಹಿಳೆ ತನ್ನ ಲೈಂಗಿಕ ಆಯ್ಕೆಗಳ ಕುರಿತು ಮಾತನಾಡುವುದನ್ನು ಕೀಳಾಗಿ ನೋಡುತ್ತದೆ. ಹಾಗಾಗಿ ಮೊದಲು ಪತಿಯ ಬಳಿ ನನಗೆ ಸಂಪೂರ್ಣ ಸುಖವನ್ನು ನಿಮ್ಮಿಂದಲೇ ಪಡೆಯುವ ಉದ್ದೇಶವಿದೆ ಎಂದು ಹೇಳಿ. ನಂತರ ನಮ್ಮಿಬ್ಬರ ಸಂಬಂಧ ಹೀಗಿದ್ದರೆ ಇಬ್ಬರೂ ಹೆಚ್ಚು ಆನಂದಿಸಬಹುದು ಎಂದು ಮನವರಿಕೆ ಮಾಡಿಸಿ. ಜೊತೆಗೆ ಅವರ ಆಯ್ಕೆಗಳನ್ನು ಹೇಳಲು ಉತ್ತೇಜಿಸಿ.

ಇಲ್ಲಿ ಇಬ್ಬರೂ ನೆನಪಿಡಬೇಕಾದ ಒಂದು ಪ್ರಮುಖ ಅಂಶವೆಂದರೆ ಲೈಂಗಿಕ ಆಯ್ಕೆಗಳಲ್ಲಿ ಮೇಲು ಕೀಳುಗಳಿಲ್ಲ. ಇಬ್ಬರಿಗೂ ಆನಂದ ಕೊಡುವುದಾದರೆ ಎಲ್ಲವೂ ಸಮ್ಮತವೇ. ಹಾಗಾಗಿ ಸಂಗಾತಿಯ ಆಯ್ಕೆಗೆ ಒಪ್ಪಿಗೆ ಇಲ್ಲದಿದ್ದರೆ ತೊಂದರೆಯೇನಿಲ್ಲ. ಆದರೆ ಅದನ್ನು ಕೀಳಾಗಿ ನೋಡಬಾರದು. ಇಬ್ಬರಿಗೂ ಒಪ್ಪಿಗೆಯಾಗುವ ಆಯ್ಕೆಗಳನ್ನು ಮಾಡಿಕೊಳ್ಳುತ್ತಾ ಹೋದಾಗ ಲೈಂಗಿಕತೆ ಸಂಬಂಧಕ್ಕೆ ಹೊಸ ಸ್ವರೂಪವನ್ನು ಕೊಡುತ್ತದೆ.

ಕುತೂಹಲ, ಹುಡುಕಾಟ, ಹೊಸತನವನ್ನು ಕಳೆದುಕೊಂಡಾಗ ಲೈಂಗಿಕತೆ ನಿರಾಸಕ್ತಿ ಮೂಡಿಸುವುದು ಸಹಜ. ಮಾನವರ ಲೈಂಗಿಕತೆಯಲ್ಲಿ ಕೇವಲ ಇಬ್ಬರ ದೇಹ ಸ್ಪಂದಿಸುತ್ತಿರುವುದಿಲ್ಲ. ಗಂಡು ಹೆಣ್ಣಿನ ಸಂಪೂರ್ಣ ವ್ಯಕ್ತಿತ್ವ ತೊಡಗಿಕೊಂಡಿರುತ್ತದೆ. ಹಾಗಾಗಿ ಇಬ್ಬರೂ ಸೇರಿ ತಮಗೆ ಮಾತ್ರ ಹೊಂದುವ ಸುಖ ಸಾಮ್ರಾಜ್ಯವನ್ನು ತಾವೇ ಕಟ್ಟಿಕೊಳ್ಳಬೇಕಾಗುತ್ತದೆ.

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.

ಕುಂಬಳಕಾಯಿಯ ಸವಿ ರುಚಿ

ನಳಪಾಕ

ಸೌಖ್ಯ ಮೋಹನ್, ಪವಿತ್ರಾ ನವೀನ್

ಕುಂಬಳಕಾಯಿ ಅಥವಾ ಚೀನಿಕಾಯಿ– ಎಲ್ಲೆಡೆ ಧಾರಾಳವಾಗಿ ಲಭ್ಯವಾಗುವ ತರಕಾರಿ. ಇದು ಬೆಳೆಯುವುದು ಸುಲಭ. ಬಳಸುವುದು ಸುಲಭ. ಇದರಲ್ಲಿ 'ಎ' ವಿಟಮಿನ್ ಇರುತ್ತದೆ. ಇದರಿಂದ ಮಾಡಿದ ಕೆಲವು ರಸರುಚಿಗಳು ಇಲ್ಲಿವೆ.

ಸೂಪ್



ಬೇಕಾಗುವ ಸಾಮಗ್ರಿ: ಬೆಣ್ಣೆ 2 ಚಮಚ, ಬೆಳ್ಳುಳ್ಳಿ 3-4ಎಸಳು, ಉಪ್ಪು, ಕಾಳುಮೆಣಸಿನ ಪುಡಿ ಚೂರು, ಲವಂಗ 2, ಕ್ರೀಮ್, ಹೆಚ್ಚಿದ ಕುಂಬಳಕಾಯಿ 2 ದೊಡ್ಡ ಕಪ್, ಸಕ್ಕರೆ ಒಂದು ಚಮಚ(ಬೇಕಾದರೆ)

ಮಾಡುವ ವಿಧಾನ : ಮೊದಲು ಕುಂಬಳಕಾಯಿಯನ್ನು ಲವಂಗ ಹಾಕಿ ಬೇಯಿಸಿಕೊಳ್ಳಿ. ನಂತರ ಮಿಕ್ಸಿಗೆ ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ಒಂದು ದೊಡ್ಡ ಬಾಣಲೆಗೆ ಬೆಣ್ಣೆ ಹಾಕಿ, ಬೆಳ್ಳುಳ್ಳಿ ಹಾಕಿ ಹುರಿಯಿರಿ. ಅದಕ್ಕೆ ರುಬ್ಬಿದ ಮಿಶ್ರಣ ಹಾಕಿ ಕುದಿಸಿ. ಕುದಿಯುವಾಗ ಉಪ್ಪು, ಕಾಳುಮೆಣಸು ಮತ್ತು ಸಕ್ಕರೆ ಸೇರಿಸಿ. ಕುದಿಸಿ. ಇಳಿಸುವಾಗ ಮೇಲಿನಿಂದ ಕ್ರೀಮ್ ಹಾಕಿ ಬಡಿಸಿ. ಇದಕ್ಕೆ ಬೇರೆ ತರಕಾರಿಯನ್ನು ಸೇರಿಸಬಹುದು.

ಜಾಮೂನು



ಬೇಕಾಗುವ ಸಾಮಗ್ರಿ: ಕುಂಬಳಕಾಯಿ ಎರಡು ಹೋಳು, ಸಕ್ಕರೆ 2 ಕಪ್, ಏಲಕ್ಕಿ ಚೂರು, ಕೇಸರಿ ಸ್ವಲ್ಪ, ಕಾರ್ನ್ ಫ್ಲೋರ್ 3 ಚಮಚ, ಹಾಲಿನ ಪುಡಿ ಮೂರು ಚಮಚ

ಮಾಡುವ ವಿಧಾನ: ಮೊದಲು ಕುಂಬಳಕಾಯಿಯನ್ನು ಮೆತ್ತಗೆ ಬೇಯಿಸಿ ನೀರನ್ನು ತೆಗೆದು ಚೆನ್ನಾಗಿ ನುರಿದುಕೊಳ್ಳಿ. ಸ್ವಲ್ಪವೂ ಗಂಟಿರಬಾರದು. ಅದಕ್ಕೆ ಮೂರು ಚಮಚ ಕಾರ್ನ್ ಫ್ಲೋರ್, ಮೂರು ಚಮಚ ಹಾಲಿನ ಪುಡಿ ಸೇರಿಸಿ ಚೆನ್ನಾಗಿ ಕಲೆಸಿ ಹತ್ತು ನಿಮಿಷ ಮುಚ್ಚಿಡಿ. ಆಮೇಲೆ ಉಂಡೆ ಮಾಡಿ ಎಣ್ಣೆಯಲ್ಲಿ ಕರಿಯಿರಿ. ಸಕ್ಕರೆ ಪಾಕ ಮಾಡಿಟ್ಟುಕೊಳ್ಳಿ. ಅದಕ್ಕೆ ಏಲಕ್ಕಿ ಪುಡಿ, ಕೇಸರಿ ಹಾಕಿ. ಆಮೇಲೆ ಕರಿದ ಜಾಮೂನನ್ನು ಪಾಕಕ್ಕೆ ಹಾಕಿ. ಪಾಕ ಚೆನ್ನಾಗಿ ಹೀರಿಕೊಂಡ ಮೇಲೆ ಮೆತ್ತಗಾಗುತ್ತದೆ. ಜಾಮೂನು ಸಿದ್ಧ.

ಖಾರಾ ಇಡ್ಲಿ

ಬೇಕಾಗುವ ಸಾಮಗ್ರಿ: ಕುಂಬಳಕಾಯಿ ತುರಿದಿದ್ದು 2 ಕಪ್, ಇಡ್ಲಿ ರವೆ 2 ಕಪ್, ಹಸಿಮೆಣಸು 2, ಜೀರಿಗೆ ಅರ್ಧ ಚಮಚ, ಕಾಯಿತುರಿ ಒಂದು ಕಪ್, ಉಪ್ಪು, ಮೊಸರು ಒಂದು ಕಪ್, ತೆಳು ಅವಲಕ್ಕಿ ಒಂದು ಕಪ್, ಎಣ್ಣೆ 2 ಚಮಚ

ಮಾಡುವ ವಿಧಾನ : ಮೊದಲು ಇಡ್ಲಿ ರವೆಯನ್ನು ಸಣ್ಣ ಉರಿಯಲ್ಲಿ ಹುರಿದುಕೊಳ್ಳಿ. ತಣಿದ ನಂತರ ತೊಳೆದು ನೆನಸಿ, ನೀರನ್ನು ಬಸಿಯಿರಿ. ಅದಕ್ಕೆ ತುರಿದ ಕುಂಬಳಕಾಯಿ ತುರಿ, ಸಣ್ಣಗೆ ಹೆಚ್ಚಿದ ಹಸಿಮೆಣಸು, ಕಾಯಿತುರಿ, ಉಪ್ಪು ಹಾಕಿ. ತೆಳು ಅವಲಕ್ಕಿಯನ್ನು ತೊಳೆದು ಅದಕ್ಕೆ ಹಾಕಿ. ಕೊನೆಯಲ್ಲಿ ಮೊಸರು ಹಾಕಿ ಚೆನ್ನಾಗಿ ಇಡ್ಲಿ ಹಿಟ್ಟಿನ ಹದಕ್ಕೆಮಿಶ್ರ.ಎಣ್ಣೆ ಹಾಕಿ . ಒಂದು ಗಂಟೆ ಮುಚ್ಚಿಡಿ. ನಂತರ ಉಗಿಯಲ್ಲಿ ಇಡ್ಲಿ ತಯಾರಿಸಿ. ಹಸಿರು ಚಟ್ನಿಯೊಂದಿಗೆ ತಿನ್ನಿ.




ಐಸ್ ಕ್ರೀಮ್



ಬೇಕಾಗುವ ಸಾಮಗ್ರಿ: ಕುಂಬಳಕಾಯಿ ಹೆಚ್ಚಿದ್ದು ಒಂದು ಕಪ್, ಮಿಲ್ಕ್ ಮೇಡ್ ಒಂದು ಕಪ್, ತಾಜಾ ಕ್ರೀಮ್ ಒಂದು ಕಪ್, ವೆನಿಲ್ಲಾ ಎಸೆನ್ಸ್ ಒಣಹಣ್ಣುಗಳು ಬೇಕಾದರೆ

ಮಾಡುವ ವಿಧಾನ: ಮೊದಲು ಕುಂಬಳಕಾಯನ್ನು ಬೇಯಿಸಿಕೊಂಡು ತಣಿದ ನಂತರ ಮಿಕ್ಸಿಗೆ ಹಾಕಿ ಮಿಶ್ರಣವನ್ನು ತೆಗೆದಿಟ್ಟುಕೊಳ್ಳಿ. ಅಮುಲ್ ಕ್ರೀಮ್‌ನ್ನು ಚೆನ್ನಾಗಿ ಬ್ಲೆಂಡ್ ಮಾಡಿ ಅದಕ್ಕೆ ಮಿಲ್ಕ್ ಮೇಡ್ ಸೇರಿಸಿ. ಮತ್ತೆ ಬ್ಲೆಂಡ್ ಮಾಡಿ. ಅದಕ್ಕೆ ರುಬ್ಬಿದ ಮಿಶ್ರಣ ಹಾಗೂ ವೆನಿಲ್ಲಾ ಎಸೆನ್ಸ್ ಹಾಕಿ ಇನ್ನೊಮ್ಮೆ ಬ್ಲೆಂಡ್ ಮಾಡಿ 6 ಗಂಟೆ ಫ್ರಿಜ್ ನಲ್ಲಿಡಿ. ಇದನ್ನು ನಂತರ ಮತ್ತೊಮ್ಮೆ ಮಿಕ್ಸರ್‌ನಲ್ಲಿ ಹಾಕಿ. ನೊರೆ ನೊರೆ ಬರುವಷ್ಟು ತಿರುಗಿಸಬೇಕು. ನಿಮಗೆ ಬೇಕಾದರೆ ಒಣ ಹಣ್ಣುಗಳನ್ನು ಸೇರಿಸಿ 5ರಿಂದ 6 ಗಂಟೆ ಫ್ರೀಜರ್‌ನಲ್ಲಿಡಿ.

ಎಲ್ಲ ಮೊಗಕ್ಕೂ ಹೊಂದುವ ಕ್ಲಾಸಿಕ್ ಐಬ್ರೋ



ಫ್ಯಾಷನ್

ವನಿತಾ ಜೈನ್

ಹೂವಿನ ಎಸಳಿನಂತಹ ಹುಬ್ಬು ಎಂದು ಹಿಂದೆಲ್ಲಾ ಹೆಣ್ಣಿನ ಅಂದ ಹೊಗಳಲು ಬಳಸುತ್ತಿದ್ದ ರೂಪಕವದು. ತಿದ್ದಿ, ತೀಡಿದ ಹುಬ್ಬುಗಳು ಮುಖದ ಅಂದ ಹೆಚ್ಚಿಸುವುದರೊಂದಿಗೆ ಕಣ್ಣಿನ ರಕ್ಷಾ ಕವಚ ಕೂಡ ಹೌದು. ಹುಬ್ಬು ದಟ್ಟವಾಗಿದ್ದಷ್ಟು ಮೊಗದೇ ಅಂದವೇ ಬೇರೆ. ಇದೀಗ ಮೊಗದ ಆಕಾರಕ್ಕೆ ಅನುಗುಣವಾಗಿ, ಹುಬ್ಬಿನ ಕೂದಲುಗಳ ದಟ್ಟತೆ ಅಂಶಗಳನ್ನು ಪರಿಗಣಿಸಿ ಅವರ ಫ್ಯಾಷನ್ ಸೂತ್ರದನುಸಾರ ಶೇಪ್ ನೀಡಲಾಗುತ್ತಿದೆ. ಒಂದು ದಾರದ ಎಳೆಯಿಂದ ನಾನಾ ಆಕಾರ ಪಡೆದುಕೊಳ್ಳುವ ಹುಬ್ಬುಗಳಲ್ಲಿ ಕ್ಲಾಸಿಕ್ ಐಬ್ರೋಗಳು ಮಾತ್ರ ಎಲ್ಲಾ ವಯಸ್ಸಿನ ಮತ್ತು ಎಲ್ಲಾ ಮೊಗಕ್ಕೂ ಹೊಂದುತ್ತದೆ.

ಕ್ಲಾಸಿಕ್ ಐಬ್ರೋಗಳು ಇದೀಗ ಹೆಚ್ಚು ಟ್ರೆಂಡಿಂಗ್ ನಲ್ಲಿದ್ದು, ಇದರಲ್ಲಿ ಟೈಲ್ ಆರ್ಚ್, ಸೆಂಟರ್ ಆರ್ಚ್, ಹೈ ಆರ್ಚ್, ಮಿನಿಮಲ್ ಆರ್ಚ್, ನೇರ ಬ್ರೋಸ್, ಟೇಪರ್ಡ್ ಬ್ರೋಸ್, ರೌಂಡೆಡ್ ಬ್ರೋಸ್, ಶಾರ್ಟ್ ಆಂಡ್ ಥಿಕ್, ಎಸ್ ಆಕಾರದ ಬ್ರೋಸ್ ಇವು ಹೆಚ್ಚು ಜನಪ್ರಿಯಗೊಂಡಿದೆ. ಇದಲ್ಲದೇ ಫೆದರ್ಡ್ ಬ್ರೋಸ್ ಕೂಡ ಒಂದು ಮಟ್ಟಿಗೆ ಫೇಮಸ್ ಶೇಪ್. ಇದು 2020ರಲ್ಲಿ ಹೆಚ್ಚು ಜನರ ಬೇಡಿಕೆಯ ಐಬ್ರೋಸ್.

ಸಿನಿ ನಟಿಯರು ಕೂಡ ಕ್ಲಾಸಿಕ್ ಬ್ರೋಸ್ ನಲ್ಲಿಯೇ ತಮಗೆ ಬೇಕಾದ ಸ್ಟೈಲ್ ಅನ್ನು ಆರಿಸಿಕೊಳ್ಳುತ್ತಾರೆ. ಟಾಲಿವುಡ್ ನಟಿ ಸಮಂತಾ ನೇರ ಬ್ರೋಸ್ ಗೆ ಮೊರೆ ಹೋದರೆ, ಇನ್ನು ಬಾಲಿವುಡ್ ನಟಿ ದೀಪಿಕಾ ಪಡುಕೋಣೆ ಅವರದ್ದು, ಟೇಪರ್ಡ್ ಬ್ರೋಸ್. ಇನ್ನು ತಮನ್ನಾ ಅವರಿಗೆ ಮಿನಿಮಲ್ ಆರ್ಚ್ ಅವರ ಮೊಗಕ್ಕೆ ಒಗ್ಗುವ ಆಕಾರ. ಇನ್ನು ಎಲೆ, ಶೂ, ನವಿಲು ಗರೆ, ಹಾಕಿ ಬ್ಯಾಟ್ ರೂಪದಲ್ಲಿಯೂ ಐಬ್ರೋಸ್ ಮಾಡಿಸಿಕೊಳ್ಳುವವರೂ ಇದ್ದಾರೆ ಅನ್ನಿ.

ಯಾವ ಮುಖಕ್ಕೆ ಯಾವ ಐಬ್ರೋ

ವೃತ್ತಕಾರಾದ ಮೊಗದವರಿಗೆ ಸ್ಟ್ರಕ್ಚರ್ಡ್ ಬ್ರೋ ವಿತ್ ಆಂಗಲ್ಡ್ ಆರ್ಚಸ್ ಮತ್ತು ಲಾಂಗರ್ ಎಂಡ್ಸ್, ವೆಲ್ ಬ್ಯಾಲನ್ಸ್ಡ್ ಮತ್ತು ಕಾಂಟೋರ್ಡ್ ಬ್ರೋಸ್, ಮೊಟ್ಟೆಯಾಕಾರದ ಮುಖಗಳಿಗೆ, ಸಾಫ್ಟ್ ರೌಂಡೆಡ್ ಆರ್ಚ್ ಹೃದಯಾಕಾರದ ಮೊಗಗಳಿಗೆ, ಬ್ರೋಸ್ ವಿತ್ ಆಂಗಲ್ಡ್ ಪೀಕ್ ಚೌಕಾಕಾರದ ಮೊಗಗಳಿಗೆ ಶಾರ್ಟರ್ ಬ್ರೋಸ್ ಉದ್ದನೆಯ ಮೊಗದವರಿಗೆ ಲೈನರ್ ಬ್ರೋ ಶೇಪ್ ಡೈಮಂಡ್ ಶೇಪ್ ಮೊಗದವರಿಗೆ ಒಗ್ಗುವ ಐಬ್ರೋ ಆಕಾರಗಳು ಎನ್ನುತ್ತಾರೆ ಸೌಂದರ್ಯ ತಜ್ಞರು.

ಕೆಲವರಿಗೆ ಐಬ್ರೋ ಇರುವುದಿಲ್ಲ ಮತ್ತು ತೀರಾ ಕಡಿಮೆ ಇರುತ್ತದೆ. ಇನ್ನು ಕೆಲವರಿಗೆ ಯಾವಾಗಲೂ ಐಬ್ರೋಸ್ ಆಕಾರ ಕೊಡಿಸಿಕೊಳ್ಳುವುದು ಕಿರಿಕಿರಿ. ಇಂತಹವರಿಗಾಗಿಯೇ ಐಬ್ರೋಸ್ ಲ್ಯಾಮಿನೇಶನ್ ಕೂಡ ಟ್ರೆಂಡಿಂಗ್ ನಲ್ಲಿದೆ. ಇದನ್ನು ಮಾಡಿಸಿಕೊಂಡರೆ ಆರರಿಂದ ಎಂಟು ವಾರಗಳವರೆಗೆ ಐಬ್ರೋಸ್ ಹಾಳಾಗದು ಎನ್ನಲಾಗುತ್ತದೆ. ಜೊತೆಗೆ ಐಬ್ರೋ ಟ್ರಾನ್ಸ್ ಪ್ಲಾಂಟ್ ಶಸ್ತ್ರಚಿಕಿತ್ಸೆಯೂ ಜಾರಿಯಲ್ಲಿದ್ದು, ಇದರ ಮುಖೇನವು ಕೂಡ ನಿಖರ, ಇಷ್ಟವಾದ ಐಬ್ರೋ ಶೇಪ್ ಪಡೆದುಕೊಳ್ಳಬಹುದು. 2022ರಲ್ಲಿ ಬ್ರೋ ಲ್ಯಾಇನೇಶನ್, ಐಬ್ರೋ ಟ್ರಾನ್ಸ್ ಪ್ಲಾಂಟ್ ಜೊತೆಗೆ, ನ್ಯಾಚುರಲ್ ಬ್ರೋ, ಫ್ಲಫಿ ಬ್ರೋ, ಫೆದರ್ ಬ್ರೋಸ್, ಬ್ಲೀಚ್ಡ್ ಬ್ರೋ, ನೇರ ಬ್ರೋ ಹೆಚ್ಚು ಚಾಲ್ತಿಯಲಿದ್ದು, ಹೇರ್ ಕಲರಿಂಗ್ ಜೊತೆಗೆ ಕೂದಲಿನ ಬಣ್ಣಕ್ಕೆ ಅನುಗುಣವಾಗಿ ಐಬ್ರೋಗಳಿಗೂ ಇಷ್ಟವಾದ ಬಣ್ಣ ಹಾಕಿಕೊಂಡು ಮಿಂಚಬಹುದು. ವ್ಯಾಕ್ಸ್‌ನ ಮೂಲಕ ಈಗೀಗ ಐಬ್ರೋ ಶೇಪ್ ನೀಡಲಾಗುತ್ತಿದೆ.

ಐಬ್ರೋ ಟಿಂಟ್ ಅಥವಾ ಟಿಂಟಿಂಗ್ (ಐಬ್ರೋ ಕಲರಿಂಗ್) ಕೂಡ ಇದೀಗ ಚಾಲ್ತಿಯಲಿದ್ದು, ಮಾರುಕಟ್ಟೆಯಲ್ಲಿ ಕಲರಿಂಗ್ ಲಭ್ಯವಿದೆ. ಕಂದು, ಗಾಢಕಂದು ಬಣ್ಣ, ಕಪ್ಪು, ನೀಲಿ ಹೀಗೆ ನಾನಾ ಬಣ್ಣಗಳಿಂದ ನಿಮ್ಮ ಐಬ್ರೋಗಳನ್ನು ಕಲರ್ ಫುಲ್ ಮಾಡಿಕೊಳ್ಳಬಹುದು. ಇದನ್ನು ಮನೆಯಲ್ಲೇ ಮಾಡಿಕೊಳ್ಳಬಹುದು. ಇದು ತಾತ್ಕಾಲಿಕವಾಗಿದ್ದು, ಒಮ್ಮೆ ಹಚ್ಚಿದರೆ ಆರರಿಂದ ಸುಮಾರು 2 ವರ್ಷಗಳವರೆಗೆ ಆ ಬಣ್ಣವನ್ನು ಕಾಯ್ದುಕೊಳ್ಳಬಹುದು.

ಚಿತ್ರಕಲಾ ಪರಿಷತ್ತಿನಲ್ಲಿ ಮೈಸೂರು ಶೈಲಿ ಚಿತ್ರಕಲೆ



ಎನ್. ಜಗನ್ನಾಥ ಪ್ರಕಾಶ್

ದಕ್ಷಿಣ ಭಾರತದ ಸಾಂಪ್ರದಾಯಿಕ ಚಿತ್ರಗಳೆಂದರೆ ತಂಜಾವೂರು ಶೈಲಿ ಎಂದೇ ಕಲಾಪ್ರೇಮಿಗಳು ಭಾವಿಸಿದ್ದ ಪರಿಸ್ಥಿತಿ ಇತ್ತು. ಆದರೆ ಮೈಸೂರು ಶೈಲಿ ಸಾಂಪ್ರದಾಯಿಕ ಚಿತ್ರಕಲೆಯೂ ಇದೆ ಎಂಬುದು ಇತ್ತೀಚೆಗೆ ಮನವರಿಕೆಯಾಗುತ್ತಿದೆ.

ವಿಜಯನಗರದ ಅರಸರ ಕಾಲದಿಂದಲೇ ನಮ್ಮದೇ ಶೈಲಿಯ ಸಾಂಪ್ರದಾಯಿಕ ಚಿತ್ರಕಲೆ ಅಸ್ತಿತ್ವದಲ್ಲಿತ್ತು. ಆರಂಭದಲ್ಲಿ ಗೋಡೆಗಳ ಮೇಲೆ ಅರಳುತ್ತಿದ್ದ ಈ ಚಿತ್ರಕಲೆ ನಂತರ ಮರದ ಹಲಗೆಗೆ ವರ್ಗವಾಯಿತು. ತರುವಾಯ ಕಾಗದ, ಆಮೇಲೆ ಬಟ್ಟೆ ಮೇಲೂ ಚಿತ್ರಿಸಲ್ಪಡುತ್ತಿತ್ತು.



ಮೈಸೂರು ಶೈಲಿ ಚಿತ್ರಗಳು ಕಾಲಕಾಲಕ್ಕೆ ಬದಲಾವಣೆ ಕಂಡಿವೆ. ದೇವಾನುದೇವತೆಗಳು, ಖನಿಜ ವರ್ಣಗಳಿಂದ ರೂಪುಗೊಳ್ಳಲು ಶುರುವಾದ ನಂತರದ ಹಂತದಲ್ಲಿ ಕನ್ನಡ ನಾಡಿನ ಜನ ಜೀವನ ಸಂಸ್ಕೃತಿಯು ಚಿತ್ರಗಳಲ್ಲಿ ಪ್ರತಿಬಿಂಬಿತವಾಗಿವೆ.

ವಿಜಯನಗರ ಸಾಮ್ರಾಜ್ಯದ ಅಂತ್ಯದ ಬಳಿಕೆ ಈ ವಿಶಿಷ್ಟ ಚಿತ್ರಕಲೆ ಮತ್ತೆ ಹೆಚ್ಚಾಗಿ ಕಾಣಿಸಿಕೊಂಡಿದ್ದು ಮೈಸೂರು ಒಡೆಯರ ಆಳ್ವಿಕೆಯ ಕಾಲದಲ್ಲಿ.

ಮುಮ್ಮಡಿ ಕೃಷ್ಣರಾಜ ಒಡೆಯರ್ ಆಡಳಿತ ಕಾಲದಲ್ಲಿ ಈ ಕಲೆಗೆ ಹೆಚ್ಚು ಪ್ರೋತ್ಸಾಹ ಸಿಕ್ಕಿತು. ಹೀಗಾಗಿ ಮೈಸೂರು ಶೈಲಿ ಚಿತ್ರಗಳು ಅರಮನೆಗಳಲ್ಲಿ, ದೇವಾಲಯಗಳಲ್ಲಿ ನಾಗರಿಕರ ಮನೆಗಳಲ್ಲಿ ಕಂಡುಬರಲು ಸಾಧ್ಯವಾಯಿತು.

18 ಮತ್ತು 19ನೇ ಶತಮಾನಗಳಲ್ಲಿ ಉನ್ನತ ಸ್ಥಾನಕ್ಕೆ ಏರಿದ ಮೈಸೂರು ಶೈಲಿ ಚಿತ್ರಕಲೆ 20ನೇ ಶತಮಾನದ ಪೂರ್ವಾರ್ಧದಲ್ಲಿ ಕ್ಷೀಣಿಸತೊಡಗಿತು. ಇದಕ್ಕೆ ಬಹುಮುಖ್ಯ ಕಾರಣ ಬ್ರಿಟಿಷ್ ಮಾದರಿಯ ಚಿತ್ರಕಲೆಯ ಪ್ರಭಾವ. ಬ್ರಿಟಿಷರು ಸ್ಥಾಪಿಸಿದ್ದ ಕಲಾಶಾಲೆಗಳಲ್ಲಿ ಆಂಗ್ಲ ಮಾದರಿ ಚಿತ್ರಕಲೆಗೆ ಹೆಚ್ಚಿನ ಒತ್ತು ಸಿಕ್ಕಿದ್ದರಿಂದ ನಮ್ಮ ಕಲಾವಿದರು ಅದನ್ನೇ ಕಲಿತಿದ್ದರಿಂದ, ನಮ್ಮ ನೆಲದ ಸಾಂಪ್ರದಾಯಿಕ ಕಲೆ, ಕಲೆಗಾರರು ಹಿಂದೆ ಸರಿಯಬೇಕಾದ ಪರಿಸ್ಥಿತಿ ಉಂಟಾಯಿತು.

ಕೊನೆಗೆ, ಮೈಸೂರು ಅರಮನೆ, ಕೆಲವು ಖಾಸಗಿ ಮನೆಗಳಲ್ಲಿ ಭಜನಾಮಂದಿರಗಳಲ್ಲಿ ಮಾತ್ರ ಈ ಸಾಂಪ್ರದಾಯಿಕ ಶೈಲಿಯ ಚಿತ್ರಗಳು ಉಳಿದುಕೊಂಡವು. ಹೊಸದಾಗಿ ಈ ಚಿತ್ರಗಳ ರಚನೆಗೆ ಅವಕಾಶಗಳೂ ಕಡಿಮೆಯಾದವು. ಯಾರೂ ಅದರತ್ತ ಗಮನ ನೀಡದಂತಹ ವಾತಾವರಣವೂ ಇದ್ದಿದ್ದರಿಂದ, ನಮ್ಮ ಶೈಲಿ ತೆರೆಮರೆಗೆ ಸರಿಯಿತು.

ಸರಳ ರೇಖೆಗಳನ್ನು ಸೃಜಿಸಿ ಸೂಕ್ಷ್ಮವಿನ್ಯಾಸದಿಂದ ಚಿತ್ರಗಳನ್ನು ಅಲಂಕಾರಗೊಳಿಸುವ ಪ್ರಾವೀಣ್ಯವುಳ್ಳ ಕಲಾವಿದರೂ ಕೆಲಸವಿಲ್ಲದೇ ಪ್ರೋತ್ಸಾಹವೂ ಇಲ್ಲದೇ ಕೈಕಟ್ಟಿ ಕೂತಿದ್ದರಿಂದ ಮೈಸೂರು ಶೈಲಿ ಚಿತ್ರಕಲೆಯ ಚಟುವಟಿಕೆಗಳು ಮಸುಕಾದವು.

ಕಲಾಕೃತಿಗಳ ಸಂಗ್ರಹ

ಕರ್ನಾಟಕ ಚಿತ್ರಕಲಾ ಪರಿಷತ್ತು ಸ್ಥಾಪನೆಗೊಂಡ ಮೇಲೆ ನಮ್ಮ ನೆಲದ ನೈಜ ಕಲೆಯತ್ತ ಗಮನ ಹರಿಯಲು ಸಾಧ್ಯವಾಯಿತು.



ಕಲಾ ಕುಸುರಿ

ಪರಿಷತ್ತಿನ ಪ್ರಧಾನ ಕಾರ್ಯದರ್ಶಿಗಳು ಕಲಾವಿದರೂ ಆಗಿದ್ದ ಎಂ.ಎಸ್. ನಂಜುಂಡರಾಯರು ಮೈಸೂರು ಪ್ರಾಂತ್ಯದುದ್ದಕ್ಕೂ ಚದುರಿಹೋಗಿದ್ದ ಕಲಾಕೃತಿಗಳನ್ನು ತಮ್ಮ ಸಹಕಲಾವಿದರೊಂದಿಗೆ ಪತ್ತೆ ಹಚ್ಚಿ ಸಂಗ್ರಹಿಸುವ ಕಾರ್ಯಕ್ಕೆ ಕೈ ಹಾಕಿದರು.

ಸಿರಿಮನೆ ಗುರುಮನೆಗಳಲ್ಲಿದ್ದ ಮೈಸೂರು ಶೈಲಿಯ ಚಿತ್ರ ಕೃತಿಗಳನ್ನು ಒಟ್ಟು ಮಾಡಿ, ಚಿತ್ರಕಲಾ ಪರಿಷತ್ತಿನ ಸಮುಚ್ಚಯದಲ್ಲಿ ಸಾಂಪ್ರದಾಯಿಕ ಕಲಾಕೃತಿಗಳಿಗೆಂದು ಶಾಶ್ವತ ಗ್ಯಾಲರಿಯನ್ನು ಪ್ರಾರಂಭಿಸಿದ ಪರಿಣಾಮ. ದೇಶವಿದೇಶಗಳ ಕಲಾವಿದ ಕಲಾಸಕ್ತರು, ವಿವಿಧ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಅಧ್ಯಯನಕ್ಕೆಂದು ಚಿತ್ರಕಲಾ ಪರಿಷತ್ತಿಗೆ ಬರುವಂತಾಗಿದೆ.

ಮೈಸೂರು ಶೈಲಿಯ ಕಲೆಯ ಪುನರುಜ್ಜೀವನಕ್ಕೆಂದು ಹೆಸರಾಂತ ಸಾಂಪ್ರದಾಯದ ಕಲಾವಿದ ವೈ. ಸುಬ್ರಮಣ್ಯರಾಜು ಅವರ ಮುಂದಾಳುತ್ವದಲ್ಲಿ ಆಸಕ್ತರಿಗೆ ತರಬೇತಿ ನೀಡುವುದನ್ನು ಚಿತ್ರಕಲಾ ಪರಿಷತ್ತು ಶುರು ಮಾಡಿತು.



ಚಿತ್ರಕಲಾ ಪರಿಷತ್ತಿನಲ್ಲಿ

ಮೈಸೂರು ಶೈಲಿ ಚಿತ್ರಕೃತಿಗಳನ್ನು ಒಪ್ಪ ಓರಣವಾಗಿ ಇಟ್ಟಿರುವ ಚಿತ್ರಕಲಾ ಪರಿಷತ್ತಿನ ಮ್ಯೂಸಿಯಂನಲ್ಲಿ ನೂರಕ್ಕೂ ಹೆಚ್ಚು ಆಕರ್ಷಕ ಕೃತಿಗಳಿವೆ.

ದೇವಾನುದೇವತೆಗಳ ಚಿತ್ರಗಳು, ರಾಜವಂಶ ಪ್ರಮುಖರ ಚಿತ್ರಗಳು, ಮೈಸೂರು ಒಡೆಯರ ವಂಶಾವಳಿ ಕೃತಿಗಳು ಮೈಸೂರು ಚಿತ್ರಶೈಲಿಯ ಪ್ರಾತಿನಿಧಿಕ ಚಿತ್ರಗಳು ಇಲ್ಲಿವೆ.

19ನೇ ಶತಮಾನದಲ್ಲಿ ರಚಿಸಲಾದ ಪುರಾಣ – ಇತಿಹಾಸ ಒಳಗೊಂಡ 109 ಬೃಹತ್ ಕೃತಿಗಳು ಎರಡು ಗ್ಯಾಲರಿಗಳಲ್ಲಿವೆ.

ಆಸಕ್ತರಿಗೆ ಅಧ್ಯಯನ ಕೈಗೊಳ್ಳುವವರಿಗೆ ಅಮೂಲ್ಯವೆನಿಸುವ ಈ ಕೃತಿಗಳಿರುವ ಚಿತ್ರಕಲಾ ಪರಿಷತ್ತಿಗೆ ಯುನೆಸ್ಕೊ 'ಶೈಕ್ಷಣಿಕ ತಾಣ'ದ ಮಾನ್ಯತೆ ನೀಡಿದೆ.

ಚಿತ್ರಕಲಾಪರಿಷತ್ತಿನ ಗ್ಯಾಲರಿಯಲ್ಲಿ ಕಾಣಸಿಗುವ ಬಹುತೇಕ ಎಲ್ಲಾ ಕೃತಿಗಳು ವಿಶೇಷವಾಗಿ ಸಂಸ್ಕರಿಸಲಾದ ಕಾಗದದ ಮೇಲೆ ಖನಿಜ ಬಣ್ಣಗಳು, ಸಸ್ಯಜನ್ಯ ಬಣ್ಣಗಳನ್ನು ಬಳಸಿ ಕೃತಿಗಳನ್ನು ರಚಿಸಲಾಗಿದೆ. ಇದರಲ್ಲಿ ಬಂಗಾರದ ಪುಡಿಯನ್ನು ಉಪಯೋಗಿಸಿರುವುದು ಉಲ್ಲೇಖಾರ್ಹ.

ಸಿನಿ ಹನಿ

'ಬನಾರಸ್' ವಿತರಿಸಲಿದೆ ಮಲಕುಪ್ಪಡಮ್



'ಬನಾರಸ್' ಸೋನಲ್ ಮೋಂತೆರೊ, ಜೈದ್ ಖಾನ್

ಝೈದ್ ಖಾನ್ ನಾಯಕನಾಗಿ ನಟಿಸಿರುವ 'ಬನಾರಸ್' ಬಿಡುಗಡೆಗೆ ದಿನಗಣನೆ ಆರಂಭವಾಗಿದೆ. ಚಿತ್ರವನ್ನು ಕೇರಳದ ಖ್ಯಾತ ವಿತರಣಾ ಸಂಸ್ಥೆ ಮಲಕುಪ್ಪಡಮ್ ವಿತರಿಸಲಿದೆ. ಈ ಸಂಸ್ಥೆ ಹಲವಾರು ಹಿಟ್ ಸಿನಿಮಾಗಳನ್ನು ಕೇರಳದಲ್ಲಿ ಬಿಡುಗಡೆಗೊಳಿಸಿದೆ.

ದೇಶಾದ್ಯಂತ ಉದ್ಯಮಿಯಾಗಿ ದೊಡ್ಡ ಹೆಸರು ಮಾಡಿರುವ ಥಾಮಸ್ ಆಂಟೋನಿ, ತೋಮಿಚನ್ ಮುಪಕುಪ್ಪದಮ್ ಎಂದೇ ಹೆಸರುವಾಸಿಯಾಗಿರುವವರು. ಅವರು ಉದ್ಯಮಿಯಾಗಿದ್ದುಕೊಂಡೇ ಮಲಕುಪ್ಪಡಮ್ ಫಿಲಂಸ್ ಮೂಲಕ ಹಲವಾರು ಚಿತ್ರಗಳನ್ನು ನಿರ್ಮಾಣ ಮಾಡಿದ್ದಾರೆ. ಸಂಸ್ಥೆಯ ಪರಿಣತರು ಚಿತ್ರದ ಮೇಕಿಂಗ್, ಕಥಾವಸ್ತು ಸಹಿತ ಗುಣಮಟ್ಟ ಪರಿಶೀಲನೆ ನಡೆಸಿ ಖರೀದಿಗೆ ಸಮ್ಮತಿಸಿದ್ದಾರೆ. ದೊಡ್ಡ ಮೊತ್ತಕ್ಕೆ 'ಬನಾರಸ್' ವಿತರಣಾ ಹಕ್ಕುಗಳ ಖರೀದಿ ನಡೆದಿದೆ. ಹೀಗಾಗಿ ಚಿತ್ರ ಕರ್ನಾಟಕ, ಕೇರಳದಲ್ಲಿ ಹೊಸ ಭರವಸೆ ಹುಟ್ಟು ಹಾಕಿದೆ.

'ಯೆಲ್ಲೋ ಗ್ಯಾಂಗ್ಸ್' ತೆರೆಗೆ ರೆಡಿ



ದೇವ್ ದೇವಯ್ಯ, ಅರ್ಚನಾ ಕೊಟ್ಟಿಗೆ

ವಿಭಿನ್ನ ಸ್ಟುಡಿಯೋಸ್ ಅವರು ಕೀಲೈಟ್ಸ್ ಮತ್ತು ವಾಟ್ ನೆಕ್ಸ್ಟ್ ಮೂವೀಸ್ ಅವರ ಸಹಯೋಗದಲ್ಲಿ ನಿರ್ಮಿಸುತ್ತಿರುವ ಕ್ರೈಂ-ಥ್ರಿಲ್ಲರ್ ಕತೆಯ 'ಯೆಲ್ಲೋ ಗ್ಯಾಂಗ್ಸ್' ಸಿನಿಮಾ ಇದೇ ನ. 11ಕ್ಕೆ ಬಿಡುಗಡೆಯಾಗಲಿದೆ.

ಚಿತ್ರಕ್ಕೆ ರವೀಂದ್ರ ಪರಮೇಶ್ವರಪ್ಪ ಅವರ ರಚನೆ ಮತ್ತು ನಿರ್ದೇಶನವಿದೆ. ಸುಜ್ಞಾನ್ ಅವರ ಛಾಯಾಗ್ರಹಣ, ರೋಹಿತ್ ಸೋವರ್ ಅವರ ಸಂಗೀತ, ಸುರೇಶ್ ಆರ್ಮುಗಂ ಅವರ ಸಂಕಲನವಿದೆ. ರವೀಂದ್ರ ಪರಮೇಶ್ವರಪ್ಪ ಮತ್ತು ಪ್ರವೀಣ್ ಕುಮಾರ್ ಜಿ ಅವರು ಸಂಭಾಷಣೆ ಬರೆದಿದ್ದಾರೆ.

ಮನೋಜ್ ಪಿ., ಜಿ.ಎಂ.ಆರ್. ಕುಮಾರ್(ಕೆವಿಜಿ), ಜೆ.ಎನ್.ವಿ ಎಂಟರ್‌ಟೇನರ್ಸ್ ಮತ್ತು ಡಿ.ಎಸ್. ಪ್ರವೀಣ್ ಅವರು ಸಿನಿಮಾದ ಸಹ ನಿರ್ಮಾಪಕರು. ಲೋಕೇಶ್ ಹಿತ್ತಲಕೊಪ್ಪ ಅವರ ಕಾರ್ಯಕಾರಿ ನಿರ್ಮಾಣ ಮತ್ತು ನಿರಂಜನ್ ಹಾವಣಗಿ ಅವರ ಹಣಕಾಸು ನಿರ್ವಹಣೆ ಸಿನಿಮಾಕ್ಕಿದೆ. ದೇವ್ ದೇವಯ್ಯ, ಅರ್ಚನಾ ಕೊಟ್ಟಿಗೆ, ಬಲ ರಾಜ್ವಾಡಿ, ಪ್ರದೀಪ್ ಪೂಜಾರಿ, ಅರುಣ್, ಸತ್ಯ, ನಾಟ್ಯ ರಂಗ, ವಿಠಲ್ ಪರೀಟ, ಉಮ್ಮತ್ತಾಲ್ ಸತ್ಯ, ವಿನೀತ್ ಕಟ್ಟಿ, ನಂದ ಗೋಪಾಲ್, ದಯಾ ನೀನಾಸಂ, ಹರ್ಷ, ಪ್ರವೀಣ್ ಕೆಬಿ, ರವಿ ಜಿಗಣಿ, ಮಲ್ಲಿಕಾರ್ಜುನ್, ಮಧುಸೂದನ್, ಪವನ್ ನಟಿಸಿದ್ದಾರೆ.

'ರಾಂಚಿ' ಹಲವು ಕುತೂಹಲದ ಕಥಾನಕ



ಆರತಿ ನಾಯರ್, ಪ್ರಭು ಮುಂಡ್ಕರ್

ಮೋಸದ ಕರೆಗಳು ಹೇಗೆಲ್ಲ ಇರುತ್ತವೆ ಮತ್ತು ಅಮಾಯಕರು ಹೇಗೆ ವಂಚನೆಗೆ ಒಳಗಾಗುತ್ತಾರೆ ಎಂದು ಹೇಳಿದೆ ರಾಂಚಿ. ಈ ಚಿತ್ರ ನ. 11ರಂದು ತೆರೆಗೆ ಬರಲಿದೆ.

ರುದ್ರಾನಂದ ಆರ್.ಎನ್. ಹಾಗೂ ಅರುಣ್ ಕುಮಾರ್ ಎನ್. ನಿರ್ಮಾಣದ, ಶಶಿಕಾಂತ್ ಗಟ್ಟಿ ನಿರ್ದೇಶನದ, ನೈಜಘಟನೆ ಆಧಾರಿತ 'ರಾಂಚಿ' ಚಿತ್ರದ ಟೀಸರ್ ಸಾಕಷ್ಟು ಕುತೂಹಲ ಹುಟ್ಟಿಸಿದೆ.

ಈ ಕಥೆಗೆ ಮೂಲವೇನು ಎಂಬ ಪ್ರಶ್ನೆಗೆ ನಿರ್ದೇಶಕರು ಹೇಳಿದ್ದಿಷ್ಟು. 'ನಾನು ಐಪಿಸಿ ಸೆಕ್ಷನ್–300 ಎಂಬ ಸಿನಿಮಾ ನಿರ್ದೇಶನ ಮಾಡುತ್ತಿದ್ದೆ. ಆಗ ನನಗೆ ರಾಂಚಿಯಿಂದ ಒಂದು ಕರೆ ಬಂತು. ನೀವು ರೈಲ್ವೆ ಇಲಾಖೆ ಕುರಿತು ಒಂದು ಸಾಕ್ಷ್ಯಚಿತ್ರ ಮಾಡಿಕೊಡಬೇಕು. ರಾಂಚಿಗೆ ಬನ್ನಿ ಎಂದರು. ಇದು ಸರ್ಕಾರದಿಂದ ಬಂದಿರುವ ಕರೆ ಎಂದು ತಿಳಿದು ಸಂತೋಷವಾಯಿತು. ಆಮೇಲೆ ಯೋಚನೆ ಮಾಡಿದೆ. ಸರ್ಕಾರ ಇಂತಹ ವಿಷಯವನ್ನು ಟೆಂಡರ್ ಮೂಲಕ ಕರೆಯುತ್ತಾರೆ. ಇದು ಸುಳ್ಳು ಇರಬಹುದು ಎಂದು ಅಲ್ಲಿನ ಪೊಲೀಸ್ ಅಧಿಕಾರಿ ಪ್ರವೀಣ್ ಕುಮಾರ್ ಅವರಿಗೆ ಕರೆ ಮಾಡಿದೆ. ಅವರು ಇದೆಲ್ಲಾ ಸುಳ್ಳು. ನೀವು ಇಲ್ಲಿಗೆ ಬರಬೇಡಿ ಎಂದರು. ಈ ರೀತಿ ಸಾಕಷ್ಟು ನಿರ್ದೇಶಕರು, ನಿರ್ಮಾಪಕರು ಈ ರೀತಿಯ ಕರೆಯಿಂದ ಮೋಸ ಹೋಗಿದ್ದಾರೆ. ಈ ವಿಷಯವನ್ನಿಟ್ಟುಕೊಂಡು 'ರಾಂಚಿ' ಸಿನಿಮಾ ಮಾಡಿದ್ದೇವೆ' ಎಂದರು.

'ನಾಯಕ ಪ್ರಭು ಮುಂಡ್ಕರ್ ಕಥೆ ಕೇಳಿ ನಟಿಸಲು ಒಪ್ಪಿದರು. ರುದ್ರಾನಂದ ಹಾಗೂ ಅರುಣ್ ಕುಮಾರ್ ನಿರ್ಮಾಣಕ್ಕೆ ಮುಂದಾದರು. ರಾಂಚಿಯಲ್ಲೇ ಹೆಚ್ಚಿನ ಭಾಗದ ಚಿತ್ರೀಕರಣ ನಡೆದಿದೆ. 2020ರಲ್ಲೇ ಸೆನ್ಸಾರ್ ಆಗಿತ್ತು. ಕೊರೊನ ಕಾರಣದಿಂದ ಬಿಡುಗಡೆ ವಿಳಂಬವಾಯಿತು' ಎಂದರು.

ದಿವ್ಯ ಉರುಡಗ, ಟೋಟ ರಾಯ್ ಚೌಧರಿ, ಆರತಿ ನಾಯರ್, ಲಕ್ಷ್ಮಣ್ ಗೌಡ, ಸುರೇಶ್ ಹೆಬ್ಳೀಕರ್, ಉಷಾ ಭಂಡಾರಿ ಮುಂತಾದವರು ಈ ಚಿತ್ರದಲ್ಲಿ ನಟಿಸಿದ್ದಾರೆ.

'ವರ್ಕ್ ಫ್ರಂ ಹೋಂ ಕಲ್ಚರ್'ಗೆ ತಕ್ಕ ಮನೆ ವಿನ್ಯಾಸ

ಶರವಣೆ

ವಿನ್ಯಾಸ

ಕೋವಿಡ್–19 ಕಾಲದಲ್ಲಿ ಶುರುವಾದ ವರ್ಕ್ ಫ್ರಂ ಹೋಮ್ ಇನ್ನೂ ಕೆಲವು ಕಡೆ ಮುಂದುವರಿದಿದೆ. ಆ ಸಮಯದಲ್ಲಿ ಅನೇಕರು ತಮ್ಮ ಮನೆಗಳನ್ನೇ ಕಚೇರಿಯಾಗಿ ಮಾಡಿಕೊಂಡಿದ್ದರು. ಕೆಲವರು ಅದನ್ನು ಕಾಯಂಗೊಳಿಸಿಕೊಂಡಿದ್ದಾರೆ ಕೂಡ.

ಈಗಲೂ ಮನೆ ಕಮ್ ಆಫೀಸ್ ಸಂಸ್ಕೃತಿ ಮುಂದುವರಿದಿದೆ. ಮನೆಯಿಂದಲೇ ಕಚೇರಿ ಕೆಲಸ ಮಾಡುವ ದೃಷ್ಟಿಕೋನ ಇಟ್ಟುಕೊಂಡು ಮನೆ ನಿರ್ಮಾಣ ಮಾಡುವವರ ಸಂಖ್ಯೆಗೇನೂ ಕಡಿಮೆ ಇಲ್ಲ. ಕಚೇರಿಯಲ್ಲಿ ದೊರೆಯುವ ಅನುಕೂಲಗಳು–ಸೌಲಭ್ಯಗಳನ್ನು ಮನೆಗಳಲ್ಲೇ ನಿರೀಕ್ಷಿಸುತ್ತಿದ್ದಾರೆ. ಇತ್ತ ಮನೆಯ ಲಕ್ಷಣಗಳೂ ಇರುವ, ಅತ್ತ ಕಚೇರಿಯ ನೋಟವನ್ನೂ ಹೊಂದಿರುವ ಮನೆಗಳ ಅಗತ್ಯ ಈಗೀಗ ಹೆಚ್ಚಾಗುತ್ತಿದೆ.

ನವೀನ ಮಾದರಿ ಒಳಾಂಗಣ


ಮನೆಯ ಒಳಾಂಗಣ ಅಚ್ಚುಕಟ್ಟಾಗಿರಬೇಕು. ಅದರಲ್ಲೂ ದಿನದ ಹೆಚ್ಚಿನ ಸಮಯವನ್ನು ಕಳೆಯುವ ಕಚೇರಿ ಕೋಣೆಯ ವಿನ್ಯಾಸ ವಿನೂತನವಾಗಿರಬೇಕು. ಸರಿಯಾದ ಗಾಳಿ–ಬೆಳಕು ಅತ್ಯಗತ್ಯ. ಹೊರಗಿನಿಂದ ವಿಪರೀತ ಶಬ್ದ ಬರಬಾರದು, ಬಿಡುವಾದಾಗೊಮ್ಮೆ ಕಿಟಕಿಯಾಚೆ ದೂರಕ್ಕೆ ಕಣ್ಣು ಹಾಯಿಸಿದರೆ ತಂಪೆನಿಸಬೇಕು.... ಗೃಹ ಕಚೇರಿಯ ರೂಪುರೇಷೆಗಳು ಹೀಗೇ ಇರಬೇಕು ಎನ್ನುವ ಬಗ್ಗೆ ಹೊಸ ಗ್ರಾಹಕರು ಬಹಳ ನಿರ್ದಿಷ್ಟವಾಗಿದ್ದಾರೆ. ಕೆಲವರು ಇರುವ ಮನೆಯನ್ನೇ ಕಚೇರಿ–ಶಾಲೆಯ ಪಾತ್ರಗಳನ್ನೂ ಸರಿದೂಗಿಸಿಕೊಂಡು ಹೋಗುವಂತೆ ಮರು ವಿನ್ಯಾಸ ಮಾಡಿದರೆ, ಇನ್ನೂ ಕೆಲವರು ಹೊಸ ಮನೆಯ ಆಯ್ಕೆಯಲ್ಲಿ ಈ ರೂಪಗಳಿಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ಕಚೇರಿಗಳೂ, ಶಾಲೆಗಳೂ ಮನೆಗೆ ಸ್ಥಳಾಂತರಗೊಂಡಿರುವ ಈ ಸಮಯದಲ್ಲಿ ಇದೊಂದು ಅನಿವಾರ್ಯ ಹೆಜ್ಜೆ ಕೂಡ ಹೌದು.

ಮನೆಯೊಂದು, ಪಾತ್ರ ಹಲವು

ಮನೆ ಎಂದರೆ ಮನೆಯಂತಿದ್ದರೆ ಸಾಲದು. ಈಗ ಮನೆಯ ಒಂದೊಂದು ಕೋಣೆಗಳನ್ನು ಒಂದೊಂದು ಕೆಲಸಗಳಿಗೆ ನಿಯೋಜಿಸಲಾಗುತ್ತದೆ. ಅವು ಮಕ್ಕಳ ಚಟುವಟಿಕೆಗೆ, ಉದ್ಯೋಗದಲ್ಲಿರುವ ತಂದೆ–ತಾಯಿಯ ಜೂಮ್ ಮೀಟಿಂಗ್, ಸೆಮಿನಾರ್‌ಗಳಿಗೆ ಹಾಗೂ ಕಚೇರಿ ಕೆಲಸಗಳಿಗೆ ಹೊಂದುವಂತಿರಬೇಕು. ಇವುಗಳ ಜೊತೆಗೆ ಮನೆಯಲ್ಲಿರುವ ಹಿರಿಯರಿಗೂ ಅವರದೇ ಆದ ವೈಯಕ್ತಿಕ ಜಾಗವೊಂದಿರಬೇಕು. ಒಟ್ಟಾರೆ ಒಬ್ಬರಿಗೊಬ್ಬರಿಗೆ ಕಿರಿಕಿರಿಯಾಗದಂತೆ ಮನೆಯನ್ನು ವಿನ್ಯಾಸಗಳಿಸಬೇಕು.

ಹೊರಾಂಗಣಕ್ಕೂ ಆದ್ಯತೆ

ಈ ಕಂಫರ್ಟ್ ಮನೆಯ ನಾಲ್ಕು ಗೋಡೆಗಳ ಒಳಗಿನ ಅನುಕೂಲಕ್ಕೆ–ಆರಾಮಕ್ಕೆ ಮಾತ್ರ ಸೀಮಿತವಾಗಿಲ್ಲ. ಮನೆಯ ಹೊರಗಿನ ವಾತಾವರಣಕ್ಕೂ ಅಷ್ಟೇ ಪ್ರಾಮುಖ್ಯ ಇದೆ. ಮನೆಯ



ಅಥವಾ ಸಮುಚ್ಚಯದ ಸುತ್ತಮುತ್ತ ವ್ಯಾಯಾಮಕ್ಕೆ, ವಾಯುವಿಹಾರಕ್ಕೆ, ದೈಹಿಕ ಚಟುವಟಿಕೆಗೆ, ಕ್ರೀಡಾ ಸೌಲಭ್ಯಗಳು ಸೇರಿದಂತೆ ಸಾಕಷ್ಟು ಸ್ಥಳಾವಕಾಶ ಇರಬೇಕು ಎನ್ನುವುದು ಬಹುಮುಖ್ಯ ಬೇಡಿಕೆ. ಇವೆಲ್ಲ ಮನೆಯ ಆಯ್ಕೆಯಲ್ಲಿ ಮಹತ್ವದ ಮೈಲಿಗಲ್ಲುಗಳಾಗಿವೆ.

ಅಂತೆಯೇ, ಅನೇಕ ಡೆವಲಪರ್‌ಗಳು ಮಾರ್ಕೆಟಿಂಗ್‌ಗಿಂತ ಮುಖ್ಯವಾಗಿ ಈ ಎಲ್ಲಾ ಅಂಶಗಳನ್ನು ಹೊಂದಿರುವ ಉತ್ತಮ ವಿನ್ಯಾಸಕ್ಕೆ ಹೆಚ್ಚು ಆದ್ಯತೆ ನೀಡುತ್ತಿದ್ದಾರೆ. ಖರೀದಿದಾರರೂ ಸಹ ಅದೇ ದರದಲ್ಲಿ ಈ ಹೊಸ ನೋಟಗಳನ್ನು ಹೊಂದಿರುವ ಮನೆಗಳ ಕಡೆಗೆ ಹೆಚ್ಚು ಆಸಕ್ತಿ ಹೊಂದಿದ್ದಾರೆ. ಆದ್ದರಿಂದ ವಿಲ್ಲಾ ಮತ್ತು ಅಪಾರ್ಟ್‌ಮೆಂಟ್ ವಿಭಾಗಗಳಲ್ಲಿ ಮನೆ ಕಟ್ಟುವಾಗ ಸಾಕಷ್ಟು ತೆರೆದ ಸ್ಥಳಗಳು, ವ್ಯಾಪಕವಾದ ಸೌಕರ್ಯಗಳು ಮತ್ತು ಚಿಂತನಶೀಲವಾಗಿ ವಿನ್ಯಾಸಗೊಳಿಸಲಾದ ಒಳಾಂಗಣ ವಿನ್ಯಾಸಕ್ಕೆ ಹೆಚ್ಚಿನ ಗಮನ ನೀಡುತ್ತಿದ್ದಾರೆ.